ಗುರುವಾರ, ಅಕ್ಟೋಬರ್ 10, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ

ಬಾಲಿವುಡ್ ನಟಿ ವಿದ್ಯಾ ಬಾಲನ್ ಅವರು ಮುಂಬೈನಲ್ಲಿ ನಡೆದ 'ಇಎಲ್‌ಎಲ್‌ಇ ಇಂಡಿಯಾ ಬ್ಯೂಟಿ ಅವಾರ್ಡ್ಸ್–2024' ಕಾರ್ಯಕ್ರಮದಲ್ಲಿ ಕಂಡಿದ್ದು ಹೀಗೆ...



ಸಿದ್ದರಾಮಯ್ಯ ರಾಜೀನಾಮೆ ಅಗತ್ಯವಿಲ್ಲ; ಭೇಟಿಗೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ– ಗೃಹ ಸಚಿವ ಪರಮೇಶ್ವರ

ಒಟ್ಟಿಗೆ ಊಟ ಮಾಡುವುದು ಸಹಜ: ಸತೀಶ

ಪ್ರಜಾವಾಣಿ ವಾರ್ತೆ

> ಮುಖ್ಯಮಂತ್ರಿ ಸ್ಥಾನ ಸದ್ಯಕ್ಕೆ ಖಾಲಿ ಇಲ್ಲ. 2028ರಲ್ಲಿ ಮುಖ್ಯಮಂತ್ರಿಯಾಗಬೇಕೆಂಬ ಆಸೆ ನನಗೂ ಇದೆ. ಆಗ ಸಾಧ್ಯವಾದರೆ ನೋಡೋಣ
> **ಸತೀಶ ಜಾರಕಿಹೊಳಿ,** ಸಚಿವ

> ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಬಿಜೆಪಿಗಿಂತ ಕಾಂಗ್ರೆಸ್‌ನವರಿಗೇ ಹೆಚ್ಚು ಆತುರವಿದೆ. ಹೀಗಾಗಿ ಟೀ ಪಾರ್ಟಿ, ಡಿನ್ನರ್ ಪಾರ್ಟಿಗಳು ನಡೆಯುತ್ತಿವೆ
> **ಸಿ.ಟಿ.ರವಿ,** ವಿಧಾನ ಪರಿಷತ್ ಸದಸ್ಯ

ಚಿಕ್ಕಮಗಳೂರು / ಮೈಸೂರು / ಬೆಂಗಳೂರು: 'ದಸರಾದಲ್ಲಿ ಭಾಗವಹಿಸಲು ಮೈಸೂರಿಗೆ ಹೋಗಿದ್ದ ವೇಳೆ ಸಹಜವಾಗಿ ಸಚಿವರುಗಳು ಒಟ್ಟಾಗಿ ಊಟ ಮಾಡಿದ್ದೇವೆ. ಅದರಲ್ಲಿ ವಿಶೇಷ ಏನು ಇಲ್ಲ, ಯಾವುದೇ ರಾಜಕೀಯ ಚರ್ಚೆಗಳೂ ನಡೆದಿಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ಯಾವ ಸಭೆಯೂ ಇಲ್ಲ. ಸಚಿವ ಎಚ್‌.ಸಿ. ಮಹದೇವಪ್ಪ ಮನೆ ಮತ್ತು ನಮ್ಮ ಮನೆ ಅಕ್ಕಪಕ್ಕದಲ್ಲೇ ಇವೆ. ಆಗಾಗ ಭೇಟಿಯಾಗುತ್ತೇವೆ. ಸಾಮಾನ್ಯವಾಗಿ ಶಾಸಕರುಗಳೂ ಇದ್ದೇ ಇರುತ್ತಾರೆ. ಇದರಲ್ಲಿ ವಿಶೇಷ ಏನೂ ಇಲ್ಲ. ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆ ಇಲ್ಲ' ಎಂದು ಹೇಳಿದರು.

'ಸರ್ಕಾರ ಬೀಳಲಿದೆ ಎಂದು ಬಿಜೆಪಿಯವರು ಹೇಳುತ್ತಲೇ ಇದ್ದಾರೆ. ಅದಕ್ಕೆ ಮಹತ್ವ ಕೊಡುವ ಅಗತ್ಯವಿಲ್ಲ. ಜಾತಿಗಣತಿ ವಿಷಯ ಸಚಿವ ಸಂಪುಟಕ್ಕೆ ಬರಲಿದ್ದು, ಅಲ್ಲಿ ಚರ್ಚೆಯಾಗಲಿದೆ. ಈ ಬಗ್ಗೆ ಏನನ್ನೂ ಹೇಳುವುದಿಲ್ಲ' ಎಂದರು.

ತರೀಕೆರೆಯಲ್ಲಿ ನಡೆದ ವಿವಿಧ ಕಾಮಗಾರಿಗಳ ಸಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಸತೀಶ ಜಾರಕಿಹೊಳಿ ಭಾಗವಹಿಸಿದ್ದರು. ಅದೇ ವೇದಿಕೆಯಲ್ಲಿ ಶಾಸಕ ಎಚ್‌.ಡಿ.ತಮ್ಮಯ್ಯ ಮಾತನಾಡಿ, 'ಸಿದ್ದರಾಮಯ್ಯ ಅವರ ನಂತರ ಅವರಂತಹ ನಾಯಕ ಯಾರಾದರೂ ಇದ್ದರೆ ಅದು ಸತೀಶ ಜಾರಕಿಹೊಳಿ' ಎಂದು ಹೊಗಳಿದರು.

'ಊಟ ಮಾಡಿದೆವಷ್ಟೆ'

'ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡುವ ಅಗತ್ಯವಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, 'ನಾನು, ಸಚಿವರಾದ ಡಾ.ಎಚ್‌.ಸಿ. ಮಹದೇವಪ್ಪ, ಸತೀಶ ಜಾರಕಿಹೊಳಿ ಆಗಾಗ ಭೇಟಿ ಆಗುತ್ತಿರುತ್ತೇವೆ. ಮಂಗಳವಾರ ಮೈಸೂರಿನಲ್ಲೂ ಭೇಟಿಯಾಗಿದ್ದೆವು, ಮಹದೇವಪ್ಪ ಮನೆಯಲ್ಲಿ ಎಲ್ಲರೂ ಊಟ ಮಾಡಿದೆವು. ಶಾಸಕ ಎ.ಆರ್‌. ಕೃಷ್ಣಮೂರ್ತಿ ಕೂಡ ಜೊತೆಗಿದ್ದರು. ನಮ್ಮ ಭೇಟಿಗೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ' ಎಂದರು.

'ನಾವು ಯಾವ ಸಭೆಯನ್ನೂ ನಡೆಸಲಿಲ್ಲ. ಊಟ ಮಾಡಿದೆವಷ್ಟೆ. ಮಹದೇವಪ್ಪ ಆಹ್ವಾನಿಸಿದ್ದರು. ಮೈಸೂರಿನ ಆತಿಥ್ಯ ಬಿಡಲಾಗುತ್ತದೆಯೇ? ನಮ್ಮ ಭೇಟಿ ವೇಳೆ ರಾಜಕೀಯ ಚರ್ಚೆಯಾಗಿಲ್ಲ. ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ. ದಲಿತ ಮುಖ್ಯಮಂತ್ರಿ ಬಗ್ಗೆ ನಮ್ಮ ನಡುವೆ ಯಾವುದೇ ಚರ್ಚೆ ಆಗಿಲ್ಲ' ಎಂದು ಪ್ರತಿಕ್ರಿಯಿಸಿದರು.

'ನಿಮಗೆ ಮುಖ್ಯಮಂತ್ರಿ ಅಗುವ ಆಸೆ ಇಲ್ಲವೇ?' ಎಂಬ ಪ್ರಶ್ನೆಗೆ, 'ಅದು ಈಗ ಉದ್ಭವಿಸುವುದಿಲ್ಲ. ಆ ವಿಚಾರವನ್ನು ಮಾಧ್ಯಮದವರು ಮಾತನಾಡುವುದು ಬೇಡ' ಎಂದರು.

ಬಿಜೆಪಿಗರು 'ಮೂರ್ಖರು'

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿತ್ತಿರುವ ಬಿಜೆಪಿ ನಾಯಕರು 'ಮೂರ್ಖರು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಟೀಕಿಸಿದರು.

'ದಸರಾ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಲಿದ್ದಾರೆ' ಎಂಬ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಇದು ಮೂರ್ಖತನ. ಡೆಡ್‌ಲೈನ್ ನಿಗದಿ ಮಾಡಲು ಅವರು ಯಾರು? ಹೊಲಸು ರಾಜಕಾರಣ ಮಾಡುವುದೇ ಬಿಜೆಪಿ ಚಾಳಿ. ಅದೇ ಚಾಳಿ ವಿಜಯೇಂದ್ರನಿಗೂ ಬಂದಿದೆ' ಎಂದರು.

ವಿಧಾನಸೌಧದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿಜಯೇಂದ್ರನಿಗೆ ಬೆಳಗಾವಿ, ವಿಜಯಪುರ, ಶಿವಮೊಗ್ಗದಲ್ಲಿ ಅವರ ಪಕ್ಷದವರೇ ಗುದ್ದುತ್ತಿದ್ದಾರೆ. ಮೊದಲು ತನ್ನ ಸ್ಥಾನ ಉಳಿಸಿಕೊಳ್ಳುವ ಬಗ್ಗೆ ನೋಡಲಿ' ಎಂದು ವಾಗ್ದಾಳಿ ನಡೆಸಿದರು.

ಮುಖ್ಯಮಂತ್ರಿ ಆಕಾಂಕ್ಷಿಗಳಲ್ಲಿ ಡಿಕೆಶಿ ಮೊದಲಿಗರು: ಬಿವೈವಿ

ಹುಬ್ಬಳ್ಳಿ: 'ಮುಖ್ಯಮಂತ್ರಿ ಆಕಾಂಕ್ಷಿಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಇರುವವರೇ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ನಗರದ ವಿಮಾನ ನಿಲ್ದಾಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಐದು ವರ್ಷ ಅವಧಿ ಪೂರ್ಣಗೊಳಿಸುವರು ಎಂದು ಹೇಳುವವರೇ ಮುಖ್ಯಮಂತ್ರಿ ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ. ಅವರಲ್ಲಿ ಡಿ.ಕೆ.ಶಿವಕುಮಾರ್ ಮೊದಲಿಗರು' ಎಂದರು.

'ಸಿದ್ದರಾಮಯ್ಯ ಅವರು ಸೂಚಿಸುವ ವ್ಯಕ್ತಿಗಳೇ ಸಹಜವಾಗಿ ಮುಖ್ಯಮಂತ್ರಿಯಾಗುತ್ತಾರೆ. ಹೀಗಾಗಿ ಅವರನ್ನು ಓಲೈಸಿಕೊಳ್ಳಲು ಪದೇ ಪದೇ ಅನಿವಾರ್ಯವಾಗಿ ಸಿದ್ದರಾಮಯ್ಯ ಅವರು ತಮ್ಮ ಮುಖ್ಯಮಂತ್ರಿ ಅವಧಿಯನ್ನು ಪೂರ್ಣಗೊಳಿಸುತ್ತಾರೆ ಎಂದು ಹೇಳುತ್ತಿದ್ದಾರೆ. ಆದರೆ, ದಸರಾ ನಂತರ ಮುಖ್ಯಮಂತ್ರಿ ಬದಲಾವಣೆ ನಿಶ್ಚಿತ' ಎಂದು ಹೇಳಿದರು.

ಪ್ರಾಮಾಣಿಕ ಕಳಕಳಿ ಇಲ್ಲ: 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಹಾಗೂ ಮುಡಾ ಹಗರಣಗಳ ಸರಮಾಲೆಯಲ್ಲಿ ಸಿಲುಕಿಕೊಂಡಿರುವ ಸಿದ್ದರಾಮಯ್ಯ ಅವರಿಗೆ ತಮ್ಮ ಸ್ಥಾನ ಅಲುಗಾಡುತ್ತಿದ್ದಂತೆಯೇ ಜಾತಿ ಜನಗಣತಿ ವರದಿ ಅನುಷ್ಠಾನ ಎಂಬ ದಾಳವನ್ನು ಉರುಳಿಬಿಟ್ಟಿದ್ದಾರೆ. ಇದರಿಂದ ಯಾವುದೇ ಪ್ರಯೋಜನವಿಲ್ಲ. ಜಾತಿ ಗಣತಿ ಎಂಬುದೇ ಅವೈಜ್ಞಾನಿಕ ಎಂದು ಈ ಹಿಂದೆ ಅವರ ಪಕ್ಷದ ಹಿರಿಯ ಮುಖಂಡ, ಶಾಸಕ ಶಾಮನೂರು ಶಿವಶಂಕರಪ್ಪ ಟೀಕಿಸಿದ್ದರು. ಈ ವರದಿ ಅನುಷ್ಠಾನದಲ್ಲಿ ಸಿದ್ದರಾಮಯ್ಯ ಅವರಿಗೆ ಯಾವುದೇ ಪ್ರಾಮಾಣಿಕ ಕಳಕಳಿ ಇಲ್ಲ. ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ಮಾಡುತ್ತಿರುವ ನಾಟಕ' ಎಂದು ಟೀಕಿಸಿದರು.

ಈಶ್ವರಪ್ಪನದು 20–20 ಕ್ರಿಕೆಟ್ ಮ್ಯಾಚ್: ಕೆ.ಎಸ್.ಈಶ್ವರಪ್ಪ ಆರ್‌ಸಿಬಿ (ರಾಯಣ್ಣ, ಚನ್ನಮ್ಮ ಬ್ರಿಗೇಡ್) ಸ್ಥಾಪನೆಗೆ ಸಿದ್ಧತೆ ನಡೆಸುತ್ತಿರುವ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಆರ್‌ಸಿಬಿ ಬಗ್ಗೆ ನಾನು ಏನನ್ನೂ ಹೇಳಲು ಇಷ್ಟಪಡಲ್ಲ. ಅದೊಂದು 20–20 ಕ್ರಿಕೆಟ್ ಮ್ಯಾಚ್ ಇದ್ದ ಹಾಗೆ. ನಾನು ಟೆಸ್ಟ್ ಮ್ಯಾಚ್ ಆಡಲು ಬಂದಿದ್ದೇನೆ. ಪಕ್ಷದಿಂದ ಉಚ್ಚಾಟನೆಯಾದವರು, ಹೊರಹೋದವರು ಪಕ್ಷದ ಬಗ್ಗೆ ಮಾತನಾಡುವ ನೈತಿಕತೆ ಹಾಗೂ ಯೋಗ್ಯತೆಯನ್ನು ಉಳಿಸಿಕೊಂಡಿಲ್ಲ' ಎಂದರು.

'ಪಕ್ಷದ ಹೈಕಮಾಂಡ್‌ಗೆ ಮಂಕುಬೂದಿ ಎರಚಿ ಪಕ್ಷದ ರಾಜ್ಯಾಧ್ಯಕ್ಷನಾಗಿಲ್ಲ. ನಾನು ನಾಯಕನಾಗಿ ಬಂದಿಲ್ಲ. ಸಾಮಾನ್ಯ ಕಾರ್ಯಕರ್ತನಾಗಿ ಪಕ್ಷದ ಕೆಲಸ ಮಾಡುತ್ತಿದ್ದೇನೆ' ಎಂದು ವಿಜಯೇಂದ್ರ ಹೇಳಿದರು.

ವಿಜಯೇಂದ್ರ ಯಾರು?: ಮಹದೇವಪ್ಪ

ಮೈಸೂರು: 'ಮುಖ್ಯಮಂತ್ರಿ ಬದಲಾಗುತ್ತಾರೆ, ಸಿದ್ದರಾಮಯ್ಯ ರಾಜೀನಾಮೆ ಕೊಡುತ್ತಾರೆ ಎಂದೆಲ್ಲಾ ಹೇಳುವುದಕ್ಕೆ ಬಿ.ವೈ. ವಿಜಯೇಂದ್ರ ಯಾರು? ಅವರಿಗೆ ಕಾಂಗ್ರೆಸ್ ಪಕ್ಷವನ್ನು ಬರೆದುಕೊಟ್ಟಿರುವವರು ಯಾರು?' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಕೇಳಿದರು.

ಇಲ್ಲಿ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಬುಧವಾರ ಪ್ರತಿಕ್ರಿಯಿಸಿ, 'ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ನಿಮಗೆ (ಮಾಧ್ಯಮವರಿಗೆ) ಹೇಳಿದ್ವಾರು? ಬಿಜೆಪಿಯವರಿಗೂ, ಜೆಡಿಎಸ್‌ನವರಿಗೂ– ರಾಜ್ಯ ಸರ್ಕಾರಕ್ಕೂ ಏನು ಸಂಬಂಧ? ಬಿಜೆಪಿಯರಿಗೆ ಮಾಡಲು ಕೆಲಸವಿಲ್ಲ' ಎಂದು ದೂರಿದರು.

'ಬಿಜೆಪಿಯವರು ದಿನ ಬೆಳಗಾದರೆ ಏನೇನೋ ಹೇಳುತ್ತಾರೆ. ಅದಕ್ಕೆಲ್ಲ ನೀವ್ಯಾಕೆ ಮಹತ್ವ ಕೊಡುತ್ತೀರಿ? ನಿಮಗೆ ಏನು ಬೇಕು, ನಿಮ್ಮ ಉದ್ದೇಶವೇನು' ಎಂದು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ಕಲಬುರ್ಗಿ ಹತ್ಯೆ ಪ್ರಕರಣ: ಜಾಮೀನು ಅರ್ಜಿ– ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ಸಂಶೋಧಕ ಎಂ.ಎಂ.ಕಲಬುರ್ಗಿ ಕೊಲೆ ಪ್ರಕರಣದ ಮೂರನೇ ಆರೋಪಿ ಪ್ರವೀಣ್ ಅಲಿಯಾಸ್ ಮಸಾಲಾ ವಾಲಾ ಸಲ್ಲಿಸಿರುವ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಳಗಾವಿಯ ಪ್ರವೀಣ್ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಧಾರವಾಡ ಪೀಠದ ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಅಂತೆಯೇ, ಆಕ್ಷೇಪಣೆ ಸಲ್ಲಿಸುವಂತೆ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿದೆ. ಜಾಮೀನು ಕೋರಿ ಪ್ರವೀಣ್ ಸಲ್ಲಿಸಿದ್ದ ಈ ಮೊದಲಿನ ಎರಡು ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿತ್ತು.

ಪ್ರಕರಣದ ನಾಲ್ಕನೇ ಆರೋಪಿಯಾದ ವಾಸುದೇವ ಭಗವಾನ್ ಸೂರ್ಯವಂಶಿ ಅಲಿಯಾಸ್ ವಾಸು ಅಲಿಯಾಸ್ ಮೆಕ್ಯಾನಿಕ್ ಹಾಗೂ ಆರನೇ ಆರೋಪಿ ಅಮಿತ್ ಬದ್ದಿ ಅಲಿಯಾಸ್ ಅಮಿತ್ ಅಲಿಯಾಸ್ ಗೋವಿಂದ್‌ಗೆ 2024ರ ಜುಲೈ 23ರಂದು ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

'ಹಣ ವಾಪಸ್ ಪಡೆದು ನಿಗಮಕ್ಕೆ ಬಿಡುಗಡೆ ಮಾಡಿ'

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಅಕ್ರಮವಾಗಿ ವರ್ಗಾವಣೆ ಮಾಡಿದ ಹಣವನ್ನು ವಾಪಸ್ ಪಡೆದು ನಿಗಮಕ್ಕೆ ಬಿಡುಗಡೆ ಮಾಡಬೇಕು ಮತ್ತು ಜನಾಂಗದ ಫಲಾನುಭವಿಗಳಿಗೇ ಹಂಚಬೇಕು ಎಂದು ಹರಿಹರ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪೀಠಾಧ್ಯಕ್ಷರಾದ ಪ್ರಸನ್ನಾನಂದಪುರಿ ಸ್ವಾಮೀಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ವಾಲ್ಮೀಕಿ ಸಮುದಾಯದ ಶಾಸಕರು ಮತ್ತು ಮುಖಂಡರ ನಿಯೋಗದ ಸಭೆಯಲ್ಲಿ ಅವರು ಮಾತನಾಡಿದರು.

ಸಮುದಾಯದ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಭರವಸೆ ನೀಡಿದ ಸಿದ್ದರಾಮಯ್ಯ, ಸಭೆ ಕರೆದು ಚರ್ಚಿಸಿ ಪರಿಹಾರ ಒದಗಿಸುವುದಾಗಿ ಹೇಳಿದರು.

ಶಾಸಕ ಬಿ.ಎಂ.ನಾಗರಾಜ, ಟಿ.ರಘುಮೂರ್ತಿ, ಬಸನಗೌಡ ತುರವಿಹಾಳ್, ರಾಜಾ ವೇಣುಗೋಪಾಲ ನಾಯಕ, ಡಾ.ಶ್ರೀನಿವಾಸ, ಕೆಪಿಎಸ್‌ಸಿ ಮಾಜಿ ಸದಸ್ಯ ಜಿ.ಟಿ.ಚಂದ್ರಶೇಖರಪ್ಪ ಹಾಜರಿದ್ದರು.

ಸಿ.ಎಂ ಸೂಚನೆ ಕೊಟ್ಟು ಬರೆಯಿಸಿದ ವರದಿ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ಜನಗಣತಿ ವರದಿಯನ್ನು ಸಿದ್ದರಾಮಯ್ಯ ಅವರೇ ನಿರ್ದೇಶನ ಕೊಟ್ಟು ಬರೆಯಿಸಿದ್ದಾರೆ. ಆದರೆ, ಅದರಲ್ಲಿ ಏನಿದೆ ಎನ್ನುವುದು ಗೊತ್ತೇ ಇಲ್ಲ ಎಂದು ಅವರು ಹೇಳಿದರೆ, ಅದನ್ನು ನಂಬಲು ನಾವು ರಾಹುಲ್‌ಗಾಂಧಿಯಷ್ಟು ಮೂರ್ಖರಲ್ಲ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್‌.ಅಶೋಕ ಹೇಳಿದ್ದಾರೆ.

'ಜಾತಿ ಜನಗಣತಿ ವೇಳೆ ಸಮೀಕ್ಷೆ ನಡೆಸುವವರು ಬಹಳಷ್ಟು ಮನೆಗಳಿಗೆ ಬಂದು ಮಾಹಿತಿ ಸಂಗ್ರಹಿಸಿಲ್ಲ ಎನ್ನುವ ದೂರುಗಳ ಆಧಾರದ ಮೇಲೆ ಇಡೀ ಪ್ರಕ್ರಿಯೆ ಅವೈಜ್ಞಾನಿಕ ಎಂದಿದ್ದೇನೆ. ಗಣತಿ ಪ್ರಕ್ರಿಯೆಯೇ ಅಪೂರ್ಣ ಮತ್ತು ಅವೈಜ್ಞಾನಿಕವಾಗಿರುವಾಗ ವರದಿಯಲ್ಲಿನ ಅಂಶಗಳು ಸರಿ ಇರಲು ಸಾಧ್ಯವೆ ಎಂದು ಅವರು' ಎಕ್ಸ್‌'ನಲ್ಲಿ ಪ್ರಶ್ನಿಸಿದ್ದಾರೆ.

'ನನ್ನ ಹೇಳಿಕೆಯಿಂದ ನಿರಾಳರಾಗಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿಕೊಂಡಿದ್ದಾರೆ. ಸ್ವಪಕ್ಷದ ಹಿತಶತ್ರುಗಳಿಂದ ಕೋರ್ಟ್‌, ಕೇಸು, ತನಿಖೆಗಳಿಂದ ಅವರು ನಿರಾಳತೆ ಮತ್ತು ನೆಮ್ಮದಿ ಕಳೆದುಕೊಂಡು ಅನೇಕ ದಿನಗಳಾಗಿವೆ ಎಂಬುದು ರಾಜ್ಯದ ಜನರಿಗೆ ಗೊತ್ತಿದೆ. ಕಡೇ ಪಕ್ಷ ನನ್ನ ಹೇಳಿಕೆಯಿಂದ ಅವರಿಗೆ ಅಲ್ಪ ನಿರಾಳತೆ ಸಿಕ್ಕಿರುವುದು ಸಂತಸದ ವಿಚಾರವೇ ಆಗಿದೆ' ಎಂದಿದ್ದಾರೆ.

ಪವಿತ್ರಾಗೌಡ ಸೇರಿ ಐವರ ಜಾಮೀನು ಆದೇಶ ಕಾಯ್ದಿರಿಸಿದ ನ್ಯಾಯಾಲಯ

'ಬಟ್ಟೆ ಒಗೆದರೂ ರಕ್ತದ ಕಲೆ ಗುರುತು ಇತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಅಪಹರಣ ಹಾಗೂ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರುವ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ ಹಾಗೂ ಸಹಚರರು ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ಬುಧವಾರವೂ 57ನೇ ಸಿಸಿಎಚ್ ನ್ಯಾಯಾಲಯದಲ್ಲಿ ನಡೆಯಿತು.

ತನಿಖಾಧಿಕಾರಿಗಳ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಸನ್ನಕುಮಾರ್ ಪ್ರತಿವಾದ ಮಂಡಿಸಿದರು. ವಾದ ಆಲಿಸಿದ ನ್ಯಾಯಾಲಯವು ದರ್ಶನ್ ಅವರ ಅರ್ಜಿ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು.

ಪವಿತ್ರಾಗೌಡ ಸೇರಿದಂತೆ ಐವರು ಆರೋಪಿಗಳ ಜಾಮೀನು ಅರ್ಜಿಯ ಆದೇಶವನ್ನು ನ್ಯಾಯಾಲಯವು ಕಾಯ್ದಿರಿಸಿದ್ದು ಅ.14ರಂದು ಆದೇಶ ಪ್ರಕಟಿಸಲಾಗುವುದು ಎಂದು ಹೇಳಿತು.

ಇದಕ್ಕೂ ಮೊದಲು ಪ್ರಸನ್ನಕುಮಾರ್ ಅವರು, 'ಪವಿತ್ರಾಗೌಡ, ದರ್ಶನ್ ಅವರು ಅಪಹರಣ ಹಾಗೂ ಕೊಲೆಯಲ್ಲಿ ಶಾಮೀಲಾಗಿದ್ದಾರೆ. ಅವರಿಗೆ ಜಾಮೀನು ನೀಡಬಾರದು. ಎಂಟನೇ ಆರೋಪಿ ಕಾರು ಚಾಲಕ ರವಿಶಂಕರ್ ಬಟ್ಟೆಯ ಮೇಲೆ ರಕ್ತದ ಕಲೆ ಪತ್ತೆ ಆಗಿದ್ದು ಆತನಿಗೂ ಜಾಮೀನು ನೀಡಬಾರದು' ಎಂದು ವಾದ ಮಂಡಿಸಿದರು.

ದರ್ಶನ್

ಪವಿತ್ರಾಗೌಡ

'ಎ–13 ದೀಪಕ್ ಅವರ ಮೇಲೆ ಕೊಲೆ, ಅಪಹರಣದ ಆರೋಪ ಇಲ್ಲ. ಆತನ ಮೇಲೆ ಸಾಕ್ಷ್ಯ ನಾಶದ ಆರೋಪ ಇದೆ. ಇದು ಜಾಮೀನು ನೀಡಬಹುದಾದ ಆರೋಪ' ಎಂದು ಹೇಳಿದರು.

ದರ್ಶನ್ ಪರವಾಗಿ ವಕೀಲ ಸಿ.ವಿ. ನಾಗೇಶ್ ಅವರು ಕಳೆದ ವಾರ ವಾದ ಮಂಡಿಸಿದ್ದರು. 'ದರ್ಶನ್ ಅವರು ಚಪ್ಪಲಿ ಧರಿಸಿದ್ದೆ' ಎಂದು ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿದ್ದರು. ಅವರ ಮನೆಯಿಂದ ತನಿಖಾಧಿಕಾರಿಗಳು ಶೂ ಜಪ್ತಿ ಮಾಡಿಕೊಂಡಿದ್ದರು. ಇದು ಕಳಪೆ ತನಿಖೆ ಎಂದು ನಾಗೇಶ್ ಹೇಳಿದ್ದರು.

ಇದಕ್ಕೆ ಪ್ರತ್ಯುತ್ತರ ನೀಡಿದ ಪ್ರಸನ್ನಕುಮಾರ್ ಅವರು, 'ದರ್ಶನ್ ಅವರು ಚಪ್ಪಲಿ ಧರಿಸಿದ್ದಾಗಿ ಹೇಳಿದ್ದರು. ಅಂದು ಆರೋಪಿ ಹೇಳಿದ್ದನ್ನಷ್ಟೇ ಹೇಳಿಕೆಯಲ್ಲಿ ನಮೂದಿಸಲಾಗಿತ್ತು. ಅದಾದ ಮೇಲೆ ತಾನು ಶೂ ಧರಿಸಿದ್ದಾಗಿ ಹೇಳಿದ್ದರು. ಅವರೇ ಶೂ ಕೊಡುವಂತೆಯೂ ಪತ್ನಿಗೆ ಹೇಳಿದ್ದರು. ವಿಚಾರಣೆ ವೇಳೆ ಆರೋಪಿ ಹೇಳಿದ್ದನ್ನಷ್ಟೇ ದಾಖಲಿಸುವುದು ತನಿಖಾಧಿಕಾರಿಗಳು ಪಾಲಿಸಬೇಕಾದ ನಿಯಮ' ಎಂದು ಹೇಳಿದರು.

'ಬಿಸಿ ನೀರಿನಲ್ಲಿ ಬಟ್ಟೆ ಒಗೆದರೂ ರಕ್ತದ ಕಲೆಯ ಗುರುತು ಇರುತ್ತದೆ. ದರ್ಶನ್ ಅವರ ಬಟ್ಟೆಗಳನ್ನು ತಣ್ಣೀರಿನಲ್ಲಿ ಒಗೆಯಲಾಗಿತ್ತು. ಬಟ್ಟೆಗಳನ್ನು ವಶಕ್ಕೆ ಪಡೆದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗಿತ್ತು. ಪರಿಶೀಲನೆ ವೇಳೆ ಬಟ್ಟೆಯ ಮೇಲೆ ರಕ್ತದ ಕಲೆಯ ಗುರುತು ಇರುವುದು ದೃಢವಾಗಿದೆ' ಎಂದು ಪ್ರಸನ್ನಕುಮಾರ್ ವಾದ ಮಂಡಿಸಿದರು.

'ಶೂಗೆ ಅಂಟಿಗೊಂಡಿದ್ದ ಮಣ್ಣನ್ನೂ ಪರೀಕ್ಷೆಗೆ ಒಳಪಡಿಸಲಾಗಿತ್ತು. ಅದು ಕೃತ್ಯ ನಡೆದ ಸ್ಥಳದಲ್ಲಿನ ಮಣ್ಣು ಎಂಬುದು ಸಾಬೀತಾಗಿದೆ' ಎಂದು ಹೇಳಿದರು.

'ಕೃತ್ಯ ನಡೆದ ಸ್ಥಳದಲ್ಲಿ 96 ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಕೆಲವು ವಸ್ತುಗಳಲ್ಲಿ ರಕ್ತದ ಕಲೆ ಇಲ್ಲವೆಂದ ಮಾತ್ರಕ್ಕೆ ಕೃತ್ಯವೇ ನಡೆದಿಲ್ಲ ಎನ್ನಲಾಗದು' ಎಂದರು.

'ಸಂದೇಶ ಓದಿಸಿ ಹಲ್ಲೆ'

'ರೇಣುಕಸ್ವಾಮಿಗೆ ಧನರಾಜ್, ಪವನ್ ಮತ್ತು ನಂದೀಶ್ ಕಟ್ಟಿಗೆಯಿಂದ ಹಲ್ಲೆ ನಡೆಸಿದ್ದಾರೆ. ನಂತರ, ಧನರಾಜ್ ಎಲೆಕ್ಟ್ರಿಕ್ ಶಾಕ್ ನೀಡಿದ್ದರು. ಅದಾದ ಮೇಲೆ ರೇಣುಕಸ್ವಾಮಿ ಅಸ್ವಸ್ಥಗೊಂಡು ಮಲಗಿದ್ದರು. ಆ ಫೋಟೊವನ್ನು ತೆಗೆದ ವಿನಯ್ ರೆಸ್ಟೋರೆಂಟ್‌ನಲ್ಲಿ ಪಾರ್ಟಿ ನಡೆಸುತ್ತಿದ್ದವರಿಗೆ ಕಳುಹಿಸಿದ್ದರು. ಬಳಿಕ, ದರ್ಶನ್ ಶೆಡ್‌ಗೆ ಬಂದಿದ್ದರು. ಆಗ ರೇಣುಕಸ್ವಾಮಿ ಅವರನ್ನು ಮೇಲಕ್ಕೇಳಿಸಿ ದರ್ಶನ್ ಎದೆಗೆ ಒದ್ದಿದ್ದರು. ರೇಣುಕಸ್ವಾಮಿ ಪ್ಯಾಂಟ್ ಬಿಚ್ಚಿಸಿ ಮರ್ಮಾಂಗಕ್ಕೂ ಒದೆಯಲಾಗಿದೆ. ಬಳಿಕ ಪವಿತ್ರಾಗೌಡ ಅವರಿಗೆ ರೇಣುಕಸ್ವಾಮಿ ಇನ್‌ಸ್ಟಾಗ್ರಾಂ ಖಾತೆಯಿಂದ ಕಳುಹಿಸಿದ್ದ ಸಂದೇಶ ಓದಿಸಿ ಹಲ್ಲೆ ನಡೆಸಲಾಗಿದೆ' ಎಂದು ಪ್ರಸನ್ನಕುಮಾರ್ ವಾದ ಮಂಡಿಸಿದರು.

ಪ್ರದೋಷ್ ಪುನಃ ಬೆಂಗಳೂರು ಜೈಲಿಗೆ

ಬೆಂಗಳೂರು: 'ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ 14ನೇ ಆರೋಪಿ ಪ್ರದೋಷ್ ಎಸ್‌.ರಾವ್ ಅವರನ್ನು ಪುನಃ ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿರುವ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರ ಮಾಡಿ' ಎಂದು ಜೈಲು ಅಧಿಕಾರಿಗಳಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಪ್ರದೋಷ್ ಎಸ್‌.ರಾವ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ.

'ವಿಚಾರಣಾ ಕೈದಿಗಳನ್ನು ಬೇರೊಂದು ಜೈಲಿಗೆ ಸ್ಥಳಾಂತರ ಮಾಡಲು ಸೂಕ್ತ ಕಾರಣಗಳಿರಬೇಕು. ಅಂತೆಯೇ, ಅವರನ್ನು ಒಂದು ಜೈಲಿನಿಂದ ಮತ್ತೊಂದು ಜೈಲಿಗೆ ಸ್ಥಳಾಂತರ ಮಾಡುವುದು ಆಡಳಿತಾತ್ಮಕ ಕ್ರಮವಲ್ಲ. ಬದಲಾಗಿ ನ್ಯಾಯಾಂಗ ಮತ್ತು ಅರೆ ನ್ಯಾಯಾಂಗದ ಕಾರ್ಯ. ಈ ಪ್ರಕ್ರಿಯೆಯಲ್ಲಿ ಕೈದಿಯ ವಾದವನ್ನು ಆಲಿಸಲು ಸೂಕ್ತ ಕಾಲಾವಕಾಶ ಕೊಡಬೇಕಾಗುತ್ತದೆ. ಇಲ್ಲವಾದಲ್ಲಿ ಕೈದಿಯ ವಿರುದ್ಧ ಪೂರ್ವಗ್ರಹ ಭಾವನೆ ಉಂಟಾಗುತ್ತದೆ. ಹೀಗಾಗಿ, ಕೈದಿಗಳನ್ನು ಸ್ಥಳಾಂತರ ಮಾಡುವ ಸಂದರ್ಭಗಳಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ತಮ್ಮ ವಿವೇಚನೆ ಬಳಸಬೇಕಾಗುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಅರ್ಜಿದಾರರ ಪರ ಬಿ.ಜೆ.ಹಿತೇಶ್ ಗೌಡ ವಾದ ಮಂಡಿಸಿದ್ದರು.

ಠಾಣೆಗಳಿಗೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: 'ಭಾರತೀಯ ನಾಗರಿಕ ಸುರಕ್ಷಾ ಸಂಹಿತ (ಬಿಎನ್‌ಎಸ್‌ಎಸ್)–2023 ಜಾರಿಗೆ ಬಂದ ಮೇಲೆ ಪೊಲೀಸರು ಹಿಂದಿನ, ಸಿಆರ್‌ಪಿಸಿ ಅಡಿ ಎಫ್‌ಐಆರ್ ದಾಖಲಿಸಿಕೊಳ್ಳುವುದಕ್ಕೆ ಅನುಮತಿ ನೀಡಲಾಗದು' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಬಿಎನ್‌ಎಸ್‌ಎಸ್ ಜಾರಿಗೆ ಬಂದ 2024ರ ಜುಲೈ 1ರಂದು ಅತ್ಯಾಚಾರ ಆರೋಪದಡಿ ವ್ಯಕ್ತಿಯೊಬ್ಬರ ವಿರುದ್ಧ ಸಿಆರ್‌ಪಿಸಿ ಅಡಿಯಲ್ಲಿ ದಾಖಲಾಗಿದ್ದ ರಾಜ್ಯದಲ್ಲಿನ ಮೊದಲ ಎಫ್‌ಐಆರ್ ರದ್ದುಪಡಿಸಿರುವ ಕಲಬುರಗಿ ಪೀಠದಲ್ಲಿನ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ನನ್ನ ವಿರುದ್ಧ ಲಿಂಗಸೂಗೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಹಾಗೂ ಲಿಂಗಸೂಗೂರು ಜೆಎಂಎಫ್‌ಸಿ ನ್ಯಾಯಾಲಯದಲ್ಲಿರುವ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಅರುಣ್ ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, ಪೊಲೀಸ್ ಠಾಣೆಗಳಿಗೆ ಕೆಲವು ನಿರ್ದೇಶನಗಳನ್ನೂ ನೀಡಿದೆ.

'ಸಿಆರ್‌ಪಿಸಿ ಕಲಂ 154ರಡಿ ಪೊಲೀಸರು ದಾಖಲಿಸಿಕೊಂಡಿದ್ದ ಹಾಲಿ ಎಫ್‌ಐಆರ್ ರದ್ದುಪಡಿಸಲಾಗುತ್ತಿದೆ. ಆದರೆ, ದೂರಿನ ಗಂಭೀರತೆ ಆಧರಿಸಿ ಪ್ರಕರಣವನ್ನು ಪೊಲೀಸರಿಗೆ ಹಿಂದಿರುಗಿಸಲಾಗುತ್ತಿದೆ. ಬಿಎನ್‌ಎಸ್‌ಎಸ್ ಕಲಂ 173ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಿ ಬಿಎನ್‌ಎಸ್‌ಎಸ್ ಕಲಂ 193ರಡಿ ವಿಚಾರಣಾ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿ' ಎಂದು ನಿರ್ದೇಶಿಸಿದೆ.

ಹಬ್ಬದ ಸವಿಯೂಟಗಳು

ಕರುನಾಡ ಸವಿಯೂಟ ಆವೃತ್ತಿ 3 — Freedom Healthy Cooking Oils presents, Powered by Sri Krishna

ಹಬ್ಬದ ಋತುವಿನಲ್ಲಿ ನಿಮ್ಮನ್ನು ತಲುಪಲು ಬರುತ್ತಿರುವ 'ಕರುನಾಡ ಸವಿಯೂಟ ಸೀಸನ್–3'ರ ಪಾಕ ಪದ್ಧತಿಯನ್ನು ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ ಪ್ರಸ್ತುತಪಡಿಸುತ್ತಿದೆ. ಬಾಯಲ್ಲಿ ನೀರು ತರಿಸುವ ಅಡುಗೆ ಭಕ್ಷ್ಯಗಳ ಪ್ರದರ್ಶನ ಶ್ರೀ ಕೃಷ್ಣ ಹಸುವಿನ ತುಪ್ಪ (ಶ್ರೀ ಕೃಷ್ಣ ಶುದ್ಧ ಹಳ್ಳಿ ತುಪ್ಪ) ಸಹಯೋಗದಲ್ಲಿ ಮೂಡಿಬರಲಿದೆ. ಪಾಕ ಪ್ರವೀಣ ಸಿಹಿ ಕಹಿ ಚಂದ್ರು ತಯಾರಿಸಿರಲಿರುವ ಎರಡು ಸಿಹಿ ತಿನಿಸುಗಳಿಂದ ಈ ಆವೃತ್ತಿ ಆರಂಭವಾಗಲಿದೆ.

ಸಜ್ಜಿಗೆ: ಬೇಕಾದ ಪದಾರ್ಥಗಳು: **ಎರಡು ಕಪ್ ಚಿರೋಟಿ ರವೆ, ಎರಡು ಕಪ್ ಸಕ್ಕರೆ, ಅರ್ಧ ಚಮಚ ಏಲಕ್ಕಿ ಪುಡಿ, ಒಂದು ದೊಡ್ಡ ಬಾಳೆಹಣ್ಣು, ಅರ್ಧ ಕಪ್ ತುಪ್ಪ, ಅರ್ಧ ಕಪ್ ಅಡುಗೆ ಎಣ್ಣೆ, ಗೋಡಂಬಿ ಮತ್ತು ಒಣದ್ರಾಕ್ಷಿ ಬೇಕಾದಷ್ಟು**

ಮಾಡುವ ವಿಧಾನ: ಒಂದು ಪಾತ್ರೆ ತೆಗೆದುಕೊಂಡು ಅದರಲ್ಲಿ ಹಾಲನ್ನು ಕುದಿಸಿ ಇಟ್ಟುಕೊಳ್ಳಿ. ಕಡಾಯಿಗೆ ಎರಡು ಸ್ಪೂನ್ ತುಪ್ಪ ಹಾಕಿ ಗೋಡಂಬಿ ಮತ್ತು ಒಣದ್ರಾಕ್ಷಿ ಕಂದು ಬಣ್ಣ ಬರುವವರೆಗೆ ಹುರಿದು ಎತ್ತಿಟ್ಟುಕೊಳ್ಳಿ. ಇದೇ ಕಡಾಯಿಗೆ ನಾಲ್ಕು ಲವಂಗ ಹಾಕಿ, ಒಂದು ಚಮಕ ತುಪ್ಪ ಸುರಿದು ಒಂದು ನಿಮಿಷ ಬಾಡಿಸಿ. ಮತ್ತೆ ಇದೇ ಕಡಾಯಿಯಲ್ಲಿ ಮೂರು ಟೇಬಲ್ ಸ್ಪೂನ್ ತುಪ್ಪ ಹಾಕಿ, ಚಿರೋಟಿ ರವೆಯನ್ನು ಸಣ್ಣ ಉರಿಯಲ್ಲಿ ಪರಿಮಳ ಬರುವವರೆಗೆ ಹುರಿಯಿರಿ. ಬಾಳೆಹಣ್ಣನ್ನು ತೆಗೆದುಕೊಂಡು ಸಣ್ಣ ತುಂಡುಗಳು ಮಾಡಿ ಹುರಿದ ರವೆಗೆ ಸೇರಿಸಿ.



ಪುನಃ ಕೆಲವು ನಿಮಿಷ ಫ್ರೈ ಮಾಡಿ. ಈಗ ಕುದಿಸಿಟ್ಟ ಹಾಲನ್ನು ನಿಧಾನವಾಗಿ ರವೆಗೆ ಸುರಿಯುತ್ತಾ ಚೆನ್ನಾಗಿ ಕಲೆಸಿ. ರವೆ ಹಾಲನ್ನು ಪೂರ್ಣವಾಗಿ ಹೀರಿಕೊಳ್ಳುವ ತನಕ ಈ ಕಾರ್ಯ ನಡೆಯಬೇಕು. ನಂತರ ಸಕ್ಕರೆ ಮತ್ತು ಹುರಿದ ಡ್ರೈಫ್ರೂಟ್ಸ್ ಜತೆ ಏಲಕ್ಕಿ ಪುಡಿ ಹಾಕಿ ಚೆನ್ನಾಗಿ ಕಲೆಸಿ. ಸಕ್ಕರೆ ಕರಗುವವರೆಗೆ ನೋಡಿಕೊಳ್ಳಿ. ಮುಚ್ಚಳ ಮುಚ್ಚಿ ಕಡಿಮೆ ಉರಿ ಇಟ್ಟು ಕೆಲ ಸಮಯ ಬೇಯಲು ಬಿಡಿ. ಅಂತಿಮವಾಗಿ ಎಲ್ಲವನ್ನೂ ಚೆನ್ನಾಗಿ ಕಲೆಸಿದ್ದಲ್ಲಿ ರುಚಿಕರ ಸಜ್ಜಿಗೆ ರೆಡಿ. ಉಳಿದಿರುವ ತುಪ್ಪವನ್ನು ಹಾಕಿ ಮತ್ತೆ ಮಿಕ್ಸ್ ಮಾಡಿ. ಸಜ್ಜಿಗೆ ಸಂಪೂರ್ಣ ತಣ್ಣಗಾದ ಮೇಲೆ ತಿನ್ನಲು ಬಡಿಸಿ.

ಅಕ್ಕಿ ಕಡಲೆಬೇಳೆ ಪಾಯಸ

ಬೇಕಾದ ಪದಾರ್ಥಗಳು: ಅಕ್ಕಿ ಮತ್ತು ಕಡಲೆಬೇಳೆ ಒಂದೊಂದು ಕಪ್, ಲವಂಗ, ನಾಲ್ಕು, ಜಾಪತ್ರೆ ಅರ್ಧ, ಬೆಲ್ಲ ಒಂದು ಕಪ್, ತುರಿದ ತೆಂಗಿನಕಾಯಿ ಒಂದು ಕಪ್, ಗಸಗಸೆ ಒಂದು ಟೇಬಲ್ ಚಮಚ, ಮೂರು ಏಲಕ್ಕಿ, ಗೋಡಂಬಿ 10 ಮತ್ತು ದ್ರಾಕ್ಷಿ 10, ಅಡುಗೆ ಎಣ್ಣೆ 2 ಟೇಬಲ್ ಸ್ಪೂನ್ ತುಪ್ಪ ಒಂದು ಟೇಬಲ್ ಚಮಚ

ಮಾಡುವ ವಿಧಾನ: ಒಂದು ಕುಕ್ಕರ್‌ನಲ್ಲಿ ಒಂದು ಟೇಬಲ್ ಸ್ಪೂನ್ ಎಣ್ಣೆ ಮತ್ತು ತುಪ್ಪ ಹಾಕಿ ಬಿಸಿ ಮಾಡಿ. ಅದಕ್ಕೆ ಲವಂಗ ಹಾಕಿ ಕೆಲ ನಿಮಿಷ ಬಾಡಿಸಿ. ನಂತರ ನೆನೆಸಿದ ಅಕ್ಕಿ ಮತ್ತು ಕಡಲೆಬೇಳೆ ಹಾಕಿ ಕೆಲವೊತ್ತು ಹುರಿಯಿರಿ. ಐದು ಲೋಟ ನೀರನ್ನು ಹಾಕಿ ಚೆನ್ನಾಗಿ ಕಲೆಸಿ, ಕುದಿಯುವವರೆಗೆ ಬಿಡಿ. ಈಗ ಕುಕ್ಕರ್ ಮುಚ್ಚಳ ಮುಚ್ಚಿ ನಾಲ್ಕು ವಿಸಿಲ್ ಕೂಗಿಸಿ ನಂತರ ತಣ್ಣಗಾಗುವವರೆಗೆ ಕಾಯಿರಿ.

ಪ್ಯಾನ್‌ವೊಂದರಲ್ಲಿ ಗಸಗಸೆ ಮತ್ತು ಜಾಪತ್ರೆ ಹಾಕಿ ಸ್ವಲ್ಪ ಬಣ್ಣ ಬದಲಾಗುವವರೆಗೆ ಹುರಿಯಿರಿ. ಇದನ್ನು ಮಿಕ್ಸಿ ಜಾರ್‌ಗೆ ಹಾಕಿಕೊಂಡು ತೆಂಗಿನತುರಿ ಮತ್ತು ಏಲಕ್ಕಿ ಜತೆ ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ತಣ್ಣಗಾದ ಕುಕ್ಕರ್ ಮುಚ್ಚಳ ತೆಗೆದು, ರುಬ್ಬಿದ ಪೇಸ್ಟ್ ಅನ್ನು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. ಬೇಕಿದ್ದಲ್ಲಿ ಸ್ವಲ್ಪ ನೀರನ್ನು ಬೆರೆಸಿ ಕುದಿ ಬರುವವರೆಗೆ ಬೇಯಿಸಿ.

ನೀರನ್ನು ಕುದಿಸಿ ಅದರಲ್ಲಿ ಪುಡಿ ಮಾಡಿದ್ದ ಬೆಲ್ಲವನ್ನು ಹಾಕಿ, ಕರಗುವವರೆಗೆ ನೋಡಿಕೊಳ್ಳಿ. ಬೆಲ್ಲದ ನೀರನ್ನು ಅಕ್ಕಿ ಮತ್ತಿತರ ಪದಾರ್ಥಗಳಿರುವ ಕುಕ್ಕರ್‌ಗೆ ಸುರಿಯಿರಿ. ಒಂದು ಪ್ಯಾನ್‌ನಲ್ಲಿ ಸ್ವಲ್ಪ ಎಣ್ಣೆ, ತುಪ್ಪ ಹಾಕಿ, ಅದರಲ್ಲಿ ಗೋಡಂಬಿ ಮತ್ತು ಒಣದ್ರಾಕ್ಷಿ ಹಾಕಿ ಕಂದು ಬಣ್ಣ ಬರುವವರೆಗೆ ಹುರಿದುಕೊಳ್ಳಿ. ಅದನ್ನು ನೇರವಾಗಿ ಕುದಿಯುತ್ತಿರುವ ಪಾಯಸದಲ್ಲೆ ಚೆನ್ನಾಗಿ ಕಲೆಸಿದರೆ ಘಮ್ ಎನ್ನುವ ಅಕ್ಕಿ ಕಡ್ಲೆಬೇಳೆ ಪಾಯಸ ತಯಾರು.

ಅಡುಗೆ ಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

LPG Partner: Indane | Hygiene Partner: Exo | Special Partner: KSDA | Associate Sponsors: Philips, Preethi, SSP Hing, Vencobb | Rice Partner: India Gate Basmati Rice | Supported by: Sujay Water Saving Irrigation Systems

ಕಾಲೇಜುಗಳಲ್ಲೇ ಪ್ರಾಯೋಗಿಕ ಪರೀಕ್ಷೆ

ಬೆಂಗಳೂರು: 'ದ್ವಿತೀಯ ಪಿಯು ವಿದ್ಯಾರ್ಥಿಗಳು ತಾವು ಕಲಿಯುತ್ತಿರುವ ಕಾಲೇಜಿನಲ್ಲೇ ಪ್ರಾಯೋಗಿಕ ಪರೀಕ್ಷೆಗೆ ಇನ್ನು ಮುಂದೆ ಹಾಜರಾಗುವಂತಿಲ್ಲ' ಎಂದು ಹೊರಡಿಸಿದ್ದ ಸುತ್ತೋಲೆಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ವಾಪಸ್ ಪಡೆದಿದೆ.

'ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಸೂಚನೆಯಂತೆ ಸುತ್ತೋಲೆಯನ್ನು ಹಿಂಪಡೆಯಲಾಗಿದೆ. ಹಿಂದಿನಂತೆ ಆಯಾ ಕಾಲೇಜುಗಳಲ್ಲೇ ಪರೀಕ್ಷೆಗಳು ನಡೆಯಲಿವೆ' ಎಂದು ಮಂಡಳಿ ಅಧ್ಯಕ್ಷೆ ಮಂಜುಶ್ರೀ ಸುತ್ತೋಲೆ ಹಿಂಪಡೆದಿದ್ದಕ್ಕೆ ಕಾರಣ ನೀಡಿದ್ದಾರೆ.

ಪ್ರಾಯೋಗಿಕ ಪರೀಕ್ಷೆಗಳನ್ನು ಪ್ರತಿ ವರ್ಷವೂ ಆಯಾ ಕಾಲೇಜುಗಳಲ್ಲೇ ನಡೆಸಲಾಗುತ್ತಿತ್ತು. ಅದೇ ಕಾಲೇಜುಗಳಲ್ಲೇ ನಡೆಸುವುದರಿಂದ ಎಲ್ಲರಿಗೂ ಗರಿಷ್ಠ ಅಂಕ ನೀಡಲಾಗುತ್ತಿದೆ. ಹಾಗಾಗಿ, ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಒಂದು ಕಾಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಗಳು ಹಂಚಿಕೆ ಮಾಡಿದ ಇತರೆ ಕಾಲೇಜುಗಳಿಗೆ ತೆರಳಿ ಪ್ರಾಯೋಗಿಕ ಪರೀಕ್ಷೆ ಎದುರಿಸಬೇಕು ಎಂದು ಮಂಡಳಿಯು ಸುತ್ತೋಲೆ ಹೊರಡಿಸಿತ್ತು.

ಸುತ್ತೋಲೆಯನ್ನು ವಾಪಸ್ ಪಡೆಯುವಂತೆ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜು ಉಪನ್ಯಾಸಕರ ಸಂಘ ಪತ್ರ ಬರೆದಿತ್ತು. ನಂತರ ಪರಿಷ್ಕೃತ ಸುತ್ತೋಲೆ ಹೊರಡಿಸಿದ್ದ ಮಂಡಳಿ, ಪರೀಕ್ಷಾ ಕೇಂದ್ರಗಳಲ್ಲಿನ ಪ್ರಯೋಗಾಲಯಗಳ ಸೌಕರ್ಯದ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಲಾಗುವುದು. ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಲು ಅವರದೇ ಕಾಲೇಜಿನ ಉಪನ್ಯಾಸಕರನ್ನು ಆಂತರಿಕ ಪರೀಕ್ಷಕರಾಗಿ ನೇಮಿಸಲಾಗುವುದು, ಗ್ರಾಮೀಣ ಭಾಗದಲ್ಲಿ ಒಂದೇ ಕೇಂದ್ರ ಲಭ್ಯವಿದ್ದರೆ ಅದೇ ಕೇಂದ್ರದಲ್ಲೇ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು ಎಂದಿತ್ತು.

'ಮಂಡಳಿಯ ನಿರ್ಧಾರ ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾರಕವಾಗಿತ್ತು. ಸುತ್ತೋಲೆ ಹಿಂಪಡೆಯುವ ಮೂಲಕ ಮಂಡಳಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿದೆ' ಎಂದು ಸಂಘದ ಅಧ್ಯಕ್ಷ ಎ.ಎಚ್‌. ನಿಂಗೇಗೌಡ ಹೇಳಿಕೆ ನೀಡಿದ್ದಾರೆ.

ಧರೆಗೆ ಹಾಗಲ... ಬುಧವಾರ ಬೆಳಗಿನ ಜಾವ ಧಾರಾಕಾರವಾಗಿ ಸುರಿದ ಮಳೆಗೆ ಧಾರವಾಡ ತಾಲ್ಲೂಕಿನ ಕಮಲಾಪುರದ ಜಮೀನಿನಲ್ಲಿ ಹಾಗಲಕಾಯಿ ಬಳ್ಳಿ ನೆಲಕಚ್ಚಿದೆ ಪ್ರಜಾವಾಣಿ ಚಿತ್ರ

ಸಚಿವ ಸ್ಥಾನಕ್ಕಾಗಿ ಕೃತ್ಯ: ಬಿಜೆಪಿ ಶಾಸಕನ ವಿರುದ್ಧ ಸಂತ್ರಸ್ತೆ ಆರೋಪ

'ಇಬ್ಬರು ಮಾಜಿ ಸಿ.ಎಂಗಳಿಗೆ ಮುನಿರತ್ನ ಹನಿಟ್ರ್ಯಾಪ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಬ್ಬರು ಮಾಜಿ ಮುಖ್ಯಮಂತ್ರಿಗಳನ್ನು ಹನಿಟ್ರ್ಯಾಪ್ ಮಾಡಿ, ಬ್ಲ್ಯಾಕ್‌ಮೇಲ್ ಮಾಡುವ ಮೂಲಕ ರಾಜರಾಜೇಶ್ವರಿನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರು ಸಚಿವ ಸ್ಥಾನ ಪಡೆದುಕೊಂಡಿದ್ದರು' ಎಂದು ಸಂತ್ರಸ್ತೆಯೊಬ್ಬರು ಆರೋಪಿಸಿದರು.

ಮುನಿರತ್ನ ಅತ್ಯಾಚಾರ ನಡೆಸಿದ್ದಾರೆ ಎಂದು ಆರೋಪಿಸಿ, ರಾಮನಗರ ಜಿಲ್ಲೆಯ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ಸಂತ್ರಸ್ತೆ ದೂರು ಸಲ್ಲಿಸಿದ್ದರು. ಅದನ್ನು ಆಧರಿಸಿ, ಮುನಿರತ್ನ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂತ್ರಸ್ತೆ, 'ಸರ್ಕಾರ ನನಗೆ ಸೂಕ್ತ ಭದ್ರತೆ ಒದಗಿಸಿದರೆ ಮಾಜಿ ಮುಖ್ಯಮಂತ್ರಿಗಳಿಗೆ ಹನಿಟ್ರ್ಯಾಪ್ ಮಾಡಿರುವ ಸಾಕ್ಷ್ಯಾಧಾರಗಳನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ನೀಡುತ್ತೇನೆ. ಈ ಪ್ರಕರಣದಲ್ಲಿ ಐದರಿಂದ ಆರು ಮಹಿಳೆಯರನ್ನು ಬಳಸಿಕೊಳ್ಳಲಾಗಿದೆ' ಎಂದು ಆರೋಪಿಸಿದರು.

'ಮುನಿರತ್ನ ಅವರು 2020ರಲ್ಲಿ ಪರಿಚಯವಾಗಿದ್ದರು. ನಂತರ ನನ್ನ ಮೊಬೈಲ್ ಸಂಖ್ಯೆ ಪಡೆದುಕೊಂಡು, ವಿಡಿಯೊ ಕರೆಗಳನ್ನು ಮಾಡುತ್ತಿದ್ದರು. ಕರೆ ಸ್ವೀಕರಿಸದಿದ್ದಾಗ, ಕರೆ ಸ್ವೀಕರಿಸುವಂತೆ ಒತ್ತಾಯಿಸುತ್ತಿದ್ದರು. ಮುನಿರತ್ನ ಅವರು ನನ್ನ ಕುಟುಂಬದವರನ್ನು ಕೊಲೆ ಮಾಡುವುದಾಗಿ ಬೆದರಿಕೆವೊಡ್ಡಿ ನನ್ನ ಮೇಲೆ ನಿರಂತರವಾಗಿ ಅತ್ಯಾಚಾರ ಮಾಡಿದ್ದರು. ಅದನ್ನು ವಿಡಿಯೊ ಚಿತ್ರೀಕರಣ ಮಾಡಿಕೊಂಡಿದ್ದರು. ಆ ವಿಡಿಯೊ ತೋರಿಸಿ, ಬೇರೆ–ಬೇರೆ ಕೃತ್ಯಗಳನ್ನು ಮಾಡುವಂತೆ ನನ್ನನ್ನು ಒತ್ತಾಯಿಸಿದ್ದರು' ಎಂದು ದೂರಿದರು.

'ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳು, ಮಾಜಿ ಸಚಿವರು ಮತ್ತು ಶಾಸಕರನ್ನು ಹನಿಟ್ರ್ಯಾಪ್ ಮಾಡಲು ನನ್ನನ್ನೂ ಸೇರಿದಂತೆ ಬಹಳಷ್ಟು ಹೆಣ್ಣುಮಕ್ಕಳನ್ನು ಬಳಸಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಏಳೆಂಟು ಮಂದಿ ಸಂತ್ರಸ್ತೆಯರಿದ್ದು, ಇದರಲ್ಲಿ ನಾಲ್ವರು ಎಚ್‌ಐವಿ ಸೋಂಕಿತೆಯರು. ಇವರಲ್ಲಿ ಒಬ್ಬ ಮಹಿಳೆಯನ್ನು ಬಳಸಿಕೊಂಡು ಬಿಬಿಎಂಪಿ ಮಾಜಿ ಸದಸ್ಯೆಯೊಬ್ಬರ ಪತಿಯನ್ನು ಹನಿಟ್ರ್ಯಾಪ್ ಮಾಡಲು ಮುನಿರತ್ನ ಯತ್ನಿಸಿದ್ದರು' ಎಂದು ಹೇಳಿದರು.

'ಯಾರನ್ನಾದರೂ ಹನಿಟ್ರ್ಯಾಪ್ ಮಾಡಬೇಕಾದರೆ, ಆ ಕೃತ್ಯವನ್ನು ಚಿತ್ರೀಕರಿಸಿಕೊಳ್ಳಲು ಅವರದೇ ಆದ ವಿಶೇಷ ಮೊಬೈಲ್‌ಗಳನ್ನು ನೀಡುತ್ತಿದ್ದರು. ಇದೆಲ್ಲವನ್ನು ಮುನಿರತ್ನ ಅವರ ಸಂಬಂಧಿ ಸುಧಾಕರ್ ನಾಯ್ಡು ಅವರು ನಿರ್ವಹಣೆ ಮಾಡುತ್ತಿದ್ದರು. ಸುಧಾಕರ್ ಅವರು ಇಲ್ಲದ ಸಂದರ್ಭದಲ್ಲಿ ಕೆಲವು ವಿಡಿಯೊಗಳನ್ನು ನನ್ನ ಮೊಬೈಲ್‌ಗೆ ಶೇರ್ ಮಾಡಿಕೊಂಡಿದ್ದೆ. ನಮ್ಮ ವೈಯಕ್ತಿಕ ಮೊಬೈಲ್‌ಗಳನ್ನು ಬಳಸಲು ಅವಕಾಶ ನೀಡುತ್ತಿರಲಿಲ್ಲ' ಎಂದರು.

ಕದ್ದುಮುಚ್ಚಿ ಮಹಜರು

'ಮುನಿರತ್ನ ಅವರ ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಪ್ರಕರಣದ ಸಂಬಂಧ ಎಸ್‌ಐಟಿ ಅಧಿಕಾರಿಗಳು ವಿವಿಧ ಸ್ಥಳಗಳಲ್ಲಿ ಮಹಜರು ನಡೆಸುತ್ತಿದ್ದಾರೆ. ಈ ಸ್ಥಳಗಳಿಗೆ ಮುನಿರತ್ನ ಅವರನ್ನು ರಾತ್ರಿ ಕದ್ದು ಮುಚ್ಚಿ ಕರೆದುಕೊಂಡು ಹೋಗಿ ಮಹಜರು ಮಾಡುತ್ತಿದ್ದಾರೆ. ಆದರೆ, ನನ್ನನ್ನು ಬೆಳಗಿನ ಸಮಯದಲ್ಲಿ ಕರೆದುಕೊಂಡು ಹೋಗುತ್ತಿದ್ದಾರೆ. ಈ ಪ್ರಕರಣದಲ್ಲಿ ಸಂತ್ರಸ್ತೆ ನಾನೋ ಅಥವಾ ಮುನಿರತ್ನ ಅವರೋ ಎಂಬುದು ಗೊತ್ತಾಗುತ್ತಿಲ್ಲ' ಎಂದು ಸಂತ್ರಸ್ತೆ ಪ್ರಶ್ನಿಸಿದರು.

'ಅಧ್ಯಕ್ಷರ ಭೇಟಿಗೆ ಅವಕಾಶ ನೀಡಿ'

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಭೇಟಿಯಾಗಬೇಕಿದೆ. ನಿಮ್ಮ ಪಕ್ಷದ ಒಬ್ಬ ಶಾಸಕ ಇಂತಹ ಕೃತ್ಯಗಳನ್ನು ಮಾಡಿಸಿದ್ದಾನೆ. ಆದರೂ ಅವರನ್ನು ನೀವು ನಿಮ್ಮ ಪಕ್ಷದಲ್ಲಿ ಯಾಕೆ ಇಟ್ಟುಕೊಂಡಿದ್ದೀರಾ ಎಂದು ಕೇಳಬೇಕಿದೆ' ಎಂದ ಸಂತ್ರಸ್ತೆ, ಭೇಟಿಗೆ ಅವಕಾಶ ಕೊಡುವಂತೆ ವಿಜಯೇಂದ್ರ ಅವರನ್ನು ಮಾಧ್ಯಮದವರ ಮೂಲಕ ಕೋರಿದರು.

ಗುರುವಾರ, ಅಕ್ಟೋಬರ್ 10, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 282 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಅಹೋಮ್ ಸಂಸ್ಕೃತಿಯ ದಫನ ದಿಣ್ಣೆಯ ಮಾಹಿತಿ ನಿಮಗಾಗಿ

ಆಳ-ಅಗಲ
ಗಾಜಾ ನರಕಯಾತನೆಗೆ ಮುಕ್ತಿ ಯಾವಾಗ?

ರಸಾಯನ ವಿಜ್ಞಾನದಲ್ಲಿ ಮೂವರಿಗೆ ನೊಬೆಲ್ 10
ವಿದ್ಯಾರ್ಥಿಗಳಿಗೆ ಕತ್ತೆ, ಒಂಟೆ ಅನ್ನುವಂತಿಲ್ಲ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,467	24,981	₹79,000 (ಬೆಂಗಳೂರು)	₹94,100 (ಬೆಂಗಳೂರು)	83.96

ಬಿಜೆಪಿ ಸರ್ಕಾರದ ಅವಧಿಯಲ್ಲಾದ ಖರೀದಿ • ಸಂಪುಟ ಸಭೆ ಚರ್ಚೆಗೆ ನ್ಯಾ. ಡಿಕುನ್ಹಾ ಆಯೋಗದ ವರದಿ

ಕೋವಿಡ್: ₹769 ಕೋಟಿ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆ ಹೆಸರಿನಲ್ಲಿ ನಡೆದ ಅಕ್ರಮಗಳ ಕುರಿತು ತನಿಖೆ ನಡೆಸಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿಕುನ್ಹಾ ನೇತೃತ್ವದ ಆಯೋಗವು ಒಟ್ಟು ₹3,741.36 ಕೋಟಿ ಮೊತ್ತದ ಖರೀದಿಯಲ್ಲಿ ₹769 ಕೋಟಿಯಷ್ಟು ಅವ್ಯವಹಾರ ನಡೆದಿರುವುದನ್ನು ಪತ್ತೆ ಮಾಡಿದೆ.

ಆಯೋಗವು ಇತ್ತೀಚೆಗೆ ಸಲ್ಲಿಸಿರುವ ಮಧ್ಯಂತರ ವರದಿ ಆಧರಿಸಿ, ಅವ್ಯವಹಾರಕ್ಕೆ ಕಾರಣರಾದವರಿಂದ ಹಣ ವಸೂಲಿ ಮಾಡಲು ಮತ್ತು ತಪ್ಪಿತಸ್ಥರ ಮೇಲೆ ಶಿಸ್ತುಕ್ರಮ ಜರುಗಿಸಲು ಸರ್ಕಾರ ಮುಂದಡಿ ಇಟ್ಟಿದೆ.

ಕೋವಿಡ್ ಸಾಂಕ್ರಾಮಿಕವು ರಾಜ್ಯವನ್ನು ಕಾಡಿದಾಗ, ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿತ್ತು. ಈ ಅವಧಿಯಲ್ಲಿ ಅಕ್ರಮ ನಡೆದಿದೆ ಎಂದು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿ ನೀಡಿತ್ತು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ಕೋವಿಡ್ ಅಕ್ರಮದ ತನಿಖೆಗೆ ಆಯೋಗವನ್ನು ರಚಿಸಲಾಗಿತ್ತು.

ಗುರುವಾರ (ಅ.10) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬರಲಿದೆ. ಈ ಅಕ್ರಮದಲ್ಲಿ ಭಾಗಿಯಾದ ಆರೋಗ್ಯ, ವೈದ್ಯಕೀಯ ಶಿಕ್ಷಣ ಮತ್ತು ನಗರಾಭಿವೃದ್ಧಿ ಇಲಾಖೆಯ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸಿ ಅವರ ಮೇಲೆ ನಿರ್ದಿಷ್ಟವಾದ ಆರೋಪ ಪಟ್ಟಿ ಸಿದ್ಧಪಡಿಸುವ ಕುರಿತ ಪ್ರಸ್ತಾವ ಸಚಿವ ಸಂಪುಟದ ಮುಂದೆ ಬರಲಿದೆ.

ಅಕ್ರಮದಲ್ಲಿ ಭಾಗಿಯಾದ ಖಾಸಗಿ ಸಂಸ್ಥೆಗಳಿಂದ ಹಣ ವಸೂಲಿ ಮಾಡಲು ಮತ್ತು ಹೆಚ್ಚಿನ ತನಿಖೆ ಅಗತ್ಯ ಇರುವ ಪ್ರಕರಣಗಳಲ್ಲಿ ವಿಚಾರಣೆ ನಡೆಸಲು 'ಪ್ರತ್ಯೇಕ ಕೋಶ' ರಚಿಸುವ ಬಗ್ಗೆಯೂ ಸಭೆಗೆ ಪ್ರಸ್ತಾವ ಮಂಡಿಸಲಾಗಿದೆ.

'ಈ ಪ್ರತ್ಯೇಕ ಕೋಶ ರಚನೆ ಕುರಿತು ನಿರ್ಧರಿಸಲು ಮತ್ತು ಈ ಕೋಶ ನೀಡುವ ವರದಿಯನ್ನು ಪರಿಶೀಲಿಸಿ ವರದಿ ಅಂತಿಮಗೊಳಿಸಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವೃಂದ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಎಲ್ಲ ಇಲಾಖೆಗಳ ಕಾರ್ಯದರ್ಶಿಗಳನ್ನು ಒಳಗೊಂಡ ಉನ್ನತಮಟ್ಟದ ಸಮಿತಿ ರಚಿಸಲು ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆ ಇದೆ. ಸಮಿತಿಯ ಮೇಲ್ವಿಚಾರಣೆಗೆ ಸಚಿವ ಸಂಪುಟ ಉಪ ಸಮಿತಿ ರಚಿಸುವ ಬಗ್ಗೆಯೂ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ' ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಕೋವಿಡ್ ನಿರ್ವಹಣೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಆರೋಪಗಳ ತನಿಖೆಗೆ ರಾಜ್ಯ ಸರ್ಕಾರ 2023ರ ಆಗಸ್ಟ್ 25ರಂದು ಜಾನ್ ಮೈಕೆಲ್ ಡಿಕುನ್ಹಾ ಏಕ ಸದಸ್ಯ ಆಯೋಗವನ್ನು ರಚಿಸಿತ್ತು. ಈ ಆಯೋಗ ಇದೇ ಆಗಸ್ಟ್ 31ರಂದು ಮಧ್ಯಂತರ ವರದಿ ಸಲ್ಲಿಸಿದೆ. ಈ ವರದಿಯನ್ನು ಅಧ್ಯಯನ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುವ ಕುರಿತು ವಿವರಣೆ ನೀಡಲು ಸಂಬಂಧಪಟ್ಟ ಇಲಾಖೆಗಳಾದ ಆರೋಗ್ಯ, ವೈದ್ಯಕೀಯ ಶಿಕ್ಷಣ ಮತ್ತು ನಗರಾಭಿವೃದ್ಧಿ ಇಲಾಖೆಗಳ ಮುಖ್ಯಸ್ಥರಿಗೆ ಸೆ. 9ರಂದು ಹಸ್ತಾಂತರಿಸಲಾಗಿತ್ತು. ತಪ್ಪಿತಸ್ಥರಿಂದ ಹಣ ವಸೂಲಿ, ಶಿಸ್ತು ಕ್ರಮ ಮತ್ತು ಅಪರಾಧ ಮೊಕದ್ದಮೆ ದಾಖಲಿಸಲು ಈ ಇಲಾಖೆಗಳು ಸೂಚಿಸಿವೆ. ಮುಖ್ಯಮಂತ್ರಿಯ ಅಧ್ಯಕ್ಷತೆಯಲ್ಲಿ ಸೋಮವಾರ (ಅ.7) ನಡೆದ ಆರೋಗ್ಯ ಮತ್ತು ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಸಭೆಯಲ್ಲಿ ಆಯೋಗ ನೀಡಿರುವ ಮಧ್ಯಂತರ ವರದಿಯನ್ನು ಆಧರಿಸಿದ, ಪ್ರಸ್ತಾವವನ್ನು ಸಚಿವ ಸಂಪುಟ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಲಾಗಿತ್ತು ಎಂದೂ ಹೇಳಿವೆ.

10ನೇ ಪುಟ ನೋಡಿ

ಅಕ್ರಮದ ಆಳ–ಅಗಲ

₹481.2 ಕೋಟಿ
ವೈದ್ಯಕೀಯ ಉಪಕರಣಗಳು, ಅಕ್ರಮ ಕಾಮಗಾರಿಗಳು, ವಿವಿಧ ಶುಲ್ಕಗಳ ಪಾವತಿಯಲ್ಲಿ ನಡೆದ ಅಕ್ರಮದ ಮೊತ್ತ

₹187.91 ಕೋಟಿ
ಅವಧಿ ಮುಗಿದ ಔಷಧ–ಕಳಪೆ ಕಿಟ್‌ಗಳ ಖರೀದಿ, ಪೂರೈಕೆಯಲ್ಲಿ ವಿಳಂಬಕ್ಕೆ ದಂಡ ವಿಧಿಸದೇ ಇರುವುದು, ಹಲವು ಪಟ್ಟು ಹೆಚ್ಚು ದರ ನೀಡಿದ್ದರಿಂದ ಉಂಟಾದ ನಷ್ಟದ ಮೊತ್ತ

₹100.53 ಕೋಟಿ
ಲೆಕ್ಕಕ್ಕೆ ಸಿಗದ/ದಾಖಲೆ ಇಲ್ಲದ ವೆಚ್ಚಗಳ ಮೊತ್ತ

- ₹ 160.25 ಕೋಟಿ ಮೊತ್ತದ ವೈದ್ಯಕೀಯ ಉಪಕರಣಗಳು, ತಪಾಸಣಾ ಕಿಟ್‌ಗಳನ್ನು ಯಾವುದೇ ಅನುಮೋದನೆ ಇಲ್ಲದೇ ಖರೀದಿಸಲಾಗಿದೆ
- ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಆಮ್ಲಜನಕ ಘಟಕಗಳ ಸ್ಥಾಪನೆಗೆ ಅನಗತ್ಯವಾಗಿ ₹84.71 ಕೋಟಿ ಮೊತ್ತದ ಕಾಮಗಾರಿಗಳನ್ನು ನಡೆಸಲಾಗಿದೆ. ಈ ಕಾಮಗಾರಿಗಳು ಪೂರ್ಣವಾಗಿಲ್ಲ
- ಪಿಎಂ.ಕೇರ್ಸ್ ನಿಧಿ ಅಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳಿಗೆ ನಿಧಿಯಿಂದ ಹಣ ಬಿಡುಗಡೆಯಾಗಿದೆ. ಹೀಗಿದ್ದೂ ಆರೋಗ್ಯ ಇಲಾಖೆಯಿಂದ ₹12 ಕೋಟಿ ಅಕ್ರಮವಾಗಿ ಬಿಡುಗಡೆ ಮಾಡಲಾಗಿದೆ
- 17.28 ಲಕ್ಷ ಡೋಸ್‌ಗಳಷ್ಟು ಕೋವಿಡ್ ತಡೆ ಲಸಿಕೆಗಳು ಸರ್ಕಾರಿ ಆಸ್ಪತ್ರೆಗಳು ಮತ್ತು ಆರೋಗ್ಯ ಇಲಾಖೆಯ ಲಸಿಕಾ ಕೇಂದ್ರಗಳಿಂದ ಕಾಣೆಯಾಗಿವೆ
- ಸುಮಾರು ₹1,000 ಬೆಲೆಯ ಇನ್‌ಫ್ರಾರೆಡ್ ಥರ್ಮಾ-ಮೀಟರ್‌ಗಳಿಗೆ ತಲಾ ₹15,000 ಪಾವತಿಸಲಾಗಿದೆ
- 15.82 ಲಕ್ಷ ಅವಧಿ ಮುಗಿದ ಆರ್‌ಟಿ–ಪಿಸಿಆರ್ ಕಿಟ್‌ಗಳನ್ನು ₹3.11 ಕೋಟಿ ವೆಚ್ಚದಲ್ಲಿ ಖರೀದಿಸಲಾಗಿದೆ
- ಕಿದ್ವಾಯಿ ಸಂಸ್ಥೆಯಲ್ಲಿ ಕಾರ್ಯದೊತ್ತಡದ ಕಾರಣ ಖಾಸಗಿ ಸಂಸ್ಥೆಗಳಿಗೆ ಸೋಂಕು ತಪಾಸಣೆಗೆ ಮಾದರಿಗಳು ಮತ್ತು ಚಿಕಿತ್ಸೆಗೆ ರೋಗಿಗಳನ್ನು ಕಳುಹಿಸಲಾಗಿದೆ. ಇದರಲ್ಲೇ ₹264.35 ಕೋಟಿಯಷ್ಟು ಅಕ್ರಮ ನಡೆದಿದೆ ಎಂದು ಸಂಸ್ಥೆಯೇ ವರದಿ ನೀಡಿದೆ

ಸಂಪುಟ ಸಭೆ ಮುಂದಿರುವ ಪ್ರಸ್ತಾವವೇನು?

- ಆಯೋಗದ ವರದಿಯ ಕುರಿತು ನಿಯಮಾನುಸಾರ ಕ್ರಮ
- ತಪ್ಪಿಸ್ಥರನ್ನು ಗುರುತಿಸಿ ಕ್ರಮ ಮತ್ತು ಹೆಚ್ಚಿನ ತನಿಖೆಗೆ 'ಪ್ರತ್ಯೇಕ ಕೋಶ'
- 'ಪ್ರತ್ಯೇಕ ಕೋಶ' ರಚಿಸಲು ಮತ್ತು ವರದಿ ಅಂತಿಮಗೊಳಿಸಲು ಅಧಿಕಾರಿಗಳ ಉನ್ನತಮಟ್ಟದ ಸಮಿತಿ
- ಉನ್ನತಮಟ್ಟದ ಸಮಿತಿಗೆ ಹೆಚ್ಚಿನ ಸಿಬ್ಬಂದಿ ನಿಯೋಜನೆ
- ಉನ್ನತಮಟ್ಟದ ಸಮಿತಿಯ ಮೇಲ್ವಿಚಾರಣೆಗೆ ಸಚಿವ ಸಂಪುಟ ಉಪ ಸಮಿತಿ

ನ್ಯಾಯಮೂರ್ತಿ ಡಿಕುನ್ಹಾ ಆಯೋಗ

2023ರ ಆಗಸ್ಟ್ 25ರಂದು ನ್ಯಾ. ಜಾನ್ ಮೈಕೆಲ್ ಡಿಕುನ್ಹಾ ನೇತೃತ್ವದ ಆಯೋಗ ರಚನೆ
2024ರ ಆಗಸ್ಟ್ 31ರಂದು ಮಧ್ಯಂತರ ವರದಿ
11 ಸಂಪುಟಗಳಲ್ಲಿತ್ತು ತನಿಖೆಯ ಸಾರ
55 ಸಾವಿರ ಕಡತಗಳ ಪರಿಶೀಲನೆ

ರತನ್ ಟಾಟಾ ಅಸ್ತಂಗತ

ಮುಂಬೈ (ಪಿಟಿಐ): ದೇಶದ ಕೈಗಾರಿಕಾ ಉದ್ಯಮಕ್ಕೆ ಅಭಿವೃದ್ಧಿಯ ದಿಕ್ಸೂಚಿಯನ್ನು ನೀಡಿದ್ದ ಹೆಸರಾಂತ ಕೈಗಾರಿಕೋದ್ಯಮಿ ರತನ್ ಟಾಟಾ ಅವರು ಬುಧವಾರ ರಾತ್ರಿ ಇಲ್ಲಿ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಟಾಟಾ ಸಮೂಹ ಸಂಸ್ಥೆಗಳ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದ ಅವರು ಕೆಲವು ದಿನಗಳಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ತಮ್ಮ ಆರೋಗ್ಯ ಸ್ಥಿತಿ ಕುರಿತಂತೆ ಎರಡು ದಿನದ ಹಿಂದಷ್ಟೇ ವದಂತಿ ಹಬ್ಬಿದಾಗ 'ನಾನು ಆರೋಗ್ಯವಾಗಿದ್ದೇನೆ' ಎಂದು ಸ್ವತಃ ಸ್ಪಷ್ಟನೆ ನೀಡಿದ್ದರು.

ಬುಧವಾರ ಬೆಳಿಗ್ಗೆ ಅವರ ಆರೋಗ್ಯಸ್ಥಿತಿಯಲ್ಲಿ ಮತ್ತೆ ಏರುಪೇರು ಕಾಣಿಸಿಕೊಂಡ ಕಾರಣ ಅವರನ್ನು ಇಲ್ಲಿನ ಬ್ರೀಚ್‌ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ರಾತ್ರಿ ಸುಮಾರು 11.30 ಗಂಟೆಗೆ ಅವರು ಮೃತಪಟ್ಟರು. ಇದರೊಂದಿಗೆ ದೇಶದ ಉದ್ಯಮ ಕ್ಷೇತ್ರದ ಅಭಿವೃದ್ಧಿಗೆ ಹೊಸ ಭಾಷ್ಯ ಬರೆದಿದ್ದ ರತನ್ ಟಾಟಾ ಎಂಬ ಚೇತನ ನಂದಿಹೋಯಿತು.

'ರತನ್ ಟಾಟಾ ಅವರು ಇನ್ನಿಲ್ಲ' ಎಂದು ಟಾಟಾ ಸನ್ಸ್ ಸಂಸ್ಥೆಯ ಅಧ್ಯಕ್ಷ ಎನ್.ಚಂದ್ರಶೇಖರನ್ ರಾತ್ರಿ ಹೇಳಿಕೆ ಬಿಡುಗಡೆ ಮಾಡಿದ್ದು, 'ರತನ್ ಟಾಟಾ ಅವರು ನನಗೆ ಸ್ನೇಹಿತ, ಗುರು ಮತ್ತು ಮಾರ್ಗದರ್ಶಿ' ಎಂದೂ ಸ್ಮರಿಸಿದ್ದಾರೆ.

ಟಾಟಾ ಸಮೂಹದ ಪ್ರೇರಕ ಶಕ್ತಿ


28.12.1937-09.10. 2024

ಸುಮಾರು 20 ವರ್ಷ ಕಾಲ ಟಾಟಾ ಸನ್ಸ್ ಸಂಸ್ಥೆಯನ್ನು ಮುನ್ನಡೆಸಿದ್ದರು. ಅಲ್ಲದೆ, ದೇಶದ ಉದ್ಯಮದ ವಿವಿಧ ಕ್ಷೇತ್ರಗಳಲ್ಲಿ ಕಂಪನಿಯ ಬಾಹುವನಿನು ವಿಸ್ತರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅಸಂಖ್ಯ ಸಿಬ್ಬಂದಿಗೆ ಪ್ರೇರಕಶಕ್ತಿಯಾಗಿದ್ದರು. ದೇಶಿ ಉತ್ಪಾದನೆಗೆ ಮೆರಗು, ಖ್ಯಾತಿಯನ್ನು ನೀಡಿದ್ದರು.

ದೊಡ್ಡ ಸಂಸ್ಥೆಯ ಸ್ಥಾಪಕರಾಗಿ ನಮ್ರತೆ, ಸರಳತೆಯಿಂದಾಗಿಯೂ ಅವರು ಜನಮಾನಸದಲ್ಲಿ ವಿಶೇಷ ಸ್ಥಾನ ಪಡೆದಿದ್ದರು. ಟಾಟಾ ಸಂಸ್ಥೆ ಇಂದು ವಿಶ್ವದ ಅತಿದೊಡ್ಡ ಸಂಸ್ಥೆಗಳಲ್ಲಿ ಒಂದಾಗಿ ಖ್ಯಾತಿ ಪಡೆದಿದೆ. 2023–24ನೇ ಹಣಕಾಸು ವರ್ಷದಲ್ಲಿ ಸಮೂಹ ಸಂಸ್ಥೆಗಳ ಒಟ್ಟು ವರಮಾನ 165 ಬಿಲಿಯನ್ ಡಾಲರ್‌ಗಳು.

'ರತನ್ ನೇವಲ್ ಟಾಟಾ ಅವರು ನಿಧನರಾಗಿದ್ದಾರೆ. ಅವರು ನೀಡಿದ ಅಪಾರ ಕೊಡುಗೆಗಳು ಟಾಟಾ ಸಮೂಹವನ್ನಷ್ಟೇ ಅಲ್ಲದೆ ರಾಷ್ಟ್ರವನ್ನು ರೂಪಿಸಿವೆ' ಎಂದ ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ. ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಉದ್ಯಮಿ ಹರೀಶ್ ಗೋಯೆಂಕಾ, ರತನ್ ಟಾಟಾ ಅವರನ್ನು ದಿಗ್ಗಜ ಎಂದು ಬಣ್ಣಿಸಿದ್ದಾರೆ.

ಎರಡು ದಿನದ ಹಿಂದೆಯಷ್ಟೇ ಅನಾರೋಗ್ಯ ಕುರಿತ ವದಂತಿಗಳ ನಡುವೆ, ಅವರು ಆರೋಗ್ಯವಾಗಿದ್ದಾರೆ ಎಂದು ತಿಳಿಸಲು ಟಾಟಾ ಅವರು ಸಹಿ ಮಾಡಿದ ಹೇಳಿಕೆಯನ್ನು 'ಎಕ್ಸ್' ಮತ್ತು 'ಇನ್‌ಸ್ಟಾಗ್ರಾಮ್'ನಲ್ಲಿ ಬಿಡುಗಡೆ ಮಾಡಲಾಗಿತ್ತು. ರತನ್ ಟಾಟಾ ಅವರ ಅಗಲಿಗೆ ಹಲವು ಪ್ರಮುಖರು ಸಂತಾಪ ನುಡಿದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ ಹಾಗೂ ಹಲವು ಉದ್ಯಮ ಕ್ಷೇತ್ರದ ಹಲವು ಪ್ರಮುಖರು ಸಂತಾಪ ವ್ಯಕ್ತಪಡಿಸಿದ್ದಾರೆ.

ಇನ್ನೊಂದು ಸುದ್ದಿ 3B

ನಾಗೇಂದ್ರ ವಿರುದ್ಧ ಇ.ಡಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ನಿಧಿ ದುರ್ಬಳಕೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಬುಧವಾರ ಪ್ರಾಸಿಕ್ಯೂಷನ್ ದೂರು ಸಲ್ಲಿಸಿದೆ. ಅದರಲ್ಲಿ ಉಲ್ಲೇಖಿಸಿರುವ ವಿವಿಧ ಅಪರಾಧಿಕ ಕಲಂಗಳನ್ನು ಪರಿಗಣಿಸಿ ಕೋರ್ಟ್ ದೂರನ್ನು ದಾಖಲಿಸಿಕೊಂಡಿದೆ.

'ಶಾಸಕ ಬಿ.ನಾಗೇಂದ್ರ, ನಿಗಮದ ನಿಧಿ ಅಕ್ರಮ ವರ್ಗಾವಣೆ ಹಗರಣದ ಸಂಚುಕೋರ. ಅವರ ಆಣತಿಯಂತೆಯೇ ನಿಗಮದ ಹಣವನ್ನು ಅಕ್ರಮವಾಗಿ ಹೈದರಾಬಾದ್‌ನ ಹಲವು ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿತ್ತು' ಎಂದು ಇ.ಡಿ ದೂರಿನಲ್ಲಿ ವಿವರಿಸಿದೆ.

'ನಿಗಮವು ಬೇರೆ ಬ್ಯಾಂಕ್ ಖಾತೆಗಳಲ್ಲಿ ಹೊಂದಿದ್ದ ಠೇವಣಿಗಳನ್ನು ಅನಧಿಕೃತವಾಗಿ ಎಂ.ಜಿ.ರಸ್ತೆಯಲ್ಲಿನ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿದೆ. ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದ ₹43.33 ಕೋಟಿಯನ್ನು ಖಜಾನೆಯಿಂದ ಅಕ್ರಮವಾಗಿ ವರ್ಗಾಯಿಸಿಕೊಳ್ಳಲಾಗಿದೆ' ಎಂದು ಆರೋಪಿಸಿದೆ.

'ಅಕ್ರಮವಾಗಿ ವರ್ಗಾವಣೆ ಮಾಡಲಾದ ₹89.62 ಕೋಟಿಯಲ್ಲಿ, ₹20.19 ಕೋಟಿಯನ್ನು ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣೆಗೆ ಬಳಸಿಕೊಳ್ಳಲಾಗಿದೆ. ಇದಕ್ಕೆ ನಾಗೇಂದ್ರ ಅವರ ಆಪ್ತ ವಿಜಯ್‌ಕುಮಾರ್ ಗೌಡ ಅವರ ಮೊಬೈಲ್‌ನಲ್ಲಿ ಸಾಕ್ಷ್ಯಗಳು ಲಭ್ಯವಾಗಿವೆ' ಎಂದು ವಿವರಿಸಿದೆ.

25 ಸಂಚುಕೋರರು: 'ಬಿ.ನಾಗೇಂದ್ರ ಜತೆ ಇನ್ನೂ 24 ಮಂದಿ ಸಂಚು ರೂಪಿಸಿ, ಹಗರಣ ಎಸಗಿದ್ದಾರೆ' ಎಂದು ಇ.ಡಿ ದೂರಿನಲ್ಲಿ ಹೇಳಿದೆ. ಸತ್ಯನಾರಾಯಣ ವರ್ಮಾ, ಏಕತಾರಿ ಸತ್ಯನಾರಾಯಣ, ಜೆ.ಜಿ.ಪದ್ಮನಾಭ, ನಾಗೇಶ್ವರ ರಾವ್, ನೆಕ್ಕಂಟಿ ನಾಗರಾಜ್, ವಿಜಯ್ ಕುಮಾರ್ ಗೌಡ ಜತೆಗೆ ಇನ್ನೂ 18 ಆರೋಪಿಗಳ ಹೆಸರನ್ನು ದೂರಿನಲ್ಲಿ ಉಲ್ಲೇಖಿಸಿದೆ.

ಈ ವರ್ಷದಿಂದ ಕೃಪಾಂಕ ಇಲ್ಲ

ಪ್ರಜಾವಾಣಿ ವಾರ್ತೆ

ಎಸ್‌ಎಸ್‌ಎಲ್‌ಸಿ

ಬೆಂಗಳೂರು: 'ಈ ಶೈಕ್ಷಣಿಕ ವರ್ಷದಿಂದ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕೃಪಾಂಕ ನೀಡುವ ವ್ಯವಸ್ಥೆ ಇರುವುದಿಲ್ಲ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಕೋವಿಡ್ ಅವಧಿಯಲ್ಲಿನ ಕಲಿಕಾ ನಷ್ಟ ಸರಿದೂಗಿಸಲು ಕೃಪಾಂಕ ನೀಡುವ ಪದ್ಧತಿ ಆರಂಭಿಸಲಾಗಿತ್ತು. 2023ರಲ್ಲಿ ನಡೆದಿದ್ದ ಪರೀಕ್ಷೆಯಲ್ಲಿ ಮೊದಲ ಬಾರಿ ವೆಬ್‌ಕಾಸ್ಟಿಂಗ್ ಪರಿಚಯಿಸಿದ ಕಾರಣ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದರು. ಫಲಿತಾಂಶದಲ್ಲೂ ಏರುಪೇರಾಗಿತ್ತು. ಹಾಗಾಗಿ, ಕೃಪಾಂಕ ಹೆಚ್ಚಿಸುವ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದೆವು ಎಂದು ವಿವರಿಸಿದರು.

9ನೇ ಪುಟ ನೋಡಿ

ಸಾರವರ್ಧಿತ ಅಕ್ಕಿ: 2028ರ ವರೆಗೆ ವಿತರಣೆಗೆ ಅಸ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ (ಪಿಎಂಜಿಕೆಎವೈ) ಮತ್ತು ಇತರೆ ಕಲ್ಯಾಣ ಯೋಜನೆಗಳಡಿ ಉಚಿತವಾಗಿ ಸಾರವರ್ಧಿತ ಅಕ್ಕಿ ವಿತರಣೆಯನ್ನು 2028ರ ಡಿಸೆಂಬರ್‌ವರೆಗೆ ಮುಂದುವರಿಸಲು ಕೇಂದ್ರ ಸಚಿವ ಸಂಪುಟ ಸಭೆಯು ಬುಧವಾರ ಅನುಮೋದನೆ ನೀಡಿದೆ.

10ನೇ ಪುಟ ನೋಡಿ

'ಲಾಡ್ಲಿ ಬೆಹನಾ'ಗೆ ಟೀಕೆ: ರಾವುತ್ ವಿರುದ್ಧ ಎಫ್‌ಐಆರ್

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ರಾಜ್ಯ ಸರ್ಕಾರದ ಪ್ರಮುಖ 'ಲಾಡ್ಲಿ ಬೆಹನಾ' ಯೋಜನೆ ಕುರಿತು ದಿಕ್ಕುತಪ್ಪಿಸುವ ಹೇಳಿಕೆಗಳನ್ನು ನೀಡಿದ ಆರೋಪದ ಮೇಲೆ ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವತ್ ವಿರುದ್ಧ ಪೊಲೀಸರು ಬುಧವಾರ ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಜೆಪಿಯ ಮಹಿಳಾ ಮೋರ್ಚಾದ ಜಿಲ್ಲಾ ಘಟಕದ ಅಧ್ಯಕ್ಷೆ ವಂದನಾ ಜಚಕ್ ಮತ್ತು ಉಪಾಧ್ಯಕ್ಷೆ ಸುಷ್ಮಾ ಚೌಹಾಣ್ ಅವರು ದೂರು ನೀಡಿದ್ದರು.

ಈ ಯೋಜನೆಯನ್ನು ಉಲ್ಲೇಖಿಸಿ, ಮಧ್ಯಪ್ರದೇಶ ಸರ್ಕಾರದ ಲಾಡ್ಲಿ ಬೆಹನಾ ಯೋಜನೆಯು ಕೇವಲ ರಾಜಕೀಯ ಆಟವಾಗಿದ್ದರಿಂದ ಅದನ್ನು ನಿಲ್ಲಿಸಲಾಗಿದೆ ಎಂದು ರಾವುತ್ ಹೇಳಿದ್ದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ವಸತಿ ಇಲಾಖೆ

ಕರ್ನಾಟಕ ಗೃಹ ಮಂಡಳಿ
ಸಮುದಾಯ ನಿರ್ಮಾಣದತ್ತ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ಗೃಹ ಮಂಡಳಿಯು

ಅತ್ಯಾಧುನಿಕ ಫ್ಲ್ಯಾಟ್‌ಗಳನ್ನು ಪ್ರಸ್ತುತಪಡಿಸುತ್ತಿದೆ

ಸೂರ್ಯ ಶೈನ್

ಹೈಟೆಕ್/ಲಕ್ಷುರಿ ಫ್ಲ್ಯಾಟ್‌ಗಳು

ಸೂರ್ಯನಗರ 1ನೇ ಹಂತ, ಚಂದಾಪುರ-ಆನೇಕಲ್ ಮುಖ್ಯರಸ್ತೆ, ಬೆಂಗಳೂರು.

ಬೇಡಿಕೆ ಸಮೀಕ್ಷೆ

ಅರ್ಜಿ ಆಹ್ವಾನಿಸಲಾಗಿದೆ.

* ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯವಿರುತ್ತದೆ

ಮಾನ್ಯ ವಸತಿ ಸಚಿವರಾದ ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್‌ರವರು ಹಾಗೂ ಕರ್ನಾಟಕ ಗೃಹ ಮಂಡಳಿಯ ಮಾನ್ಯ ಅಧ್ಯಕ್ಷರಾದ ಶ್ರೀ ಕೆ.ಎಂ. ಶಿವಲಿಂಗೇಗೌಡರವರು ವಸತಿ ಯೋಜನೆಗಳ ಕುರಿತು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ.

- ಸೂರ್ಯ ಮಾಲ್ / ಮಲ್ಟಿಪ್ಲೆಕ್ಸ್ ಎದುರು
- ಎಲೆಕ್ಟ್ರಾನಿಕ್ ಸಿಟಿ ಸಮೀಪ
- 'ನಮ್ಮ ಮೆಟ್ರೋ' ಸಂಪರ್ಕ
- ನಾರಾಯಣ ಹೃದಯಾಲಯದ ಹತ್ತಿರ
- Hidden Charges ಇರುವುದಿಲ್ಲ

ಯೋಜನೆಯ ವಿವರಗಳು

ವರ್ಗ	ಉದ್ದೇಶಿತ ಫ್ಲ್ಯಾಟ್‌ಗಳು (ಸುಮಾರು)	ಫ್ಲ್ಯಾಟ್ ವಿಸ್ತೀರ್ಣ (ಅಂದಾಜು ಸೂಪರ್ ಬಿಲ್ಟಪ್ ಏರಿಯಾ)	ನೋಂದಣಿ ಶುಲ್ಕ	ಆರಂಭಿಕ ಠೇವಣಿ	ಫ್ಲ್ಯಾಟ್‌ನ ತಾತ್ಕಾಲಿಕ ಬೆಲೆ (ರೂ.ಗಳಲ್ಲಿ)
3 ಬಿ.ಹೆಚ್.ಕೆ	50	204 ಚದರ ಮೀಟರ್ (2200 ಚ.ಅಡಿ)	ರೂ. 1,500/-	ರೂ. 5,00,000/-	ಚದರ ಮೀಟರ್‌ಗೆ ರೂ. 76,424/- (ರೂ. 7,100/ಚ.ಅಡಿಗೆ)

ಅತ್ಯಾಧುನಿಕ ಸೌಲಭ್ಯಗಳು

- ಕ್ಲಬ್‌ಹೌಸ್, ಲೈಬ್ರರಿ, ಜಿಮ್, ಪಾರ್ಟಿಹಾಲ್
- ಈಜುಕೊಳ
- ಒಳಾಂಗಣ ಕ್ರೀಡೆ ವ್ಯವಸ್ಥೆ
- ಕಾರ್ ಪಾರ್ಕಿಂಗ್
- ಹೊರಾಂಗಣ ಸೋಲಾರ್ ವ್ಯವಸ್ಥೆ
- EV ಚಾರ್ಜಿಂಗ್ ವ್ಯವಸ್ಥೆ
- ಮಕ್ಕಳ ಆಟದ ವ್ಯವಸ್ಥೆ / ಉದ್ಯಾನವನ
- BWSSB ಕಾವೇರಿ ಕುಡಿಯುವ ನೀರಿನ ಸೌಲಭ್ಯ
- ಮಳೆ ನೀರು ಕೊಯ್ಲು ಅಳವಡಿಕೆ
- 24/7 ಭದ್ರತಾ ವ್ಯವಸ್ಥೆ

ಅರ್ಜಿ ಸಲ್ಲಿಸುವ ವಿಧಾನ: ಅರ್ಜಿ ಮತ್ತು ಆರಂಭಿಕ ಠೇವಣಿ ವಿವರಗಳಿಗಾಗಿ ಹಾಗೂ ಹಂಚಿಕೆ ನಿಯಮ ಮತ್ತು ಷರತ್ತುಗಳಿಗೆ ಕರ್ನಾಟಕ ಗೃಹ ಮಂಡಳಿಯ ವೆಬ್‌ಸೈಟ್ ಸಂಪರ್ಕಿಸುವುದು.
https://khb.karnataka.gov.in

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: **ಸೂರ್ಯನಗರ 1 & 2 ನೇ ಹಂತದ ಕಛೇರಿ**
8722925429, 9480182950, 9845835917, 9448431867, 9449035258

ನಾಡಿನ ಸಮಸ್ತ ಜನತೆಗೆ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು

ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವೈದ್ಯರ ಪ್ರತಿಭಟನೆ
ಕೋಲ್ಕತ್ತದಲ್ಲಿ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ, ಹತ್ಯೆಯನ್ನು ವಿರೋಧಿಸಿ ಬುಧವಾರ ನಡೆದ ಪ್ರತಿಭಟನೆಯ ವೇಳೆ ವ್ಯಕ್ತಿಯೊಬ್ಬರು ಪೋಸ್ಟರ್ ಹಿಡಿದು ಘೋಷಣೆ ಕೂಗಿದರು

ಶಿವಮೂರ್ತಿ ಶರಣರ ಬಂಧನಕ್ಕೆ ಸಂತ್ರಸ್ತೆಯರ ತಾಯಿ ಮನವಿ 9
ಕಾಂಗ್ರೆಸ್ ದ್ವೇಷ ಹರಡುವ ಕಾರ್ಖಾನೆ: ಮೋದಿ 8
ಸರ್ಕಾರ ರಚನೆ: ಬಿಜೆಪಿಯಲ್ಲಿ ಗರಿಗೆದರಿದ ಚಟುವಟಿಕೆ 8
ಡಿಸೆಂಬರ್‌ಗೆ ರೆಪೊ ದರ ಇಳಿಕೆ? 10

ಹರಿಯಾಣ ಫಲಿತಾಂಶ ಒಪ್ಪಲಾಗದು; ಇವಿಎಂ ಕುರಿತು ವಿಸ್ತೃತ ತನಿಖೆ ಅಗತ್ಯ: ‘ಕೈ’ ನಾಯಕರು

ಕಾಂಗ್ರೆಸ್ ಮಾತಿಗೆ ಆಯೋಗ ಕೆಂಡ

ನವದೆಹಲಿ (ಪಿಟಿಐ): ಕಾಂಗ್ರೆಸ್ಸಿನ ನಾಯಕರು ‘ಹರಿಯಾಣ ವಿಧಾನಸಭಾ ಚುನಾವಣೆಯ ಫಲಿತಾಂಶವನ್ನು ಒಪ್ಪಲಾಗದು’ ಎಂದು ಹೇಳಿರುವುದಕ್ಕೆ ಆಕ್ಷೇಪ ದಾಖಲಿಸಿರುವ ಕೇಂದ್ರ ಚುನಾವಣಾ ಆಯೋಗವು, ಇಂತಹ ಮಾತುಗಳು ದೇಶದ ‘ಶ್ರೀಮಂತ ಪ್ರಜಾತಾಂತ್ರಿಕ ಪರಂಪರೆಯಲ್ಲಿ ಎಂದೂ ಕೇಳಿಬಂದಿರಲಿಲ್ಲ’ ಎಂದು ಹೇಳಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇರುವ ಮಿತಿಯನ್ನು ಮೀರಿ ಕಾಂಗ್ರೆಸ್ ನಾಯಕರು ಈ ಮಾತು ಆಡಿದ್ದಾರೆ ಎಂದು ಆಯೋಗವು ತೀಕ್ಷ್ಣವಾದ ಪ್ರತಿಕ್ರಿಯೆ ನೀಡಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬುಧವಾರ ಪತ್ರ ಬರೆದಿರುವ ಆಯೋಗವು, ಪಕ್ಷದ ನಾಯಕರಾದ ಜೈರಾಮ್ ರಮೇಶ್ ಮತ್ತು ಪವನ್ ಖೇರಾ ಅವರು ಆಡಿರುವ ಈ ಮಾತುಗಳು, ಶಾಸನಬದ್ಧವಾದ ಚುನಾವಣಾ ಚೌಕಟ್ಟಿನ ಮೂಲಕ ‘ಜನರು ನೀಡಿರುವ ತೀರ್ಮಾನವನ್ನು ಅಪ್ರಜಾಸತ್ತಾತ್ಮಕವಾಗಿ ತಿರಸ್ಕರಿಸುವುದರತ್ತ’ ಇದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಹರಿಯಾಣ ಚುನಾವಣಾ ಫಲಿತಾಂಶವು ಅನಿರೀಕ್ಷಿತ ಎಂದು ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಹೇಳಿರುವುದನ್ನು, ಪಕ್ಷವು ಫಲಿತಾಂಶವನ್ನು ವಿಶ್ಲೇಷಿಸಲಿದೆ ಎಂದಿರುವುದನ್ನು ಮತ್ತು ದೂರುಗಳನ್ನು ಆಯೋಗಕ್ಕೆ ಸಲ್ಲಿಸಲಾಗುತ್ತದೆ ಎಂದು ಹೇಳಿರುವುದನ್ನು ಗಮನಿಸಲಾಗಿದೆ ಎಂದು ಆಯೋಗವು ಪತ್ರದಲ್ಲಿ ತಿಳಿಸಿದೆ.

ಇವಿಎಂ ಕುರಿತು ಚುನಾವಣಾ ಆಯೋಗಕ್ಕೆ ಬುಧವಾರ ದೂರು ನೀಡಿದ ಕಾಂಗ್ರೆಸ್ ನಿಯೋಗದಲ್ಲಿ ಪಕ್ಷದ ನಾಯಕರಾದ ಅಶೋಕ್ ಗೆಹಲೋತ್, ಅಜಯ್ ಮಾಕನ್, ಭೂಪಿಂದರ್ ಸಿಂಗ್ ಹೂಡಾ, ಜೈರಾಮ್ ರಮೇಶ್, ಕೆ.ಸಿ. ವೇಣುಗೋಪಾಲ್ ಮತ್ತು ಉದಯ್ ಭಾನ್ ಅವರು ಇದ್ದರು —ಪಿಟಿಐ ಚಿತ್ರ

ನಿಯೋಗದಿಂದ ದೂರು: ಹರಿಯಾಣದ ಚುನಾವಣೆಯ ಮತ ಎಣಿಕೆ ಸಂದರ್ಭದಲ್ಲಿ ಕೆಲವು ಇವಿಎಂಗಳಲ್ಲಿ ಕಂಡುಬಂದ ವ್ಯತ್ಯಾಸಗಳ ಬಗ್ಗೆ ವಿಸ್ತೃತವಾದ ತನಿಖೆ ಆಗಬೇಕು ಎಂದು ಕಾಂಗ್ರೆಸ್ ನಾಯಕರ ನಿಯೋಗವು ಚುನಾವಣಾ ಆಯೋಗವನ್ನು ಒತ್ತಾಯಿಸಿದೆ. ತನಿಖೆ ಮುಗಿಯುವವರೆಗೆ ಅಂತಹ ಇವಿಎಂಗಳನ್ನು ಸುರಕ್ಷಿತವಾಗಿ ಇರಿಸಬೇಕು ಎಂದು ಅದು ಕೋರಿದೆ.

ಹರಿಯಾಣದ ಬೇರೆ ಬೇರೆ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದ ನಿರ್ದಿಷ್ಟ ದೂರುಗಳನ್ನು ನಿಯೋಗವು ಆಯೋಗದ ಅಧಿಕಾರಿಗಳಿಗೆ ಸಲ್ಲಿಸಿತು.

ಮತ ಎಣಿಕೆಯ ಸಂದರ್ಭದಲ್ಲಿ ಕೆಲವು ಕಡೆಗಳಲ್ಲಿ ಇವಿಎಂಗಳಲ್ಲಿ ಶೇಕಡ 99ರಷ್ಟು ಬ್ಯಾಟರಿ ಇತ್ತು. ಆದರೆ ಇನ್ನುಳಿದ ಇವಿಎಂಗಳಲ್ಲಿ ಬ್ಯಾಟರಿ ಪ್ರಮಾಣವು ಶೇ 60ರಿಂದ ಶೇ 70ರಷ್ಟು ಇತ್ತು ಎಂದು ಕಾಂಗ್ರೆಸ್ ನಾಯಕರು ದೂರಿದ್ದಾರೆ. ಕಾಂಗ್ರೆಸ್ ನಾಯಕರು ಲಿಖಿತ ರೂಪದಲ್ಲಿ ಏಳು ದೂರುಗಳನ್ನು ನೀಡಿದ್ದಾರೆ.

‘ಹರಿಯಾಣದ ಫಲಿತಾಂಶ ಆಶ್ಚರ್ಯ ಮೂಡಿಸುವಂತಿದೆ. ಹೀಗಾಗಿ ಮತ ಎಣಿಕೆ ವಿಚಾರದಲ್ಲಿ ಅನುಮಾನಗಳಿವೆ. ಹರಿಯಾಣದಲ್ಲಿ ಕಾಂಗ್ರೆಸ್ ಸರ್ಕಾರ ರಚಿಸುತ್ತದೆ ಎಂದು ಎಲ್ಲರೂ ನಂಬಿದ್ದರು. ಅಂಚೆ ಮತಗಳ ಎಣಿಕೆ ನಡೆದಾಗ ಕಾಂಗ್ರೆಸ್ ಮುಂದಿತ್ತು. ಆದರೆ, ಇವಿಎಂಗಳಲ್ಲಿ ದಾಖಲಾದ ಮತಗಳ ಎಣಿಕೆ ಶುರುವಾದಾಗ, ಫಲಿತಾಂಶ ವಿರುದ್ಧ ದಿಕ್ಕಿಗೆ ಸಾಗಿತು’ ಎಂದು ಹೂಡಾ ಅವರು ಸುದ್ದಿಗಾರರ ಬಳಿ ಹೇಳಿದರು.

ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವು ಇನ್ನೂ ಕೆಲವು ದೂರುಗಳನ್ನು ಆಯೋಗಕ್ಕೆ ಸಲ್ಲಿಸಲಿದೆ ಎಂದು ಅವರು ತಿಳಿಸಿದರು. ‘ದೂರುಗಳ ಬಗ್ಗೆ ಪರಿಶೀಲನೆ ನಡೆಸುವುದಾಗಿ ಆಯೋಗವು ಭರವಸೆ ನೀಡಿದೆ’ ಎಂದು ಅವರು ಹೇಳಿದರು.

ದೂರುಗಳ ವಿಚಾರವಾಗಿ ಸಂಬಂಧಪಟ್ಟ ಚುನಾವಣಾ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿ, ಲಿಖಿತ ರೂಪದಲ್ಲಿ ಪ್ರತಿಕ್ರಿಯೆ ನೀಡುವುದಾಗಿ ಆಯೋಗ ತಿಳಿಸಿದೆ ಎಂದು ಪವನ್ ಖೇರಾ ಅವರು ಮಾಹಿತಿ ನೀಡಿದರು.

20 ಕ್ಷೇತ್ರಗಳಿಂದ ದೂರು: ಕಾಂಗ್ರೆಸ್

- ಇವಿಎಂಗಳಿಗೆ ಸಂಬಂಧಿಸಿದಂತೆ 20 ಕ್ಷೇತ್ರಗಳಿಂದ ದೂರುಗಳು ಬಂದಿವೆ ಎಂದು ಕಾಂಗ್ರೆಸ್ ಪಕ್ಷ ಹೇಳಿದೆ.
- ಆದರೆ ಕಾಂಗ್ರೆಸ್ ನಾಯಕರು ಕರ್ನಾಲ್, ಪಾಣಿಪತ್ ನಗರ, ಡಬವಾಲಿ ಮತ್ತು ನಾರನೌಲ್ ಸೇರಿದಂತೆ ಏಳು ಕ್ಷೇತ್ರಗಳಿಗೆ ಸಂಬಂಧಿಸಿದ ದೂರುಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದಾರೆ.
- ಇನ್ನುಳಿದ 13 ಕ್ಷೇತ್ರಗಳಿಗೆ ಸಂಬಂಧಿಸಿದ ದೂರುಗಳನ್ನು ಮುಂದಿನ 48 ಗಂಟೆಗಳಲ್ಲಿ ಸಲ್ಲಿಸಲಾಗುತ್ತದೆ ಎಂದು ಕಾಂಗ್ರೆಸ್ ನಾಯಕ ಪವನ್ ಖೇರಾ ಹೇಳಿದ್ದಾರೆ.

‘ಕೈ’ಕಮಾಂಡ್ ಎಚ್ಚರಿಕೆ

ಸಿ.ಎಂ ಬದಲಾವಣೆ ಹೇಳಿಕೆಗೆ ಕಡಿವಾಣ ಹಾಕಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕರು, ಸಚಿವರು ನಡೆಸುತ್ತಿರುವ ಪ್ರತ್ಯೇಕ ಸಭೆಗಳು, ಮುಖ್ಯಮಂತ್ರಿ ಬದಲಾವಣೆ ಹಾಗೂ ದಲಿತ ಮುಖ್ಯಮಂತ್ರಿ ಬೇಡಿಕೆ ಕುರಿತ ಹೇಳಿಕೆಗಳಿಗೆ ಕಡಿವಾಣ ಹಾಕುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಕಠಿಣ ಸೂಚನೆ ನೀಡಿದೆ.

ಆ ಬೆನ್ನಲ್ಲೆ, ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ‘ಕಾವೇರಿ’ಗೆ ಬುಧವಾರ ಬೆಳಿಗ್ಗೆ ಭೇಟಿ ನೀಡಿದ ಶಿವಕುಮಾರ್ ಈ ಬಗ್ಗೆ ಒಂದು ತಾಸು ಸಮಾಲೋಚನೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ಮತ್ತು ಜಾರಿ ನಿರ್ದೇಶನಾಲಯ (ಇ.ಡಿ) ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿರುವ ನಡುವೆಯೇ ಕೆಲವು ಸಚಿವರು ಗೋಪ್ಯ ಸಭೆ ನಡೆಸಿರುವುದು, ಮುಖ್ಯಮಂತ್ರಿ ಬದಲಾವಣೆ ಕುರಿತ ಹೇಳಿಕೆಗಳನ್ನು ಗಮನಿಸಿದ ವರಿಷ್ಠರು ಈ ಸೂಚನೆ ನೀಡಿದ್ದಾರೆ.

ಅದರಲ್ಲೂ ‘ದಲಿತ ಮುಖ್ಯಮಂತ್ರಿ’ ವಿಷಯ ಮುನ್ನೆಲೆಯಲ್ಲಿಟ್ಟು ಸತೀಶ ಜಾರಕಿಹೊಳಿ, ಜಿ. ಪರಮೇಶ್ವರ, ಎಚ್‌.ಸಿ. ಮಹದೇವಪ್ಪ ಗೋಪ್ಯ ಸಭೆ ಸೇರಿ ಚರ್ಚೆ ನಡೆಸುತ್ತಿರುವ ಬೆಳವಣಿಗೆಯನ್ನು ವರಿಷ್ಠರು ಗಂಭೀರವಾಗಿ ಪರಿಗಣಿಸಿದ್ದರು ಎಂದು ಮೂಲಗಳು ಹೇಳಿವೆ.

‘ಸಚಿವರು, ಶಾಸಕರು ಬಹಿರಂಗವಾಗಿ ಹೇಳಿಕೆ ನೀಡುತ್ತಿರುವುದು ಪಕ್ಷಕ್ಕೆ ಮುಜುಗರ ತಂದಿದೆ. ಈ ರೀತಿಯ ಬೆಳವಣಿಗೆಗಳು ಬಿಜೆಪಿ ಮತ್ತು ಜೆಡಿಎಸ್ ಅವರಿಗೆ ಅಸ್ತ್ರವಾಗಿ ಪರಿಣಮಿಸಿದ್ದು, ಆ ಪಕ್ಷಗಳಿಗೆ ರಾಜಕೀಯ ಲಾಭ ತಂದು ಕೊಡುತ್ತಿವೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಪಕ್ಷದ ಶಿಸ್ತು ಪಾಲಿಸದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು, ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗೆ ಕರೆ ಮಾಡಿ ಗೊಂದಲಗಳಿಗೆ ತೆರೆ ಎಳೆಯುವಂತೆ ಸಲಹೆ ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

ಹರಿಯಾಣ ಚುನಾವಣೆಯಲ್ಲಿ ಒಳ ಜಗಳದಿಂದ ಸೋಲಾಗಿದೆ ಎಂಬ ವಿಶ್ಲೇಷಣೆ ಬೆನ್ನಲ್ಲೇ, ಎಚ್ಚೆತ್ತ ವರಿಷ್ಠರು ರಾಜ್ಯದಲ್ಲಿ ಪಕ್ಷದ ಬೆಳವಣಿಗೆಗಳನ್ನು ಗಂಭೀರವಾಗಿ ಪರಿಗಣಿಸಿ ಈ ಸೂಚನೆ ನೀಡಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

> **ಒಟ್ಟಿಗೆ ಊಟ ಮಾಡಿದರೆ ತಪ್ಪೇನು? ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಪಕ್ಷದಲ್ಲಿ ಚರ್ಚೆ ನಡೆದಿಲ್ಲ. ಊಹಾಪೋಹಗಳಿಗೆ ಮಹತ್ವ ಕೊಡುವ ಅಗತ್ಯವಿಲ್ಲ**
> **ಎಚ್‌.ಸಿ. ಮಹದೇವಪ್ಪ**
> ಸಮಾಜ ಕಲ್ಯಾಣ ಸಚಿವ

> **ಮಹದೇವಪ್ಪ ಹಿರಿಯ ಸಚಿವರು. ಸತೀಶ ಜಾರಕಿಹೊಳಿ ಪ್ರಮುಖ ಖಾತೆ ಹೊಂದಿರುವವರು. ಭೇಟಿ ಮಾಡುವುದರಲ್ಲಿ ತಪ್ಪೇನಿಲ್ಲ. ರಾಜಕೀಯ ಹೊರತಾಗಿ ಸೇರಿದ್ದಾರೆ**
> **ಡಿ.ಕೆ. ಸುರೇಶ್**
> ಮಾಜಿ ಸಂಸದ

ಮುಖ್ಯಾಂಶಗಳು
- ಸಿ.ಎಂ–ಡಿಸಿಎಂಗೆ ವರಿಷ್ಠರು ಕರೆ ಮಾಡಿ ಸೂಚನೆ
- ಗೊಂದಲಗಳಿಗೆ ಬ್ರೇಕ್ ಹಾಕುವಂತೆ ಎಚ್ಚರಿಕೆ
- ಇಬ್ಬರು ನಾಯಕರಿಂದ ಗೋಪ್ಯ ಸಮಾಲೋಚನೆ

ಆನೇಕಲ್: ಬಂಧಿತರಲ್ಲಿ ಆರು ಮಹಿಳೆಯರು • 18ಕ್ಕೆ ಏರಿದ ಬಂಧಿತರ ಸಂಖ್ಯೆ

ಮತ್ತೆ ಪಾಕ್‌ನ ಹತ್ತು ಪ್ರಜೆಗಳ ಬಂಧನ

ಪ್ರಜಾವಾಣಿ ವಾರ್ತೆ

ಆನೇಕಲ್: ದೆಹಲಿ, ರಾಜಸ್ಥಾನ ಹಾಗೂ ದೇಶದ ಹಲವೆಡೆ ಹೆಸರು ಬದಲಿಸಿಕೊಂಡು ನೆಲಸಿದ್ದ ಪಾಕಿಸ್ತಾನದ ಆರು ಮಹಿಳೆಯರು ಸೇರಿ ಹತ್ತು ಜನರನ್ನು ಜಿಗಣಿ ಪೊಲೀಸರು ಮಂಗಳವಾರ ಬಂಧಿಸಿ, ನಗರಕ್ಕೆ ಕರೆ ತಂದಿದ್ದಾರೆ.

ಇದರೊಂದಿಗೆ ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 18ಕ್ಕೆ ಏರಿದಂತಾಗಿದೆ. ಜಿಗಣಿ ಮತ್ತು ಬೆಂಗಳೂರಿನ ಪೀಣ್ಯದಲ್ಲಿ ಅಕ್ರಮವಾಗಿ ನೆಲಸಿದ್ದ ಪಾಕಿಸ್ತಾನದ ಏಳು ಜನರನ್ನು ಪೊಲೀಸರು ಈಚೆಗೆ ಬಂಧಿಸಿದ್ದರು.

ಭಾರತದಲ್ಲಿ ಉಳಿಯಲು ಇವರಿಗೆ ನೆರವು ನೀಡಿದ್ದ ಕಿಂಗ್‌ಪಿನ್ ಪರ್ವೇಜ್ ಅಹಮದ್ ಎಂಬಾತನನ್ನು ಮೂರು ದಿನಗಳ ಹಿಂದೆ (ಭಾನುವಾರ) ಪೊಲೀಸರು ಬೆಂಗಳೂರು ರೈಲು ನಿಲ್ದಾಣದಲ್ಲಿ ಬಂಧಿಸಿದ್ದರು. ತನಿಖೆ ವೇಳೆ ಈತ ನೀಡಿದ ಮಾಹಿತಿ ಆಧರಿಸಿ ಆನೇಕಲ್ ಉಪವಿಭಾಗದ ಡಿವೈಎಸ್‌ಪಿ ಮೋಹನ್ ಕುಮಾರ್ ಮತ್ತು ಜಿಗಣಿ ಸರ್ಕಲ್ ಇನ್‌ಸ್ಪೆಕ್ಟರ್ ಮಂಜುನಾಥ್ ನೇತೃತ್ವದ ಜಿಗಣಿ ಪೊಲೀಸರ ತಂಡ ಈಚೆಗೆ ದೆಹಲಿ, ರಾಜಸ್ಥಾನ ಮತ್ತು ಉತ್ತರ ಪ್ರದೇಶಕ್ಕೆ ತೆರಳಿತ್ತು.

8ನೇ ಪುಟ ನೋಡಿ

ಪರ್ವೇಜ್ ಸಂಪರ್ಕದಲ್ಲಿದ್ದಾರೆ

ಪಾಕಿಸ್ತಾನ ಪ್ರಜೆಗಳ ಬೇಟೆ ಮುಂದುವರಿಸಿರುವ ಜಿಗಣಿ ಪೊಲೀಸರು ಶೀಘ್ರದಲ್ಲಿಯೇ ಇನ್ನೂ ಹತ್ತು ಪಾಕಿಸ್ತಾನಿಯರನ್ನು ಬಂಧಿಸುವ ಸಾಧ್ಯತೆ ಇದೆ. ಪರ್ವೇಜ್ ಅಹಮದ್ ವಿಚಾರಣೆ ಮುಂದುವರೆದಿದ್ದು ಮತ್ತಷ್ಟು ಮಾಹಿತಿ ಕಲೆ ಹಾಕಲಾಗುತ್ತಿದೆ. ಬಂಧಿತರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

ಮುಡಾ ಪ್ರಕರಣ: ಇಬ್ಬರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಲೋಕಾಯುಕ್ತ ಪೊಲೀಸರು ಮುಡಾ ನಿವೇಶನ ಹಂಚಿಕೆ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿದ್ದು, ಗುರುವಾರ ವಿಚಾರಣೆಗೆ ಹಾಜರಾಗುವಂತೆ ಮೂರನೇ ಮತ್ತು ನಾಲ್ಕನೇ ಆರೋಪಿಗಳಾದ, ಮುಖ್ಯಮಂತ್ರಿ ಬಾಮೈದ ಮಲ್ಲಿಕಾರ್ಜುನಸ್ವಾಮಿ ಹಾಗೂ ಜಮೀನಿನ ಹಿಂದಿನ ಮಾಲೀಕ ದೇವರಾಜು ಅವರಿಗೆ ನೋಟಿಸ್ ನೀಡಿದ್ದಾರೆ. ಈ ಇಬ್ಬರ ನಡುವೆ ಜಮೀನು ವ್ಯವಹಾರ ನಡೆದಿದ್ದು, ವಿಚಾರಣೆಯು ಮಹತ್ವ ಪಡೆದುಕೊಂಡಿದೆ.

‘ಕಚೇರಿ ಸಮಯದಲ್ಲಿ ವಿಚಾರಣೆಗೆ ಬರುವಂತೆ ಇಬ್ಬರಿಗೂ ನೋಟಿಸ್ ನೀಡಿದ್ದೇವೆ’ ಎಂದು ಲೋಕಾಯುಕ್ತ ಎಸ್‌ಪಿ ಟಿ.ಜೆ. ಉದೇಶ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಪ್ರಕರಣದ ತನಿಖೆಗೆಂದು ನಾಲ್ಕು ತಂಡಗಳನ್ನು ರಚಿಸಿದ್ದು, ಕೆಸರೆ ಗ್ರಾಮದ ವಿವಾದಿತ ಜಮೀನು ಹಾಗೂ ವಿಜಯನಗರದಲ್ಲಿ ಮುಡಾ ನೀಡಿದ್ದ 14 ಬದಲಿ ನಿವೇಶನಗಳ ಸ್ಥಳ ಮಹಜರು ಮುಗಿದಿದೆ.

ತನಿಖಾಧಿಕಾರಿಗಳ ತಂಡವು ಮುಡಾದಲ್ಲಿ ದಾಖಲೆಗಳ ಪರಿಶೀಲನೆ ಮಾಡಿ ದೃಢೀಕೃತ ಪ್ರತಿಗಳನ್ನು ಪಡೆದುಕೊಳ್ಳುತ್ತಿದ್ದು, ತಹಶೀಲ್ದಾರ್ ಕಚೇರಿಯಲ್ಲಿ ಮತ್ತೊಮ್ಮೆ ಪರಿಶೀಲನೆಗೆ ಒಳಪಡಿಸಲಾಗಿದೆ.

ಮೊದಲ ಮತ್ತು ಎರಡನೇ ಆರೋಪಿಗಳಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಬಿ.ಎಂ. ಪಾರ್ವತಿ ಅವರನ್ನು ಶೀಘ್ರ ವಿಚಾರಣೆಗೊಳಪಡಿಸುವ ಸಾಧ್ಯತೆ ಇದೆ.

with you hamesha 1800-209-6006 | xmart SMART BUY. SMART EXCHANGE. | UDAY ಹತ್ತು ಲಕ್ಷ ರೂಪಾಯಿಗಳ ಅಪಘಾತ ವಿಮೆ

**ಆರಂಭ ಬೆಲೆಯು Veero 1.6 XL CBC V2 ವೇರಿಯೆಂಟ್‌ಗೆ ಮಾತ್ರ ಅನ್ವಯಿಸುತ್ತದೆ. *ARAI ಸರ್ಟಿಫಿಕೇಟ್‌ಗೆ ಅನುಸಾರವಾಗಿ. ಸ್ಟ್ಯಾಂಡರ್ಡ್ ಡ್ರೈವಿಂಗ್ ಸ್ಥಿತಿಗಳ ಅಂತರ್ಗತ. ತೋರಿಸಿರುವ ಆ್ಯಕ್ಸೆಸರೀಸ್, ಸ್ಟ್ಯಾಂಡರ್ಡ್ ಎಕ್ವಿಪ್‌ಮೆಂಟ್‌ನ ಭಾಗಗಳಲ್ಲ. *ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.

SIDDHANTH MOTORS: GARVE BHAVI PAYLA, SINGSANDRA, ANEKAL, ATTIBELE, HOSKOTE, BANGARPET, YESHWANTHPUR, DABBASPET - 8448481362, **ANANT CARS AUTO PVT LTD**: MYSORE ROAD, K R PURAM, RAMNAGAR, MALUR, H CROSS, HUNASAMARANAHALLI - 9900077177, **PPS MOTORS**: KENGERI, KANAKAPURA TOWN, DEVANAHALLI, CHINTAMANI, HBR LAYOUT, KANAKAPURA ROAD, NELMANGALA, TAVAREKERE - 630955517, **INDIA GARAGE BANGALORE**: LALBAGH ROAD, YESHWANTPUR, KOLAR, CHIKKABALLAPURA, PEENYA, BIDADI, NELAMANGALA - 8073158096.

60 ಜಂಕ್ಷನ್‌ನಲ್ಲಿ ಎಟಿಸಿಎಸ್ ವ್ಯವಸ್ಥೆಯ ಸಿಗ್ನಲ್ ಯಶಸ್ವಿ ಕಾರ್ಯನಿರ್ವಹಣೆ

165 ಜಂಕ್ಷನ್‌ಗಳ ಸಿಗ್ನಲ್‌ಗೆ 'ಎ.ಐ'

ಪ್ರಜಾವಾಣಿ ವಾರ್ತೆ

ಬಸವನಗುಡಿ ನ್ಯಾಷನಲ್ ಕಾಲೇಜು ಸಿಗ್ನಲ್‌ನಲ್ಲಿ ಅಳವಡಿಸಿರುವ ಎ.ಐ ಆಧಾರಿತ ಸಿಗ್ನಲ್

ಬೆಂಗಳೂರು: 'ನಗರದ 60 ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ವಾಹನಗಳ ದಟ್ಟಣೆ ಆಧರಿಸಿ ಸ್ವಯಂಚಾಲಿತ ಸಿಗ್ನಲ್ ನಿರ್ವಹಣೆ ವ್ಯವಸ್ಥೆ (ಅಡಾಪ್ಟಿವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್ – ಎಟಿಸಿಎಸ್) ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದರು.

'ಸದ್ಯ 60 ಜಂಕ್ಷನ್‌ನಲ್ಲಿ ಎಟಿಸಿಎಸ್ ಅಳವಡಿಕೆ ಮಾಡಿಕೊಳ್ಳಲಾಗಿದೆ. ಬಸವನಗುಡಿ, ಜಯನಗರ, ಜೆ.ಪಿ.ನಗರ ಹಾಗೂ ಹಡ್ಸನ್ ವೃತ್ತದ ಸಿಗ್ನಲ್‌ಗಳಿಗೂ ಅಳವಡಿಸಲಾಗಿದೆ. ಸುಗಮ ಸಂಚಾರ ವ್ಯವಸ್ಥೆ, ಪ್ರಯಾಣಿಕರ ಸುರಕ್ಷತೆ ಹಾಗೂ ತಂತ್ರಜ್ಞಾನ ಪರಿಣಾಮದ ಕುರಿತು ಅಧ್ಯಯನ ನಡೆಸಿದ್ದು ಸುಧಾರಣೆ ಕಂಡುಬಂದಿದೆ' ಎಂದು ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, 'ಕೆ.ಆರ್.ರಸ್ತೆಯಂತಹ ಪ್ರಮುಖ ಕಾರಿಡಾರ್‌ನಲ್ಲೂ ಪ್ರಯಾಣದ ಸಮಯದಲ್ಲಿ ಗಮನಾರ್ಹ ಬದಲಾವಣೆ ಆಗಿದೆ' ಎಂದು ಹೇಳಿದರು.

'2025ರ ಜನವರಿಗೆ 165 ಜಂಕ್ಷನ್‌ಗಳಲ್ಲಿ ಸಿಗ್ನಲ್‌ಗಳಿಗೆ ಈ ವ್ಯವಸ್ಥೆ ಅಳವಡಿಸಲಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ನಂತರ, ಉಳಿದ 235 ಜಂಕ್ಷನ್‌ನಲ್ಲಿ ಅಳವಡಿಸುವ ಗುರಿಯಿದೆ. ಕಾಮಗಾರಿ ಪೂರ್ಣವಾದ ಮೇಲೆ ನಗರದಾದ್ಯಂತ ಪೂರ್ಣಪ್ರಮಾಣದಲ್ಲಿ ಎಐ ಆಧಾರಿತ ಸಿಗ್ನಲ್ ವ್ಯವಸ್ಥೆ ಜಾರಿ ಬರಲಿದೆ. ಇದರಿಂದ ಪ್ರಯಾಣದ ಅವಧಿ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಲಿದೆ' ಎಂದು ವಿವರಿಸಿದರು.

'ಜಪಾನ್ ತಂತ್ರಜ್ಞಾನ ಆಧಾರಿತ ಮೊಡೆರಾಟೊ ವ್ಯವಸ್ಥೆಯನ್ನು 28 ಸಿಗ್ನಲ್‌ಗಳಲ್ಲಿ ಈ ಹಿಂದೆ ಅಳವಡಿಸಲಾಗಿತ್ತು. ಅದಕ್ಕಿಂತ ಈ ಹೊಸ ವ್ಯವಸ್ಥೆ ವಿಭಿನ್ನವಾಗಿದೆ. ವಾಹನಗಳ ದಟ್ಟಣೆ, ನೈಜ ಸಮಯದ ಹೊಂದಾಣಿಕೆಯಿಂದ ಹೊಸ ವ್ಯವಸ್ಥೆಯು ಕಾರ್ಯನಿರ್ವಹಣೆ ಮಾಡುತ್ತಿದೆ' ಎಂದು ಹೇಳಿದರು.

ಹೇಗೆ ಕಾರ್ಯ ನಿರ್ವಹಣೆ?: ಹೊಸ ವ್ಯವಸ್ಥೆಯಲ್ಲಿ ಎಐ ತಂತ್ರಜ್ಞಾನ ಬಳಕೆಯಾಗಿದೆ. ಆಯಾ ರಸ್ತೆಗಳಲ್ಲಿನ ವಾಹನ ದಟ್ಟಣೆಯನ್ನು ಗ್ರಹಿಸಿ ಎಟಿಸಿಎಸ್ ಹಸಿರು ನಿಶಾನೆ ತೋರುತ್ತದೆ. ಸಿಗ್ನಲ್ ಬಳಿಯ ರಸ್ತೆಗಳಲ್ಲಿ ಸಾಲುಗಟ್ಟಿ ನಿಲ್ಲುವ ವಾಹನಗಳ ದಟ್ಟಣೆ ಆಧರಿಸಿ ಹಸಿರು ದೀಪ ಬೆಳಗಿಸುವ ತಂತ್ರಜ್ಞಾನವೇ ಎಟಿಸಿಎಸ್. ಇದು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹಾಜರಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಿಶೇಷ ಆಯುಕ್ತರು (ಆಡಳಿತ)ರವರ ಕಛೇರಿ,
ನರಸಿಂಹರಾಜ ಚೌಕ, ಬೆಂಗಳೂರು – 560002

ಅಧಿಸೂಚನೆ ಸಂಖ್ಯೆ: ನಅಇ 165 ಬಿಬಿಎಲ್ 2022 (ಇ), ದಿನಾಂಕ: 23.11.2022 ಮತ್ತು 02.03.2023
ಅಧಿಸೂಚನೆ ಸಂಖ್ಯೆ: ನಅಇ 165 ಬಿಬಿಎಲ್ 2022 (ಭಾ–1), ದಿನಾಂಕ: 28.03.2023 ಮತ್ತು 04.03.2024

ನೇಮಕಾತಿ ಪ್ರಕಟಣೆ

ಪೌರಕಾರ್ಮಿಕರ ಕರಡು ಆಯ್ಕೆ ಪಟ್ಟಿ ಪ್ರಕಟಣೆಯ ಬಗ್ಗೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪೌರಕಾರ್ಮಿಕ ಹುದ್ದೆಗಳಿಗೆ ಆಯ್ಕೆಯಾಗಿರುವ 12692 ಪೌರಕಾರ್ಮಿಕರ ಕರಡು ಆಯ್ಕೆ ಪಟ್ಟಿಯನ್ನು ದಿನಾಂಕ: 09.10.2024ರಂದು ಪಾಲಿಕೆ ವೆಬ್‌ಸೈಟ್ https://bbmp.gov.in/home ನಲ್ಲಿ ಪ್ರಕಟಿಸಿದ್ದು, ಆಯಾ ವಲಯ ಜಂಟಿ ಆಯುಕ್ತರವರ ಕಛೇರಿ ಹಾಗೂ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲೂ ಸಹ ಪಟ್ಟಿಯನ್ನು ಪ್ರಕಟಿಸಲಾಗಿದೆ.

ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪರಿಶೀಲಿಸಿಕೊಂಡು, ದಿನಾಂಕ: 21.10.2024ರ ಸಂಜೆ 5:30ರ ಒಳಗಾಗಿ ಸಂಬಂಧಪಟ್ಟ ವಲಯ ಜಂಟಿ ಆಯುಕ್ತರ ಕಛೇರಿ ಹಾಗೂ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗಳಿಗೆ ಭೇಟಿ ನೀಡಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ತದನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಪೌರಕಾರ್ಮಿಕರ ಹುದ್ದೆಗೆ ಆಯ್ಕೆಯಾಗಿರುವವರು ಯಾವುದೇ ಆಸೆ/ಆಮಿಷಗಳಿಗೆ ಒಳಗಾಗಬಾರದು ಹಾಗೂ ಮಧ್ಯವರ್ತಿಗಳ ಮಾತುಗಳನ್ನು ಕೇಳಿ ವಂಚನೆಗಳಿಗೆ ಒಳಗಾಗಬಾರದು. ಸದರಿ ಕರಡು ಆಯ್ಕೆ ಪಟ್ಟಿಯ ವಿವರಣೆ ಅಥವಾ ಮಾಹಿತಿಗಾಗಿ ತಮ್ಮ ವ್ಯಾಪ್ತಿಗೆ ಒಳಪಡುವ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ನೇರವಾಗಿ ಭೇಟಿ ನೀಡಿ ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.

ಸಹಿ/–
ವಿಶೇಷ ಆಯುಕ್ತರು (ಆಡಳಿತ)
ದಿನಾಂಕ: 09.10.2024 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

'ಆಂಬುಲೆನ್ಸ್‌ಗೆ ದಾರಿ: ದಂಡ ಬಿದ್ದರೆ ಮನ್ನಾ'

ಬೆಂಗಳೂರು: 'ಆಂಬುಲೆನ್ಸ್‌ಗಳಿಗೆ ದಾರಿ ಬಿಟ್ಟಿದ್ದಕ್ಕೆ ಬೇರೆ ವಾಹನಗಳ ಚಾಲಕರಿಗೆ ದಂಡ ಬಿದ್ದರೆ ಅದನ್ನು ಮನ್ನಾ ಮಾಡಲಾಗುವುದು' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ಹೇಳಿದರು.

'ಆಂಬುಲೆನ್ಸ್‌ಗಳಿಗೆ ದಾರಿ ಬಿಟ್ಟರೆ ದಂಡ ಬೀಳಲಿದೆ ಎನ್ನುವ ಭಯ, ಆತಂಕ ಬೇಡ. ಒಂದು ವೇಳೆ ಆಂಬುಲೆನ್ಸ್‌ಗೆ ಮುಂದೆ ಸಾಗಲು ಅವಕಾಶ ನೀಡಿದಾಗ ಕ್ಯಾಮೆರಾಗಳಲ್ಲಿ ಸಂಚಾರ ನಿಯಮ ಉಲ್ಲಂಘನೆ ದೃಶ್ಯ ಸೆರೆಯಾಗಿ ದಂಡ ಬಿದ್ದರೆ ಮನ್ನಾ ಮಾಡುತ್ತೇವೆ. ಅಂತಹ ಸಂದರ್ಭದಲ್ಲಿ ದಂಡ ಬಿದ್ದರೆ ಪ್ರಶ್ನೆ ಮಾಡಬಹುದು' ಎಂದರು.

'ಖಾಸಗಿ ಆಂಬುಲೆನ್ಸ್‌ಗಳ ಸಭೆಯನ್ನು ಕರೆಯಲಾಗಿದೆ. ಅಲ್ಲಿ ಕೆಲವು ವಿಚಾರ ಚರ್ಚಿಸಲಾಗುವುದು' ಎಂದು ಹೇಳಿದರು.

ನಗರದಲ್ಲಿ ಇಂದು

ಶರನ್ನವರಾತ್ರಿ ಮಹೋತ್ಸವ: 'ಕನಕಧಾರಾ ಸ್ತೋತ್ರ' ಉಪನ್ಯಾಸ: ಎಚ್. ಆರ್. ಗಾಯತ್ರಿ, ಆಯೋಜನೆ ಮತ್ತು ಸ್ಥಳ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ತ್ಯಾಗರಾಜನಗರ, ಬೆಳಿಗ್ಗೆ 10ರಿಂದ
ಭಜನೆ: ವಿಜಯನಗರದ ಪವಿತ್ರ ಗಾನ ವೃಂದದ ಸದಸ್ಯರಿಂದ, ಆಯೋಜನೆ ಮತ್ತು ಸ್ಥಳ: ನಂಜನಗೂಡು ಸ್ವಾಮಿ ಮಠ, ಮಂತ್ರಿ ಮಾಲ್ ಮೆಟ್ರೊ ನಿಲ್ದಾಣ ಮುಂಭಾಗ, ಸಂಜೆ 5
ವಚನ ನವರಾತ್ರಿ: 'ಸಹೋದರತೆ ಸೆಲೆ ಮುಕ್ತಾಯಕ್ಕನವರ ಪರಿಚಯ': ಎಚ್.ಬಿ. ದಿವಾಕರ್, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5
ಮಾತಾ ಅನ್ನಪೂರ್ಣೇಶ್ವರಿ ದೇವಿಗೆ ಮಹಿಷಾಸುರ ಮರ್ದಿನಿ ಅಲಂಕಾರ: ಭಜನೆ: ಹರಿ ಭಜನಾ ಮಂಡಳಿ, ಹಾಡುಗಾರಿಕೆ: ಮೇದಿನಿ ವಿ. ಭಟ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಿ, ವಸಂತಪುರ, ಸಂಜೆ 5.30ರಿಂದ
ಶಾರದಾ ಮಹಾಭಿಷೇಕ, ಶಾರದಾ ಶರನ್ನವರಾತ್ರಿ ಮಹೋತ್ಸವ, ನೃತ್ಯ ನವರಾತ್ರಿ: ಭರತನಾಟ್ಯ ಪ್ರದರ್ಶನ: ಕುಸುಮಾ, ವಸುಂಧರ ಸಂಪತಕುಮಾರ್, ಸ್ಥಳ: ಶೃಂಗೇರಿ ಶಂಕರ ಮಠ, ಸಂಜೆ 5.30ರಿಂದ
ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಅಲಂಕಾರ: ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವಿ, ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣರಾಜಪುರ, ಸಂಜೆ 6ರಿಂದ
ದಸರಾ ಮಹೋತ್ಸವ: ಭರತನಾಟ್ಯ: ವಿದ್ಯಾರ್ಶಿ ಎಚ್.ಎಸ್., ಶ್ರದ್ಧಾ ಡಾನ್ಸ್ ಸೆಂಟರ್, ಆಯೋಜನೆ ಮತ್ತು ಸ್ಥಳ: ಲಾಸ್ಯ ವರ್ಧನ ಟ್ರಸ್ಟ್, ಮಲ್ಲೇಶ್ವರ, ಸಂಜೆ 6
ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ: ಅಲಂಕಾರ: ತ್ರಿವರ್ಣ, ಕರ್ನಾಟಕ ಶಾಸ್ತ್ರೀಯ ಸಂಗೀತ: ಅನಂತ ರಾಮಚಂದ್ರ ಮತ್ತು ತಂಡ, ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ಸಂಜೆ 6.30ರಿಂದ
ಆಯೋಜನೆ: ಸರ್ಕಲ್ ಮಾರಮ್ಮ ದೇವಸ್ಥಾನ: ಅಲಂಕಾರ: ಶ್ರೀಗಂಧ ಅಲಂಕಾರ, ಮಧ್ಯಾಹ್ನ 1.30ಕ್ಕೆ ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ಹರಿನಾಮ ಸಂಕೀರ್ತನೆ: ಎಸ್.ವಿ. ಚಂದನ ಮತ್ತು ತಂಡ, ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30
ಆಯೋಜನೆ: ವೆಂಕಟರಮಣ ಸ್ವಾಮಿ ದೇವಸ್ಥಾನ: ಅಲಂಕಾರ: ರಾಮಾವತಾರ, ದೇವರನಾಮ: ಲಾವಣ್ಯ ವೆಂಕಟೇಶ್ ಮತ್ತು ತಂಡ, ಸ್ಥಳ: ವೆಂಕಟರಮಣ ಸ್ವಾಮಿ ದೇವಸ್ಥಾನ ಕಣಿಯರ ಕಾಲೊನಿ, ಚಾಮರಾಜಪೇಟೆ, ಸಂಜೆ 6.30
ಶರನ್ನವರಾತ್ರಿ ಮತ್ತು ವಿಜಯದಶಮಿ: ದೊಡ್ಡಮ್ಮ ದೇವಿಗೆ ಬಳೆ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೃಷ್ಣರಾಜಪುರ, ಸಂಜೆ 7.30

ಪುರುಷೋತ್ತಮ ಬಿಳಿಮಲೆ ಅವರ 'ಹುಡುಕಾಟ' ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅತಿಥಿ: ಎಂ. ವೀರಪ್ಪ ಮೊಯಿಲಿ, ಪುಸ್ತಕದ ಕುರಿತು: ಚ.ಹ. ರಘುನಾಥ, ಆಯೋಜನೆ: ಚಿರಂತ್ ಪ್ರಕಾಶನ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರಪಾರ್ಕ್ ಪೂರ್ವ, ಸಂಜೆ 4

ಪುರುಷೋತ್ತಮ ಬಿಳಿಮಲೆ

ವಿಶ್ವ ಮಾನಸಿಕ ಆರೋಗ್ಯ ದಿನ–2024: ಆಯೋಜನೆ ಮತ್ತು ಸ್ಥಳ: ರಾಜ್ಯ ಒಕ್ಕಲಿಗರ ಸಂಘ, ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೆ.ಆರ್. ರಸ್ತೆ, ವಿ.ವಿ. ಪುರ, ಬೆಳಿಗ್ಗೆ 10
'ಬಂಜಾರ ಕಸೂತಿ ಕಲಿಕೆ ಕಾರ್ಯಾಗಾರ'ದ ಸಮಾರೋಪ ಸಮಾರಂಭ: ಅತಿಥಿಗಳು: ಎ.ಆರ್. ಗೋವಿಂದಸ್ವಾಮಿ, ಸೈದುಲ್ ಅದಾವತ್, ಎನ್. ಜಯದೇವ ನಾಯಕ್, ಕಾಂತಾ ನಾಯಕ್, ವಿ. ನಾಗೇಂದ್ರ ಪ್ರಸಾದ್, ಕೆ. ಬಲರಾಮ, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಬೆಳಿಗ್ಗೆ 11
ಹೆಬ್ಬಗೋಡಿ ಗುಂಡಪ್ಪ–ಜಾನಿಕಮ್ಮ ಸರಸ್ವತೀ ಪೂಜಾ ದತ್ತಿ: ಜಿ. ಅಶ್ವತ್ಥನಾರಾಯಣ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಎಂ.ವಿ.ಸೀ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 4
'ಕನ್ನಡ ಕೋಲಾಟ' ಕುಣಿಯೋಣ ಬಾರಾ: ಆಯೋಜನೆ: ಬೆಂಗಳೂರು ದಸರಾ ಉತ್ಸವ ಫೌಂಡೇಶನ್, ಸ್ಥಳ: ಬನ್ನಪ್ಪ ಪಾರ್ಕ್, ಕಾರ್ಪೊರೇಶನ್ ವೃತ್ತ, ಸಂಜೆ 5.30
24ನೇ ವರ್ಷದ ಪ್ರವಚನ ವಾಹಿನಿ: 'ಭಜ ಗೋವಿಂದಂ' ಉಪನ್ಯಾಸ: ಶ್ರೀನಿವಾಸ್ ಪ್ರಸಾದ್ ಸಿ.ವಿ., ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡದ ಶ್ರೀ ಪಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'ಬೆಂಗಳೂರು ಒನ್'ನಲ್ಲಿಯೂ ಇ–ಖಾತಾ ಶೀಘ್ರ: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಆಸ್ತಿಗಳಿಗೆ ಇ–ಖಾತಾ 'ಬೆಂಗಳೂರು ಒನ್ ಕೇಂದ್ರ'ಗಳಲ್ಲೂ ಶೀಘ್ರವೇ ಲಭ್ಯವಾಗಲಿದೆ.

ಇ–ಖಾತಾಗಳನ್ನು ಒದಗಿಸಲು ಪಾಲಿಕೆಯ ಪ್ರತಿ ಸಹಾಯಕ ಕಂದಾಯ ಅಧಿಕಾರಿ ಕಚೇರಿಗಳಲ್ಲಿ ಸಹಾಯ ಕೇಂದ್ರಗಳನ್ನು ತೆರೆಯಲಾಗಿದೆ. ನಾಗರಿಕರು ಕೇಂದ್ರಗಳಿಗೆ ಭೇಟಿ ನೀಡಿ ಅಗತ್ಯ ದಾಖಲೆ ಸಲ್ಲಿಸಿ ಇ–ಖಾತಾ ಪಡೆಯಬಹುದು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಬಿಬಿಎಂಪಿ ಇ–ಆಸ್ತಿ ವ್ಯವಸ್ಥೆಯಲ್ಲಿ ಕರಡು ಇ–ಖಾತಾವನ್ನು ವೀಕ್ಷಿಸಬಹುದಾಗಿದೆ. ಸುಮಾರು 22 ಲಕ್ಷ ಕರಡು ಇ–ಖಾತಾಗಳು BBMPeAasthi.karnataka.gov.in ಜಾಲತಾಣದಲ್ಲಿ ವಾರ್ಡ್‌ವಾರು ಲಭ್ಯವಿವೆ. ಸ್ವತ್ತಿನ ಆಸ್ತಿ ತೆರಿಗೆ ರಸೀದಿಯಿಂದ ವಾರ್ಡ್ ಹೆಸರು ಮತ್ತು ಸಂಖ್ಯೆ ತಿಳಿದುಕೊಳ್ಳಬಹುದು. ವಾರ್ಡ್‌ವಾರು 'ಇ-ಪ್ರಾಪರ್ಟಿ ಐಟಿ'ಯನ್ನು ರಚಿಸಲಾಗಿದೆ. ಮಾಲೀಕರ ಹೆಸರನ್ನು ಹೊರತುಪಡಿಸಿ, ಆಸ್ತಿಯನ್ನು ಹುಡುಕಲು ಬೇರೆ ಆಯ್ಕೆ ಇರುವುದಿಲ್ಲ.

'ಹೆಸರು ಹುಡುಕಾಟ'ದ ಆಯ್ಕೆ ನೀಡಲಾಗಿದ್ದು, ಆಸ್ತಿಗಳನ್ನು ವಾರ್ಡ್‌ವಾರು ಪಟ್ಟಿಯಲ್ಲಿ ಇಂಗ್ಲಿಷ್ ವರ್ಣಮಾಲೆಯಂತೆ ಪ್ರಕಟಿಸಲಾಗಿದೆ. ಅದರಂತೆ ಹುಡುಕಿಕೊಂಡು ಕರಡು ಇ–ಖಾತಾವನ್ನು ಪರಿಶೀಲಿಸಿಕೊಳ್ಳಬಹುದು. ಆನ್‌ಲೈನ್‌ನಲ್ಲೇ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಇ–ಖಾತಾ ಪಡೆಯಬಹುದು. ಆನ್‌ಲೈನ್‌ನಲ್ಲೇ ಎಲ್ಲ ಪ್ರಕ್ರಿಯೆಯನ್ನೂ ಪೂರ್ಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಅದು ಸಾಧ್ಯವಾಗದಿದ್ದರೆ, ಪಾಲಿಕೆ ಅಧಿಕಾರಿಗಳನ್ನು ಭೇಟಿ ಮಾಡಬಹುದು ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

ಹೆನ್ನಾಗರ: ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಹೆನ್ನಾಗರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಬಾಬುರೆಡ್ಡಿ ಮತ್ತು ಉಪಾಧ್ಯಕ್ಷರಾಗಿ ಎಚ್.ನಂಜಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹೆನ್ನಾಗರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ಸೋಮವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಎಂ.ಬಾಬುರೆಡ್ಡಿ ಮತ್ತು ಎಚ್.ನಂಜಪ್ಪ ಅವರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಎರಡೂ ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆಯಾದರು ಎಂದು ಎಂದು ಚುನಾವಣಾಧಿಕಾರಿ ಬಿ.ಕೆ.ವಿದ್ಯಾರಾಣಿ ತಿಳಿಸಿದ್ದಾರೆ.

ಧನಾಭಿವೃದ್ಧಿ® ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ನೋಂ.ಸಂ. : ಆರ್‌ಸಿಎಸ್/ಯುಬಿಸಿ–2/23/ಆರ್‌ಜಿಎನ್/49119/2017–18
Dhanabhivrudhi® Credit Co-operative Society (L)
Your Dream... Our Aim
#43, 1ನೇ ಮಹಡಿ, 1ನೇ ಹಂತ, 5ನೇ ಪೇಸ್, ಶಿವನಗರ ಮುಖ್ಯರಸ್ತೆ, WOC ರಸ್ತೆ, ವಾರಿಯರ್ ಬೇಕರಿ ಹತ್ತಿರ, ಬೆಂಗಳೂರು–560044. Email : dccsbengaluru@gmail.com

FIXED DEPOSIT - 15% p.a.*
RECURRING DEPOSIT - 15.5% p.a.*
PENSION SCHEME - 13% p.a.*
PIGMY - 5% p.a.*

INVESTMENT	6.2 YEARS	9.5 YEARS
100000	200000	300000
200000	400000	600000
500000	1000000	1500000
1000000	2000000	3000000

Conditions Apply*

FIXED DEPOSIT INTERST RATE

30 to 60 Days	5.50%pa*	3 Year	14.00%pa*
180 Days	7.00%pa*	4 Year	14.50%pa*
1 Year	13.00%pa*	5 Year	15.00%pa*
2 Year	13.50%pa*	5 Year & Above	15.50%pa*

Contact : 9538474200 / 080-23205777

Special offers for Govt. Employees, Corporates & Professionals | For bulk orders, mail at: shubham.mittal@maruti.co.in

MARUTI SUZUKI AUTHORISED DEALERS: BENGALURU: RNS MOTORS: YESHWANTHPUR, BOMMANAHALLI, NELAMANGALA: 9538925024. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI CHIKKATHIRUPATHI: 8884442299. VARUN MOTORS: MALLESHWARAM, HEBBAL, INFANTRY ROAD, RAJANAKUNTE: 7899100200. BIMAL: ITPL ROAD, YELAHANKA, BANASHANKARI, VARTHUR, DOMLUR, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA, VIJAYAPURA, PERASANDRA: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI, DABASPETE: 9590990011. KATARIA: KANAKAPURA ROAD: 7899040000. MANDOVI: BASAVANAGUDI, ST JOHNS ROAD, BASAVESHWARA NAGAR, YELAHANKA, MALUR, KOLAR, GOURIBIDNUR: 9740030077. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, MASTI, DODDABALLAPUR, SARJAPUR VILLAGE: 9591991199. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE: 9980211099.

*Terms & Condition apply. Car models and accessories shown may vary from the actual product. Images used are for illustration purposes only. Offers applicable till 31st Oct'24. For more details, please contact your nearest ARENA dealership. *3 years or 100 000 km whichever is earlier.

For further information, call Suzuki Motorcycle India Private Limited (Toll-Free): 1800-121-7996 (Mon-Sat from 9:00 am to 6:00 pm), or write to us at: customer.queries@suzukimotorcycle.in, visit website: www.suzukimotorcycle.co.in for T&C or visit nearest Suzuki two-wheeler dealership for more.

BANGALORE: Basavanagudi: ADVAITH SUZUKI – Ph: 9880741841 , Kathriguppe: APPLE SUZUKI, Ph: 080-26697070/8080, 8884446504/08/02, BTM Layout: APPLE SUZUKI, Ph: 8884446512, Kanakapura Road: APPLE SUZUKI, Ph: 8884446503, RR Nagar: APPLE SUZUKI – Ph: 8884446502, Old Airport Road (Domlur): ARYAN SUZUKI, Ph: 9739969996, Whitefield: ARYAN SUZUKI, Ph: 9739969995, K. R. Puram: ARYAN SUZUKI, Ph: 9739949998, Mahadevpura: ARYAN SUZUKI, Ph: 9739929996, Hoodi: ARYAN SUZUKI – Bike Zone, Ph: 08047470000/8073783992, KH Road: AEROLEX (AVANISH) SUZUKI -9591931113, KH Road: AVANISH SUZUKI BIKEZONE-9606092067, Vijaynagar: AVANISH SUZUKI, Ph: 8971900111, 8197800222, Kengeri, AVANISH SUZUKI, Ph: 8197900111/ 7204048604, Nagarbhavi: AVANISH SUZUKI, Ph: 9606988444/7204048604, Banaswadi: BHOJANNA SUZUKI, Ph: 9148656565, Bellary Road: MEGHAVATH SUZUKI, Ph: 9632899459, M G Road: MEGHDOOTH SUZUKI, Ph: 9513533384, HBR Layout: MEGHDOOTH SUZUKI:9513533374 Hosur Road: NINESTAR SUZUKI, Ph: 9019023333, HSR Layout: NINESTAR SUZUKI, Ph: 9019023333, Bannerghatta Road: NINESTAR SUZUKI, Ph: 9019023333, Koramangala: ORION SUZUKI, Ph: 080-25524747,9535081055, JP NAGAR: ORION SUZUKI, Ph: 96060 37441 Rajaji Nagar: SAPTAGIRI SUZUKI, Ph: 7066016611/ 9743200054, Mathikere: SAPTAGIRI SUZUKI, Ph: 9620152020,Basaweshwara Nagar: SAPTAGIRI SUZUKI, Ph: 8722037107, Sheshadripuram: SAPTAGIRI SUZUKI, Ph: 9741921526, Kottigepalya: SAPTAGIRI SUZUKI, Ph: 7899739267, Peenya, Tumkur Road: SAPTAGIRI SUZUKI, Ph: 9986466659, Nelamangala: SAPTAGIRI SUZUKI, Ph: 9591892296, Vasanthnagar: VALUE SUZUKI, Ph: 9845906084/9108258679, Yelhanka: Honnasiri Suzuki, Ph: 9945004047, Tumkur: Pramod Suzuki, Ph: 8050202244, 8050202266, 9591118539. Smayanashree Suzuki, Ph: 8088576806/8694989948, Tiptur: Smayanashree Suzuki, Ph:9900596996, Hoskote: Daivik Suzuki, Ph: 7899366585,9591208777,9449046049, Chikballapur: Bhawnit Suzuki, Ph: 8088137199, Ramanagara: Shreekar Suzuki, Ph: 8970070072 / 9686625513, Kolar: Nandi Suzuki, Ph: 9902672589 / 9353486342

ಆಯುಧಪೂಜೆ, ವಿಜಯದಶಮಿ ನಿಮಿತ್ತ ಹೆಚ್ಚಿನ ಬೇಡಿಕೆ • ದೀಪಾವಳಿವರೆಗೂ ದರ ಹೆಚ್ಚಿರುವ ಸಾಧ್ಯತೆ

ದಸರಾ: ಗಗನಕ್ಕೇರಿದ ಹೂವಿನ ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಧ ಪೂಜೆ ಮತ್ತು ವಿಜಯದಶಮಿ ಹಬ್ಬವನ್ನು ಸಂಭ್ರಮ–ಸಡಗರದಿಂದ ಆಚರಿಸಲು ನಗರದ ಜನತೆ ಸಿದ್ಧವಾಗಿದ್ದು, ಬುಧವಾರವೇ ಹೂವು ಮತ್ತು ಹಣ್ಣಿನ ಖರೀದಿ ಜೋರಾಗಿತ್ತು.

ನವರಾತ್ರಿ ಆಚರಣೆಯ ವೇಳೆ ಪ್ರತಿ ವರ್ಷ ಹೂವುಗಳ ದರ ಏರಿಕೆಯಾಗುತ್ತದೆ. ಆದರೆ, ಕೆಲ ದಿನಗಳ ಹಿಂದೆ ಹೂವಿನ ದರ ಕುಸಿದಿತ್ತು. ಹಬ್ಬದ ವೇಳೆಗೆ ಮತ್ತೆ ಹೂವಿನ ದರಗಳು ಹೆಚ್ಚಾಗಿದೆ.

ಎರಡು ವಾರಗಳವರೆಗೆ ಧಾರ್ಮಿಕ ಆಚರಣೆಗಳು ನಡೆಯುವುದರಿಂದ ಈ ಸಮಯದಲ್ಲಿ ಹೂವಿಗೆ ಹೆಚ್ಚಿನ ಬೇಡಿಕೆ ಇರುತ್ತದೆ ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವ್ಯಾಪಾರಿಗಳು ತಿಳಿಸಿದರು.

‘ದಸರಾ ಹಬ್ಬದಲ್ಲಿ ಸೇವಂತಿಗೆ, ಕನಕಾಂಬರ, ಗುಲಾಬಿ ಹೂವುಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಆಯುಧ ಪೂಜೆ ದಿನ ವಾಹನಗಳು, ಕಚೇರಿ, ಮನೆಯಲ್ಲಿರುವ ವಸ್ತುಗಳನ್ನು ಅಲಂಕರಿಸಿ ಪೂಜೆ ಮಾಡಲಾಗುತ್ತದೆ. ವಾಹನಗಳ ಅಲಂಕಾರಕ್ಕೆ ಹೂವು ಹೆಚ್ಚಾಗಿ ಮಾರಾಟವಾಗುತ್ತದೆ. ಗುಣಮಟ್ಟದ ಹೂವಿಗೆ ಗ್ರಾಹಕರಿಂದ ಬೇಡಿಕೆ ಹೆಚ್ಚು. ಆಗ ಬೆಲೆಯೂ ಏರಿಕೆಯಾಗುವುದು ಸಾಮಾನ್ಯ’ ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವರ್ತಕ ಸುರೇಶ್ ಮತ್ತು ರಾಜು ಮಾಹಿತಿ ನೀಡಿದರು.

‘ಪ್ರತಿ ಕೆ.ಜಿ. ಕನಕಾಂಬರ ₹2000, ಮಲ್ಲಿಗೆ ₹800, ಗುಲಾಬಿ ₹400 ರಂತೆ ಮಾರಾಟವಾಗುತ್ತಿದೆ. ಗುರುವಾರ ಹೂವಿನ ದರಗಳು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ’ ಎಂದರು. ಆಯುಧ ಪೂಜೆಯ ದಿನ ಮನೆ, ವಾಹನ, ಅಂಗಡಿ, ಕಾರ್ಖಾನೆ ಬಳಿ ಒಡೆಯುವ ಬೂದುಗುಂಬಳ ಕೆ.ಜಿಗೆ ₹40ರಂತೆ ಮತ್ತು ಗಾತ್ರದ ಆಧಾರದ ಮೇಲೆ ಒಂದಕ್ಕೆ ₹100–₹200ರಂತೆ ಮಾರಾಟವಾಗಿದೆ.

ನಗರದ ಕೆ.ಆರ್. ಮಾರುಕಟ್ಟೆಗೆ, ಯಶವಂತಪುರ, ಬಸವನಗುಡಿ ಮಾರುಕಟ್ಟೆ ಪ್ರದೇಶಗಳು ಜನಜಂಗುಳಿಯಿಂದ ಕೂಡಿದ್ದವು. ತರಕಾರಿ, ದಿನಸಿ, ಅಲಂಕಾರಿಕ ವಸ್ತುಗಳು ಮತ್ತು ಪೂಜೆಗೆ ಬೇಕಾಗುವ ಬೂದುಗುಂಬಳ, ಬಾಳೆಕಂದು, ಎಲೆ, ತೆಂಗಿನಕಾಯಿ ಖರೀದಿ ಜೋರಾಗಿತ್ತು.

ಹಬ್ಬದ ಅಂಗವಾಗಿ ನಗರದ ಕೆ.ಆರ್ ಮಾರುಕಟ್ಟೆಯಲ್ಲಿ ಬುಧವಾರ ಜನರು ಹೂವು ಖರೀದಿಸಿರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಪ್ರತಿ ಕಟ್ಟಿಗೆ

ಕೊತ್ತಂಬರಿ	20	30
ಪುದೀನಾ	10	15
ಪಾಲಕ	10	20
ಸಬ್ಬಕ್ಕಿ	15	20
ಮೆಂತೆ	10	20

ತರಕಾರಿ ದರಗಳು ಪ್ರತಿ ಕೆಜಿಗೆ

ಕ್ಯಾರೆಟ್	60	80
ಕ್ಯಾಪ್ಸಿಕಮ್	50	70
ಈರುಳ್ಳಿ	60	50
ಬೀನ್ಸ್	80	100
ಟೊಮೆಟೊ	20	40
ಆಲೂಗಡ್ಡೆ	25	30
ಬೀಟ್‌ರೂಟ್	40	40
ಹಾಗಲಕಾಯಿ	50	60
ಬೂದುಗುಂಬಳ	30	40
ಹೀರೆಕಾಯಿ	50	60
ಮೆಣಸಿನಕಾಯಿ	60	80
ಬಟಾಣಿ	200	240
ಬೆಳ್ಳುಳ್ಳಿ	340	380
ಶುಂಠಿ	140	160

ಹಣ್ಣುಗಳ ದರ ಪ್ರತಿ ಕೆ.ಜಿಗೆ

ದ್ರಾಕ್ಷಿ	200	240
ಸೇಬು	100	120
ದಾಳಿಂಬೆ	80	120
ಏಲಕ್ಕಿ ಬಾಳೆ	80	100
ಸೀತಾಫಲ	80	100
ಬಾಳೆ	30	40

ಹಬ್ಬದ ವಿಶೇಷ

ಬಾಳೆಕಂಬ ಜೋಡಿಗೆ (ಮಧ್ಯಮ)	50
ಮಾವಿನ ತೋರಣ	20
100 ವೀಳ್ಯದೆಲೆಗೆ	100
ಗರಿಕೆ	30
ಬಿಲ್ಲಪತ್ರೆ	20

ಹೂವುಗಳ ದರ ಪ್ರತಿ ಕೆಜಿಗೆ (₹ಗಳಲ್ಲಿ)

	ಕಳೆದ ವಾರ	ಈ ವಾರ
ಮಲ್ಲಿಗೆ	400	800
ಕನಕಾಂಬರ	400	2,000
ಗುಲಾಬಿ	150	400
ಸೇವಂತಿಗೆ	100	300
ಸುಗಂಧರಾಜ	150	350
ಚೆಂಡು ಹೂ	60	100

ಸುದ್ದಿ 2 ನಿಮಿಷ

ವಕ್ಫ್ ಹಣ ಸ್ವಂತಕ್ಕೆ ಬಳಕೆ: ನಾಲ್ವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಸರ್ಕಾರದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಜರತ್ ಹಮೀದ್ ಷಾ ಹಾಗೂ ಹಜರತ್ ಶಾ ಖಾದ್ರಿ ವಕ್ಫ್ ಬೋರ್ಡ್‌ಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಪದಾಧಿಕಾರಿಗಳು ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂಬ ಆರೋಪದಡಿ ನಾಲ್ವರ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಸ್ಥೆಯ ಅಧ್ಯಕ್ಷರೂ ಆಗಿರುವ ನಿವೃತ್ತ ಡಿಸಿಪಿ ಜಿ.ಎ.ಬಾವಾ, ಜಂಟಿ ಕಾರ್ಯದರ್ಶಿ ಸೈಯದ್ ರಶೀದ್ ಅಹ್ಮದ್, ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಜಿಯಾವುಲ್ಲಾ ಷರೀಫ್, ಉಪಾಧ್ಯಕ್ಷ ಜಾವೀದ್ ಪಾಟೀಲ್ ವಿರುದ್ಧ ಪ್ರಕರಣ ದಾಖಲಾಗಿದೆ.

ಸಾಮಾಜಿಕ ಕಾರ್ಯಕರ್ತ ಅಲ್ಲಾ ಪಾಷಾ ಎಂಬುವವರು ದೂರು ನೀಡಿದ್ದು, ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕಬ್ಬನ್‌ಪೇಟೆ ರಸ್ತೆಯಲ್ಲಿ ಈ ವಕ್ಫ್ ಬೋರ್ಡ್ ಕಚೇರಿಯಿದೆ. ಸಂಸ್ಥೆಯ ಅಧೀನದಲ್ಲಿ 128 ವಾಣಿಜ್ಯ ಮಳಿಗೆಗಳು, ಸಹಕಾರಿ ಬ್ಯಾಂಕ್ ಹಾಗೂ ಕಾಲೇಜು ಕಟ್ಟಡ, ಪಾರ್ಕಿಂಗ್ ಸ್ಥಳವಿದೆ. ಪ್ರತಿವರ್ಷ ₹1 ಕೋಟಿಗೂ ಅಧಿಕ ವರಮಾನವಿದೆ. ವಕ್ಫ್ ಬೋರ್ಡ್ ಈ ವರಮಾನದಲ್ಲಿ ಶೇ 7ರಷ್ಟನ್ನು ಸರ್ಕಾರಕ್ಕೆ ಸಂದಾಯ ಮಾಡಬೇಕು. ಆದಾಯವನ್ನು ಜಿ.ಎ. ಬಾವಾ, ರಶೀದ್ ಅಹ್ಮದ್ ಸೇರಿ ಹಲವರು ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂದು ಆರೋಪಿಸಿ ದೂರು ನೀಡಲಾಗಿತ್ತು.

ನಾಗಮಂಗಲ ಗಲಭೆ: ದೂರುದಾರ ಎಸ್‌ಐ, ಕಾನ್‌ಸ್ಟೆಬಲ್ ಅಮಾನತು

ಮಂಡ್ಯ: ಜಿಲ್ಲೆಯ ನಾಗಮಂಗಲ ಗಲಭೆಗೆ ಸಂಬಂಧಿಸಿ ದೂರು ನೀಡಿದ್ದ, ಅಲ್ಲಿನ ಪಟ್ಟಣ ಠಾಣೆಯ ಪಿಎಸ್‌ಐ ಬಿ.ಜೆ. ರವಿ ಹಾಗೂ ಗುಪ್ತಚರ ವಿಭಾಗದ ಕಾನ್‌ಸ್ಟೆಬಲ್ ರಮೇಶ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ದೂರು ನೀಡಿದ ಅಧಿಕಾರಿಯನ್ನೇ ಅಮಾನತು ಮಾಡಿರುವುದರಿಂದ ಪ್ರಕರಣ ಹೊಸ ತಿರುವು ಪಡೆದಂತಾಗಿದೆ.

‘ಕರ್ತವ್ಯ ಲೋಪದ ಆರೋಪದಲ್ಲಿ ಅಮಾನತು ಮಾಡಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಆದೇಶದಲ್ಲಿ ತಿಳಿಸಿದ್ದಾರೆ.

ಸೆಪ್ಟೆಂಬರ್ 11ರಂದು ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ವೇಳೆ ಎರಡು ಕೋಮುಗಳ ಯುವಕರ ನಡುವೆ ಏರ್ಪಟ್ಟ ಸಂಘರ್ಷದಿಂದ ಆಸ್ತಿಪಾಸ್ತಿಗೆ ಹಾನಿ ಉಂಟಾಗಿತ್ತು. ಘಟನೆಯ ಬಗ್ಗೆ ಪಿಎಸ್‌ಐ ದೂರು ನೀಡಿದ್ದರು. ಅದಕ್ಕೂ ಮೊದಲು, ಡಿವೈಎಸ್ಪಿ ಸುಮಿತ್, ಇನ್‌ಸ್ಪೆಕ್ಟರ್ ಅಶೋಕ್‌ಕುಮಾರ್ ಅವರನ್ನು ಕರ್ತವ್ಯಲೋಪದ ಆರೋಪದಲ್ಲಿ ಅಮಾನತು ಮಾಡಲಾಗಿತ್ತು. ಒಟ್ಟು ನಾಲ್ವರು ಪೊಲೀಸರು ಅಮಾನತುಗೊಂಡಂತಾಗಿದೆ. ಪ್ರಕರಣದ ಎಲ್ಲ 55 ಆರೋಪಿಗಳಿಗೂ ಮಂಡ್ಯದ ಒಂದನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಪ್ರತ್ಯೇಕ ಪ್ರಕರಣ ಮೂವರು ಸೆರೆ

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಎರಡು ಪ್ರತ್ಯೇಕ ಪ್ರಕರಣಗಳಲ್ಲಿ, ಮಾದಕವಸ್ತು ಮಾರಾಟ ಮತ್ತು ದ್ವಿಚಕ್ರ ವಾಹನಗಳ ಕಳವು ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ತಮಿಳುನಾಡಿನ ದಿನೇಶ್ ಕುಮಾರ್(23) ಮತ್ತು ಕುಪ್ಪನ್ ಅಲಿಯಾಸ್ ಕುಪ್ಪಸ್ವಾಮಿ(25) ಬಂಧಿತರು. ಇವರು, ತಮಿಳುನಾಡಿನಿಂದ ಮಾದಕವಸ್ತು ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದರು. ಇವರಿಂದ ₹13 ಲಕ್ಷ ಮೌಲ್ಯದ 22 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

7ನೇ ಸೆಕ್ಟರ್‌ನ ಸಲಾರ್‌ಪುರಿಯ ಅಪಾರ್ಟ್‌ಮೆಂಟ್ ಎದುರು ಗಾಂಜಾ ಮಾರಾಟ ಮಾಡುತ್ತಿರುವ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದರು.

ಪಿ.ಜಿಗಳ ಎದುರು ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳ ಕಳವು ಮಾಡುತ್ತಿದ್ದ ಹೊಂಗಸಂದ್ರ ನಿವಾಸಿ ಅಕ್ಮಲ್ ಹುಸೇನ್ ಅಲಿಯಾಸ್ ಅಕ್ಮಲ್ (23) ಪೊಲೀಸರು ಬಂಧಿಸಿದ್ದಾರೆ. ಈತನಿಂದ ₹12 ಲಕ್ಷ ಮೌಲ್ಯದ ನಾಲ್ಕು ಲ್ಯಾಪ್‌ಟಾಪ್, ಐದು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ವಿವಿಧ ಠಾಣೆಗಳಲ್ಲಿ ಈತನ ವಿರುದ್ಧ 7 ಪ್ರಕರಣಗಳು ದಾಖಲಾಗಿವೆ.

ಇನ್‌ಸ್ಟಾಗ್ರಾಂನಲ್ಲಿ ಪರಿಚಯ: ಜಾತಿ ನಿಂದನೆ ಆರೋಪ • ಗೋವಿಂದಪುರ ಠಾಣೆಯಲ್ಲಿ ಪ್ರಕರಣ

ಯುವತಿಗೆ ವಂಚನೆ: ಹಡಗು ಸಿಬ್ಬಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್‌ಸ್ಟಾಗ್ರಾಂ ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾಗಿದ್ದ ಯುವತಿಗೆ ಮದುವೆ ಆಗುವುದಾಗಿ ನಂಬಿಸಿ ಆಕೆಯ ಜತೆಗೆ ಖಾಸಗಿ ಕ್ಷಣಗಳನ್ನು ಕಳೆದು ವಂಚಿಸಿದ್ದ ಕೇರಳದ ಖಾಸಗಿ ಕಂಪನಿಗೆ ಸೇರಿದ ಹಡಗಿನ ಸಿಬ್ಬಂದಿಯೊಬ್ಬರನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೇರಳದ ಬಿಲಾಲ್ ರಫೀಕ್(30) ಬಂಧಿತ.

‘ಛತ್ತೀಸಗಡದ ಯುವತಿಗೆ ಮದುವೆ ಆಗುವುದಾಗಿ ವಂಚಿಸಿ, ಜಾತಿನಿಂದನೆ ಮಾಡಿದ್ದರು. ಈ ಬಗ್ಗೆ ಸಂತ್ರಸ್ತೆಯು, ಬಿಲಾಲ್ ರಫೀಕ್ ಹಾಗೂ ಅವರ ತಂದೆ ಮೊಹ್ಮದ್ ರಫೀಕ್, ತಾಯಿ ಮುತ್ತಬಿ ರಫೀಕ್, ಸಹೋದರಿ ಅತೀನಾ ವಿರುದ್ಧ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

‘ಕೆಲವು ವರ್ಷಗಳ ಹಿಂದೆಯೇ ಬೆಂಗಳೂರಿಗೆ ಬಂದಿದ್ದ ಸಂತ್ರಸ್ತೆ, ನಗರದ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ದಾಸರಹಳ್ಳಿಯ ಬಡಾವಣೆಯೊಂದರಲ್ಲಿ ವಾಸವಾಗಿದ್ದರು. 2021ರಲ್ಲಿ ಇನ್‌ಸ್ಟಾಗ್ರಾಂನಲ್ಲಿ ಕೇರಳದ ಬಿಲಾಲ್ ರಫೀಕ್ ಪರಿಚಯ ಆಗಿದ್ದರು. ಬಳಿಕ ಮೊಬೈಲ್ ನಂಬರ್ ಬದಲಾಯಿಸಿಕೊಂಡು, ಕರೆ ಮತ್ತು ವಾಟ್ಸ್‌ಆ್ಯಪ್ ಚಾಟಿಂಗ್ ಮಾಡುತ್ತಿದ್ದರು. ನಂತರ ಇಬ್ಬರೂ ಪ್ರೀತಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿಗಳು

‘2022ರ ಮೇ ತಿಂಗಳಲ್ಲಿ ಆರೋಪಿ ಬೆಂಗಳೂರಿಗೆ ಬಂದು, ಸಹಕಾರನಗರದ ವಸತಿ ಗೃಹವೊಂದಕ್ಕೆ ಕರೆದೊಯ್ದು, ಮದುವೆ ಆಗುತ್ತೇನೆ ಎಂದು ನಂಬಿಸಿ, ಆಕೆಯ ಜತೆಗೆ ಖಾಸಗಿ ಕ್ಷಣಗಳನ್ನು ಕಳೆದಿದ್ದರು’ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಬಿಲಾಲ್ ರಫೀಕ್

‘ಸಂತ್ರಸ್ತೆಯ ಸ್ವಂತ ಊರಿಗೂ ಆರೋಪಿ ತೆರಳಿ ಕುಟುಂಬ ಸದಸ್ಯರಿಗೆ ಮದುವೆಗೆ ಒಪ್ಪಿಸಿದ್ದರು. ಈತನ ಕುಟುಂಬ ಸದಸ್ಯರು ಕೂಡ ಮದುವೆಗೆ ಒಪ್ಪಿದ್ದರು. ಆರೋಪಿಗೆ ಸಂತ್ರಸ್ತೆ, ನಗದು, ಮೊಬೈಲ್ ಹಾಗೂ ಇತರೆ ವಸ್ತುಗಳನ್ನು ಉಡುಗೊರೆಯಾಗಿ ನೀಡಿದ್ದರು. ನಂತರ, ಆರೋಪಿ ಮನೆಯವರು ಕರೆ ಮಾಡಿ ಜಾತಿ ನಿಂದನೆ ಮಾಡಿದ್ದರು. ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು ಎಂಬ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ನಕಲಿ ದಾಖಲೆ ಸೃಷ್ಟಿಸಿ ₹70 ಕೋಟಿ ಪರಿಹಾರ ಪಡೆಯಲು ಯತ್ನ: ಐವರ ಸೆರೆ

ಬೆಂಗಳೂರು: ಜಮೀನಿನ ನಕಲಿ ದಾಖಲೆ ಸೃಷ್ಟಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) ₹70 ಕೋಟಿ ಮೌಲ್ಯದ ಆಸ್ತಿಗೆ ಪರಿಹಾರ ಪಡೆಯಲು ಯತ್ನಿಸಿದ್ದ ಆರೋಪದಡಿ ಐವರನ್ನು ಶೇಷಾದ್ರಿಪುರ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಚಲ್ಲಘಟ್ಟದ ನಿವಾಸಿಗಳಾದ ಶ್ರೀನಿವಾಸ್, ನಾಗರಾಜ್, ರವಿಕುಮಾರ್, ಭರತ್ ಹಾಗೂ ಸ್ವಾಮಿ ಬಂಧಿತರು.

ಎಲ್ಲ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ಹೆಚ್ಚಿನ ವಿಚಾರಣೆಗಾಗಿ ನಾಗರಾಜ್ ಅವರನ್ನು ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ. ಉಳಿದ ನಾಲ್ವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಿಡಿಎ ವಿಚಕ್ಷಣಾ ದಳದ ಡಿವೈಎಸ್‌ಪಿ ಎಂ.ಮಲ್ಲೇಶ್ ಅವರು ದೂರು ನೀಡಿದ್ದರು. ಇದೇ ಪ್ರಕರಣದಲ್ಲಿ ಬಿಡಿಎ ಭೂಸ್ವಾಧೀನ ಅಧಿಕಾರಿ ಸುಧಾ, ಬೆಂಗಳೂರು ದಕ್ಷಿಣ ವಿಭಾಗದ ಉಪ ವಿಭಾಗಾಧಿಕಾರಿ ಶಿವಣ್ಣ, ಬಿಡಿಎ ಸರ್ವೇಯರ್ ರವಿಪ್ರಕಾಶ್, ಕೆ.ಜಿ.ರಸ್ತೆ ಕಚೇರಿಯ ವಿಶೇಷ ತಹಶೀಲ್ದಾರ್, ಕಂದಾಯ ಇಲಾಖೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಇತರೆ ಅಧಿಕಾರಿಗಳು, ಸಿಬ್ಬಂದಿ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ಚಲ್ಲಘಟ್ಟದ ಸರ್ವೆ ನಂ.: 13 ಹಾಗೂ 58ರಲ್ಲಿನ 6 ಎಕರೆ ವಿಸ್ತೀರ್ಣದ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿದ್ದರು. ಜಮೀನಿನ ಮೂಲ ಮಾಲೀಕ ಮೂಡ್ಲಪ್ಪ ಅವರಿಗೂ ಆರೋಪಿಗಳಿಗೂ ಸಂಬಂಧ ಇಲ್ಲದಿದ್ದರೂ ಅಧಿಕಾರಿಗಳ ಜತೆಗೆ ಶಾಮೀಲಾಗಿ ಕಂದಾಯ ಇಲಾಖೆಯಿಂದ ದಾಖಲೆಗಳ ನಕಲು ಪ್ರತಿಗಳನ್ನು ಪಡೆದುಕೊಂಡಿದ್ದರು.

‘ಈ ದಾಖಲೆಗಳನ್ನು ಬಿಡಿಎಗೆ ಸಲ್ಲಿಸಿ, ಆಸ್ತಿಯ ಮಾಲೀಕರು ತಾವೇ ಎಂದು ಹೇಳಿಕೊಂಡು ₹70 ಕೋಟಿ ಮೌಲ್ಯದ ಆಸ್ತಿಗೆ ಪರಿಹಾರ ಕೋರಿದ್ದರು. ಆರೋಪಿಗಳ ಜತೆಗೆ ಅಧಿಕಾರಿಗಳೂ ಶಾಮೀಲಾಗಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಸಂತ್ರಸ್ತೆ ಕರೆದೊಯ್ದು ಸ್ಥಳ ಮಹಜರು

ಬೆಂಗಳೂರು: ಧಾರವಾಡ ಗ್ರಾಮೀಣ ಕ್ಷೇತ್ರದ ಶಾಸಕ ವಿನಯ್ ಕುಲಕರ್ಣಿ ಅವರ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿದ್ದ ಸಂತ್ರಸ್ತೆಯನ್ನು ಬುಧವಾರ ವಿವಿಧೆಡೆಗೆ ಕರೆದೊಯ್ದು ಸಂಜಯ್ ನಗರ ಠಾಣೆಯ ಪೊಲೀಸರು ಸ್ಥಳ ಮಹಜರು ನಡೆಸಿದರು.

ವಿನಯ್ ಕುಲಕರ್ಣಿ

ಅತ್ಯಾಚಾರ ಎಸಗಿದ್ದಾರೆ ಎನ್ನಲಾದ ಹೆಬ್ಬಾಳದ ನಿವಾಸ ಸೇರಿದಂತೆ ಕೆಲವು ಸ್ಥಳಗಳಿಗೆ ಸಂತ್ರಸ್ತೆಯನ್ನೂ ಕರೆದೊಯ್ದು ಪರಿಶೀಲಿಸಲಾಯಿತು. ‘ಸಂತ್ರಸ್ತೆಯಿಂದ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಸುಲಿಗೆ ಸಂಬಂಧ ವಿನಯ್ ಕುಲಕರ್ಣಿ ಅವರೂ ಪ್ರತಿ ದೂರುನೀಡಿದ್ದಾರೆ. ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಲೆಕ್ಕಪರಿಶೋಧನಾ ಇಲಾಖೆ ಹುದ್ದೆ: ಬಾರದ ಫಲಿತಾಂಶ

ಬೆಂಗಳೂರು: ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಉಳಿಕೆ ಮೂಲ ವೃಂದದ ಸಹಾಯಕ ನಿಯಂತ್ರಕರು (ಗ್ರೂಪ್ ‘ಎ’) 43 ಮತ್ತು ಲೆಕ್ಕ ಪರಿಶೋಧನಾಧಿಕಾರಿ (ಗ್ರೂಪ್ ‘ಬಿ’) 54 ಹುದ್ದೆಗಳಿಗೆ ಪೂರ್ವಭಾವಿ ಪರೀಕ್ಷೆ ನಡೆದು ಎರಡು ತಿಂಗಳುಗಳಾಗುತ್ತಾ ಬಂದರೂ ಕೆಪಿಎಸ್‌ಸಿ ಫಲಿತಾಂಶ ಪ್ರಕಟಿಸಿಲ್ಲ.

ಕಳೆದ 10 ತಿಂಗಳ ಅವಧಿಯಲ್ಲಿ ವಾಣಿಜ್ಯ ತೆರಿಗೆ ಪರೀಕ್ಷಕರ (ಸಿಟಿಐ) ಹುದ್ದೆಗೆ ನಡೆಸಿದ ಪರೀಕ್ಷೆಯ ಫಲಿತಾಂಶ ಬಿಟ್ಟರೆ, ಯಾವುದೇ ಪರೀಕ್ಷೆಯನ್ನು ಕೆಪಿಎಸ್‌ಸಿ ನಡೆಸಿಲ್ಲ. ಈಗಾಗಲೇ ನಡೆಸಿರುವ ಪರೀಕ್ಷೆಗಳ ಫಲಿತಾಂಶವನ್ನೂ ಪ್ರಕಟಿಸಿಲ್ಲ. ಕೆಪಿಎಸ್‌ಸಿಯ ಈ ವಿಳಂಬ ನೀತಿಗೆ ಅಭ್ಯರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ಮಾರ್ಚ್ 1ರಂದು ಅಧಿಸೂಚನೆ ಹೊರಡಿಸಿತ್ತು. ಆಗಸ್ಟ್ 11ರಂದು ಪೂರ್ವಭಾವಿ ಪರೀಕ್ಷೆ ನಡೆದಿತ್ತು. ಈ ಪರೀಕ್ಷೆಯಲ್ಲಿ ಬರೆದ ಅಭ್ಯರ್ಥಿಗಳು, ಖಾಲಿ ಹುದ್ದೆಗಳಿಗೆ ಅನುಗುಣವಾಗಿ 1:20 ಅನುಪಾತದಲ್ಲಿ ಮುಖ್ಯ ಪರೀಕ್ಷೆಗೆ ಅರ್ಹರಾಗುತ್ತಾರೆ. ಡಿ. 17ರಿಂದ 20ರವರೆಗೆ ಮುಖ್ಯಪರೀಕ್ಷೆ ನಡೆಯಲಿದೆ ಎಂದು ಕೆಪಿಎಸ್‌ಸಿ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ. ಈ ಹುದ್ದೆಗಳಿಗೆ ಸಂದರ್ಶನ (ವ್ಯಕ್ತಿತ್ವ ಪರೀಕ್ಷೆ) ಇಲ್ಲ.

ಇದೇ ಇಲಾಖೆಯಲ್ಲಿನ ಹೈದ್ರಾಬಾದ್- ಕರ್ನಾಟಕ ವೃಂದದ ಸಹಾಯಕ ನಿಯಂತ್ರಕರು (ಗ್ರೂಪ್ ‘ಎ’) 15 ಹುದ್ದೆಗಳಿಗೆ ಜುಲೈ 28ರಂದು ಪೂರ್ವಭಾವಿ ಪರೀಕ್ಷೆ ನಡೆಸಿದ್ದ ಕೆಪಿಎಸ್‌ಸಿ, ಮುಖ್ಯ ಪರೀಕ್ಷೆಗೆ 1:20ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಸೆ. 20 ರಂದು ಪ್ರಕಟಿಸಿದೆ. ಈ ಅಭ್ಯರ್ಥಿಗಳಿಗೆ ಡಿ. 10ರಿಂದ 13ರವರೆಗೆ ಮುಖ್ಯ ಪರೀಕ್ಷೆ ನಡೆಯಲಿದೆ.

ಜಕ್ಕೂರು: ಕತ್ತು ಸೀಳಿದ ಸ್ಥಿತಿಯಲ್ಲಿ ವ್ಯಕ್ತಿ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಜಕ್ಕೂರಿನ ಖಾಲಿ ಪ್ರದೇಶದಲ್ಲಿ ಕತ್ತು ಸೀಳಿದ ಸ್ಥಿತಿಯಲ್ಲಿ ವ್ಯಕ್ತಿಯೊಬ್ಬರ ಶವ ಪತ್ತೆಯಾಗಿದೆ.

ಮೋಹನ್ ಕುಮಾರ್

ಮೃತ ವ್ಯಕ್ತಿಯನ್ನು ಮೋಹನ್ ಕುಮಾರ್ (45) ಎಂದು ಗುರುತಿಸಲಾಗಿದೆ. ‘ಇದು ಆತ್ಮಹತ್ಯೆಯೋ ಕೊಲೆಯೋ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

‘ಮನೆಯಲ್ಲಿ ಚಿನ್ನಾಭರಣ ಕದ್ದ ಪ್ರಕರಣದ ತನಿಖೆ ನಡೆಸುತ್ತಿದ್ದ ವಿ.ವಿ ಪುರ ಠಾಣೆಯ ಪೊಲೀಸರು ಕೆಲವು ಸುಳಿವು ಆಧರಿಸಿ ಮೋಹನ್ ಕುಮಾರ್ ಅವರ ಸಂಬಂಧಿಯೊಬ್ಬರನ್ನು ಬಂಧಿಸಿದ್ದರು. ಆರೋಪಿಯನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದರು. ಆಗ ಮೋಹನ್ ಕುಮಾರ್ ಮನೆಯಲ್ಲಿ ಚಿನ್ನಾಭರಣ ಬಚ್ಚಿಟ್ಟಿದ್ದಾಗಿ ಆರೋಪಿ ಹೇಳಿಕೆ ನೀಡಿದ್ದ. ಆ ಹೇಳಿಕೆ ಆಧರಿಸಿ ಮೋಹನ್ ಕುಮಾರ್ ಅವರ ಮನೆಯಿಂದ ಚಿನ್ನಾಭರಣವನ್ನು ಪೊಲೀಸರು ಜಪ್ತಿ ಮಾಡಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಈ ಮಧ್ಯೆ ಚಿನ್ನವನ್ನು ಕಳೆದುಕೊಂಡಿದ್ದ ವ್ಯಕ್ತಿ, ಮೋಹನ್ ಕುಮಾರ್ ಅವರ ಜತೆಗೆ ಗಲಾಟೆ ನಡೆಸಿದ್ದರು. ಕದ್ದ ಚಿನ್ನವನ್ನು ಮನೆಯಲ್ಲಿ ಯಾವ ಕಾರಣಕ್ಕೆ ಇರಿಸಿಕೊಂಡಿದ್ದೆ ಎಂದು ಪ್ರಶ್ನಿಸಿದ್ದರು. ಇದರಿಂದ ಮನನೊಂದು ಮೋಹನ್ ಕುಮಾರ್ ಆತ್ಮಹತ್ಯೆಗೆ ಶರಣಾಗಿರಬಹುದು’ ಎಂದು ಪೊಲೀಸರು ಶಂಕಿಸಿದ್ದಾರೆ.

‘ಜಕ್ಕೂರಿನ ಎರಡು ಪಥದ ರಸ್ತೆಯ ಸಮೀಪ ಖಾಲಿ ಪ್ರದೇಶದಲ್ಲಿ ಮೃತದೇಹ ಇತ್ತು. ಮೃತದೇಹವನ್ನು ಗಮನಿಸಿದ್ದವರು ಪೊಲೀಸರಿಗೆ ಮಾಹಿತಿ ನೀಡಿದ್ದರು. ದಾಖಲೆ ಪರಿಶೀಲನೆ ವೇಳೆ ಮೋಹನ್ ಕುಮಾರ್ ಎಂಬುದು ಗೊತ್ತಾಯಿತು. ಅವರು ಪೇಂಟಿಂಗ್ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಚಿನ್ನದ ವಿಚಾರಕ್ಕಾಗಿ ಖಾಸಗಿ ವ್ಯಕ್ತಿಯೊಬ್ಬರಿಂದ ಬೆದರಿಕೆ ಇದ್ದುದರಿಂದ ನೊಂದಿದ್ದರು ಎಂಬುದಾಗಿ ಮೃತನ ಪತ್ನಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದೇವೆ’ ಎಂದು ಪೊಲೀಸರು ಹೇಳಿದರು.

ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ. ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆತ್ಮಹತ್ಯೆಗೆ ಯತ್ನಿಸಿದ ಬಾಲಕಿ ರಕ್ಷಿಸಿದ ಪೊಲೀಸ್ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಟ್ರಿನಿಟಿ ಜಂಕ್ಷನ್ ಬಳಿ ಆತ್ಮಹತ್ಯೆಗೆ ಯತ್ನಿಸಿದ ಬಾಲಕಿಯನ್ನು ಮಹಿಳಾ ಪೊಲೀಸ್ ಸಿಬ್ಬಂದಿ ಬುಧವಾರ ರಾತ್ರಿ ರಕ್ಷಿಸಿದ್ದಾರೆ.

ಪಿಎಸ್‌ಐ ಕವಿತಾ ಮತ್ತು ಕಾನ್‌ಸ್ಟೆಬಲ್ ಪಲ್ಲವಿ ಅವರು ಬಾಲಕಿಯನ್ನು ಅಪಾಯದಿಂದ ಕಾಪಾಡಿದ್ದು ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಟ್ರಿನಿಟಿ ಜಂಕ್ಷನ್‌ನಲ್ಲಿ ಕವಿತಾ ಮತ್ತು ಪಲ್ಲವಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅದೇ ಸಂದರ್ಭದಲ್ಲಿ ಬಾಲಕಿಯೊಬ್ಬಳು ನಿತ್ರಾಣಗೊಂಡು ಕುಸಿದು ಬಿದ್ದಿರುವುದನ್ನು ಸಿಬ್ಬಂದಿ ಗಮನಿಸಿದ್ದರು. ತಕ್ಷಣವೇ ಪೊಲೀಸ್ ಸಿಬ್ಬಂದಿ ಆಕೆಯ ನೆರವಿಗೆ ಧಾವಿಸಿದ್ದರು.

ಆಗ ಬಾಲಕಿ ‘ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕು. ನನ್ನನ್ನು ಬಿಡಿ’ ಎಂದು ಚೀರಾಡುತ್ತಿದ್ದಳು. ಕೂಡಲೇ 112ಗೆ ಕರೆ ಮಾಡಿ ಮಾಹಿತಿ ನೀಡಿದ ಪೊಲೀಸ್ ಸಿಬ್ಬಂದಿ, ಬಾಲಕಿಯನ್ನು ಸುರಕ್ಷಿತವಾಗಿ ಕಳುಹಿಸಿಕೊಟ್ಟಿದ್ದಾರೆ ಎಂದು ಸಂಚಾರ ಪೂರ್ವ ಉಪ ಪೊಲೀಸ್ ಆಯುಕ್ತರ ‘ಎಕ್ಸ್’ ಖಾತೆಯಲ್ಲಿ ತಿಳಿಸಿದ್ದಾರೆ.

ವೈದ್ಯೆ ಸೇರಿ 8 ಮಂದಿ ಬಂಧನ • ಆರೋಪಿಗಳ ವಿರುದ್ಧ ಪ್ರಕರಣ ದಾಖಲು

ದಾವಣಗೆರೆ: ₹5 ಲಕ್ಷಕ್ಕೆ ಶಿಶು ಮಾರಾಟ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜನನ ಪ್ರಮಾಣ ಪತ್ರ ಸೇರಿದಂತೆ ನಕಲಿ ದಾಖಲೆ ಸೃಷ್ಟಿ
- ಎರಡೂವರೆ ತಿಂಗಳ ಗಂಡು ಶಿಶುವಿಗೆ ಮಕ್ಕಳ ಆರೈಕೆ ಕೇಂದ್ರದಲ್ಲಿ ಆಶ್ರಯ

ದಾವಣಗೆರೆ: ಜನನ ಪ್ರಮಾಣ ಪತ್ರ ಸೇರಿದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಶಿಶುವೊಂದನ್ನು ₹5 ಲಕ್ಷಕ್ಕೆ ಮಾರಾಟ ಮಾಡಿದ ಜಾಲ ಭೇದಿಸಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಹಿಳಾ ಠಾಣೆಯ ಪೊಲೀಸರು, ವೈದ್ಯೆ ಸೇರಿ ಎಂಟು ಆರೋಪಿಗಳನ್ನು ಬಂಧಿಸಿದ್ದಾರೆ.

ಇಲ್ಲಿನ ಎಂ.ಕೆ.ಮೆಮೋರಿಯಲ್ ಆಸ್ಪತ್ರೆಯ ವೈದ್ಯೆ ಭಾರತಿ, ಶಿಶುವಿನ ತಾಯಿ ಕಾವ್ಯಾ, ಶಿಶು ಖರೀದಿಸಿದ್ದ ಜಯಾ ಹಾಗೂ ಪ್ರಶಾಂತ್ ಕುಮಾರ್ ದಂಪತಿ, ಮಧ್ಯವರ್ತಿಗಳಾದ ವಾದಿರಾಜ್, ಮಂಜಮ್ಮ, ಸುರೇಶ್ ಮತ್ತು ರಮೇಶ್ ಬಂಧಿತರು. ವಿಚಾರಣೆ ನಡೆಸಿದ ಪೊಲೀಸರು ಎಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮಾರಾಟವಾಗಿದ್ದ ಎರಡೂವರೆ ತಿಂಗಳ ಗಂಡು ಶಿಶುವಿಗೆ ಮಕ್ಕಳ ಆರೈಕೆ ಕೇಂದ್ರದಲ್ಲಿ ಆಶ್ರಯ ಕಲ್ಪಿಸಲಾಗಿದೆ.

ಮಕ್ಕಳ ಸಹಾಯವಾಣಿಗೆ ಕರೆ ಮಾಡಿದವರೊಬ್ಬರು ದಂಪತಿಯು ಶಿಶುವನ್ನು ಪಡೆದ ಬಗ್ಗೆ ಮಾಹಿತಿ ನೀಡಿದ್ದರು. ಕರೆಯ ಜಾಡು ಹಿಡಿದು ಸಾಗಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಟಿ.ಎನ್.ಕವಿತಾ ನೇತೃತ್ವದ ತಂಡ ವಿನೋಬನಗರದ ಜಯಾ ಪ್ರಶಾಂತ್ ಮನೆಗೆ ಭೇಟಿ ನೀಡಿ ವಿಚಾರಣೆ ನಡೆಸಿದೆ. ದಂಪತಿ ಒದಗಿಸಿದ ಶಿಶು ಜನನ ಪ್ರಮಾಣ ಪತ್ರವನ್ನು ಆಧರಿಸಿ ಎಂ.ಕೆ.ಮೆಮೋರಿಯಲ್ ಆಸ್ಪತ್ರೆಗೆ ಭೇಟಿ ನೀಡಿದಾಗ ಶಿಶು ಮಾರಾಟದ ವಿಚಾರ ಗೊತ್ತಾಗಿದೆ.

‘ವಿಚ್ಛೇದಿತ ಮಹಿಳೆ ಕಾವ್ಯಾ ಎರಡೂವರೆ ತಿಂಗಳ ಹಿಂದೆ ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಶಿಶುವಿಗೆ ಜನ್ಮ ನೀಡಿದ್ದರು. ದಾವಣಗೆರೆಗೆ ಮರಳಿದ ನಂತರ ಶಿಶು ಮಾರಾಟಕ್ಕೆ ನಿರ್ಧರಿಸಿದ್ದರು. ಎಂಟು ವರ್ಷಗಳಿಂದ ಮಕ್ಕಳಾಗದ ಕೊರಗಿನಲ್ಲಿದ್ದ ದಂಪತಿಯನ್ನು ಮಧ್ಯವರ್ತಿ ವಾದಿರಾಜ್ ಸಂಪರ್ಕಿಸಿದ್ದ. ₹ 5 ಲಕ್ಷಕ್ಕೆ ಶಿಶು ಖರೀದಿಸಲು ದಂಪತಿ ಒಪ್ಪಿದ್ದರು. ಎಂ.ಕೆ.ಮೆಮೋರಿಯಲ್ ಆಸ್ಪತ್ರೆಯ ವೈದ್ಯೆ ಭಾರತಿ ಹಾಗೂ ಸಿಬ್ಬಂದಿ ಮಂಜುಳಾ, ನಕಲಿ ಜನನ ಪ್ರಮಾಣ ಪತ್ರಕ್ಕೆ ಸಹಕಾರ ನೀಡಿದ್ದರು’ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

‘ಜಯಾ ಹಾಗೂ ಪ್ರಶಾಂತ್ ದಂಪತಿಗೆ ಆ.26ರಂದು ಶಿಶು ಜನನವಾಗಿದೆ ಎಂಬುದಾಗಿ ಡಾ.ಭಾರತಿ ದಾಖಲೆ ಸೃಷ್ಟಿಸಿದ್ದರು. ಆಸ್ಪತ್ರೆಯ ದಾಖಲೆಗಳನ್ನು ಆಧರಿಸಿ ಮಹಾನಗರ ಪಾಲಿಕೆಯಲ್ಲಿ ಶಿಶುವಿನ ಜನನ ಪ್ರಮಾಣ ಪತ್ರ ಪಡೆಯಲಾಗಿತ್ತು. ಆರೋಪಿಗಳ ವಿರುದ್ಧ ಬಾಲ ನ್ಯಾಯ ಕಾಯ್ದೆ 2015, ಮಕ್ಕಳ ರಕ್ಷಣಾ ಕಾಯ್ದೆ 2004 ಹಾಗೂ ಭಾರತೀಯ ನ್ಯಾಯ ಸಂಹಿತೆಯಡಿ ಪ್ರಕರಣ ದಾಖಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದ್ದಾರೆ.

ಸಂತನಂತೆ ಬದುಕಿದ ಉದ್ಯಮದ ದಿಗ್ಗಜ

ನವದೆಹಲಿ (ರಾಯಿಟರ್ಸ್/ಪಿಟಿಐ): ಉಪ್ಪಿನಿಂದ ಉಕ್ಕಿನವರೆಗೆ, ಏರ್‌ಪಿನ್‌ನಿಂದ ಏರೋಪ್ಲೇನ್‌ವರೆಗೆ ಟಾಟಾ ಮುಟ್ಟದೇ ಇರುವ ಕ್ಷೇತ್ರವಿಲ್ಲ. ಹಾಗೆಯೇ ತಾವು ಕೈಇಟ್ಟ ಕ್ಷೇತ್ರದಲ್ಲಿ ಕಾಪಾಡಿಕೊಂಡ ನೈತಿಕತೆ, ವಿಶ್ವಾಸಾರ್ಹತೆಯಿಂದಲೇ 'ಟಾಟಾ' ಬ್ರಾಂಡ್ ಆಗಿ ಟಾಟಾ ಸಮೂಹ ತನ್ನ ಛಾಪು ಮೂಡಿಸಿದೆ.

ರತನ್ ಟಾಟಾ ಅವರ ದೂರದೃಷ್ಟಿ ಮತ್ತು ಕನಸುಗಳಿಂದ ಟಾಟಾ ಸಮೂಹ ಬಹುರಾಷ್ಟ್ರೀಯ ಕಂಪನಿಯಾಗಿ ಜಾಗತಿಕ ಮಟ್ಟದಲ್ಲೂ ಸಾಮ್ರಾಜ್ಯ ವಿಸ್ತರಿಸಿದೆ.

1868 ಭಾರತವು ತನ್ನ ಆರ್ಥಿಕತೆಯನ್ನು ತೆರೆದ ವರ್ಷ. ಸಣ್ಣ ಜವಳಿ ಮತ್ತು ವ್ಯಾಪಾರ ಸಂಸ್ಥೆಯಾಗಿ ಪ್ರಾರಂಭವಾದ ಟಾಟಾ ಸಂಸ್ಥೆಯನ್ನು ಉಪ್ಪಿನಿಂದ ಉಕ್ಕಿನವರೆಗೆ, ಕಾರುಗಳಿಂದ ಸಾಫ್ಟ್‌ವೇರ್, ವಿದ್ಯುತ್ ಸ್ಥಾವರಗಳ ಕಾರ್ಯಾಚರಣೆ, ವಿಮಾನಯಾನ ಸೇವೆಯೊಂದಿಗೆ ಜಾಗತಿಕ ಶಕ್ತಿ ಕೇಂದ್ರವಾಗಿ ಪರಿವರ್ತಿಸಿತು.

ಇಂದು ಜಗತ್ತಿನ ದೊಡ್ಡ ಉದ್ಯಮ ಸಂಸ್ಥೆಗಳಲ್ಲಿ ಒಂದಾಗಿರುವ ಟಾಟಾ ಸನ್ಸ್‌ನ ಗೌರವಾನ್ವಿತ ಅಧ್ಯಕ್ಷರಾಗಿ ರತನ್ ಟಾಟಾ ಅವರು ಎರಡು ದಶಕ ಉದ್ಯಮ ಸಾಮ್ರಾಜ್ಯವನ್ನು ಯಶಸ್ವಿಯಾಗಿ ಮುನ್ನಡೆಸಿದ್ದರು. ರತನ್ ಟಾಟಾ ಅವರು ದೇಶಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಕೇಂದ್ರ ಸರ್ಕಾರವು ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ರತನ್ ಟಾಟಾ ಅವರು ತಮ್ಮ ಕುಟುಂಬ ಉದ್ಯಮ ಸಾರಥ್ಯವನ್ನು ವಹಿಸಿಕೊಳ್ಳುವುದಕ್ಕೂ ಮೊದಲು ನ್ಯೂಯಾರ್ಕ್‌ನ ಇಥಾಕಾದ ಕಾರ್ನೆಲ್ ವಿಶ್ವವಿದ್ಯಾನಿಲಯದಲ್ಲಿ 1962ರಲ್ಲಿ ವಾಸ್ತುಶಿಲ್ಪ

ಬೆಂಗಳೂರಿನಲ್ಲಿ 2019ರಲ್ಲಿ ನಡೆದಿದ್ದ 'ಏರೊ ಇಂಡಿಯಾ' ವೈಮಾನಿಕ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದ ರತನ್ ಟಾಟಾ (ಪಿಟಿಐ ಸಂಗ್ರಹ ಚಿತ್ರ)

ವಿಷಯದಲ್ಲಿ ಬಿ.ಎಸ್ ಪದವಿ ಪಡೆದರು. ಆರಂಭದ ದಿನಗಳಲ್ಲಿ ಅಂಗಡಿಯೊಂದರಲ್ಲಿ ಕೆಲಸ ಮಾಡಿದ್ದರು. 1971ರಲ್ಲಿ ನ್ಯಾಷನಲ್ ರೇಡಿಯೊ ಮತ್ತು ಎಲೆಕ್ಟ್ರಾನಿಕ್ಸ್ ಸಂಸ್ಥೆಯ ನಿರ್ದೇಶಕರಾಗಿ ನೇಮಕಗೊಳ್ಳುವ ಮೊದಲು ಟಾಟಾ ಸಮೂಹದ ಹಲವಾರು ವ್ಯವಹಾರಗಳಲ್ಲಿ ಅನುಭವವನ್ನು ಪಡೆದುಕೊಂಡಿದ್ದರು.

ಟಾಟಾ ಸಮೂಹದ ಉಸ್ತುವಾರಿಯನ್ನು ಅರ್ಧ ಶತಮಾನಕ್ಕೂ ಹೆಚ್ಚು ಕಾಲ ವಹಿಸಿದ್ದ ಅವರ ಚಿಕ್ಕಪ್ಪ ಜೆಆರ್‌ಡಿ ಟಾಟಾ ಅವರಿಂದ 1991ರಲ್ಲಿ ವಹಿಸಿಕೊಂಡರು. ಅದಕ್ಕೂ ಮೊದಲು ರತನ್ ಟಾಟಾ ಅವರು ಟಾಟಾ ಇಂಡಸ್ಟ್ರೀಸ್‌ನ ಅಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸಿದ್ದರು.

ಅಂದಾಜು ನೂರು ವರ್ಷಗಳ ಹಿಂದೆ ತಮ್ಮ ಮುತ್ತಜ್ಜ ಸ್ಥಾಪಿಸಿದ್ದ ಈ ಸಮೂಹವನ್ನು 2012ರವರೆಗೆ ಅಧ್ಯಕ್ಷರಾಗಿ ಮುನ್ನಡೆಸಿದರು. 1996ರಲ್ಲಿ ದೂರಸಂಪರ್ಕ ಕಂಪನಿ ಟಾಟಾ ಟೆಲಿಸರ್ವಿಸಸ್ ಅನ್ನು ಸ್ಥಾಪನೆ ಮಾಡಿದರು. ಜತೆಗೆ 2004ರಲ್ಲಿ ಐ.ಟಿ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಕೂಡಾ ಆರಂಭಿಸಿದರು.

ಟಾಟಾ ಸನ್ಸ್ ವೆಬ್‌ಸೈಟ್‌ನಲ್ಲಿನ ಅವರ ವ್ಯಕ್ತಿ ಚಿತ್ರಣದ ಪ್ರಕಾರ, ಮಿತ್ಸುಬಿಷಿ ಕಾರ್ಪೊರೇಷನ್ ಮತ್ತು ಜೆಪಿ ಮೋರ್ಗಾನ್ ಚೇಸ್‌ನ ಅಂತರರಾಷ್ಟ್ರೀಯ ಸಲಹಾ ಮಂಡಳಿಗಳಲ್ಲಿ ಟಾಟಾ ಅವರು ಸೇವೆ ಸಲ್ಲಿಸಿದ್ದಾರೆ.

ಟಾಟಾ ಸಮೂಹದಿಂದ ಜನೋಪಕಾರಿ ಕೆಲಸಗಳಿಗಾಗಿ ಟಾಟಾ ಟ್ರಸ್ಟ್ ಕೂಡ ನಡೆಸುತ್ತಿದ್ದು, ಇದರ ಚಟುವಟಿಕೆಗಳಲ್ಲಿ ರತನ್ ಟಾಟಾ ಅವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಸಂತನಂತೆ ಬದುಕಿದ ಉದ್ಯಮದ ದಿಗ್ಗಜ: ವಿಶ್ವದ ಅತ್ಯಂತ ಪ್ರಭಾವಿ ಕೈಗಾರಿಕೋದ್ಯಮಿಗಳಲ್ಲಿ ಒಬ್ಬರಾಗಿದ್ದರೂ ರತನ್ ಟಾಟಾ ಅವರು ವಿಶ್ವದ ಬಿಲಿಯನೇರ್‌ಗಳ ಪಟ್ಟಿಯಲ್ಲಿ ಕಾಣಿಸಿಕೊಳ್ಳಲು ಪೈಪೋಟಿ ನಡೆಸಲಿಲ್ಲ. 100ಕ್ಕೂ ಹೆಚ್ಚು ದೇಶಗಳಲ್ಲಿ 30 ಕಂಪನಿಗಳನ್ನು ನಿಭಾಯಿಸುತ್ತಿದ್ದರು. ಆಡಂಬರವಿಲ್ಲದ, ಸಂತನಂತಹ ಬದುಕು ನಡೆಸಿದರು.

ರತನ್ ಟಾಟಾ ಅವರು ದೂರದೃಷ್ಟಿಯ ನಾಯಕ, ಸಹಾನುಭೂತಿಯ ಆತ್ಮ ಮತ್ತು ಅಸಾಧಾರಣ ಮನುಷ್ಯ. ಭಾರತದ ಅತ್ಯಂತ ಪ್ರತಿಷ್ಠಿತ ಉದ್ಯಮ ಸಂಸ್ಥೆಗಳಿಗೆ ಸ್ಥಿರ ನಾಯಕತ್ವ ಒದಗಿಸಿದ್ದರು
ನರೇಂದ್ರ ಮೋದಿ, ಪ್ರಧಾನಿ

ಆಧುನಿಕ ಭಾರತದ ಹಾದಿಯನ್ನು ಮರು ವ್ಯಾಖ್ಯಾನಿಸಿದ ಒಬ್ಬ ದಾರ್ಶನಿಕ ಮತ್ತು ಒಬ್ಬ ದೈತ್ಯನನ್ನು ದೇಶವು ಕಳೆದುಕೊಂಡಿದೆ
ಗೌತಮ್ ಅದಾನಿ, ಉದ್ಯಮಿ

ದೇಶವು ತನ್ನ ಅತ್ಯಂತ ಶ್ರೇಷ್ಠ ಮತ್ತು ಸಹೃದಯ ಪುತ್ರರಲ್ಲಿ ಒಬ್ಬನನ್ನು ಕಳೆದುಕೊಂಡಿದೆ
ಮುಖೇಶ್ ಅಂಬಾನಿ, ಉದ್ಯಮಿ

ಲಕ್ಷ ರೂಪಾಯಿಗೆ ಕಾರು ನೀಡಿದ್ದ ರತನ್ ಟಾಟಾ

'ಒಂದು ಲಕ್ಷ ರೂಪಾಯಿ ಬೆಲೆಯ ಕಾರನ್ನು ಮಾರುಕಟ್ಟೆಗೆ ತರುತ್ತೇವೆ. ಸ್ಕೂಟರ್‌ನಲ್ಲಿ ಇಬ್ಬರು–ಮೂವರು ಕುಳಿತು ಹರಸಾಹಸ ಪಡುವ ಭಾರತದ ಪ್ರತಿ ಕುಟುಂಬ ಕೈಗೆಟುಕುವ ಬೆಲೆಯ ಕಾರಿನಲ್ಲಿ ಪ್ರಯಾಣಿಸಬೇಕು' ಎಂದು ರತನ್ ಟಾಟಾ 2003ರಲ್ಲಿ ಘೋಷಿಸಿದ್ದರು.

ಇಡೀ ಕಾರು ತಯಾರಿಕಾ ಉದ್ಯಮ ಜತೆಗೆ ಜನಸಾಮಾನ್ಯರೂ ರತನ್ ಟಾಟಾ ಅವರ ಮಾತನ್ನು ಒಮ್ಮೆಗೆ ನಂಬಿರಲಿಲ್ಲ. ಆಗಿನ ಅವಧಿಯಲ್ಲಿ ಮಾರುಕಟ್ಟೆಯಲ್ಲಿ ಒಂದು ಆಟೊ ಬೆಲೆಯೇ ಒಂದು ಲಕ್ಷದ ಮೇಲಿತ್ತು. ಕೆಲವು ಸ್ಪೋರ್ಟ್ಸ್‌ಬೈಕ್‌ಗಳ ಮಾರಾಟದ ಬೆಲೆ ಒಂದು ಲಕ್ಷದ ಆಸುಪಾಸಿನಲ್ಲಿತ್ತು. 'ಒಂದು ಲಕ್ಷಕ್ಕೆ ಪ್ಲಾಸ್ಟಿಕ್ ಕಾರು ನೀಡಬಹುದಷ್ಟೆ'. 'ಪ್ಲಾಸ್ಟಿಕ್ ಕಾರಿಗೆ ಎಂಜಿನ್ ಬದಲು ಸೈಕಲ್ ಪೆಡಲ್ ಅಳವಡಿಸಿ ನೀಡಬಹುದು' ಎಂಬ ಅಭಿಪ್ರಾಯಗಳು ಕೇಳಿಬಂದಿದ್ದವು.

ಏಕೆಂದರೆ ಆಗ ಭಾರತದ ಮಾರುಕಟ್ಟೆಯಲ್ಲಿ ಇದ್ದ ಅತ್ಯಂತ ಅಗ್ಗದ ಕಾರಿನ ಎಕ್ಸ್‌ಷೋರೂಂ ಬೆಲೆ ₹1.99 ಲಕ್ಷದಷ್ಟಿತ್ತು. ಅಂತಹ ಸನ್ನಿವೇಶದಲ್ಲಿ ತಾವು ನುಡಿದಂತೆಯೇ ಒಂದು ಲಕ್ಷ ಬೆಲೆಗೆ ಟಾಟಾ ನ್ಯಾನೊ ಕಾರನ್ನು ಅವರು ದೇಶದ ಜನರಿಗೆ ನೀಡಿ ಅಚ್ಚರಿ ಮೂಡಿಸಿದ್ದರು. ನ್ಯಾನೊ ಕಾರು ಈಗಲೂ ಭಾರತದ ರಸ್ತೆಗಳಲ್ಲಿ ಓಡಾಡುತ್ತಿವೆ.

ಬಿಬಿಎಂಪಿಯ ಉದ್ಯಾನದಲ್ಲಿ ನಿರ್ಮಿಸಲಾಗಿರುವ ಇಂಗು ಗುಂಡಿ

ಉದ್ಯಾನಗಳಲ್ಲಿ 634 ಇಂಗು ಗುಂಡಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ವಿವಿಧ ಉದ್ಯಾನಗಳಲ್ಲಿ ಒಟ್ಟು 634 ಇಂಗು ಗುಂಡಿಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ಅರಣ್ಯ, ಪರಿಸರ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದ್ದಾರೆ.

ಮಳೆ ನೀರು ಸಂಗ್ರಹಿಸಿ, ಇಂಗಿಸುವ ಮತ್ತು ಅಂತರ್ಜಲ ಮಟ್ಟವನ್ನು ಹೆಚ್ಚಿಸಲು 2025ರ ಮಾರ್ಚ್ ಅಂತ್ಯಕ್ಕೆ ಒಟ್ಟು ಒಂದು ಸಾವಿರ ಇಂಗು ಗುಂಡಿಗಳನ್ನು ನಿರ್ಮಿಸುವ ಗುರಿ ಇದೆ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಪಾಲಿಕೆಯ ವ್ಯಾಪ್ತಿಯಲ್ಲಿ 1,280 ಉದ್ಯಾನಗಳಿವೆ. ಸ್ಥಳಾವಕಾಶ ಆಧರಿಸಿ ಹಂತ ಹಂತವಾಗಿ ಇಂಗು ಗುಂಡಿಗಳನ್ನು ತೋಟಗಾರಿಕೆ ವಿಭಾಗದಿಂದ ನಿರ್ಮಿಸಲಾಗುತ್ತೆ. 12 ಅಡಿ ಆಳ ಹಾಗೂ 5 ಅಡಿ ಅಗಲ ಅಳತೆಯ ಇಂಗು ಗುಂಡಿಗಳನ್ನು ನಿರ್ಮಿಸಲಿದ್ದು, 4 ಸಾವಿರ ಲೀಟರ್ ಮಳೆ ನೀರನ್ನು ಸಂಗ್ರಹವಾಗುವಂತೆ ಮಾಡಲಾಗಿದೆ ಎಂದಿದ್ದಾರೆ.

ವೈಜ್ಞಾನಿಕವಾಗಿ ಇಂಗು ಗುಂಡಿಗಳನ್ನು ನಿರ್ಮಿಸಲಾಗುತ್ತಿದೆ. ನೀರು ಹರಿದು ಹೋಗುವ ಗುಂಡಿಯ ದ್ವಾರಕ್ಕೆ ಕಬ್ಬಿಣದ ಪರದೆ ಅಳವಡಿಸಲಾಗಿದೆ. ಈ ಮೂಲಕ ನೀರಿನಲ್ಲಿ ಕಸ-ಕಡ್ಡಿ ಗುಂಡಿಗೆ ಸೇರುವುದನ್ನು ತಡೆದು ಶೇ 80 ರಷ್ಟು ಪ್ರಮಾಣದ ನೀರು ಇಂಗುಗುಂಡಿಗೆ ಸೇರುವಂತೆ ಮಾಡಲಾಗಿದೆ. ನಾಲ್ಕು ಅಡಿ ಸುತ್ತಳತೆಯ ಸಿಮೆಂಟ್ ರಿಂಗ್ ಅಳವಡಿಸಿದ್ದು, ಸುತ್ತಲೂ ಆಳದಿಂದ ಭೂಮಿಯ ಮೇಲ್ಮೈವರೆಗೆ 40 ಎಂಎಂ ಜಲ್ಲಿಕಲ್ಲು ತುಂಬಲಾಗಿದೆ ಎಂದು ತಿಳಿಸಿದ್ದಾರೆ.

ಇನ್‌ಟ್ರಾಆಪರೇಟಿವ್ ಇಲೆಕ್ಟ್ರಾನ್ ರೇಡಿಯೇಶನ್ ಥೆರಪಿ ಒದಗಿಸುವ ಯಂತ್ರವನ್ನು ಕಾರ್ಯಕ್ರಮದಲ್ಲಿ ಅನಾವರಣ ಮಾಡಲಾಯಿತು. ಡಾ.ಸುಜಾತಾ ರಾಥೋಡ್, ಆಲಿಶಾ ಮೂಪೆನ್, ಡಾ. ಸೋಮಶೇಖರ್ ಎಸ್‌.ಪಿ., ಡಾ.ಎಂ.ಎಸ್‌ ಬೆಳ್ಳಿಯಪ್ಪ, ಫ್ರಾನ್ಸಿಸ್ಕೊ ಝುನೆಟ್ಟಿ ಉಪಸ್ಥಿತರಿದ್ದರು

ಕ್ಯಾನ್ಸರ್ ಚಿಕಿತ್ಸೆಗೆ ಐಒಇಆರ್‌ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾನ್ಸರ್ ಚಿಕಿತ್ಸೆಗೆ ಸಂಬಂಧಿಸಿದಂತೆ ವೈಟ್‌ಫೀಲ್ಡ್‌ನ ಆಸ್ಟರ್ ಆಸ್ಪತ್ರೆಯು 'ಇನ್‌ಟ್ರಾ-ಆಪರೇಟಿವ್ ಇಲೆಕ್ಟ್ರಾನ್ ರೇಡಿಯೇಶನ್ ಥೆರಪಿ' (ಐಒಇಆರ್‌ಟಿ) ಅಳವಡಿಸಿಕೊಂಡಿದೆ.

ಬುಧವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಥೆರಪಿಗೆ ಬಳಸುವ ಯಂತ್ರವನ್ನು ಅನಾವರಣ ಮಾಡಲಾಯಿತು.

ಆಸ್ಟರ್ ಡಿಎಂ ಹೆಲ್ತ್‌ಕೇರ್‌ನ ಉಪ ವ್ಯವಸ್ಥಾಪಕ ನಿರ್ದೇಶಕಿ ಅಲಿಶಾ ಮೂಪೆನ್, 'ಆಸ್ಪತ್ರೆಯ ಕ್ಯಾನ್ಸರ್ ಚಿಕಿತ್ಸಾ ವಿಭಾಗದಲ್ಲಿ ಇನ್‌ಟ್ರಾ-ಆಪರೇಟಿವ್ ಇಲೆಕ್ಟ್ರಾನ್ ರೇಡಿಯೇಶನ್ ಥೆರಪಿಗೆ ಅತ್ಯಾಧುನಿಕ ಯಂತ್ರವನ್ನು ಅಳವಡಿಸಿಕೊಳ್ಳಲಾಗಿದೆ. ಇದರಿಂದ ಶಸ್ತ್ರಚಿಕಿತ್ಸೆ ವೇಳೆ ವಿಕಿರಣ ಚಿಕಿತ್ಸೆಯನ್ನು ನಿಖರವಾಗಿ ಒದಗಿಸಲು ಸಾಧ್ಯವಾಗಲಿದೆ. ದೇಹದ ಮೇಲೆ ವಿಕಿರಣದ ನಕಾರಾತ್ಮಕ ಪ್ರಭಾವವನ್ನು ಕಡಿಮೆ ಮಾಡುತ್ತದೆ. ರೋಗಿಯು ಶೀಘ್ರ ಚೇತರಿಸಿಕೊಳ್ಳಲು ಸಹಕಾರಿಯಾಗಲಿದೆ' ಎಂದರು.

ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ.ಸುಜಾತಾ ರಾಥೋಡ್, 'ಕ್ಯಾನ್ಸರ್ ಚಿಕಿತ್ಸೆಗೆ ಸಂಬಂಧಿಸಿದಂತೆ ಪ್ರತಿ ನಿತ್ಯ ಹೊಸ ಆವಿಷ್ಕಾರಗಳು ನಡೆಯುತ್ತಿವೆ. ನೂತನ ಚಿಕಿತ್ಸಾ ವಿಧಾನಗಳನ್ನು ಅಳವಡಿಸಿಕೊಂಡಲ್ಲಿ ರೋಗಿಗಳಿಗೆ ಗುಣಮಟ್ಟದ ವೈದ್ಯಕೀಯ ಸೇವೆ ಸಾಧ್ಯವಾಗಲಿದೆ. ಕ್ಯಾನ್ಸರ್ ಪ್ರಕರಣಗಳ ನಿರ್ವಹಣೆಗೆ ಅತ್ಯಾಧುನಿಕ ವೈದ್ಯಕೀಯ ಸಾಧನಗಳು ಅಗತ್ಯ' ಎಂದು ತಿಳಿಸಿದರು.

ಆಸ್ಪತ್ರೆಯ ಕ್ಯಾನ್ಸರ್ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಎಂ.ಎಸ್. ಬೆಳ್ಳಿಯಪ್ಪ, 'ಈ ವಿಕಿರಣ ಚಿಕಿತ್ಸೆಯಿಂದ ಅಡ್ಡ ಪರಿಣಾಮಗಳು ಕಡಿಮೆ. ಕ್ಯಾನ್ಸರ್ ಗಡ್ಡೆಯನ್ನು ತೆಗೆದ ತಕ್ಷಣ ವಿಕಿರಣ ತಲುಪಿ, ಕ್ಯಾನ್ಸರ್ ಕೋಶಗಳ ಮರು ಬೆಳವಣಿಗೆಯನ್ನು ತಡೆಯುತ್ತದೆ. ಕಡಿಮೆ ಸಮಯದಲ್ಲಿ ನಿಖರ ಶಸ್ತ್ರಚಿಕಿತ್ಸೆ ಸಾಧ್ಯ' ಎಂದು ಹೇಳಿದರು.

ಜನಸಂಖ್ಯೆ ಆಧಾರಿತ ಕ್ಯಾನ್ಸರ್ ನೋಂದಣಿ ವಿಶ್ಲೇಷಣೆ • ತಂಬಾಕು ಬಳಕೆ, ಜೀವನಶೈಲಿ ಬದಲಾವಣೆ ಕಾರಣ

ಕ್ಯಾನ್ಸರ್: ನಗರದಲ್ಲಿ ವಾರ್ಷಿಕ ಶೇ 1ರಷ್ಟು ಹೆಚ್ಚಳ

• ವರುಣ ಹೆಗಡೆ

ಬೆಂಗಳೂರು: ಬದಲಾದ ಜೀವನ ಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ, ತಂಬಾಕು ಉತ್ಪನ್ನಗಳ ಸೇವನೆ ಸೇರಿ ವಿವಿಧ ಕಾರಣಗಳಿಂದ ನಗರದಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿದ್ದು, ಪುರುಷರು ಹಾಗೂ ಮಹಿಳೆಯರಲ್ಲಿ ವಾರ್ಷಿಕ ಶೇ 1 ರಷ್ಟು ಏರಿಕೆಯಾಗುತ್ತಿದೆ.

ಜನಸಂಖ್ಯೆ ಆಧಾರಿತ ಕ್ಯಾನ್ಸರ್ ನೋಂದಣಿಯ (ಪಿಬಿಸಿಆರ್) ವಿಶ್ಲೇಷಣೆಯಿಂದ ಇದು ದೃಢಪಟ್ಟಿದೆ. ಕ್ಯಾನ್ಸರ್ ದತ್ತಾಂಶಗಳನ್ನು ಸಂಗ್ರಹಿಸಿ, ಹೊಸ ಪ್ರಕರಣಗಳ ಏರಿಳಿತವನ್ನು ಪಿಬಿಸಿಆರ್ ನಿರ್ಧರಿಸುತ್ತಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯಡಿ (ಐಸಿಎಂಆರ್) ಈ ನೋಂದಣಿಯು ಕಾರ್ಯ ನಿರ್ವಹಿಸುತ್ತಿದೆ.

ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಮ್‌ಗಳು, ಚಿಕಿತ್ಸಾಲಯ, ಡಯಾಗ್ನಾಸ್ಟಿಕ್ ಸೆಂಟರ್ ಸೇರಿ ವಿವಿಧ ಮೂಲಗಳಿಂದ ಕ್ಯಾನ್ಸರ್ ಸಂಬಂಧಿತ ಮಾಹಿತಿಗಳನ್ನು ಸಂಗ್ರಹಿಸುತ್ತಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸೇರಿ ಕ್ಯಾನ್ಸರ್ ಚಿಕಿತ್ಸೆಗೆ ಮೀಸಲಾದ ಪ್ರಮುಖ ಆಸ್ಪತ್ರೆಗಳಲ್ಲಿ ವರದಿಯಾದ ಪ್ರಕರಣಗಳೂ ಸೇರಿವೆ. ಈ ಮಾಹಿತಿಗಳನ್ನು ಆಧರಿಸಿ ನಗರದಲ್ಲಿ ಕ್ಯಾನ್ಸರ್ ಪ್ರಕರಣಗಳ ಏರಿಕೆಯನ್ನು ಗುರುತಿಸಲಾಗಿದೆ.

ಪಿಬಿಸಿಆರ್ ಪ್ರಕಾರ ನಗರದಲ್ಲಿ ಪುರುಷರಲ್ಲಿ ಹೆಚ್ಚಾಗಿ ಪ್ರಾಸ್ಟೇಟ್, ಬಾಯಿ, ಜಠರ ಮತ್ತು ಅನ್ನನಾಳದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಸ್ತನ ಮತ್ತು ಗರ್ಭಕಂಠದ, ಗರ್ಭಾಶಯದ ಕ್ಯಾನ್ಸ್ ರ್ಮಹಿಳೆಯರಲ್ಲಿ ಹೆಚ್ಚಾಗಿ ಪತ್ತೆಯಾಗುತ್ತಿದೆ.

ಮಹಿಳೆಯರಲ್ಲೇ ಅಧಿಕ: ವರ್ಷವಾರು ಪುರುಷರು ಹಾಗೂ ಮಹಿಳೆಯರಲ್ಲಿ ವರದಿಯಾಗುತ್ತಿರುವ ಕ್ಯಾನ್ಸರ್ ಪ್ರಕರಣಗಳ ಆಧಾರದಲ್ಲಿ ಈ ವರ್ಷಾಂತ್ಯಕ್ಕೆ ಹಾಗೂ ಮುಂದಿನ ವರ್ಷ ವರದಿಯಾಗುವ ಪ್ರಕರಣಗಳನ್ನು ಪಿಬಿಸಿಆರ್ ಅಂದಾಜಿಸಿದೆ. ಕಳೆದ ವರ್ಷ ನಗರದಲ್ಲಿ 18,562 ಪ್ರಕರಣಗಳು ಹೊಸದಾಗಿ ದೃಢಪಟ್ಟಿದ್ದು, 2025ರ ವೇಳೆಗೆ ಈ ಪ್ರಕರಣಗಳ ಸಂಖ್ಯೆ 20 ಸಾವಿರದ ಗಡಿ ದಾಟಲಿದೆ ಎಂದು ಅಂದಾಜಿಸಿದೆ. ಪುರುಷರಿಗಿಂತ ಮಹಿಳೆಯರಲ್ಲೇ ಕ್ಯಾನ್ಸರ್ ಹೆಚ್ಚು ಕಾಣಿಸಿಕೊಳ್ಳುತ್ತಿದೆ.

'ತಂಬಾಕು ಉತ್ಪನ್ನಗಳ ಸೇವನೆ ಹಾಗೂ ಧೂಮಪಾನವೇ ಕ್ಯಾನ್ಸರ್ ಹೊಸ ಪ್ರಕರಣಗಳ ಏರಿಕೆಗೆ ಪ್ರಮುಖ ಕಾರಣವಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕಿದೆ. ಪ್ರಾಥಮಿಕ ಹಂತದಲ್ಲೇ ಕಾನ್ಸರ್ ಪತ್ತೆಯಾದರೆ ಸೂಕ್ತ ಚಿಕಿತ್ಸೆಯಿಂದ ಗುಣಪಡಿಸಬಹುದಾಗಿದೆ. ತಪಾಸಣೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಜನರೂ ಉತ್ತಮ ಜೀವನಶೈಲಿ, ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಿದೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ವೈದ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.



ರಾಸಾಯನಿಕ ಮಿಶ್ರಿತ ಆಹಾರ ಸೇವನೆಯಿಂದಲೂ ಕ್ಯಾನ್ಸರ್ ಪ್ರಕರಣ ಹೆಚ್ಚುತ್ತಿವೆ. ತಂಬಾಕು ಉತ್ಪನ್ನಗಳ ಸೇವನೆಯಿಂದಲೇ ಹೆಚ್ಚಿನವರು ಕ್ಯಾನ್ಸರ್ ಪೀಡಿತರಾಗುತ್ತಿದ್ದಾರೆ
ಡಾ.ಸಿ.ರಾಮಚಂದ್ರ, ಕ್ಯಾನ್ಸರ್ ತಜ್ಞ

ಮರಣ ಪ್ರಕರಣಗಳು ಏರಿಕೆ

ಪಿಬಿಸಿಆರ್ ಪ್ರಕಾರ ತಡವಾಗಿ ಕ್ಯಾನ್ಸರ್ ಪತ್ತೆ ಹಾಗೂ ಆಸ್ಪತ್ರೆ ದಾಖಲಾತಿಯಲ್ಲಿ ವಿಳಂಬದಿಂದಾಗಿ ಕ್ಯಾನ್ಸರ್ ಮರಣ ಪ್ರಕರಣಗಳೂ ನಗರದಲ್ಲಿ ಏರಿಕೆಯಾಗುತ್ತಿವೆ. 2015ರಲ್ಲಿ ನಗರದಲ್ಲಿ ಕ್ಯಾನ್ಸರ್‌ನಿಂದ 4,027 ಮಂದಿ ಮೃತಪಟ್ಟಿದ್ದರು. 2023ರಲ್ಲಿ ಈ ಸಂಖ್ಯೆ 5,481ಕ್ಕೆ ತಲುಪಿತ್ತು.

2024ರ ಅಂತ್ಯಕ್ಕೆ 5,696 ಹಾಗೂ 2025ರ ಅಂತ್ಯಕ್ಕೆ 5,920ರಷ್ಟು ಸಾವಿನ ಪ್ರಕರಣಗಳು ಸಂಭವಿಸಬಹುದು ಎಂದು ವಿಶ್ಲೇಷಿಸಲಾಗಿದೆ. ಕಳೆದ ವರ್ಷ ವಿವಿಧ ಪ್ರಕಾರದ ಕ್ಯಾನ್ಸರ್‌ನಿಂದ 2,687 ಪುರುಷರು ಮೃತಪಟ್ಟರೆ, 2,793 ಮಹಿಳೆಯರು ಇದೇ ಕಾಯಿಲೆಯಿಂದ ಸಾವಿಗೀಡಾಗಿದ್ದಾರೆ. ಪುರುಷರಿಗಿಂತ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾನ್ಸರ್‌ನಿಂದ ಮೃತಪಡುತ್ತಿದ್ದಾರೆ.

ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯಗೆ ಮನವಿ

ಕೊಳೆಗೇರಿ ನಿವಾಸಿಗಳ ಸ್ಥಳಾಂತರಕ್ಕೆ ವಿರೋಧ

ಕೆ.ಆರ್.ಪುರ: ಪುಲಿಕೇಶಿನಗರ ಕ್ಷೇತ್ರದ ಕೊಳೆಗೇರಿಯ ನಿವಾಸಿಗಳನ್ನು ಮಹದೇವಪುರ ಕ್ಷೇತ್ರದ ಕೊಡಿಗೆಹಳ್ಳಿಗೆ ಸ್ಥಳಾಂತರ ಮಾಡುತ್ತಿರುವುದಕ್ಕೆ, ಸ್ಥಳೀಯರು ವಿರೋಧ ವ್ಯಕ್ತಪಡಿಸಿದರು.

ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ ಅವರು, ಸ್ಥಳ ಪರಿಶೀಲನೆಗಾಗಿ (ಸರ್ವೆ ನಂ 38) ಕೊಡಿಗೆಹಳ್ಳಿಗೆ ಭೇಟಿ ನೀಡಿದ ವೇಳೆ ಸ್ಥಳೀಯ ನಿವಾಸಿಗಳು ಮತ್ತು ಜಮೀನಿನ ಮಾಲೀಕರು, ಕೊಳೆಗೇರಿ ನಿವಾಸಿಗಳನ್ನು ಸ್ಥಳಾಂತರಿಸದಂತೆ ಒತ್ತಾಯಿಸಿದರು.

'ಈ ಜಾಗದಲ್ಲಿ 60 ವರ್ಷಗಳಿಂದ ಬೇಸಾಯ ಮಾಡುತ್ತಿದ್ದೇವೆ. ರೈತರನ್ನು ಒಕ್ಕಲೆಬ್ಬಿಸದೇ, ಬಗರಹುಕುಂ ಕಾಯ್ದೆ ಅನ್ವಯ ಸಾಗುವಳಿ ಪತ್ರ ನೀಡಬೇಕೆಂದು 1992ರಲ್ಲಿ ಹೈಕೋರ್ಟ್ ಆದೇಶ ನೀಡಿದೆ. ಸಾಗುವಳಿ ಪತ್ರ ನೀಡುವುದು ವಿಳಂಬವಾಗಿದೆ. ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ. ಆದ್ದರಿಂದ ಈ ಜಾಗವನ್ನು ಕೊಳೆಗೇರಿ ನಿವಾಸಿಗಳಿಗೆ ನೀಡಬಾರದು' ಎಂದು ಕೊಡಿಗೆಹಳ್ಳಿ ನಿವಾಸಿ ವಿವೇಕ್ ಮನವಿ ಮಾಡಿದರು.

'ಮಹದೇವಪುರ ಕ್ಷೇತ್ರದಲ್ಲಿ ಸರ್ಕಾರ ಈಗಾಗಲೇ ನಿರ್ಮಿಸಿರುವ ಕೊಳೆಗೇರಿಗೆ ಮಂಡಳಿಯು ಮೂಲಸೌಕರ್ಯ ಕಲ್ಪಿಸುವಲ್ಲಿ ವಿಫಲವಾಗಿದೆ. ಇಲ್ಲಿ ಕೊಳೆಗೇರಿ ನಿರ್ಮಿಸುವುದು ಬೇಡ' ಎಂದು ಸ್ಥಳೀಯ ಮುಖಂಡ ಹೂಡಿ ಪಿಳ್ಳಪ್ಪ ಆಗ್ರಹಿಸಿದರು.

ನಂತರ ಮಾತನಾಡಿದ ಅಧ್ಯಕ್ಷ ಪ್ರಸಾದ ಅಬ್ಬಯ್ಯ, 'ಸರ್ಕಾರದಿಂದ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಇಲ್ಲಿ ನಾಲ್ಕು ಎಕರೆ ಜಮೀನು ನೀಡಲಾಗಿದೆ. ಸ್ಥಳ ಪರಿವೀಕ್ಷಣೆ ವೇಳೆಯಲ್ಲಿ, ಇದು ದಲಿತರಿಗೆ ಸೇರಿದ ಭೂಮಿಯಾಗಿದ್ದು, ಪ್ರಕರಣ ನ್ಯಾಯಾಲಯದಲ್ಲಿದೆ ಎಂದು ಗೊತ್ತಾಗಿದೆ. ಯಾವ ಕೋರ್ಟ್‌ನಲ್ಲಿದೆ ಎಂಬುದನ್ನು ತಿಳಿದುಕೊಂಡು ದಾಖಲೆ ಪರಿಶೀಲಿಸುತ್ತೇನೆ' ಎಂದು ತಿಳಿಸಿದರು.

'ಸ್ಥಳೀಯರು ಕೊಳೆಗೇರಿ ನಿರ್ಮಿಸುವುದು ಬೇಡ ಎಂದು ಒತ್ತಾಯಿಸುತ್ತಿದ್ದಾರೆ. ಇಲ್ಲಿನ ಸಮಸ್ಯೆಯನ್ನು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ನಿರ್ಧರಿಸುತ್ತೇನೆ' ಎಂದು ಅವರು ಹೇಳಿದರು.

ಗುತ್ತಿಗೆದಾರರಿಗೆ 3 ತಿಂಗಳ ಬಿಲ್ ಪಾವತಿ

ಸರ್ಕಾರದಿಂದ ₹750 ಕೋಟಿ ಅನುದಾನ ಬಿಡುಗಡೆ; ಬಿಬಿಎಂಪಿಯಿಂದ ₹154 ಕೋಟಿ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2023ರ ಜನವರಿ, ಫೆಬ್ರುವರಿ ಹಾಗೂ ಮಾರ್ಚ್ ತಿಂಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಬಿಲ್‌ಗಳನ್ನು ಪಾವತಿಸಲು ₹154.10 ಕೋಟಿ ಬಿಡುಗಡೆ ಮಾಡಲಾಗಿದೆ.

ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಈ ಮೂರು ತಿಂಗಳ ಬಿಲ್‌ಗಳಲ್ಲಿ ಶೇ 75ರಷ್ಟನ್ನು ಪಾವತಿಸಲು ಮುಖ್ಯ ಆಯುಕ್ತರು ಸೂಚನೆ ನೀಡಿದ್ದಾರೆ. ವಲಯದ ಎಲ್ಲ ಮುಖ್ಯ ಎಂಜಿನಿಯರ್‌ಗಳಿಗೆ ಅಗತ್ಯ ಮೊತ್ತವನ್ನು ಮುಖ್ಯ ಲೆಕ್ಕಾಧಿಕಾರಿಯವರು ಅ. 9ರಂದು ಬಿಡುಗಡೆ ಮಾಡಿದ್ದಾರೆ.

ಸಾಮಾನ್ಯ ಜೇಷ್ಠತೆ ಆಧಾರದಲ್ಲಿ ಬಿಲ್‌ಗಳನ್ನು ಪಾವತಿ ಮಾಡಲು ಸೂಚಿಸಲಾಗಿದೆ.

₹ 750 ಕೋಟಿ: ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆಯಡಿ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕದ ಕಂತನ್ನು ಸರ್ಕಾರ ಬಿಡುಗಡೆ ಮಾಡಿದೆ. ₹750 ಕೋಟಿ ಅನುದಾನ ಬಿಡುಗಡೆಗೆ ಅನುಮತಿ ನೀಡಲಾಗಿದ್ದು, ನಗರಾಭಿವೃದ್ಧಿ ಇಲಾಖೆಯು ಇ-ಪೇಮೆಂಟ್ ಮೂಲಕ ಹಣ ವರ್ಗಾಯಿಸಲು ಸಮ್ಮತಿ ನೀಡಿದೆ.

ನಗರೋತ್ಥಾನ ಯೋಜನೆಯಡಿ ಸರ್ಕಾರದ ಅನುದಾನದಡಿ ನಿರ್ವಹಿಸಲಾಗಿರುವ ಕಾಮಗಾರಿಗಳ ₹2,200 ಕೋಟಿ ಬಿಲ್ ಬಾಕಿ ಇದ್ದು, ಈ ಬಿಲ್‌ಗಳನ್ನು ಸಕಾಲದಲ್ಲಿ ಪಾವತಿಸದಿದ್ದರೆ ಕಾಮಗಾರಿಗಳು ಸ್ಥಗಿತಗೊಳ್ಳುವ ಸಂಭವವಿರುತ್ತದೆ. ಆದ್ದರಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿಗದಿಯಾಗಿರುವ ₹3 ಸಾವಿರ ಕೋಟಿ ಅನುದಾನದಲ್ಲಿ, ₹750 ಕೋಟಿಯನ್ನು ಮೊದಲನೆ ಕಂತಾಗಿ ಜುಲೈ 11ರಂದು ಬಿಡುಗಡೆ ಮಾಡಲಾಗಿತ್ತು. ಅ.8ರಂದು ಎರಡನೇ ಕಂತನ್ನು ಬಿಡುಗಡೆ ಮಾಡಲಾಗಿದೆ.

ಒತ್ತಾಯ: 'ದಸರಾ ಹಬ್ಬವಿರುವುದರಿಂದ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳ ಒತ್ತಾಯದ ಮೇರೆಗೆ ಮೂರು ತಿಂಗಳ ಬಿಲ್ ಪಾವತಿಗೆ ಹಣ ಬಿಡುಗಡೆ ಮಾಡಲಾಗಿದೆ. ಗುರುವಾರದೊಳಗೆ ಎಲ್ಲ ಮೊತ್ತವನ್ನು ಗುತ್ತಿಗೆದಾರರ ಖಾತೆಗೆ ವರ್ಗಾಯಿಸಬೇಕು' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ಒತ್ತಾಯಿಸಿದರು.

'ಬಾಕಿ ಬಿಲ್ ಮೊತ್ತದ ಶೇ 25ರಷ್ಟನ್ನು ಪಾವತಿಸಬೇಕು ಎಂದು ಕಾಮಗಾರಿ ಸ್ಥಗಿತಗೊಳಿಸಿ ಗುತ್ತಿಗೆದಾರರು ಪ್ರತಿಭಟಿಸಿದ್ದರು. 10 ದಿನಗಳಲ್ಲಿ ಬಿಡುಗಡೆ ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದರು. ಇನ್ನೂ ಆಗಿಲ್ಲ. ಶೀಘ್ರವೇ ಬಿಡುಗಡೆ ಮಾಡಲಾಗುತ್ತದೆ ಎಂದು ಮತ್ತೆ ಭರವಸೆ ನೀಡಿದ್ದಾರೆ' ಎಂದು ಹೇಳಿದರು.

ಚಿತ್ರಾವಳಿ

ಜಯಕರ್ನಾಟಕ ಜನಪರ ವೇದಿಕೆಯ 4ನೇ ವಾರ್ಷಿಕೋತ್ಸವದ ಪ್ರಯುಕ್ತ ಐಕೇರ್ ಫೌಂಡೇಶನ್ ಹಾಗೂ ಐಕೇರ್ ಬ್ರಿಗೇಡ್ ಸಂಸ್ಥೆಯ ಸಹಯೋಗದಲ್ಲಿ ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಬಾಯಿಲಹಳ್ಳಿ ಗ್ರಾಮದ ಅನೆಕ್ಸಲೆಂಡಿ ಏರೋ ಪಾರ್ಕ್ ಪ್ರದೇಶದಲ್ಲಿ ಸಾವಿರ ಸಸಿಗಳನ್ನು ನೆಡುವ ಕಾರ್ಯಕ್ರಮಕ್ಕೆ ವೇದಿಕೆಯ ರಾಜ್ಯಘಟಕದ ಅಧ್ಯಕ್ಷ ಜೆ.ಶ್ರೀನಿವಾಸ ಮತ್ತು ವೇದಿಕೆಯ ಯುವ ಸಂಸ್ಥಾಪಕ ಅಧ್ಯಕ್ಷ ಬಿ.ಗುಣರಂಜನ್ ಶೆಟ್ಟಿ ಚಾಲನೆ ನೀಡಿದರು

ಕೇದಾರ್ ಕಲಾಕುಟೀರ, ಸ್ವರಶ್ರೀ ಸಂಗೀತ ಶಾಲೆ ಜಂಟಿಯಾಗಿ ನಗರದಲ್ಲಿ ಆಯೋಜಿಸಿದ್ದ 'ಸ್ವರ ಕಲಾಸಿರಿ' ಸಂಗೀತೋತ್ಸವದಲ್ಲಿ ರಾಜೇಶ್ವರಿ ಹೆಗಡೆ ಅವರಿಗೆ 'ಕೇದಾರ ಸ್ವರಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಸ್ನೇಹಾ ಹಂಪಿಹೊಳಿ ಹಾಗೂ ಪ್ರತಿಭಾ ಹೆಗಡೆ ಉಪಸ್ಥಿತರಿದ್ದರು

ಕೆ.ಆರ್‌.ಪುರದಲ್ಲಿ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಮತ್ತು ಅಖಿಲ ಕರ್ನಾಟಕ ಜಿಲ್ಲಾ ಜನ ಜಾಗೃತಿ ವೇದಿಕೆ ಬೆಂಗಳೂರು ನಗರ ಜಿಲ್ಲಾ ಘಟಕದಿಂದ 'ದುಷ್ಚಮುಕ್ತ ಸಮಾಜ ನಿರ್ಮಾಣಕ್ಕಾಗಿ ಜಾಗೃತಿ' ಜಾಥ ನಡೆಸಲಾಯಿತು. ಯೋಜನೆಯ ಪ್ರಾದೇಶಿಕ ನಿರ್ದೇಶಕ ಎಂ.ಶೀನಪ್ಪ, ಕೆ.ಆರ್‌ ಪುರ ಠಾಣೆಯ ಇನ್‌ಸ್ಪೆಕ್ಟರ್ ರಾಮಮೂರ್ತಿ, ವೆಂಕಟೇಶ್, ಸೋಮಪ್ಪ, ಉಮಾರಬ್ಬ ಕಾರ್ಯಕ್ರಮದಲ್ಲಿ ಹಾಜರಿದ್ದರು

ಪೀಣ್ಯ ದಾಸರಹಳ್ಳಿ ವ್ಯಾಪ್ತಿಯ ಶೆಟ್ಟಿಹಳ್ಳಿ ವಾರ್ಡ್‌ನಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ ಮಹಾಸಂಪರ್ಕ ಕಾರ್ಯಕ್ರಮಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಚಾಲನೆ ನೀಡಿದರು. ಬಿಜೆಪಿಯ ಶೆಟ್ಟಿಹಳ್ಳಿ ವಾರ್ಡ್ ಅಧ್ಯಕ್ಷ ಬಿ.ಸುರೇಶ್, ಶಾಸಕ ಎಸ್‌ ಮುನಿರಾಜು, ಮಂಡಲ ಅಧ್ಯಕ್ಷ ಸೋಮಶೇಖರ್ ಮತ್ತು ಮಹಿಳಾ ಕಾರ್ಯಕರ್ತರು ಈ ಸಂದರ್ಭದಲ್ಲಿ ಹಾಜರಿದ್ದರು

ಬಿಬಿಎಂಪಿ ಅಧಿಕಾರಿಗಳಿಗೆ ಲೋಕಾಯುಕ್ತ ತಾಕೀತು

'ನೆಪ ಹೇಳದೆ ಕಸ ವಿಲೇವಾರಿ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯಲ್ಲಿ ಕಸ ನಿರ್ವಹಣೆ ಸಂಬಂಧ ಅಧಿಕಾರಿಗಳ ವಿಚಾರಣೆ ನಡೆಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು, 'ಕಸ ನಿರ್ವಹಣೆ ಸಮಸ್ಯೆ ನಿವಾರಣೆಗೆ ತಕ್ಷಣವೇ ಕ್ರಮ ತೆಗೆದುಕೊಳ್ಳಿ' ಎಂದು ಸೂಚಿಸಿದ್ದಾರೆ.

ಕಸ ನಿರ್ವಹಣೆಯಲ್ಲಿನ ಲೋಪ ಮತ್ತು ನ್ಯೂನತೆಗಳ ಸಂಬಂಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದ ಲೋಕಾಯುಕ್ತರು, ಬಿಬಿಎಂಪಿ ಮತ್ತು ಬಿಡಿಎ ಅಧಿಕಾರಿಗಳನ್ನು ವಿಚಾರಣೆಗೆ ಕರೆದಿದ್ದರು. ಬುಧವಾರ ನಡೆದ ವಿಚಾರಣೆಯಲ್ಲಿ ಬಿಬಿಎಂಪಿಯ ರಾಜರಾಜೇಶ್ವರಿ ನಗರ ವಲಯದ ಅಧಿಕಾರಿಗಳು ಮತ್ತು ಬಿಡಿಎ ಆಯುಕ್ತ ಮತ್ತು ಪಶ್ಚಿಮ ವಲಯದ ಕಾರ್ಯನಿರ್ವಾಹಕ ಎಂಜಿನಿಯರ್ ಹಾಜರಾಗಿದ್ದರು.

ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಕಸ ನಿರ್ವಹಣೆಗೆ ಬಿಡಿಎ ಹಣ ನೀಡುತ್ತಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ದೂರಿದರು. ಆಗ ಬಿಡಿಎ ಅಧಿಕಾರಿಗಳು, '₹10 ಲಕ್ಷ ನೀಡಲಾಗಿದೆ. ಇನ್ನೂ ₹51 ಲಕ್ಷ ನೀಡಬೇಕಿದೆ. ಅದನ್ನು ಶೀಘ್ರವೇ ವರ್ಗಾಯಿಸುತ್ತೇವೆ' ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣಕ್ಕೆ ವಾಯು ವಿಹಾರಕ್ಕೆ ಬರುವ ಜನರು ಕಸ ಎಸೆಯುತ್ತಿದ್ದಾರೆ ಎಂಬುದನ್ನು ಅಧಿಕಾರಿಗಳು ಹೇಳಿದರು. ಈ ಬಗ್ಗೆ ವಿ.ವಿ. ಕುಲಪತಿಗೆ ಪತ್ರ ಬರೆದು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲು ಹೇಳಿ ಎಂದು ಲೋಕಾಯುಕ್ತರು ಸೂಚಿಸಿದರು.

ಬೀದಿನಾಯಿಗಳ ಹಾವಳಿ ತಡೆಗಟ್ಟಲು ಪಶುಸಂಗೋಪನಾ ವಿಭಾಗವು ಇನ್ನಷ್ಟು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ಸಂತಾನಶಕ್ತಿ ಹರಣ ಚಿಕಿತ್ಸೆಯನ್ನು ಹೆಚ್ಚು ನಡೆಸಬೇಕು. ಕಸ ನಿರ್ವಹಣೆಗೆ ಅಗತ್ಯವಿರುವ ಆಟೊ–ಟಿಪ್ಪರ್‌ಗಳು ಮತ್ತು ಇತರ ಸಲಕರಣೆಗಳನ್ನು ಖರೀದಿಸಿ. ಕಸದಿಂದ ಜನರಿಗೆ ತೊಂದರೆಯಾಗುವುದನ್ನು ತಪ್ಪಿಸಿ ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯಾಂಶಗಳು

- **ಬಿಬಿಎಂಪಿಗೆ ಹಣ ವರ್ಗಾವಣೆ ಮಾಡಲು ಬಿಡಿಎ ಅಧಿಕಾರಿಗಳಿಗೆ ಸೂಚನೆ**
- **ಅಗತ್ಯ ಸಲಕರಣೆ, ವಾಹನ ಖರೀದಿಸಲು ಬಿಬಿಎಂಪಿ ಅಧಿಕಾರಿಗಳಿಗೆ ತಾಕೀತು**
- **ಡಿಸೆಂಬರ್ 30ಕ್ಕೆ ಕಾರ್ಯಪಾಲನ ವರದಿ ಸಲ್ಲಿಸಲು ಗಡುವು**

₹165 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಬಿಬಿಎಂಪಿ ವ್ಯಾಪ್ತಿಯಲ್ಲಿರುವಂತೆಯೇ ಯಶವಂತಪುರ ಕ್ಷೇತ್ರದ ಗ್ರಾಮೀಣ ಭಾಗದಲ್ಲಿಯೂ ಒಳಚರಂಡಿ, ಹಲವು ಭಾಗಗಳಿಗೂ ಕಾವೇರಿ ನೀರು ಪೂರೈಕೆ ಸೇರಿದಂತೆ ಹಲವು ಮೂಲಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ' ಎಂದು ಶಾಸಕ ಎಸ್‌.ಟಿ. ಸೋಮಶೇಖರ್ ಅವರು ಹೇಳಿದರು.

ಕೊಡಿಗೆಹಳ್ಳಿ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಒಳಚರಂಡಿ ಕಾಮಗಾರಿಗೆ ಚಾಲನೆ ನೀಡಿ, ಸರ್ಕಾರಿ ಶಾಲೆಗಳ ಕಟ್ಟಡ, ಅಂಗನವಾಡಿ ಕಟ್ಟಡ ಉದ್ಘಾಟಿಸಿ, ಶಾಲಾ ಕೊಠಡಿ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದ ಅವರು ಮಾತನಾಡಿದರು.

'ಕ್ಷೇತ್ರದ ಹಳ್ಳಿಗಳಿಗೆ ಮಂಚನಬೆಲೆ ಜಲಾಶಯದಿಂದ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು, ವಿವಿಧೆಡೆ ಉದ್ಯಾನ, ಆಟದ ಮೈದಾನ ನಿರ್ಮಾಣಕ್ಕೂ ಯೋಜನೆ ರೂಪಿಸಲಾಗಿದೆ. ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗಾಗಿ ₹100 ಕೋಟಿ ಅನುದಾನಕ್ಕೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ' ಎಂದರು.

ರಾಮೋಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎಚ್.ಪ್ರಭು, ಮಾಜಿ ಅಧ್ಯಕ್ಷ ವಿ.ವೇಣುಗೋಪಾಲ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಕೃಷ್ಣಪ್ಪ, ಚಳ್ಳಘಟ್ಟ ಮಂಜುನಾಥ್, ಚೇತನ್ ಗೌಡ, ಕೊಡಿಗೆಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ವಿನೋದ ನರಸಿಂಹಮೂರ್ತಿ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಶಾಸಕ ಎಸ್‌.ಟಿ. ಸೋಮಶೇಖರ್ ಅವರು ದೇವಮಾಚೋಹಳ್ಳಿಯಲ್ಲಿ ಅಂಗನವಾಡಿ ಕಟ್ಟಡವನ್ನು ಉದ್ಘಾಟಿಸಿದರು

ಅಹೋಮ್ ಸಂಸ್ಕೃತಿಯ ದಫನ ದಿಣ್ಣೆಗಳು

ಯು.ಟಿ. ಆಯಿಷಾ ಫರ್ಝಾನ

ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಭಾರತದ 43ನೇ ತಾಣ

ಅಸ್ಸಾಂನ ಚೊರಾಯ್‌ದೇವ್ (Choraideo)ನಲ್ಲಿರುವ ದಫನ ದಿಣ್ಣೆಗಳು ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರ್ಪಡೆಯಾಗಿದೆ.

ಭಾರತವು ಮೊದಲ ಬಾರಿಗೆ ಜುಲೈ 21-23, 2024ರ ಅವಧಿಯಲ್ಲಿ ವಿಶ್ವ ಪರಂಪರೆಯ ಸಮಿತಿಯ ಸಭೆಯ 46ನೇ ಅಧಿವೇಶನದ ಆತಿಥ್ಯ ವಹಿಸಿತ್ತು. ಅದು ವಿಶ್ವದಾದ್ಯಂತದ ಸಾಂಸ್ಕೃತಿಕ, ನೈಸರ್ಗಿಕ ಮತ್ತು ಸಮ್ಮಿಶ್ರ ತಾಣಗಳನ್ನು ಸಂರಕ್ಷಿಸುವುದರ ಕುರಿತು ಚರ್ಚಿಸಿ ಸಹಕಾರವನ್ನು ಉತ್ತೇಜಿಸುವ ಸಲುವಾಗಿ ವಿವಿಧ ದೇಶಗಳ ಪ್ರತಿನಿಧಿಗಳನ್ನು ಜೊತೆಗೆ ತರುವ ಉದ್ದೇಶವನ್ನು ಹೊಂದಿತ್ತು.

2024ರಲ್ಲಿ ನಡೆದ 46ನೇ ಅಧಿವೇಶನದಲ್ಲಿ 19 ಸಾಂಸ್ಕೃತಿಕ ತಾಣಗಳು, 4 ನೈಸರ್ಗಿಕ ತಾಣಗಳು, 2 ಸಮ್ಮಿಶ್ರ ತಾಣಗಳು ಮತ್ತು 2 ಪ್ರಮುಖ ಗಡಿಪ್ರದೇಶ ಸ್ಥಳಗಳು ಸೇರಿದಂತೆ ಒಟ್ಟು 27 ನಾಮಕರಣಗಳನ್ನು ಸಮಿತಿಯು ಪರಿಶೀಲಿಸಿತು.

ಇವುಗಳಲ್ಲಿ ಭಾರತದ ಮೋಯ್‌ಡಾಮ್ ಅಂದರೆ ಅಹೋಮ್ ವಂಶದ ದಫನ ವ್ಯವಸ್ಥೆಯ ದಫನ ದಿಣ್ಣೆಗಳನ್ನು ಸಾಂಸ್ಕೃತಿಕ ಆಸ್ತಿ ವಿಭಾಗದಲ್ಲಿ ಮೌಲ್ಯಮಾಪನ ಮಾಡಿ ಈ ಪಟ್ಟಿಗೆ ಸೇರಿಸಿಕೊಳ್ಳಲಾಯಿತು.

ಚೊರಾಯ್‌ದೇವ್ ದಫನ ದಿಣ್ಣೆಗಳು : ಥಾಯ್-ಅಹೋಮ್ ರಾಜವಂಶದ ದಫನ ಸಂಪ್ರದಾಯದ ಇಣುಕುನೋಟಗಳು

ಥಾಯ್-ಅಹೋಮ್ ಕುಲದವರು ಕ್ರಿ.ಶ 12ನೇ ಮತ್ತು 18ನೇ ಶತಮಾನಗಳ ನಡುವೆ ಚೀನಾದಿಂದ ವಲಸೆ ಬಂದು ಬ್ರಹ್ಮಪುತ್ರಾ ನದಿಯ ಈಚೆಗಿನ ಕಣಿವೆಗಳಲ್ಲಿ ವಿವಿಧ ಸ್ಥಳಗಳಲ್ಲಿ ತಮ್ಮ ರಾಜಧಾನಿಗಳನ್ನು ಸ್ಥಾಪಿಸಿದರು. ಚೌ-ಲುಂಗ್ ಸಿಯೂ-ಕಾ-ಫಾ ಎಂಬ ರಾಜಕುಮಾರ 1228ರಲ್ಲಿ ಭಾರತವನ್ನು ಪ್ರವೇಶಿಸಿ- ಸ್ಥಳೀಯ ಬರಾಹಿ ಬುಡಕಟ್ಟನ್ನು ಸ್ಥಳಾಂತರಗೊಳಿಸಿ ಪಟ್‌ಕೈ ಬೆಟ್ಟಗಳ ಕೆಳಗಿನ ಚಿಕ್ಕ ಬೆಟ್ಟಗಳಲ್ಲಿ 1253ರಲ್ಲಿ ಮೊದಲ ಅಹೋಮ್ ರಾಜಧಾನಿಯನ್ನು ಸ್ಥಾಪಿಸಿದ.

ಈ ರಾಜಧಾನಿಯನ್ನು ಮೊದಲಿಗೆ ಚೆ-ರಾಯ್-ದೊಯ್ ಎಂದು ಕರೆಯಲಾಗುತ್ತಿತ್ತು. ಇದರ ಅರ್ಥವೆಂದರೆ, ಪರ್ವತಗಳಿಗಿಂತಲೂ ಮೇಲಿರುವ ಪ್ರಜ್ವಲಿಸುವ ನಗರ. ಇದನ್ನು ಧಾರ್ಮಿಕ ವಿಧಿಗಳ ಮೂಲಕ ಪವಿತ್ರಪ್ರದೇಶ ಎಂದು ಘೋಷಿಸಲಾಯಿತು. ನಂತರ ರಾಜಧಾನಿಯನ್ನು ಮತ್ತೆ ಮತ್ತೆ ಬದಲಿಸಲಾದರೂ, ಮೂಲತಃ ಚೆ-ರಾಯ್-ದೊಯ್ ಎಂದು ಕರೆಯಲಾಗುತ್ತಿದ್ದ ಅದು ಈಗ ಚೊರಾಯ್‌ದೇವ್ ಎಂಬ ಹೆಸರನ್ನು ಪಡೆದುಕೊಂಡಿದ್ದರೂ, ಅಹೋಮ್‌ಗಳಿಗೆ ಅತ್ಯಂತ ಪವಿತ್ರ ಸ್ಥಳ ಎಂದು ತನ್ನ ಮಹತ್ವವನ್ನು ಇಂದಿಗೂ ಉಳಿಸಿಕೊಂಡಿದೆ.

ಇಲ್ಲಿಯೇ ಮೃತಪಟ್ಟ ರಾಜಮನೆತನದ ಜನರ ಆತ್ಮಗಳು ಜೀವನೋತ್ತರ ಬದುಕಿನ ಸಲುವಾಗಿ ಮೇಲೇರಿವೆ ಎಂದು ನಂಬಲಾಗುತ್ತಿದೆ.

ಈ ವಿಶಿಷ್ಟವಾದ ದಫನ ಪರಂಪರೆ 600 ವರ್ಷಗಳ ಕಾಲ ಮುಂದುವರಿಯಿತಾದರೂ ಬಳಿಕ ಹಲವು ತಾಯ್-ಅಹೋಮ್ ವಂಶಜರು ಬೌದ್ಧ ಧರ್ಮಕ್ಕೆ ಮತಾಂತರಗೊಂಡರು ಮತ್ತು ಉಳಿದವರು ಹಿಂದೂ ಶವಸಂಸ್ಕಾರ ಪದ್ಧತಿಯನ್ನು ಅನುಸರಿಸಲು ಆರಂಭಿಸಿದರು.

ನಿರ್ಮಾಣ ಮತ್ತು ಗುಣಲಕ್ಷಣಗಳು:

ದಫನ ದಿಣ್ಣೆಗಳು ಅಥವಾ ಮೊಯ್‌ಡಮ್‌ಗಳು ಹೆಚ್ಚಾಗಿ ಎರಡು ಸ್ತರಗಳನ್ನು ಹೊಂದಿರುವ ಕಮಾನು ಆಕಾರದ ದಫನ ಕೋಣೆಗಳು. ಇವುಗಳನ್ನು ಒಂದು ಕಮಾನು ಆಕಾರದ ದಾರಿಯ ಮೂಲಕ ಪ್ರವೇಶಿಸಬೇಕು. ಈ ರಚನೆಗಳನ್ನು ಅರ್ಧಗೋಳಾಕಾರದ ದಿಣ್ಣೆಗಳ ಒಳಗೆ ಇಟ್ಟಿಗೆ ಮತ್ತು ಮಣ್ಣಿನಿಂದ ಕಟ್ಟಲಾಗಿದೆ. ಬಹುಭುಜಾಕೃತಿಯ ತಳಪಾಯದ ಗೋಡೆಗಳ ಮೂಲಕ ಬಲವಾಗಿ ನಿರ್ಮಿಸಲಾಗುತ್ತದೆ. ಸಾಮಾನ್ಯವಾಗಿ ಪಶ್ಚಿಮದ ಕಡೆಗೆ ಇರುವ ಕಮಾನು ದ್ವಾರ ಮತ್ತು ಹಾದಿಯು ಇವುಗಳ ಒಂದು ಸಮಾನ ಗುಣಲಕ್ಷಣವಾಗಿದೆ.

ಸಮಯ ಕಳೆದಂತೆಲ್ಲಾ ಇವುಗಳ ಮೇಲೆ ಹುಲ್ಲು, ಗಿಡಗಂಟಿಗಳು ಬೆಳೆದು ಇಡೀ ಪರಿಸರವೇ ಉಬ್ಬುತಗ್ಗಿನ ದಿಣ್ಣೆಗಳನ್ನು ನೆನಪಿಸುವ ಒಂದು ನೋಟವನ್ನು ಒದಗಿಸುತ್ತಿತ್ತು. ಆದರೆ ಉತ್ಖನನಗಳು, ಪ್ರತಿಯೊಂದು ದಫನ ಕೋಣೆಯು ಮಧ್ಯದಲ್ಲಿ ಎತ್ತರಿಸಲ್ಪಟ್ಟ ಒಂದು ವೇದಿಕೆಯನ್ನು ಹೊಂದಿದ್ದು, ಸತ್ತವರ ದೇಹಗಳನ್ನು ಅಲ್ಲಿ ಇರಿಸಲಾಗುತ್ತಿತ್ತು ಎಂಬುದನ್ನು ತಿಳಿಸಿಕೊಟ್ಟಿದೆ. ಮೃತಪಟ್ಟ ವ್ಯಕ್ತಿಗೆ ಸಂಬಂಧಿಸಿದ- ರಾಜ ಲಾಂಛನ, ಮರ ಅಥವಾ ದಂತದಿಂದ ಮಾಡಲಾದ ವಸ್ತುಗಳು ಚಿನ್ನದ ಪದಕಗಳು, ಪಿಂಗಾಣಿ ವಸ್ತುಗಳು, ಮಾನವ ಅವಶೇಷಗಳನ್ನು ಕೂಡಾ (ನಿರ್ದಿಷ್ಟವಾಗಿ, ಲುಕ್- ಕಾ-ಕುನ್ ಕುಲಕ್ಕೆ ಸೇರಿದವರದ್ದು) ರಾಜನ ಶವದ ಅಕ್ಕಪಕ್ಕದಲ್ಲಿ ಇರಿಸಲಾಗುತ್ತಿತ್ತು.

ಬಳಸಲಾದ ವಸ್ತುಗಳು ಮತ್ತು ನಿರ್ಮಾಣ ತಂತ್ರಗಳು:

ಕ್ರಿ.ಶ. 13ರಿಂದ 17ನೇ ಶತಮಾನದ ವರೆಗೆ ಮೊಯ್‌ಡಮ್‌ಗಳ ನಿರ್ಮಾಣಕ್ಕೆ ಮುಖ್ಯವಾಗಿ ಮರವನ್ನೇ ಬಳಸಲಾಗುತ್ತಿತ್ತು. ಆದರೆ 18ನೇ ಶತಮಾನದ ಬಳಿಕ ಒಳಗಿನ ಕೋಣೆಗಳಿಗೆ ಕಲ್ಲು ಮತ್ತು ಸುಟ್ಟ ಇಟ್ಟಿಗೆಗಳನ್ನು ಹೆಚ್ಚಾಗಿ ಬಳಸಲಾಯಿತು.

ಅಹೋಮ್‌ಗಳ ಧಾರ್ಮಿಕ ಗ್ರಂಥವಾದ ಚಂಗ್ರುಂಗ್ ಫುಕನ್ ವಿವರಿಸುವಂತೆ ಈ ದಫನ ದಿಣ್ಣೆಗಳ ನಿರ್ಮಾಣದಲ್ಲಿ ಇಟ್ಟಿಗೆ, ಕಲ್ಲುಗಳು, ಕರಿ ಧಾನ್ಯಗಳು (ಉದ್ದಿನಂತವು), ಕಬ್ಬಿನ ಮಡಿ (ಮೊಲಾಸಿಸ್ ರೀತಿಯದ್ದು), ಬಾತುಕೋಳಿ ಮೊಟ್ಟೆಗಳು, ಬರಲಿ ಮೀನುಗಳು, ಸುಣ್ಣ (ಸುಣ್ಣದ ಕಲ್ಲುಗಳು ಮತ್ತು ಬಸವನ ಹುಳುವಿನ ಚಿಪ್ಪು) ಮತ್ತು ವಿವಿಧ ಗಾತ್ರಗಳ ಬಂಡೆಗಳು ಹಾಗೂ ಒಡೆದ ಕಲ್ಲುಗಳೂ ಸೇರಿದಂತೆ ಹಲವು ರೀತಿಯ ನಿರ್ಮಾಣ ಸಾಮಗ್ರಿಗಳನ್ನು ಬಳಸಲಾಗುತ್ತಿತ್ತು. ಆದರೆ ಬಾಹ್ಯ ರಚನೆಯನ್ನು ಮಾತ್ರ ದೊಡ್ಡ ಗಾತ್ರದ ಕಲ್ಲಿನ ಚಪ್ಪಡಿಗಳನ್ನು ಬಳಸಿ ಮಾಡಲಾಗುತ್ತಿತ್ತು.

ನಾಶವಾದ ಒಂದು ಅಪರೂಪದ ಸಂಸ್ಕೃತಿ

ಚೊರಾಯ್‌ದೇವ್ ಮೊಯ್‌ಡಮ್‌ಗಳು ಈಗ ತಾಯ್- ಅಹೋಮ್ ಸಂಸ್ಕೃತಿಯ ದಫನ ಕ್ರಿಯೆಗಳಲ್ಲಿ ಒಂದು ದೊಡ್ಡ ಮತ್ತು ಚೆನ್ನಾಗಿ ಕಾಪಿಡಲಾದ ಪಾರಂಪರಿಕ ಸಾಕ್ಷ್ಯವಾಗಿದೆ. ಈ ಪದ್ಧತಿಯು ನಂತರದಲ್ಲಿ ಅಲ್ಲಿನ ಅರಸರು ಹಿಂದೂ ಧರ್ಮ ಅಥವಾ ಬೌದ್ಧ ಧರ್ಮಕ್ಕೆ ಮತಾಂತರ ಆದ ಬಳಿಕ ನಶಿಸಿಹೋಯಿತು. ಈ ಮೊಯ್‌ಡಮ್‌ಗಳ ಸಂರಚನೆ, ವಿನ್ಯಾಸಗಳನ್ನು ಫುಕನ್ ಗ್ರಂಥಗಳಲ್ಲಿ ವಿವರಿಸಲಾಗಿದ್ದು, ಅವು ತಾಯ್ ಅಹೋಮ್ ಜನರ- ಜೀವನ, ಮರಣ ಮತ್ತು ಜೀವನೋತ್ತರ ಬದುಕು, ತಮ್ಮ ದೈವಿಕ ರಾಜರಿಗೆ ಸೂಕ್ತವಾದ ದಫನ ಭೂಮಿಗಳ ನಿರ್ಮಾಣ ಇತ್ಯಾದಿಗಳ ಕುರಿತು ನಂಬಿಕೆಗಳನ್ನು ಪ್ರತಿಫಲಿಸುತ್ತವೆ.

20ನೇ ಶತಮಾನದ ಆರಂಭದಲ್ಲಿ ನಿಧಿಕಳ್ಳರ ಲೂಟಿಕೃತ್ಯಗಳು ಈ ಸಮಾಧಿಗಳಿಗೆ ಹಾನಿ ಮಾಡಿದ್ದರೂ ಅವುಗಳ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ವ್ಯವಸ್ಥಿತವಾಗಿ ಪುನರುಜ್ಜೀವನಗೊಳಿಸಲಾಗಿದೆ.

ಚೊರಾಯ್‌ದೇವ್‌ನಲ್ಲಿರುವ ಮೊಯ್‌ಡಮ್‌ಗಳನ್ನು ತಮ್ಮ ವಿಧಿವಿಧಾನಗಳು ಮತ್ತು ಸ್ಮಾರಕ ರೂಪಗಳ ಮೂಲಕ ಪುರಾತನ ಚೀನಾದ ರಾಜಮನೆತನಗಳ ದಫನಭೂಮಿ ಮತ್ತು ಈಜಿಪ್ಟಿನ ಪಿರಾಮಿಡ್‌ಗಳಿಗೆ ಹೋಲಿಸಬಹುದು .ಅಹೋಮ್ ರಾಜಧಾನಿಯು ದಕ್ಷಿಣ ಮತ್ತು ಪೂರ್ವಕ್ಕೆ ಸ್ಥಳಾಂತರಗೊಳ್ಳಲು ಆರಂಭವಾದಂತೆಲ್ಲಾ, ಉತ್ತರ ವಿಯೆಟ್ನಾಂ, ಲಾಓಸ್, ಥಾಯ್ಲೆಂಡ್, ಉತ್ತರ ಬರ್ಮಾ, ದಕ್ಷಿಣ ಚೀನಾ ಮತ್ತು ಈಶಾನ್ಯ ಭಾರತದ ಹಲವೆಡೆ ಇಂತದ್ದೇ ದಫನ ರಚನೆಗಳು ಕಾಣಿಸಿಕೊಳ್ಳಲು ಆರಂಭಿಸಿದವು.

ಚೊರಾಯ್‌ದೇವ್‌ನ ಮೊಯ್‌ಡಮ್‌ಗಳು ತಮ್ಮ ಗಾತ್ರ, ನಿಭಿಡತೆ ಮತ್ತು ತಾಯ್ ಅಹೋಮ್ ಸಂಸ್ಕೃತಿಯಲ್ಲಿ ಅವು ಹೊಂದಿರುವ ಅತ್ಯಂತ ಪವಿತ್ರ ಸ್ಥಾನಗಳಿಂದಾಗಿ ಎದ್ದು ಕಾಣುತ್ತವೆ. ಚೊರಾಯ್‌ದೇವ್ ಮೊಯ್‌ಡಮ್‌ಗಳು ತಾಯ್ ಅಹೋಮ್ ಪರಂಪರೆಯ ವಿಶಿಷ್ಟವಾದ ದಫನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಅವು ಅದರ ಧಾರ್ಮಿಕ ನಂಬಿಕೆಗಳು ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ಕಾಪಿಡುತ್ತವೆ. ಅವುಗಳ ಸಂರಕ್ಷಣೆ ಮತ್ತು ಅಧ್ಯಯನಗಳು ತಾಯ್ ಅಹೋಮ್ ನಾಗರಿಕತೆ ಮತ್ತು ಅದರ ಐತಿಹಾಸಿಕ ಸಂದರ್ಭವನ್ನು ಕುರಿತು ತಿಳಿದುಕೊಳ್ಳಲು ಅಮೂಲ್ಯ ಒಳನೋಟಗಳನ್ನು ಒದಗಿಸುತ್ತವೆ. ❖

ಬಹು ಆಯ್ಕೆಯ ಪ್ರಶ್ನೆಗಳು

1. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ದಿ ರಿಮ್ ಆಫ್ ದಿ ಪೆಸಿಫಿಕ್ ಸಮರಾಭ್ಯಾಸ (RIMPAC) ವಿಶ್ವದ ಅತಿದೊಡ್ಡ ಅಂತರರಾಷ್ಟ್ರೀಯ ಕಡಲ ಯುದ್ಧ ಸಮರಾಭ್ಯಾಸವಾಗಿದೆ.

ಬಿ. ಭಾರತೀಯ ನೌಕಾಪಡೆಯು ಪೂರ್ವ ಕರಾವಳಿಯಲ್ಲಿ ಪೂರ್ವಿ ಲೆಹರ್ ಸಮರಾಭ್ಯಾಸವನ್ನು ನಡೆಸುತ್ತದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

2. ಭಾರತೀಯ ನೌಕಾಪಡೆಯ ದಿನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಪ್ರತಿ ವರ್ಷ ಡಿಸೆಂಬರ್ 14 ರಂದು ಭಾರತೀಯ ನೌಕಾಪಡೆಯ ದಿನವನ್ನು ಆಚರಿಸಲಾಗುತ್ತದೆ.

ಬಿ. 1971 ರಲ್ಲಿ ಇಂಡೋ-ಪಾಕಿಸ್ತಾನ ಯುದ್ಧದ ಸಮಯದಲ್ಲಿ ನಡೆಸಿದ ಆಪರೇಷನ್ ಟ್ರೈಡೆಂಟ್ ನಲ್ಲಿ ಭಾರತೀಯ ನೌಕಾಪಡೆಯ ಪಾತ್ರವನ್ನು ಗೌರವಿಸಲು ಈ ದಿನವನ್ನು ಆಚರಿಸಲಾಗುತ್ತದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಬಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಐ.ಎನ್.ಎಸ್ ಶಾತವಾಹನ ತರಬೇತಿ ಕೇಂದ್ರ ಆಂಧ್ರಪ್ರದೇಶ ವಿಶಾಖಪಟ್ಟಣಂನಲ್ಲಿದೆ.

ಬಿ. ಐ.ಎನ್.ಎಸ್ ಕದಂಬ ನೌಕಾನೆಲೆಯು ಕರ್ನಾಟಕದ ಕಾರವಾರದಲ್ಲಿದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

4. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಮಾಂಟ್ರಿಯಲ್ ಪ್ರೋಟೋಕಾಲ್ ನ ನೆನಪಿಗಾಗಿ 16 ಸೆಪ್ಟೆಂಬರ್ ರಂದು ವಿಶ್ವ ಓಝೋನ್ ದಿನವನ್ನು ಆಚರಿಸಲಾಗುತ್ತದೆ.

ಬಿ. 2024 ರ ವಿಶ್ವ ಓಝೋನ್ ದಿನದ ಥೀಮ್, "ಮಾಂಟ್ರಿಯಲ್ಪ್ರೋಟೋಕಾಲ್: ಅಡ್ವಾನ್ಸಿಂಗ್ ಕ್ಲೈಮೇಟ್ ಆಕ್ಷನ್" ಆಗಿದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಮಾಂಟ್ರಿಯಲ್ ಪ್ರೋಟೋಕಾಲ್ ಅನ್ನು 16 ಸೆಪ್ಟೆಂಬರ್ 1987 ರಂದು ಸಹಿ ಮಾಡಲಾಯಿತು.

ಬಿ. ಓಝೋನ್-ಡಿಪ್ಲೀಟಿಂಗ್ ವಸ್ತುಗಳು (ODS) ಎಂದು ಕರೆಯಲ್ಪಡುವ ಮಾನವ ನಿರ್ಮಿತ ರಾಸಾಯನಿಕಗಳ ಉತ್ಪಾದನೆ ಮತ್ತು ಬಳಕೆಯನ್ನು ಮಾಂಟ್ರಿಯಲ್ ಪ್ರೋಟೋಕಾಲ್ ನಿಯಂತ್ರಿಸುತ್ತದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

6 ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಓಝೋನ್ ಪದರಿನ ರಕ್ಷಣೆಗಾಗಿ ಇರುವ ವಿಯೆನ್ನಾ ಸಮಾವೇಶವು 1988 ರಲ್ಲಿ ಜಾರಿಗೆ ಬಂದಿತು ಮತ್ತು 2009 ರ ಹೊತ್ತಿಗೆ ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟಿತು.

ಬಿ. 2020 ರ ಕಿಗಾಲಿ ಒಪ್ಪಂದವು ಮಾಂಟ್ರಿಯಲ್ ಪ್ರೋಟೋಕಾಲ್ ಗೆ ಮಾಡಿದ ತಿದ್ದುಪಡಿಯಾಗಿದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಎ

7. ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಕೆಳಗಿನ ಯಾವ ಮತ್ತೊಂದು ಹೆಸರಿನಲ್ಲಿಯೂ ಕೂಡ ಕರೆಯಲಾಗುತ್ತದೆ?

ಎ. ದೀನ್ ದಯಾಳ್ ಅಂತ್ಯೋದಯ ಯೋಜನೆ.
ಬಿ. ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ.
ಸಿ. ಅಟಲ್ ಗ್ರಾಮೀಣ ಕೌಶಲ್ಯ ಯೋಜನೆ.
ಡಿ. ಪ್ರಧಾನ ಮಂತ್ರಿ ಗ್ರಾಮೀಣ ಕೌಶಲ್ಯ ಯೋಜನೆ.

ಉತ್ತರ : ಎ

8. ಕೆಳಗಿನ ಯಾವ ಅಂಶಗಳನ್ನು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಘಟಕಗಳು ಎಂದು ಪರಿಗಣಿಸಬಹುದು?

1. ತ್ವರಿತ ನೀರಾವರಿ ಸವಲತ್ತು ಕಾರ್ಯಕ್ರಮ.
2. ಹರ್ ಖೇತ್ ಕೋ ಪಾನಿ.
3. ಪ್ರತಿ ಹನಿ ಹೆಚ್ಚು ಬೆಳೆ.
4. ಜಲಾನಯನ ಪ್ರದೇಶ ಅಭಿವೃದ್ಧಿ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2 ಮತ್ತು 3 ಬಿ. 3 ಮತ್ತು 4
ಸಿ. 1, 2, 3 ಮತ್ತು 4 ಡಿ. 4 ಮಾತ್ರ

ಉತ್ತರ : ಸಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH

Prose

Gentleman of Rio en Medio

Share your Responses

Refer to Text(Part-I) Page No. 50 & 51:

1.Fill in the blanks with a suitable word/s to describe the land and the house sold by the oldman.

Before it was sold	After it was solda.
peeled off plaster	....
....	pruned treesc.
torn fence	....

Answer:

Before it was sold	After it was solda.
peeled off plaster	replastered the houseb.
gnarled trees	pruned treesc.
torn fence	patched the fence

2.From the list given below, tick the activities with which the children of Rio en Mediowere involved, after the Americans occupied the house and the land sold by Don Anselmo

i) pruning the trees
ii) renovating the house
iii) playing in the orchard
iv) speaking harsh words to the Americans in Spanish
v) plucking flowers from the trees
vi) putting fences around their play area.
vii) laughing whenever they were spoken to
viii) running around the land

Answer:

iii) playing in the orchard
v) plucking flowers from the trees
vi) putting fences around their play area
vii) laughing whenever they were spoken to

3.The possibilities for a week-long delay for another meeting are given. Which of them do youagree with? Discuss with your partner. The old man.

(deliberately delayed) (was slow) (was not in station) (was ill)

Ans: The old man was slow

4.Don Anselmo repeated certain things whenever he met the story teller and took leave of him.Write them down. One is done for you.

a. the old man shakes hands
b. ______________
c. ______________
d. ______________
e. ______________

Ans:

b. put on his ragged gloves/he removed his hat and gloves.
c. take his stick/handed his things to the boy.
d. walked out/sit on the chair.
e. the boy followed behind him/the boy stood behind the chair.

Share your Responses:

Refer to Text(Part-I) Page No. 52:

1. ***Fill in the blanks/choose the most appropriate answer***

1.Don Anselmo sold his land but he didn't sell his ______

Ans: Trees.

Question 2.The children of Rio en Medio were Don Anselmo's _____ and ______

Ans: Sobrinos, nietos, [nieces and nephews and grand children].

3.Don Anselmo inherited the house from his ______.

Ans: mother.

4.According to Don Anselmo, the real owners of the trees were ______

a. the children of Rio en Medio
b. Don Anselmo himself
c. The Americans
d. the storyteller
e. Don Anselmo's ancestors

Ans: a. the children of Rio en Medio

5. Don Anselmo did not sell the trees. Why do you think he did not? Tick the correct ones.

a. Trees were like children to him
b. They were grown for the children of the next generation
c. He thought they did not belong to him but to the children
d. He had grown them in memory of his ancestorse
e. He wanted his surroundings to be green

Ans: (c). He thought they did not belong to him but to the children

Think About The Text

1.Don Anselmo's appearance and manners were quite unusual. How would you support thisstatement based on the text ?

Ans: Don Anselmo wore the long, old, faded coat. He wore tom gloves and carried a woman out Umbrella's skeleton as a stick. A dark young hoy always followed him Though he was an oldman, he bowed to all and removed his hat and gloves slowly and carefully." The manner ofremoving is also similar to that of Charlie Chaplin. By all these factors we could say hisappearance and manners were quite unusual.

(Contd……..)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY

The d and f Block Elements

73. Sc^{3+} salts are diamagnetic. Why?

Ans: Sc^{3+} does not contain unpaired d-electrons. So they are diamagnetic.

Note: Formula to calculate the number of unpaired electrons in 3d series.

n = At number of an element – oxidation state – Atomic number of argon (18)

Formula 1: If $n = 1$ to 5, all are unpaired electrons.

Formula 2: If $n > 5$, then number of unpaired electrons $10 - n$.

Examples:

(i) Sc^{3+} : n = Atomic number of Sc– O.S. – Atomic number of Ar.

$$n = 21 - 3 - 18 = 0$$

(ii) Ti^{3+} : n = Atomic number of Ti – O.S. – Atomic number of Ar.

$$n = 22 - 3 - 18 = 0$$

(iii) Mn^{2+} or Mn in $MnSO_4$:

n = Atomic number of Mn – O.S. – Atomic number of Ar.

$$n = 25 - 2 - 18 = 5$$

(iv) Cu^{+}

=Atomic number of Cu–O.S–Atomic number of Ar.

$$n = 29 - 1 - 18 = 0$$

(v) Cu^{2+} or $CuSO_4$:

n=Atomic number of Cu–O.S–Atomic number ofAr.

$$n = 29 - 2 - 18 = 9$$

$$\therefore n = (10 - n) = (10 - 9) = 1$$

(vi) Zn^{2+} :

n=Atomic number of Zn –O.S.–Atomic number of Ar.

$$n = 30 - 2 - 18 = 10$$

$$\therefore n = (10 - n) = (10 - 10) = 0$$

74.Calculate the magnetic moment of Sc^{3+} (Z=21).

Ans: $n = 21 - 3 - 18 = 0$

$$\therefore \mu = \sqrt{n(n+2)}\ \text{BM}$$

$$= \sqrt{0(0+2)}\ \text{BM}$$

$$\mu = 0\ \text{BM}$$

75.Calculate the magnetic moment of Ti^{3+} (Z=22).

Ans: $n = 22 - 3 - 18 = 1$

$$\therefore \mu = \sqrt{n(n+2)}\ \text{BM}$$

$$= \sqrt{1(1+2)}\ \text{BM} = \sqrt{3}\ \text{BM}$$

$$\mu = 1.73\ \text{BM}$$

76. Calculate the magnetic moment of a divalent ion in aqueous solution if its atomic number is 25

Ans: Given At. number = 25. (Mn)

Divalent ion = Mn^{2+}

$\therefore$ n = atomic number of Mn – oxidation state – atomic number of Ar

$$n = 25 - 2 - 18 = 5$$

$$\therefore \mu = \sqrt{n(n+2)}\ \text{BM}$$

$$= \sqrt{5(5+2)} = \sqrt{5(7)} = \sqrt{35}$$

$$= 5.92\ \text{BM}$$

77. Calculate the 'spin only' magnetic moment of $M^{2+}_{(aq)}$ ion (Z = 27).

Ans: $Z = 27 \Rightarrow [Ar]3d^7 4s^2$

$\therefore M^{2+} = [Ar]3d^7 : 3d^7 =$ ⇅ ⇅ ↑ ↑ ↑ unpaired electrons

$$\therefore n = 3$$

$$\mu = \sqrt{n(n+2)}$$

$$= \sqrt{3(3+2)} = \sqrt{15} = 3.87\ \text{BM}$$

78. Explain the colour of transition metals ions.

Ans: The colour of a transition metal ions is due to

(i)The presence of unpaired electrons in the d-orbitals.

(ii) d-d transitions.

The unpaired d-electrons absorb colour form the visible region and undergo d–d transition and radiate complementary colours.

Example: Cu^{2+} absorbs red colour and emits blue colour. So the complementary colour to the red is blue[March-2015]

79. Zn^{2+} salts are colourless. Why?

Ans: Due to the absence of unpaired electrons.

80 Cu^{2+} salts are colourled. Give reason.

Ans: Due to the presence of unpaired d-electrons.

81. Among zinc sals and cobalt salts which is coloured?

Ans: Cobalt salts.

(Contd……)

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

Ref: 1) No: EE/ UTP/PB-3/2024-25/1482 Dated: 09-10-2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ (KPPP ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು KPP–ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ ಉಲ್ಲೇಖಿತ ಪತ್ರ (1) ರನ್ವಯ ಒಟ್ಟು ರೂ.499.82 (ಜಿಎಸ್‌ಟಿ ಸಹಿತ) ಲಕ್ಷ ಮೊತ್ತದ 4701 ಲೆಕ್ಕ ಶೀರ್ಷಿಕೆಯ ಕಾಮಗಾರಿಯ ಟೆಂಡರ್ ಆಹ್ವಾನಿಸಲಾಗಿದೆ. ಇಂಡೆಂಟ್ 1351

ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ: 10–10–2024 to 22–10–2024 ರ ಸಂಜೆ 4.30 ರವರೆಗೆ ಇರುವುದು. ಟೆಂಡರ್ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 16–10–2024ಸಂಜೆ 04.30ರ ವರೆಗೆ ಇರುತ್ತದೆ. ದಿನಾಂಕ 23–10–2024ರಂದು ಸಂಜೆ 05.00ರ ವರೆಗೆ ಗಂಟೆಗೆ ತಾಂತ್ರಿಕ/ಆರ್ಥಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರ ಕಚೇರಿಯುಲ್ಲಿ ತೆರೆಯುಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯುಲಾಗುವುದು. ಹೆಚ್ಚಿನ ವಿವರಗಳನ್ನು KPPP–ಪೋರ್ಟಲ್ ಮುಖಾಂತರ ನೋಡಿಕೊಳ್ಳತಕ್ಕದ್ದು. ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ/ ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು(ಪ್ರ), ಕನೀನಿನಿ,
ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.

822

ನಗರಸಭೆ ಕಾರ್ಯಾಲಯ ಶಹಾಬಾದ, ಜಿ. ಕಲಬುರಗಿ

www.shahabadcity.mrc.gov.in/email.lditstaff_ulb_shahabad@yahoo.com

ಸಂಖ್ಯೆ: ನಸಶ/ತಾ.ಶಾ/15ನೇ ಹಣಕಾಸು/ಎಸ್.ಎಫ್.ಸಿ./2023–24/2024–25/ ದಿನಾಂಕ : 09–10–2024

:: ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ::

ಶಹಾಬಾದ ನಗರಸಭೆಯಿಂದ 15ನೇ ಹಣಕಾಸಿನ ಯೋಜನೆಯಡಿಯಲ್ಲಿ 2020–21ನೇ ಸಾಲಿನ (ಉಳಿತಾಯ ಮೊತ್ತ) ಅನುದಾನದಲ್ಲಿ ಮತ್ತು 15ನೇ ಹಣಕಾಸು–2023–24, ಹಾಗೂ 2024–25ನೇ ಸಾಲಿನ ಅನುದಾನದಲ್ಲಿ ಹಾಗೂ ಎಸ್.ಎಫ್.ಸಿ–2023–24 (ಟಿ.ಎಸ್.ಪಿ) ಅನುದಾನದಲ್ಲಿ ಒಟ್ಟು 04 ಕಾಮಗಾರಿಗಳ ಇ–ಪ್ರಕ್ಯೂರ್‌ಮೆಂಟ್ ಟೆಂಡರ್‌ನ್ನು ಇಂಡೆಂಟ್ ನಂಬರ್ ಜೊತೆಗೆ KW-1, KW-2, KW-3 ನಿಬಂಧನೆಗಳೊಂದಿಗೆ KPP portal ನಲ್ಲಿ ಟೆಂಡರ್‌ನ್ನು ಕರೆಯಲಾಗಿದ್ದು ವಿವರ ಈ ಕೆಳಗಿನಂತ್ತಿದೆ.

1) Indent Number : **1. DMA/2024-25/OW/Work_Indent20347 Call-2, 2. DMA/2024-25/BD/Work_Indent22282 Call-2, 3. DMA/2023-24/OW/Work_Indent13673(SC) Call-2, 4. DMA/2024-25/IND2207/Call-3,** 2) Amount of Estimate (Rs. in Lakhs) : **Minimum : 3.30, Maximum 84.00,** 3) Amount put to tender (Rs. in Lakhs) : **Minimum : 2.74, Maximum : 71.23,** 4) Amount of EMD in Rupees : Minimum 3425/-, Maximum : 168000/-, 5) Class of Contractor : As per kpp portal, 6) ಇ–ಪೋರ್ಟಲ್‌ನಲ್ಲಿ ಟೆಂಡರ್‌ನ ಆಕ್ಷೇಪಣೆ ಸಲ್ಲಿಸುವ ಕೊನೆಯ ದಿನಾಂಕ : **21–10–2024 ಸಮಯ 5.30 ಗಂಟೆಗೆ,** 7) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **22–10–2024 ಸಮಯ 5.30 ಗಂಟೆಗೆ,** 8) ಟೆಂಡರ ತೆರೆಯುವ ದಿನಾಂಕ: **24–10–2024 ಸಮಯ 11.00 ಗಂಟೆವರೆಗೆ,** 9) ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **30–10–2024 ಸಮಯ 11.00 ಗಂಟೆಗೆ.**

ಸದರಿ ಕಾಮಗಾರಿಗಳ ವಿವರ ಹಾಗೂ ಇತರ ಷರತ್ತುಗಳನ್ನು ಕೆಪಿಪಿಪಿ ಪೋರ್ಟಲ್ ವೆಬ್–ಸೈಟ್ kppp.karnataka.gov.in ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಪೌರಾಯುಕ್ತರು ನಗರಸಭೆ ಕಾರ್ಯಾಲಯ ಶಹಾಬಾದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಪೌರಾಯುಕ್ತರು
ನಗರಸಭೆ ಶಹಾಬಾದ

ವಾ.ಸಾ.ಸಂ.ಇ/ಕಲಬುರಗಿ/512/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–6/2023–24/2891 ದಿನಾಂಕ: 07.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಹಾಗೂ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https:kppp.karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	PWD/2024-25/BD/ WORK_INDENT15404 (Reserved for ST Category)	35.00
2)	PWD/2024-25/BD/ WORK_INDENT15405 (Reserved for General Category)	15.48
3)	PWD/2024-25/BD/ WORK_INDENT13674 (Reserved for SC Category)	20.00
4)	PWD/2024-25/BD/ WORK_INDENT11652 (Reserved for SC Category)	30.00
5)	PWD/2024-25/BD/WORK_INDENT11651 (Reserved for General Category)	15.48
6)	PWD/2024-25/RD/ WORK_INDENT16041 (Reserved for General Category)	30.00
7)	PWD/2024-25/RD/ WORK_INDENT16042 (Reserved for General Category)	15.48
8)	PWD/2024-25/RD/ WORK_INDENT15403	108.00
9)	PWD/2024-25/RD/ WORK_INDENT16043	108.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಕ್ರ.ಸಂ.(8) ರಿಂದ (9) ರ ವರೆಗಿನ ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ **14.10.2024 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ** ಆ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ **16.10.2024 ರಂದು 12.00 ಗಂಟೆಯ ವರೆಗೆ.** ಇ) ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **18.10.2024 ರಂದು 16.00 ಗಂಟೆಯ ವರೆಗೆ.** ಈ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **19.10.2024 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/511/ಕೆಎಸ್ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಯೋಕೇ–5), ಅನೆಕ್ಸ್–2 ಕಟ್ಟಡ, ನೆಲ ಮಹಡಿ, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ ಆವರಣ, ನರಸಿಂಹರಾಜ ಚೌಕ, ಬೆಂಗಳೂರು – 560 002

ಸಂಖ್ಯೆ:ಕಾಪಾಅ(ಯೋಕೇ–5)/ಟೆಂಡರ್/03/2024–25 ದಿನಾಂಕ:09.10.2024

ಸೇರ್ಪಡೆ–1 (ADDENDUM-1)

ಉಲ್ಲೇಖ: ಟೆಂಡರ್ ನೋಟಿಫಿಕೇಷನ್ ಸಂಖ್ಯೆ: ಕಾಪಾಅ(ಯೋಕೇ–5)/ಟೆಂಡರ್/03/ 2024–25, ದಿನಾಂಕ: 07.10.2024

ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಈ ಕೆಳಕಂಡ ಬದಲಾವಣೆಗಳನ್ನು ಓದಿಕೊಳ್ಳುವುದು.

ಕ್ರ ಸಂ.	ವಿವರಗಳು	ಓದಿಕೊಳ್ಳಬೇಕಾಗಿರುವುದು
1	ಕಾಮಗಾರಿಯ ಹೆಸರು: ಬೆಂಗಳೂರು, ಮಡಿವಾಳ ಕೆರೆಏರಿ ರಸ್ತೆಯ ಈಶಾನ್ಯ (North Eastern) ಭಾಗದ ಕಡೆ ಸ್ಥಾಪಿತವಾಗಿರುವ ಔಟ್‌ಲೆಟ್ ಸಂಖ್ಯೆ.2ರ ಅಪ್‌ಸ್ಟ್ರೀಮ್ ಭಾಗದಲ್ಲಿ ಸೇತುವೆ ನಿರ್ಮಾಣ ಮಾಡುವುದು.	ಕಾಮಗಾರಿಯ ಹೆಸರು: ಬೆಂಗಳೂರು, ಮಡಿವಾಳ ಕೆರೆಏರಿ ರಸ್ತೆ ಜೊತೆಗೂಡಿ –ಕೊಂಡು ಬಿಟಿಎಂ ಬಡಾವಣೆಯಿಂದ ಹೊಸೂರು ರಸ್ತೆಯವರೆಗೆ 20.ಎಂ ಕಾರಿಡಾರ್ ಯೋಜನೆಗಾಗಿ ಔಟ್‌ಲೆಟ್ ಸಂಖ್ಯೆ.2ರ ಅಪ್‌ಸ್ಟ್ರೀಮ್ ಭಾಗದಲ್ಲಿ ಸೇತುವೆ ನಿರ್ಮಾಣ ಮಾಡುವುದು.
2	**ಟೆಂಡರ್‌ಗಾಗಿ ಬಿಡುಗಡೆಯಾದ ಮೊತ್ತ ರೂ.4,84,79,726/–**	**ಟೆಂಡರ್‌ಗಾಗಿ ಬಿಡುಗಡೆಯಾದ ಮೊತ್ತ ರೂ.4,07,39,625/–**
3	**ಇ.ಎಂ.ಡಿ ರೂ. 4,84,79,726/– (ರೂ. 1.00 ಲಕ್ಷ ಇ–ಪ್ರೊಕ್ ಮೂಲಕ & ರೂ.3,84,79,726/– ಬ್ಯಾಂಕ್ ಖಾತರಿ ಮೂಲಕ)**	**ಇ.ಎಂ.ಡಿ ರೂ. 4,07,400/– (ರೂ. 1.00 ಲಕ್ಷ ಇ–ಪ್ರೊಕ್ ಮೂಲಕ & ರೂ.3,07,400/– ಬ್ಯಾಂಕ್ ಖಾತರಿ ಮೂಲಕ)**

ಉಳಿದ ಇತರೆ ಎಲ್ಲಾ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–5

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು ಜಿಲ್ಲೆ.

DHO COMPLEX, BEHIND DC OFFICE, OPPOSITE AMANIKERE, TUMKUR -572 101
Ph: 0816-2260594 ; E-Mail:
dsu_tumkur@yahoo.co.in, ncdtumkur@gmail.com

ಸಂ : ಜಿಸಕತು:ಎನ್.ಸಿ.ಡಿ/213/2024–25 ದಿನಾಂಕ: 07.10.2024

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ತುಮಕೂರು, ರವರಿಂದ ಎಲ್ಲಾ ಆರೋಗ್ಯ ಮತ್ತು ಕ್ಷೇಮ ಉಪಕೇಂದ್ರಗಳಿಗೆ ಉಪಕರಣಗಳು ಹಾಗೂ ಸಲಕರಣೆಗಳು ಖರೀದಿಸಲು ಇ–ಟೆಂಡರ್ ಮುಖಾಂತರ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಅರ್ಹ ಟೆಂಡರ್‌ದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಈ ಕೆಳಗಿನಂತಿದೆ:– ವಿವರ ಮತ್ತು ದಿನಾಂಕ: 1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ: ದಿನಾಂಕ: **04.10.2024** 4.00pm onwards. 2. ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಕಾಲ: ದಿನಾಂಕ: **18.10.2024 4.00**pm onwards. 3. ಟೆಂಡರ್ ತೆರೆಯುವ ದಿನಾಂಕ ಮತ್ತು ಕಾಲ (ತಾಂತ್ರಿಕ ಬಿಡ್) ದಿನಾಂಕ: **19.10.2024** pm. 5. Tender NO: DHFWS/2024-25-IND0999. Total Tender Value Rs.150Lakhs. EMD Amount Rs.2,00,000=00. ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಸರ್ವೇಲೆನ್ಸ್ ಅಧಿಕಾರಿಗಳ ಕಛೇರಿ, ತುಮಕೂರು ಇಲ್ಲಿ ಕಛೇರಿಯ ವೇಳೆಯಲ್ಲಿ (ದೂ: 9449843269) ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಸರ್ವೇಲೆನ್ಸ್ ಅಧಿಕಾರಿಗಳು, ತುಮಕೂರು.

DIPR/TUM/366/KSMCA/2024-25

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)

KSIIDC (ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

'ಖನಿಜ ಭವನ', 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1, ದೂ: 080–22258131–33,
ಇ–ಮೇಲ್: murthy.ksiidc@gmail.com / info@ksiidc.com ವೆಬ್‌ಸೈಟ್: www.ksiidc.karnataka.gov.in

ಶಿವಮೊಗ್ಗ ಮತ್ತು ವಿಜಯಪುರ ವಿಮಾನ ನಿಲ್ದಾಣಗಳಿಗೆ ತಾಂತ್ರಿಕ ಸಿಬ್ಬಂದಿ (ಗುತ್ತಿಗೆ ಆಧಾರದ ಮೇಲೆ) ನೇಮಕಾತಿಗಾಗಿ ಅಧಿಸೂಚನೆ

ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತವು(ಕೆಎಸ್‌ಐಐಡಿಸಿ), ಶಿವಮೊಗ್ಗ ಮತ್ತು ವಿಜಯಪುರ ವಿಮಾನ ನಿಲ್ದಾಣಗಳನ್ನು ನಿರ್ವಹಣೆ ಮಾಡುತ್ತಿದೆ. ನಿಗಮವು ಈ ಕೆಳಕಂಡ ಸಿಬ್ಬಂದಿಗಳನ್ನು 01 ವರ್ಷದ ಅವಧಿಗೆ ಕ್ರೋಢೀಕೃತ ಮಾಸಿಕ ವೇತನದೊಂದಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಪ್ರಸ್ತಾಪಿಸಲಾಗಿದೆ. ಅಭ್ಯರ್ಥಿಗಳ ಕಾರ್ಯಕ್ಷಮತೆಯ ಆಧಾರದ ಮೇಲೆ ಒಪ್ಪಂದದ ಅವಧಿಯನ್ನು ಅವಶ್ಯಕತೆಗೆ ಅನುಗುಣವಾಗಿ ಇನ್ನೊಂದು ವರ್ಷದ ಅವಧಿಗೆ ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಗೆ ವಿಸ್ತರಿಸಬಹುದಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ ಮತ್ತು ಅನುಭವದ ವಿವರಗಳು	ಕ್ರೋಢೀಕೃತ ವೇತನ ಪ್ರತೀ ತಿಂಗಳು ರೂ.	ವಯೋಮಿತಿ
		ಶಿವಮೊಗ್ಗ ವಿಮಾನ ನಿಲ್ದಾಣ		
1	**ಶಿವಮೊಗ್ಗ ನಿಲ್ದಾಣಕ್ಕೆ ಏರ್‌ಪೋರ್ಟ್ ಡೈರೆಕ್ಟರ್ (ಒಂದು ಹುದ್ದೆ)**	• ಅಭ್ಯರ್ಥಿಗಳು ಯಾವುದೇ ವಿಭಾಗದಲ್ಲಿ ಪದವಿ ಪಡೆದಿರಬೇಕು. ಬಿಸಿನೆಸ್, ಏವಿಯೇಷನ್ ಅಡ್ಮಿನಿಸ್ಟ್ರೇಷನ್/ಬ್ಯಾಚುಲರ್ ಆಫ್ ಇಂಜಿನೀಯರಿಂಗ್ ಅಥವಾ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು. • ವಿಮಾನ ನಿಲ್ದಾಣ ನಿರ್ವಹಣೆಯಲ್ಲಿ ವೃತ್ತಿಪರ ಮಟ್ಟದಲ್ಲಿ ಕಾರ್ಯನಿರ್ವಾಹಕರಾಗಿ 10 ವರ್ಷಗಳ ಅನುಭವ ಹೊಂದಿರಬೇಕು. • ಅಭ್ಯರ್ಥಿಯು ಸ್ವೀಕಾರಾರ್ಹ ಚಾಲನಾ ದಾಖಲೆಗಳೊಂದಿಗೆ ಎಲ್‌ಎಂವಿ/ಹೆಚ್‌ಎಂವಿ ಚಾಲಕರ ಪರವಾನಗಿಯನ್ನು ಹೊಂದಿರಬೇಕು. • ಪೈಲೆಟ್ ಪರವಾನಗಿಗೆ ಆದ್ಯತೆ ನೀಡಲಾಗುವುದು. **ಅಭ್ಯರ್ಥಿಗಳು ಈ ಕೆಳಕಂಡವುಗಳಲ್ಲಿ ಪರಿಣಿತಿಯನ್ನು ಹೊಂದಿರಬೇಕು:** • ಡಿಜಿಸಿಎ ಅನ್ವಯ ವಿಮಾನ ಸುರಕ್ಷತೆ ದಾಖಲಾತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಬೇಕು ಹಾಗೂ ನಿರ್ವಹಿಸಬೇಕು. • ಕಾನ್ಸೆಪ್ಟ್ ಡಿಸೈನ್ ಏರ್‌ಸೈಡ್ ಇನ್ಫ್ರಾಸ್ಟ್ರಕ್ಚರ್, ಟರ್ಮಿನಲ್ ಸಿಸ್ಟಮ್ಸ್, ಲ್ಯಾಂಡ್ ಸೈಡ್ ಫೆಸಿಲಿಟಿಗಳಲ್ಲಿ ಅಪಾರ ಜ್ಞಾನ ಹೊಂದಿರಬೇಕು ಮತ್ತು • ಗ್ರೌಂಡ್ ಟ್ರಾನ್ಸ್‌ಪೋರ್ಟೇಷನ್ ಟರ್ಮಿನಲ್ ಮತ್ತು ಏರ್‌ಸೈಡ್ ಆಪರೇಷನ್‌ನ ಏಕೀಕರಣ • ಏರೋಸ್ಪೇಸ್ ಡೊಮೈನ್‌ನಲ್ಲಿ ಸಿಸ್ಟಮ್ಸ್ ಸೇಫ್ಟಿ ರಿಕ್ವೈರ್‌ಮೆಂಟ್‌ನ ಅಭಿವೃದ್ಧಿ ಮತ್ತು ವಿಮರ್ಶೆ • ಏರ್ ಟ್ರಾಫಿಕ್ ಕಂಟ್ರೋಲ್ ಪ್ರೊಸೀಜರ್ ಆಪರೇಷನ್ಸ್ • ಡಿಜಿಸಿಎ ಒಪ್ಪಿಗೆ ಪಡೆದ ನಂತರ ಏರ್‌ಕ್ರಾಫ್ಟ್ ಮತ್ತು ಏರ್‌ಪೋರ್ಟ್ ಆಪರೇಷನ್ ಮ್ಯಾನ್ಯುಯಲ್, ಪರಿಷ್ಕರಣೆ ತಿದ್ದುಪಡಿಯ ಸಂಯೋಜನೆ	1,25,000/–	ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷಗಳು
2	**ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಹೆಡ್ (ಒಂದು ಹುದ್ದೆ)**	• ಅಭ್ಯರ್ಥಿಗಳು ಬಿ.ಇ.(ಎಲೆಕ್ಟ್ರಿಕಲ್).ಎಂಇ/ಎಂ.ಟೆಕ್ ಪದವಿ ಹೊಂದಿರಬೇಕು. • ಬೃಹತ್ ವಿದ್ಯುತ್ ಕಾಮಗಾರಿಗಳು, ಉಪ ಕೇಂದ್ರಗಳು ಮತ್ತು ಪ್ರಸರಣ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಣೆ ಮಾಡುವ ಕ್ಷೇತ್ರಗಳಲ್ಲಿ ಮುಖ್ಯವಾಗಿ ಏರ್‌ಪೋರ್ಟ್ ಮತ್ತು ಕೆಪಿಟಿಸಿಎಲ್/ಬೆಸ್ಕಾಂಗಳಲ್ಲಿ 15 ವರ್ಷಗಳ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.	80,000/–	ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷಗಳು
3	**ಐಟಿ–ಕಂ–ನೆಟ್‌ವರ್ಕ್ ಇಂಜಿನಿಯರ್ (ಒಂದು ಹುದ್ದೆ)**	• ಅಭ್ಯರ್ಥಿಗಳು ಎಐಸಿಟಿಇ ಅಥವಾ ಯುಜಿಸಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ ಸಂಸ್ಥೆಯಿಂದ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್ ಅಥವಾ ಕಂಪ್ಯೂಟರ್ ಇಂಜಿನಿಯರಿಂಗ್‌ನಲ್ಲಿ ಪದವಿ ಹೊಂದಿರಬೇಕು. • ಎಲ್‌ಎಎನ್ ನ ನಿರ್ವಹಣೆ/ ಟ್ರಬಲ್ ಶೂಟಿಂಗ್, ಆಪ್ಟಿಕಲ್ ಫೈಬರ್ ನೆಟ್‌ವರ್ಕ್, ಐಪಿ ಫೋನ್ಸ್, ಐಪಿ ಫೋನ್‌ಗಳಿಗೆ ಸಂಬಂಧಿಸಿದ ಸರ್ವರ್‌ಗಳು, ಸಿಸಿಟಿವಿ ಸ್ವಿಚಸ್, ಸಿಸಿಟಿವಿ ಕೆಮೆರಾಗಳು, ಸಗಟು ಗಾತ್ರದ ಡಾಟಾ ಸ್ಟೋರೇಜ್ ಸಿಸ್ಟಮ್‌ಗಳು, ಫೈರ್ ಅಲಾರಂ ಸಿಸ್ಟಮ್‌ಗಳಿಗೆ ಸಂಬಂಧಿಸಿದ ಪಿಎಲ್‌ಸಿಗಳು, ಫೈರ್/ ಸ್ಮೋಕ್ ಡಿಟೆಕ್ಟರ್ಸ್, ಆಕ್ಸಸ್ ಕಂಟ್ರೋಲ್ ಸಿಸ್ಟಮ್ಸ್, ಡೆಸ್ಕ್ ಟಾಪ್ ಸಿಸ್ಟಮ್ಸ್ ಹಾಗೂ ಪೂರಕ ಹಾರ್ಡ್‌ವೇರ್. ಹಾರ್ಡ್‌ವೇರ್ ಸಂಬಂಧಿತ ಆಟೋಮೇಟಿಕ್ ವೆದರ್ ಸ್ಟೇಷನ್ಸ್, ನೆಟ್‌ವರ್ಕ್ ಸೆಕ್ಯೂರಿಟಿ ಸಿಸ್ಟಮ್ಸ್ ಗಳಲ್ಲಿ 05 ವರ್ಷಗಳ ಅನುಭವ ಹೊಂದಿರಬೇಕು. ಅಭ್ಯರ್ಥಿಗಳು ಬಿಎಸ್‌ಎನ್‌ಎಲ್ ಅಥವಾ ಇತರೆ ಏಜೆನ್ಸಿಗಳೊಂದಿಗೆ ಸಂಪರ್ಕ ಹೊಂದಿರುವುದನ್ನು ನಿರೀಕ್ಷಿಸಲಾಗಿದೆ. • ಅಭ್ಯರ್ಥಿಗಳು ವೆಬ್‌ಸೈಟ್ ಮತ್ತು ಸೋಷಿಯಲ್ ಮೀಡಿಯವನ್ನು ನಿಭಾಯಿಸುವುದು ಸಹಾ ಅಪೇಕ್ಷಣೀಯವಾಗಲಿದೆ.	50,000/–	ಕನಿಷ್ಠ ವಯೋಮಿತಿ: 25 ವರ್ಷ ಗರಿಷ್ಠ ವಯೋಮಿತಿ: 45 ವರ್ಷ
4	**ಸಿವಿಲ್ ಇಂಜಿನಿಯರ್ (ಒಂದು ಹುದ್ದೆ)**	• ಅಭ್ಯರ್ಥಿಗಳು ಬಿ.ಇ.(ಸಿವಿಲ್)/ ಡಿಪ್ಲೋಮಾ ಇನ್ ಸಿವಿಲ್ ಪದವಿ ಹೊಂದಿರಬೇಕು • ರನ್‌ವೇ, ರಸ್ತೆಗಳು/ಹೆದ್ದಾರಿಗಳು ಮತ್ತು ವಿಮಾನ ನಿಲ್ದಾಣಗಳ ನಿರ್ವಹಣೆಯಂತಹ ಬೃಹತ್ ಸಿವಿಲ್ ಕಾಮಗಾರಿ ಕ್ಷೇತ್ರದಲ್ಲಿ 10 ವರ್ಷಗಳ ಅನುಭವ ಹೊಂದಿರಬೇಕು.	50,000/–	ಕನಿಷ್ಠ ವಯೋಮಿತಿ: 25 ವರ್ಷ ಗರಿಷ್ಠ ವಯೋಮಿತಿ: 45 ವರ್ಷ
5	**ಟೆಕ್ನೀಷಿಯನ್–ಕಂ–ಆಟೋ ಮೆಕಾನಿಕ್ (ಒಂದು ಹುದ್ದೆ)**	• ಎಲೆಕ್ಟ್ರಿಕಲ್, ಮೆಕಾನಿಕಲ್ ಅಥವಾ ಆಟೋಮೊಬೈಲ್ ಇಂಜಿನಿಯರಿಂಗ್‌ನಲ್ಲಿ 3 ವರ್ಷಗಳ ಡಿಪ್ಲೋಮ • 3 ರಿಂದ 5 ವರ್ಷಗಳ ಅನುಭವದೊಂದಿಗೆ ಆಟೋಮೊಬೈಲ್ ಇಂಜಿನಿಯರಿಂಗ್‌ನಲ್ಲಿ ಐಟಿಐ ಪ್ರಮಾಣಪತ್ರ • ಮಾನ್ಯತೆ ಹೊಂದಿರುವ ಡ್ರೈವಿಂಗ್ ಲೈಸೆನ್ಸ್ ಹೊಂದಿರಬೇಕು • ಅಗ್ನಿಶಾಮಕ ವಾಹನ/ಭಾರೀ ವಾಹನಗಳನ್ನು ನಿಭಾಯಿಸುವಲ್ಲಿ ಪರಿಣಿತಿ ಹೊಂದಿರಬೇಕು • ಪ್ರಾರಂಭದಲ್ಲಿ ಉಂಟಾಗುವ ಸಮಸ್ಯೆಗಳನ್ನು ಸರಿಪಡಿಸುವ ಸಾಮರ್ಥ್ಯವಿರಬೇಕು ಹಾಗೂ ಏರ್‌ಫೀಲ್ಡ್ ಕ್ರಾಶ್ ಫೈರ್ ಟೆಂಡರ್ಸ್, ಪಂಪ್ಸ್, ಪ್ರೈಮರ್ಸ್, ಕೆಮಿಕಲ್ ಪೌಡರ್ ಹಾಗೂ ಇತರೆ ಸಿಸ್ಟಮ್‌ಗಳನ್ನು ಸರಿಪಡಿಸುವಲ್ಲಿ ಪ್ರಾಥಮಿಕ ಜ್ಞಾನ ಹೊಂದಿರಬೇಕು	40,000/–	ಕನಿಷ್ಠ ವಯೋಮಿತಿ: 25 ವರ್ಷ ಗರಿಷ್ಠ ವಯೋಮಿತಿ: 45 ವರ್ಷ
6	**ಅಸಿಸ್ಟೆಂಟ್ ಏರ್‌ಸೈಡ್ ಆಪರೇಷನಲ್ ಮ್ಯಾನೇಜರ್ (ಒಂದು ಹುದ್ದೆ)**	• ಏರ್‌ಸೈಡ್ ಆಪರೇಷನ್ಸ್/ಸಿವಿಲ್ ಏವಿಯೇಷನ್ಸ್/ಪಿಎಸ್‌ಯು ಏರ್‌ಪೋರ್ಟ್/ಪ್ರೈವೇಟ್ ಏರ್‌ಪೋರ್ಟ್‌ಗಳಿಗೆ ' ಸಂಬಂಧಿಸಿದಂತೆ 3 ರಿಂದ 5 ವರ್ಷಗಳ ಅನುಭವ ಹೊಂದಿದ್ದು ಯಾವುದೇ ವಿಷಯದಲ್ಲಿ ಪದವಿ ಹೊಂದಿರಬೇಕು • ರನ್‌ವೇಗಳು ಹಾಗೂ ಟ್ಯಾಕ್ಸಿವೇಗಳಲ್ಲಿ ಅಪಾಯಗಳನ್ನು ತಪಾಸಣೆ ಮಾಡುವ, ಗುರುತಿಸುವ ಹಾಗೂ ತೆರವುಗೊಳಿಸುವಲ್ಲಿ ಅನುಭವ ಹೊಂದಿರಬೇಕು. • ಏರ್‌ಕ್ರಾಫ್ಟ್‌ಗಳಿಗೆ ಬ್ಯಾಗೇಜ್ ಬೆಲ್ಟ್‌ಗಳು ಹಾಗೂ ಸೂಕ್ತ ಪಾರ್ಕಿಂಗ್ ಸ್ಟಾಂಡ್ ನಿಯೋಜಿಸುವ ಹಾಗೂ ವಿಮಾನವು ಸುಗಮವಾಗಿ ಹಾರಾಟ ಮಾಡಲು ಹಾಗೂ ಇಳಿಯಲು ಏರ್‌ಲೈನ್ಸ್ ಗ್ರೌಂಡ್ ಸ್ಟಾಫ್‌ನೊಂದಿಗೆ, ಎಟಿಸಿಯೊಂದಿಗೆ ಸಮನ್ವಯತೆ ಸಾಧಿಸುವಂತಿರಬೇಕು • ಏರ್‌ಸೈಡ್ ಕಾರ್ಯಾಚರಣೆಗಳಿಗೆ ಸಂಬಂಧಿಸಿದಂತೆ ನಾಗರಿಕ ವಿಮಾನಯಾನ ಮತ್ತು ಇತರೆ ಅನ್ವಯವಾಗುವ ಕಾನೂನುಗಳು ಮತ್ತು ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಕೊಳ್ಳುವುದು. • ಡಿಜಿಸಿಎ ನಿಬಂಧನೆಗಳ ಕುರಿತಾದ ಜ್ಞಾನ ಹೊಂದಿರಬೇಕು	40,000/–	ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷ
7	**ಎಲೆಕ್ಟ್ರಿಕಲ್ ಇಂಜಿನಿಯರ್–ಮೈನ್‌ಟೆನೆನ್ಸ್ (ಒಂದು ಹುದ್ದೆ)**	• ಅಭ್ಯರ್ಥಿಗಳು ಬಿ.ಇ. ಪದವಿಯೊಂದಿಗೆ 2 ರಿಂದ 3 ವರ್ಷಗಳ ಅನುಭವ ಹೊಂದಿರಬೇಕು ಅಥವಾ ಡಿಪ್ಲೊಮಾ ಇನ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ 5 ವರ್ಷಗಳ ಅನುಭವ ಹೊಂದಿರಬೇಕು. • ಅಭ್ಯರ್ಥಿಗಳು ಕನ್ವೇಯರ್ ಬೆಲ್ಟ್‌ಗಳು, ಫೀಡರ್ಸ್ ಮುಂತಾದ ಎಲೆಕ್ಟ್ರೋ ಮೆಕ್ಯಾನಿಕಲ್ ಸಾಮಗ್ರಿಗಳನ್ನು ನಿರ್ವಹಣೆ ಮಾಡುವಲ್ಲಿ ಅನುಭವ ಹೊಂದಿರಬೇಕು.	40,000/–	ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷ
		ವಿಜಯಪುರ ವಿಮಾನ ನಿಲ್ದಾಣ		
01	**ಸಿವಿಲ್ ಇಂಜಿನಿಯರ್ ಹೆಡ್ (ಒಂದು ಹುದ್ದೆ)**	• ಅಭ್ಯರ್ಥಿಗಳು ಬಿ.ಇ.(ಸಿವಿಲ್)/ಎಂ.ಇ/ಎಂಟೆಕ್ ನಲ್ಲಿ ಪದವಿ ಹೊಂದಿರಬೇಕು. • ರನ್‌ವೇಗಳು, ರಸ್ತೆಗಳು ಹಾಗೂ ವಿಮಾನ ನಿಲ್ದಾಣಗಳ ನಿರ್ವಹಣೆಯಂತಹ ಬೃಹತ್ ಸಿವಿಲ್ ನಿರ್ಮಾಣ ಕಾಮಗಾರಿಗಳಲ್ಲಿ 15 ವರ್ಷಗಳ ಅನುಭವ ಹೊಂದಿರಬೇಕು	80,000/–	ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷ
02	**ಏರ್‌ಸೈಡ್ ಆಪರೇಷನಲ್ ಮ್ಯಾನೇಜರ್ (ಒಂದು ಹುದ್ದೆ)**	• ಅಭ್ಯರ್ಥಿಗಳು ಯಾವುದೇ ಪದವಿಯನ್ನು ಹೊಂದಿರಬಹುದಾಗಿದೆ. • ವಿಮಾನ ನಿಲ್ದಾಣಗಳಲ್ಲಿ ಏರ್‌ಸೈಡ್ ನಿರ್ವಹಣೆಯಲ್ಲಿ 10 ವರ್ಷಗಳ ಅನುಭವ ಹೊಂದಿರಬೇಕು. • ರನ್‌ವೇಗಳು ಮತ್ತು ಟ್ಯಾಕ್ಸೀ ವೇಗಳಲ್ಲಿ ಉಂಟಾಗುವ ಅಪಾಯಗಳ ತಪಾಸಣೆ, ಗುರುತಿಸುವಿಕೆ ಮತ್ತು ತೆರವುಗೊಳಿಸುವಲ್ಲಿ ಅನುಭವ ಹೊಂದಿರಬೇಕು. • ಏರ್‌ಕ್ರಾಫ್ಟ್‌ಗೆ ಬ್ಯಾಗೇಜ್ ಬೆಲ್ಟ್‌ಗಳು ಮತ್ತು ಸೂಕ್ತ ಪಾರ್ಕಿಂಗ್ ಸ್ಟಾಂಡ್‌ಗಳನ್ನು ನಿಯೋಜಿಸುವುದು, ವಿಮಾನವನ್ನು ಸರಾಗವಾಗಿ ಲ್ಯಾಂಡಿಂಗ್ ಮತ್ತು ಟೇಕ್ ಆಫ್ ಮಾಡಲು ಏರ್‌ಲೈನ್ಸ್ ಎಟಿಸಿ ಗ್ರೌಂಡ್ ಸಿಬ್ಬಂದಿಯೊಂದಿಗೆ ಸಮನ್ವಯ ಸಾಧಿಸುವುದು. • ಏರ್‌ಸೈಡ್ ಕಾರ್ಯಾಚರಣೆಗಳಿಗೆ ಸಂಬಂಧಿಸಿದಂತೆ ನಾಗರಿಕ ವಿಮಾನಯಾನ ಮತ್ತು ಇತರೆ ಅನ್ವಯವಾಗುವ ಕಾನೂನುಗಳು ಮತ್ತು ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಕೊಳ್ಳುವುದು. • ಡಿಜಿಸಿಎ ನಿಯಮಾವಳಿಗಳ ಜ್ಞಾನಹೊಂದಿರಬೇಕು	75,000/–	ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷ

(1) ಆಸಕ್ತ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ ಮತ್ತು ಅನುಭವದ ವಿವರಗಳನ್ನೊಳಗೊಂಡ ಅರ್ಜಿಯನ್ನು ಇ–ಮೇಲ್/ ಶೀಘ್ರ ಅಂಚೆ/ ಖುದ್ದಾಗಿ ಈ ಪ್ರಕಟಣೆ ಪ್ರಕಟಣೆಗೊಂಡ **07 ದಿನಗಳ ಒಳಗಾಗಿ** ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕು. **(2)** ನೇರ ಸಂದರ್ಶನದ ದಿನಾಂಕ ಮತ್ತು ಸಮಯವನ್ನು ನಂತರ ತಿಳಿಸಲಾಗುವುದು. **(3)** ಆಯ್ಕೆಯಾದ ಅಭ್ಯರ್ಥಿಗಳನ್ನು ಶಿವಮೊಗ್ಗ ವಿಮಾನ ನಿಲ್ದಾಣ ಹಾಗೂ ವಿಜಯಪುರ ವಿಮಾನ ನಿಲ್ದಾಣಗಳಲ್ಲಿ ನಿಯೋಜಿಸಲಾಗುವುದು. **(4)** ಯಾವುದೇ ರೀತಿಯ ಸ್ಪಷ್ಟೀಕರಣಗಳಿಗೆ ದಯವಿಟ್ಟು ಮೊಬೈಲ್ ಸಂಖ್ಯೆ 98458 33566 ಸಂಪರ್ಕಿಸಬಹುದು

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)

ವಿಜಯಪುರ ಮಹಾನಗರಪಾಲಿಕೆ, ವಿಜಯಪುರ

ಕೇಂದ್ರ ಕಛೇರಿ ಬಾಗಲಕೋಟೆ ರಸ್ತೆ, ಜಲನಗರ–586109
ವೆಬ್‌ಸೈಟ್:http://vijayapuracity.mrc.gov.in
E-mail: itstaff_ulb_bijapur@yahoo.co.in

ಸಂ.ಮನಪಾವಿ/ಕೇ.ಕ/ಪವಿ/2024–25/3119 ದಿನಾಂಕ:08.10.2024

ದರಪಟ್ಟಿ ನೀಡಲು ಕೋಟೆಷನ್ ಪ್ರಕಟಣೆ

ವಿಜಯಪುರ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, ಸನ್ 2024–25ನೇ ಸಾಲಿನ 15ನೇ ಹಣಕಾಸು, ಎಸ್.ಬಿ.ಎಮ್–2.0, ಸಾಮಾನ್ಯ ನಿಧಿಯ ಹಾಗೂ ಇತರೆ ಲಭ್ಯ ವಿರುವ ಅನುದಾನದ ಹಾಗೂ ಉಳಿತಾಯ ಮೊತ್ತದಲ್ಲಿ. (1) 73 TPD MRF Centre (Material Recovery Facility) ಯಲ್ಲಿ 15 ಕಾಮಗಾರಿಗಳು. **(ಇಂಡೆಂಟ್:DMA/2024-25/IND3661)** (2) ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ವಾಹನಗಳ ಖರೀದಿ ಕುರಿತಂತೆ 8 ಕಾಮಗಾರಿಗಳು. **(ಇಂಡೆಂಟ್:DMA/2024-25/IND3689)** (3) ವಿಜಯಪುರ ಮಹಾನಗರಪಾಲಿಕೆಯ ಸ್ವಚ್ಛತಾ ಕಾರ್ಮಿಕರುಗಳಿಗೆ, ಸುರಕ್ಷತಾ ಸಲಕರಣೆ, ಸಮವಸ್ತ್ರ ಮತ್ತು ಇತರೆ ಕಾಮಗಾರಿಗಳಿಗೆ **(ಇಂಡೆಂಟ್:DMA/2024-25/IND3690)** 4) ವಿಜಯಪುರ ಮಹಾನಗರಪಾಲಿಕೆಯ ಸ್ವಚ್ಛತಾ ಕಾರ್ಮಿಕರುಗಳಿಗೆ ಆರೋಗ್ಯ ತಪಾಸಣೆ ಕೈಗೊಳ್ಳುವುದು **(ಇಂಡೆಂಟ್: DMA/2024-25/OW/WORK_INDENT30892)** 5) ವಿಜಯಪುರ ಮಹಾನಗರಪಾಲಿಕೆಗೆ ಸ್ಟೇಶನರಿ ಸಾಮಗ್ರಿಗಳನ್ನು ಖರೀದಿಸುವುದು **(ಇಂಡೆಂಟ್: DMA/2024-25/IND3659)** ಎಸ್.ಆರ್ ದರಗಳು ಲಭ್ಯವಿಲ್ಲದೇ ಇರುವುದರಿಂದ ಅರ್ಹ ಗುತ್ತಿಗೆದಾರರು/ ಏಜೆನ್ಸಿದಾರರು /ಸರಬರಾಜುದಾರರಿಂದ ಅಂದಾಜು ಸಿದ್ಧಪಡಿಸಲು ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಇಚ್ಛೆವುಳ್ಳ ಗುತ್ತಿಗೆದಾರರು/ ಏಜೆನ್ಸಿದಾರರು/ಸರಬರಾಜುದಾರರು ತಮ್ಮ ದರಗಳನ್ನು ಕೊನೆಯ ದಿನಾಂಕದ ಒಳಗಾಗಿ https://kppp.karnataka.gov.in ಕೆ.ಪಿ.ಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ತಿಳಿಸಲಾಗಿದೆ. (ತೆರೆದ ಲಕೋಟೆ /ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ). **ಕೊಟೇಷನ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 19.10.2024.**

ಸಹಿ/– ಕಾರ್ಯಪಾಲಕ ಅಭಿಯಂತರರು,
ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/309/ ಕೆಎಸ್ಎಂಸಿಎ/2024–25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಮುಇಂವಿ/ಟೆಂ&ಪ್ರೋ)ಅಇಂವಿ–2/ಕಾನಿಇಂತಾ೦12ಎನ್/ಕೆಸಿಓ173/2024–25/4507–11
ದಿನಾಂಕ:09.10.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆಯ ಮೂಲಕ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ಅನ್ನು ಆಹ್ವಾನಿಸಿದೆ.

ಬಿಡ್ ವಿಚಾರಣೆ ಸಂಖ್ಯೆ: KPTCL/2024-25/IND0117 ರ ಅನ್ವಯ **KPTCL ತಾಂತ್ರಿಕ ವಿಶೇಷಣಗಳಿಗೆ ಅನುಗುಣವಾಗಿ ಎಫ್.ಒ.ಆರ್.ಡಿ ಉಗ್ರಾಣ / ಪ್ರದೇಶದ ಆಧಾರದಲ್ಲಿ ಬಿಡಿಭಾಗಗಳೊಂದಿಗೆ ಮತ್ತು ವಿಶ್ಲೇಷನಾತ್ಮಕ ಡಿಜಿಟಲ್ ಸಮತೋಲನದೊಂದಿಗೆ 2 ಸಂಖ್ಯೆಗಳ ಆಟೋಟೈಟ್ರೇಟರ್‌ಗಳನ್ನು (Autotitrator) ವಿನ್ಯಾಸ, ತಯಾರಿಕೆ, ಪರೀಕ್ಷಿಸುವುದು, ತಪಾಸಣೆ ಮತ್ತು ಸರಬರಾಜು, ವಿಮೆ, ಸಾಗಾಣಿಕೆ ಮತ್ತು ಇಳಿಸುವಿಕೆ ಒಳಗೊಂಡಿರುತ್ತದೆ.** ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್: **https://kptcl.karnataka.gov.in** ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ **https://kppp.karnataka.gov.in** ನಲ್ಲಿ **ದಿನಾಂಕ: 15.10.2024 ಅಪರಾಹ್ನ 15:00 ಗಂಟೆಗೆ ಅಥವಾ ತದನಂತರ** ಲಾಗಿನ್ ಆಗಿ ಪಡೆಯಬಹುದಾಗಿರುತ್ತದೆ. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ: 15.11.2024 ಅಪರಾಹ್ನ 15:00 ಗಂಟೆ.** ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಣೆ/ತಿದ್ದುಪಡಿ ಇದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್),
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ,
ಕಾವೇರಿ ಭವನ, ಬೆಂಗಳೂರು–560009

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಇಂಜಿನಿಯರ್ ಕಚೇರಿ, DWC ಕೇಂದ್ರದ ಹತ್ತಿರ, ರೆಮ್ಕೋ ಲೇಔಟ್, ಜವರೇಗೌಡನದೊಡ್ಡಿ ಮುಖ್ಯ ರಸ್ತೆ, ಬೆಂಗಳೂರು –560098

No.EE/RI/RRN/TEND/call-2/03/2024-25 Date: 10.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
ಟೆಂಡರ್ ಗೆ ಆಹ್ವಾನ (ಐಎಫ್‌ಟಿ)
(ಜಾಒಕೆ ಕರ್ನಾಟಕ ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ) (ಎರಡು ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಆರ್ ಐ– ಆರ್ ಆರ್ ನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಥವಾ ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋ಼ಷ್ಟಕದಲ್ಲಿ ನಮೂದಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಪೋರ್ಟಲ್ ಮೂಲಕ ಸಲ್ಲಿಸಬಹುದು. ಕಾಮಗಾರಿಗೆ ಅರ್ಹತೆ ಪಡೆಯಲು ಟೆಂಡರ್ ಸೂಚನೆಗಳಲ್ಲಿ ಷರತ್ತು 3ರಲ್ಲಿ ನಿರ್ದಿಷ್ಟ ಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಟೆಂಡರ್‌ದಾರರಿಗೆ ಸೂಚಿಸಲಾಗುತ್ತದೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ಮತ್ತು ಕೆಟಿಪಿಪಿ ಕಾಯ್ದೆಯನ್ನು ಅನುಸರಿಸಬೇಕು). 4. ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಗಳ ವಿವರ/ಟೆಂಡರ್‌ಗಿಟ್ಟ ಮೊತ್ತ(ರೂ. ಲಕ್ಷಗಳಲ್ಲಿ)/ಇಎಂಡಿ (ರೂ. ಗಳಲ್ಲಿ)
1	ಮೆಟ್ರೋ ನೇರಳೆ ಮಾರ್ಗದಲ್ಲಿ "ಕೊನೆಯ ಮೈಲಿ ಸಂಪರ್ಕವನ್ನು" ಸ್ಥಾಪಿಸಲು ಕೆಂಗೇರಿ, ಆರ್ ಆರ್ ನಗರ, ಅತ್ತಿಗುಪ್ಪೆ, ವಿಜಯನಗರ, ಬಿ ಜಿ ಎಸ್ ಮತ್ತು ಮಾಗಡಿ ರಸ್ತೆ, (7 ರಸ್ತೆಗಳು, ಅಂದರೆ ರೈಲ್ವೆ ಸಮಾನಾಂತರ ರಸ್ತೆ, ಆರ್ ಆರ್ ನಗರ ಮುಖ್ಯ ರಸ್ತೆ, 5ನೆ ಮುಖ್ಯ ರಸ್ತೆ, 8ನೆ ಮುಖ್ಯ ರಸ್ತೆ, 1ನೆ ಮುಖ್ಯ ರಸ್ತೆ, 1ನೆ ಅಡ್ಡ ರಸ್ತೆ,ಮತ್ತು ಡಾ. ರಾಜಕುಮಾರ್ ರಸ್ತೆ) ಜಿಟಿ ವರ್ಲ್ಡ್ ಮಾಲ್‌ನಿಂದ ಮೆಟ್ರೋ ನಿಲ್ದಾಣಗಳನ್ನು ಸಂಪರ್ಕಿಸುವ ಬೆಂಗಳೂರು ನಗರದ ಮೆಟ್ರೋ ಕಾರಿಡಾರ್‌ಗಳನ್ನು ಸೇರುವ ಪ್ರಮುಖ ರಸ್ತೆಗಳಲ್ಲಿ "ಲೈಟ್ ಟೆಂಡರ್ ಶ್ಯೂರ್ ಮಾದರಿ"ಯಲ್ಲಿ ಫುಟ್‌ಪಾತ್‌ನ ಪುನರಾಭಿವೃದ್ಧಿ ಮತ್ತು ನಿರ್ಮಾಣ. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): **2060.88** (18% ಜಿಎಸ್‌ಟಿ ಹೊರತುಪಡಿಸಿ), ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ): **20.60** (ಕೆಪಿಪಿ ಪೋರ್ಟಲ್ ಮೂಲಕ ರೂ. 1 ಲಕ್ಷ, ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ರೂ. 19.60 ಲಕ್ಷ)

ವೇಳಾಪಟ್ಟಿ: 1) ಟೆಂಡರ್ ದಸ್ತಾವೇಜುಗಳು ಲಭ್ಯವಿರುವ ದಿನಾಂಕ : 15.10.2024, 2) ಪ್ರೀ ಬಿಡ್ ಮೀಟಿಂಗ್ : 18.10.2024 ಸಂಜೆ 4.00 ಗಂಟೆಗೆ. 3) ಟೆಂಡರ್ ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : 22.10.2024 ಸಂಜೆ 4.00 ಗಂಟೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 23.10.2024 ಸಂಜೆ 4.00 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ತಾಂತ್ರಿಕವಾಗಿ ಅರ್ಹವಾದ ಬಿಡ್ಡರ್‌ಗಳಿಗೆ ತಿಳಿಸಲಾಗುವುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಆರ್ ಐ– ಆರ್ ಆರ್ ನಗರ ವಿಭಾಗ), ಬಿಬಿಎಂಪಿ

ಕೆ.ಸಿ. ಜನರಲ್ ಆಸ್ಪತ್ರೆ

ವೈದ್ಯಕೀಯ ಅಧೀಕ್ಷಕರ ಕಛೇರಿ, ಮಲ್ಲೇಶ್ವರಂ, ಬೆಂಗಳೂರು–560 003
ದೂರವಾಣಿ: 080–23344022, 23341771 ಇ–ಮೇಲ್:kcghoffice@gmail.com

ಸಂಖ್ಯೆ:ಕೆಸಿಜಿಆ:ಡಿಎನ್‌ಬಿ/11/2024–25 ದಿನಾಂಕ: 09–10–2024

ಪ್ರಕಟಣೆ

ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು ಇಲ್ಲಿಗೆ ಗುತ್ತಿಗೆ ಆಧಾರದ ಮೇಲೆ ಡಿ.ಎನ್.ಬಿ. ಕೋರ್ಸ್‌ಗೆ ಸೀನಿಯರ್ / ಜ್ಯೂನಿಯರ್ ಕನ್ಸಲ್ಟೆಂಟ್‌ಗಳನ್ನು ನೇಮಿಸಲು ನೇರ ಸಂದರ್ಶನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅರ್ಜಿದಾರರು ತಮ್ಮ ಮೂಲ ದಾಖಲೆಗಳೊಂದಿಗೆ **ದಿನಾಂಕ: 21.10.2024 ರಂದು ಬೆಳಿಗ್ಗೆ 11.00 ಗಂಟೆಗೆ ಖುದ್ದಾಗಿ ಆಯುಕ್ತರವರ ಕಛೇರಿ, 5ನೇ ಮಹಡಿ, ಆರೋಗ್ಯ ಸೌಧ, ಬೆಂಗಳೂರು–560023** ಇಲ್ಲಿ ಸಂದರ್ಶನಕ್ಕೆ ಹಾಜರಾಗಬಹುದು.

ವಿಶೇಷತೆ	ಹುದ್ದೆಗಳ ಸಂಖ್ಯೆ	
	ಸೀನಿಯರ್ ಕನ್ಸಲ್ಟೆಂಟ್	ಜ್ಯೂನಿಯರ್ ಕನ್ಸಲ್ಟೆಂಟ್
ಅರವಳಿಕೆ	01	–
ಜನರಲ್ ಸರ್ಜರಿ	01	–
ಎಮರ್‌ಜೆನ್ಸಿ ಮೆಡಿಸನ್	01	–
ಎಮರ್‌ಜೆನ್ಸಿ ಮೆಡಿಸನ್	–	01

ಅರ್ಹತೆಯ ಮಾನದಂಡಗಳು:

1) ಸೀನಿಯರ್ ಕನ್ಸಲ್ಟೆಂಟ್:

- **ಅರವಳಿಕೆ ಹಾಗೂ ಜನರಲ್ ಸರ್ಜರಿ:** ಪಿಜಿ ಪದವಿಯ ನಂತರ ಸಂಬಂಧಪಟ್ಟ ತಜ್ಞತೆಯಲ್ಲಿ ಕನಿಷ್ಠ 10 ವರ್ಷಗಳ ಅನುಭವ ಹಾಗೂ ಮಾನ್ಯತೆ ಪಡೆದ ವೈದ್ಯಕೀಯ ಕಾಲೇಜು ಅಥವಾ ಡಿಎನ್‌ಬಿ ಕೇಂದ್ರದಲ್ಲಿ 05 ವರ್ಷಗಳ ಬೋಧನಾ ಅನುಭವ ಹೊಂದಿರಬೇಕು.
- **ಎಮರ್‌ಜೆನ್ಸಿ ಮೆಡಿಸನ್:** ಅರವಳಿಕೆ / ಜನರಲ್ ಸರ್ಜರಿ ತಜ್ಞತೆಯಲ್ಲಿ ಸ್ನಾತಕೋತ್ತರ ಪದವಿಯ ನಂತರ ಕನಿಷ್ಠ 08 ವರ್ಷಗಳ ಅನುಭವ ಅಥವಾ ಎಮರ್‌ಜೆನ್ಸಿ ಮೆಡಿಸನ್ ತಜ್ಞತೆಯಲ್ಲಿ ಸ್ನಾತಕೋತ್ತರ ಪದವಿಯ ನಂತರ ಕನಿಷ್ಠ 05 ವರ್ಷಗಳ ಅನುಭವ ಹೊಂದಿರಬೇಕು ಹಾಗೂ ಮಾನ್ಯತೆ ಪಡೆದ ವೈದ್ಯಕೀಯ ಕಾಲೇಜು ಅಥವಾ ಡಿಎನ್‌ಬಿ ಕೇಂದ್ರದಲ್ಲಿ 05 ವರ್ಷಗಳ ಬೋಧನಾ ಅನುಭವ ಹೊಂದಿರಬೇಕು.
- ಇಬ್ಬರು ಸ್ನಾತಕೋತ್ತರ / ಡಿ.ಎನ್.ಬಿ. ವಿದ್ಯಾರ್ಥಿಗಳಿಗೆ ಬೋಧನೆ ನೀಡಿರುವ ಅನುಭವವಿರಬೇಕು.

2) ಜ್ಯೂನಿಯರ್ ಕನ್ಸಲ್ಟೆಂಟ್:

- ಜನರಲ್ ಮೆಡಿಸನ್ / ಅರವಳಿಕೆ / ಜನರಲ್ ಸರ್ಜರಿಯಲ್ಲಿ 5 ವರ್ಷಗಳಿಗಿಂತ ಹೆಚ್ಚು ಪೋಸ್ಟ್ ಪಿಜಿ ಮತ್ತು ಬೋಧನಾ ಅನುಭವ ಹೊಂದಿರಬೇಕು ಅಥವಾ ಎಂ.ಡಿ. ಎಮರ್‌ಜೆನ್ಸಿ ಮೆಡಿಸನ್‌ನಲ್ಲಿ 3 ವರ್ಷಗಳಿಗಿಂತ ಹೆಚ್ಚು ಪೋಸ್ಟ್ ಪಿಜಿ ಅನುಭವ ಹೊಂದಿರಬೇಕು.

3) ಕರ್ನಾಟಕ ವೈದ್ಯಕೀಯ ಮಂಡಳಿ (KMC) ಅಡಿಯಲ್ಲಿ ನೋಂದಾಯಿಸಿ ಕೊಂಡಿರಬೇಕು.

4) ಒಂದು ವರ್ಷದ ಅವಧಿಗೆ ನೇಮಕ ಮಾಡಲಾಗುವುದು. ತದನಂತರ ಮೌಲ್ಯಮಾಪನ ನಡೆಸಿ ಸೇವೆ ತೃಪ್ತಿಕರವಾಗಿದ್ದಲ್ಲಿ ಮುಂದುವರಿಸಲಾಗುವುದು.

5) **ಗೌರವಧನ:** ಸೀನಿಯರ್ ಕನ್ಸಲ್ಟೆಂಟ್ : 1.5 ಲಕ್ಷ ಹಾಗೂ
ಜ್ಯೂನಿಯರ್ ಕನ್ಸಲ್ಟೆಂಟ್ : 1.3 ಲಕ್ಷ

6) **ವಯೋಮಿತಿ:** 67 ವರ್ಷ ವಯಸ್ಸಿನೊಳಗಿರಬೇಕು ಹಾಗೂ ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಹೊಂದಿರಬೇಕು.

ಸಹಿ/– ವೈದ್ಯಕೀಯ ಅಧೀಕ್ಷಕರು,
ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/2454/2024–25

ಸುಭಾಷಿತ

ಗೆಲ್ಲುತ್ತೇನೆ ಎಂದು ಬಂದವನು ಸೋಲುವುದಕ್ಕೂ ಸಿದ್ಧನಿರಬೇಕು.

-ದ.ರಾ.ಬೇಂದ್ರೆ

ಭಾರತ, ಮಾಲ್ದೀವ್ಸ್ ಸಂಬಂಧ ಅಂತೂ ಅರಿವಿಗೆ ಬಂತು ವಸ್ತುಸ್ಥಿತಿ

ದ್ವಿಪಕ್ಷೀಯ ಸಂಬಂಧವನ್ನು ಮತ್ತೆ ಸರಿಪಡಿಸಿಕೊಳ್ಳಲು ಭಾರತ ಮತ್ತು ಮಾಲ್ದೀವ್ಸ್ ಬಹಳಷ್ಟು ಶ್ರಮ ವಹಿಸಿವೆ ಎಂದು ಅನ್ನಿಸುತ್ತಿದೆ. ಆದರೆ ಇದು ಸಾಧ್ಯವಾಗಲು ಅರ್ಥ ಪರ್ಯಾಪ್ತಕ್ಕೆ ಹೆಚ್ಚಿನ ಸಮಯ ಬೇಕಾಯಿತು ಎಂಬುದು ಗಮನಾರ್ಹ. ಭಾರತಕ್ಕೆ ಮಾಲ್ದೀವ್ಸ್ ಬೇಕು, ಮಾಲ್ದೀವ್ಸ್‌ಗೆ ಭಾರತ ಬೇಕು. ಈ ಎರಡೂ ದೇಶಗಳಿಗೆ ಪರಸ್ಪರರು ಬೇಕು ಎನ್ನುವುದಕ್ಕೆ ಕಾರಣಗಳು ಬೇರೆ ಬೇರೆ. ಈ ವರ್ಷದ ಜನವರಿಯಿಂದ ಈಚೆಗೆ ನಡೆದ ಮಾತಿನ ಚಕಮಕಿ, ಮಾಲ್ದೀವ್ಸ್‌ನ ಪ್ರವಾಸಿ ತಾಣಗಳನ್ನು ಬಹಿಷ್ಕರಿಸಲು ಸಾಮಾಜಿಕ ಜಾಲತಾಣಗಳ ಮೂಲಕ ನಡೆದ ಅಭಿಯಾನ, ಮಾಲ್ದೀವ್ಸ್‌ನ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರು ಚೀನಾದ ನೆಲದಲ್ಲಿ ನಿಂತು, ತಮ್ಮ ದೇಶದ ಸಾರ್ವಭೌಮತ್ವಕ್ಕೆ ಭಾರತ ಬೆದರಿಕೆ ಎಂದು ಹೇಳಿದ್ದು... ಇವೆಲ್ಲ ನಡೆದ ನಂತರದಲ್ಲಿ ವಾಸ್ತವದ ಅರಿವು ಆಗಿರುವಂತೆ ಕಾಣುತ್ತಿದೆ. ಹಿಂದೂ ಮಹಾ ಸಾಗರದಲ್ಲಿನ ದ್ವೀಪಗಳ ಸಮೂಹವಾಗಿರುವ ಮಾಲ್ದೀವ್ಸ್ ದೇಶವು ಭಾರತದ ಬಹುಮುಖ್ಯ ಹಿತಾಸಕ್ತಿಗಳ ದೃಷ್ಟಿಯಿಂದ ಮಹತ್ವ ಪಡೆದುಕೊಳ್ಳುತ್ತದೆ. ಮಾಲ್ದೀವ್ಸ್ ದೇಶವು ಅಂದಾಜು 3.7 ಬಿಲಿಯನ್ ಡಾಲರ್ (ಸರಿಸುಮಾರು ₹31 ಸಾವಿರ ಕೋಟಿ) ವಿದೇಶಿ ಸಾಲದ ಭಾರ ಹೊತ್ತುಕೊಂಡಿದೆ. ಈ ಸಾಲದಲ್ಲಿ ಚೀನಾದಿಂದ ಪಡೆದ ಸಾಲದ ಪ್ರಮಾಣವು ಶೇಕಡ 40ರಷ್ಟು ಇದೆ. ವಿತ್ತೀಯ ಕೊರತೆ ಹಾಗೂ ಕರೆನ್ಸಿ ಕೊರತೆಯನ್ನೂ ದೇಶವು ಎದುರಿಸುತ್ತಿದೆ. ಇಂಥದ್ದೇ ಪರಿಸ್ಥಿತಿ ಸಿಲುಕಿದ್ದ ಶ್ರೀಲಂಕಾಕ್ಕೆ ಆಗಿದ್ದೇ ತನಗೂ ಆಗಬಹುದು ಎಂಬುದನ್ನು ಮಾಲ್ದೀವ್ಸ್ ಅರ್ಥ ಮಾಡಿಕೊಂಡಿತು. ಹೀಗಾಗಿ ಅದು ನೆರವು ಯಾಚಿಸಲು ಮುಂದಾಯಿತು. ಆದರೆ ಅಧಿಕ ನೆರವು ಒದಗಿಸುವ ವಿಚಾರದಲ್ಲಿ ಚೀನಾ ಕಡೆಯಿಂದ ಉತ್ತಮ ಸ್ಪಂದನ ವ್ಯಕ್ತವಾಗಲಿಲ್ಲ. ನೆರೆಯ ದೇಶಗಳು ಕಷ್ಟಕ್ಕೆ ಸಿಲುಕಿದಾಗ ನೆರವಿಗೆ ಧಾವಿಸುವ ಮೊದಲ ದೇಶವು ತಾನು ಎಂದು ಹೇಳಿಕೊಳ್ಳುವ ಭಾರತವು ಈ ಪರಿಸ್ಥಿತಿಯಲ್ಲಿ, ಹಿಂದೆ ಶ್ರೀಲಂಕಾಕ್ಕೆ ನೆರವು ನೀಡಿದ್ದ ಮಾದರಿಯಲ್ಲಿ, ಮಾಲ್ದೀವ್ಸ್‌ಗೆ ನೆರವಿನ ಹಸ್ತ ಚಾಚಿತು. ಅದರ ಪರಿಣಾಮವು ಈಗ ಕಣ್ಣೆದುರಿಗೆ ಇದೆ. ಮುಯಿಝು ಅವರ ಭಾರತ ಭೇಟಿಯಿಂದಾಗಿ ಭಾರತಕ್ಕೂ ಮಾಲ್ದೀವ್ಸ್‌ಗೂ ಲಾಭವಾದಂತೆ ಕಾಣುತ್ತಿದೆ.

ನೆರೆ ದೇಶದ ವಿಚಾರದಲ್ಲಿ ಮೂರನೆಯ ದೇಶವು ಪ್ರಭಾವ ಬೀರುವ, ಹಿಡಿತ ಸಾಧಿಸುವ ವಿಚಾರದಲ್ಲಿ ಕೇಂದ್ರವು ಜಾಗರೂಕವಾಗಿ ಇರಬೇಕು

ಮುಯಿಝು ಅವರ ಭಾರತ ಭೇಟಿಯ ಪರಿಣಾಮವಾಗಿ ಎರಡೂ ದೇಶಗಳ ನಡುವೆ 750 ದಶಲಕ್ಷ ಡಾಲರ್ (ಅಂದಾಜು ₹6 ಸಾವಿರ ಕೋಟಿ) ಮೌಲ್ಯದ ಕರೆನ್ಸಿ ವಿನಿಮಯ ಒಪ್ಪಂದ ಸಾಧ್ಯವಾಗಿದೆ. ಅಲ್ಲದೆ, ಭಾರತ ಮತ್ತು ಮಾಲ್ದೀವ್ಸ್ ನಡುವೆ ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ಕುರಿತು ಮಾತುಕತೆ ಶುರುವಾಗಲಿದೆ ಎಂಬ ಘೋಷಣೆ ಹೊರಬಿದ್ದಿದೆ. ಮಾಲ್ದೀವ್ಸ್ ಕೆಲವು ವರ್ಷಗಳ ಹಿಂದೆಯೇ ಚೀನಾದ ಜೊತೆ ಎಫ್‌ಟಿಎ ಒಪ್ಪಂದ ಮಾಡಿಕೊಂಡಿದೆ. ಆದರೆ ಮಾಲ್ದೀವ್ಸ್‌ನ ಈ ಹಿಂದಿನ ಸರ್ಕಾರವು ಆ ಒಪ್ಪಂದವನ್ನು ಅನುಷ್ಠಾನಕ್ಕೆ ತರಲಿಲ್ಲ. ಈಗ ಮುಯಿಝು ನೇತೃತ್ವದ ಸರ್ಕಾರವು ಅದನ್ನು ಅನುಷ್ಠಾನಕ್ಕೆ ತರಲಿದೆಯೇ ಎಂಬುದನ್ನು ಕಾದುನೋಡಬೇಕಿದೆ. ಈ ವರ್ಷದ ಆರಂಭದಲ್ಲಿ ಭಾರತ ಮತ್ತು ಮಾಲ್ದೀವ್ಸ್ ನಡುವೆ ಮಾತಿನ ಚಕಮಕಿ ಜೋರಾಗಿದ್ದಾಗ, ಭಾರತದ ಯೋಧರು ಮಾಲ್ದೀವ್ಸ್‌ನಲ್ಲಿ ಇರುವಂತಿಲ್ಲ ಎಂದು ಮುಯಿಝು ತಾಕೀತು ಮಾಡಿದ್ದರು. ಆದರೆ ಈಗ ಭಾರತವು ಮಾಲ್ದೀವ್ಸ್‌ನಲ್ಲಿ ರಕ್ಷಣಾ ಸಹಕಾರ ಕಾರ್ಯಗಳನ್ನು ಹಾಗೂ ಅಲ್ಲಿನ ರಾಷ್ಟ್ರೀಯ ರಕ್ಷಣಾ ಪಡೆಗಳಿಗಾಗಿ ಬಂದರನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ಮುಂದುವರಿಸಲಿದೆ. ಅಲ್ಲದೆ, ರಕ್ಷಣಾ ವೇದಿಕೆಗಳನ್ನು ಭಾರತವು ಆ ದೇಶಕ್ಕೆ ಒದಗಿಸಲಿದೆ. 'ರಕ್ಷಣಾ ವೇದಿಕೆಗಳನ್ನು' ಎಂಬ ಪದಗಳು ಮಾಲ್ದೀವ್ಸ್ ಕರಾವಳಿ ಕಾವಲು ಪಡೆಗೆ ಹಡಗುಗಳನ್ನು ಒದಗಿಸುವುದು ಹಾಗೂ ರೇಡಾರ್‌ನಂತಹ ಕಣ್ಗಾವಲು ಉಪಕರಣಗಳನ್ನು ಒದಗಿಸುವುದನ್ನು ಒಳಗೊಳ್ಳಬಹುದು ಎಂದು ವ್ಯಾಖ್ಯಾನಿಸಲಾಗಿದೆ.

ಭಾರತವು ಆ ದೇಶದಲ್ಲಿ ಗೃಹ ಅಭಿವೃದ್ಧಿ ಸೇರಿದಂತೆ ಕೆಲವು ಮೂಲಸೌಕರ್ಯ ಯೋಜನೆಗಳನ್ನು ಮುಂದುವರಿಸಲಿದೆ. ಮುಯಿಝು ಭೇಟಿಯ ಸಂದರ್ಭದಲ್ಲಿ, ಮಾಲ್ದೀವ್ಸ್‌ನಲ್ಲಿ ರುಪೇ ಕಾರ್ಡ್‌ಗಳ ಬಳಕೆಗೆ ಚಾಲನೆ ನೀಡಲಾಗಿದೆ. ಭಾರತದಿಂದ ಆ ದೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಸೆಳೆಯುವ ಉದ್ದೇಶದಿಂದ ಬೆಂಗಳೂರಿನಲ್ಲಿ ಮಾಲ್ದೀವ್ಸ್‌ನ ಕಾನ್ಸುಲೇಟ್ ಕಚೇರಿಯೊಂದು ಆರಂಭವಾಗಲಿದೆ. ಅದೇ ರೀತಿಯಲ್ಲಿ ಭಾರತವು ಮಾಲ್ದೀವ್ಸ್‌ನ ಎರಡನೆಯ ಅತಿದೊಡ್ಡ ನಗರವಾದ 'ಅಡ್ಡು'ವಿನಲ್ಲಿ ಕಾನ್ಸುಲೇಟ್ ಕಚೇರಿ ತೆರೆಯಲಿದೆ. ಮಾಲ್ದೀವ್ಸ್ ಜೊತೆಗಿನ ಸಂಬಂಧದಲ್ಲಿ ಆಗಿರುವ ಬದಲಾವಣೆಯು ಒಂದು ಸಂಗತಿಯನ್ನು ಸ್ಪಷ್ಟಪಡಿಸುತ್ತಿದೆ. ರಾಜತಾಂತ್ರಿಕರ ಮಟ್ಟದಲ್ಲಿ ನಡೆಯುವ ಕೆಲಸಗಳಿಗೆ ಪರ್ಯಾಯ ಇಲ್ಲ ಎಂಬುದು ಆ ಸಂಗತಿ. ದ್ವಿಪಕ್ಷೀಯ ಸಂಬಂಧಗಳ ವಿಚಾರದಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಸಂದೇಶಗಳನ್ನು ರವಾನಿಸುವುದು ಸರಿಯಾದ ಕ್ರಮ ಅಲ್ಲ. ಅಡೆತಡೆಗಳು ಹಲವು ರೂಪಗಳಲ್ಲಿ ಎದುರಾಗುತ್ತಲೇ ಇರುತ್ತವೆ. ಆದರೆ, ಸಣ್ಣದಾದರೂ ಬಹಳ ಮುಖ್ಯವಾದ ನೆರೆ ದೇಶದ ವಿಚಾರದಲ್ಲಿ ಮೂರನೆಯ ದೇಶವು ಪ್ರಭಾವ ಬೀರುವ, ಹಿಡಿತ ಸಾಧಿಸುವ ವಿಚಾರದಲ್ಲಿ ಕೇಂದ್ರವು ಜಾಗರೂಕವಾಗಿ ಇರಬೇಕು.

ಬಿಸಿಪ್ರಳಯ ತಡೆಗೆ ಚಲಿಸುವ ಪರಮಾಣು ಸ್ಥಾವರಗಳು ಸಿದ್ಧವಾಗುತ್ತಿವೆ, ಸುರಕ್ಷೆಯ ಕತೆ?

ಸ್ಥಾವರಗಳಿಗೀಗ ಜಂಗಮ ದೀಕ್ಷೆ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಮಿತ್ರದೇಶಗಳಿಗೆಲ್ಲ ಪರಮಾಣು ಸ್ಥಾವರಗಳನ್ನು ಕಟ್ಟಿಸಿಕೊಡುವ ರಷ್ಯಾ ಈಚೆಗೆ ತನ್ನದೇ 'ಕುರ್ಕ್' ಪರಮಾಣು ಸ್ಥಾವರದ ಸುತ್ತ ಗಡಿಬಿಡಿಯಲ್ಲಿ ಕಂದಕವನ್ನು ತೋಡುತ್ತಿತ್ತು. ಉಕ್ರೇನಿನ ಸೇನೆ ಆ ಕಡೆ ನುಗ್ಗಿ ಬರುತ್ತಿರುವುದು ಅದರ ಆತಂಕಕ್ಕೆ ಕಾರಣವಾಗಿತ್ತು. ಸ್ಥಾವರದ ಹತ್ತಿರಕ್ಕೆಲ್ಲೂ ವೈರಿ ಸೈನ್ಯ ಬಾರದಂತೆ ಅದು ಹೇಗಾದರೂ ತಡೆಯಬೇಕಿತ್ತು.

ಇದೊಳ್ಳೇ ತಮಾಷೆ ಆಯ್ತಲ್ಲ? ಪರಮಾಣು ಸ್ಥಾವರಗಳೆಂದರೆ ಬಾಂಬ್ ದಾಳಿಗೂ ಕುಸಿಯದಂತೆ ಭದ್ರವಾಗಿ ಕಟ್ಟಿರುತ್ತಾರೆ. ವೈರಿ ವಿಮಾನಗಳು ಅತ್ತ ಸುಳಿದರೆ ಹೊಡೆದು ಉರುಳಿಸಲು ಕ್ಷಿಪಣಿಗಳು ಸದಾ ಸಜ್ಜಾಗಿರುತ್ತವೆ. ಹೀಗಿದ್ದೂ ಈಗ ನೆಲದ ಮೇಲೆಯೇ ಹೊಟ್ಟೆ ಹೊಸೆಯುತ್ತ ಬರುವ ಟ್ಯಾಂಕ್‌ಗಳಿಗೆ, ತುಪಾಕಿಗಳಿಗೆ ಹೆದರುವುದೆ?

ಹೆದರಬೇಕಾದ ವಿಲಕ್ಷಣ ಸ್ಥಿತಿಯನ್ನು ರಷ್ಯಾ ತಾನೇ ತಂದುಕೊಂಡಿದೆ. ಕಳೆದ ವರ್ಷ ಈ ದೇಶ ಉಕ್ರೇನಿನ ಒಂದು ಪರಮಾಣು ಸ್ಥಾವರವನ್ನು ತನ್ನ ಕೈವಶ ಮಾಡಿಕೊಂಡಿದೆ. ಅದರಲ್ಲಿ ರಷ್ಯನ್ ಸೈನಿಕರು ಬೀಡುಬಿಟ್ಟಿದ್ದಾರೆ. ಯುರೋಪ್‌ನ ಅತ್ಯಂತ ದೊಡ್ಡ ಪರಮಾಣು ಸಂಕೀರ್ಣವೆಂದು ಪ್ರಸಿದ್ಧ ಪಡೆದಿದ್ದ ಆ ಝಪೊರಿಝ್ಝಿಯಾ ಸ್ಥಾವರ ಈಗ ಎರಡೂ ದೇಶಗಳಿಗೆ ಬಿಸಿತುಪ್ಪವಾಗಿದೆ. ಅಲ್ಲಿ ಈಗ ವಿದ್ಯುತ್ ಉತ್ಪಾದನೆ ಆಗುತ್ತಿಲ್ಲ. ಆದರೂ ಅದನ್ನು ಸದಾ ತಂಪು ಮಾಡುತ್ತಲೇ ಇರಬೇಕು. ಇಲ್ಲವಾದರೆ ತಾನಾಗಿ ಕುದಿದು ಸ್ಫೋಟವಾಗುತ್ತದೆ. ತಂಪು ಮಾಡಬೇಕೆಂದರೆ ಅದಕ್ಕೆ ಸದಾ ವಿದ್ಯುತ್ ಪೂರೈಕೆ ಆಗುತ್ತಿರಬೇಕು. ಉಕ್ರೇನ್ ದೇಶವೇ ಅದಕ್ಕೆ ವಿದ್ಯುತ್ ಶಕ್ತಿಯನ್ನು ನೀಡುತ್ತಿರಬೇಕು. ಹಾಗೆಂದು ರಷ್ಯಾದ ಸೈನಿಕರನ್ನು ಹೊಡೆದಟ್ಟುವ ಹಾಗೂ ಇಲ್ಲ. ಆ ಚಕಮಕಿಯಲ್ಲಿ ಬಾಂಬ್ ಗೀಂಬ್ ಸ್ಫೋಟವಾದರೆ ಅದು ಚೆರ್ನೊಬಿಲ್ ಮಾದರಿಯ ಮತ್ತೊಂದು ಕರಾಳ ಕಥನವಾದೀತು.

ರಷ್ಯಾ ಈಗ ತನ್ನ ಸ್ವಂತದ್ದೇ ಆದ ಕುರ್ಕ್ ಸ್ಥಾವರದ ಸುತ್ತ ಏಕೆ ಕಂದಕ ತೋಡುತ್ತಿದೆ ಅರ್ಥವಾಯಿತೆ? ಉಕ್ರೇನಿನ ಸೈನಿಕರು ಅದನ್ನು ವಶಪಡಿಸಿಕೊಂಡರೆ, ಅವರ ಮೇಲೆ ಬಾಂಬ್ ಹಾಕುವ ಬದಲಿಗೆ ಅವರಿಗೆ ಊಟ ಹಾಕಬೇಕಾಗಿ ಬಂದೀತು. ಎಂಥಾ ಫಜೀತಿ. ಈ ಮಧ್ಯೆ ಇನ್ನಷ್ಟು ಮತ್ತಷ್ಟು ಪರಮಾಣು ಸ್ಥಾವರಗಳನ್ನು ನಿರ್ಮಿಸುವ ಪೈಪೋಟಿ ಎಲ್ಲೆಡೆ ಹೆಚ್ಚುತ್ತಿದೆ. ಏಕೆಂದರೆ, ಅದರಿಂದ ವಿದ್ಯುತ್ ಉತ್ಪಾದನೆ ಆಗುತ್ತಿರುವಾಗ ಕಾರ್ಬನ್ ಡೈ ಆಕ್ಸೈಡ್ ಹೊಮ್ಮುವುದಿಲ್ಲ. ಹಾಗಾಗಿ, ಬಿಸಿ ಪ್ರಳಯವನ್ನು ತಡೆಗಟ್ಟಬೇಕೆಂದರೆ ಅಂಥ ನ್ಯೂಕ್ಲಿಯರ್ ರಿಯಾಕ್ಟರ್‌ಗಳೇ ಬೇಕೆಂದು ಬಿಂಬಿಸಲಾಗುತ್ತಿದೆ. ವಿವಿಧ ದೇಶಗಳಲ್ಲಿ ಸದ್ಯಕ್ಕೆ 416 ರಿಯಾಕ್ಟರ್‌ಗಳು ಚಾಲ್ತಿಯಲ್ಲಿವೆ. ವಿಪರೀತ ವೆಚ್ಚ ಮತ್ತು ನಿರ್ವಹಣೆಯ ಸಂಕಷ್ಟಗಳಿಂದಾಗಿ ಕಳೆದ 40 ವರ್ಷಗಳಿಂದ ಹೊಸ ಪರಮಾಣು ಸ್ಥಾವರಗಳ ನಿರ್ಮಾಣ ಪಾಶ್ಚಿಮಾತ್ಯ ದೇಶಗಳಲ್ಲಿ ಬಹುತೇಕ ನಿಂತೇ ಹೋಗಿತ್ತು. ಈಗ 'ಕಳಚಿ ಕೂಡಿಸಬಹುದಾದ' ಚಿಕ್ಕಚಿಕ್ಕ 'ಮಾಡ್ಯೂಲರ್ ರಿಯಾಕ್ಟರ್'ಗಳ (ಮಾ.ರಿ.) ನಿರ್ಮಾಣ ಸಿದ್ಧತೆ ಜೋರಾಗಿ ನಡೆಯುತ್ತಿದೆ.

ಹಿಂದೆಲ್ಲ ಬೃಹತ್ ಸ್ಥಾವರ ಸಂಕೀರ್ಣದ ಒಂದೊಂದು ಘಟಕವೂ ಸಾವಿರ ಮೆಗಾವಾಟ್ ವಿದ್ಯುತ್ ಶಕ್ತಿಯನ್ನು ಉತ್ಪಾದಿಸುತ್ತಿತ್ತು. ಈಗಿನ ಪುಟ್ಟ 'ಮಾ.ರಿ.'ಗಳು ಕೇವಲ 200-300 ಮೆಗಾವಾಟ್ ಸಾಮರ್ಥ್ಯದ ಅಥವಾ ಅದಕ್ಕೂ ಚಿಕ್ಕವಿರುತ್ತವೆ. ಚಳಿದೇಶಗಳಲ್ಲಿ ಬರೀ ಬಿಸಿನೀರನ್ನು ಪೂರೈಸುವ ಕೆಲಸವನ್ನೂ ಅವು ಮಾಡಬಲ್ಲವು. ರಷ್ಯಾ ಮತ್ತು ಚೀನಾ ಆಗಲೇ ತಲಾ ಒಂದೊಂದು ಮಾ.ರಿ.ಯನ್ನು ಸ್ಥಾಪಿಸಿದ್ದು, ವಿವಿಧ ದೇಶಗಳಲ್ಲಿ 80ಕ್ಕೂ ಹೆಚ್ಚು ಅಂಥ ರಿಯಾಕ್ಟರ್‌ಗಳು ನಿರ್ಮಾಣ ಹಂತದಲ್ಲಿವೆ.

ಅದು ಸಾಲದೆಂಬಂತೆ ಹಡಗಿನಂತೆ ತೇಲುವ ರಿಯಾಕ್ಟರ್‌ಗಳ (ತೇ.ರಿ.) ನಿರ್ಮಾಣಕ್ಕೂ ಚಾಲನೆ ಸಿಕ್ಕಿದೆ. ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್ ಬಳಿಯ ಸಮುದ್ರದಂಚಿಗೆ ಇಂಥದ್ದೊಂದು ಸ್ಥಾವರ ಸಿದ್ಧವಾಗಿದೆ. ಜಂಗಮ ಮಾದರಿಯ 'ಈ ಸ್ಥಾವರ ನಿಮಗೂ ಉಪಯುಕ್ತ' ಎನ್ನುತ್ತ ರಷ್ಯಾ ಇತರ 17 ರಾಷ್ಟ್ರಗಳ ಮನವೊಲಿಸಿದೆ. ಪ್ರತಿ 12 ವರ್ಷಗಳಿಗೊಮ್ಮೆ ಅಂಥ ಹಡಗುಗಳನ್ನು ರಷ್ಯಾಕ್ಕೇ ತರಿಸಿ, ಅಲ್ಲಿ ಹಳೇ ಇಂಧನವನ್ನು ಕಳಚಿ ಹೊಸ ಇಂಧನ ತುಂಬಿಸಿ ಕಳಿಸಬಹುದು. ಮಿತ್ರತ್ವವೂ ಗಟ್ಟಿ ಉಳಿಯುತ್ತದೆ. ಅದಕ್ಕೆ ಭಾರತವೂ ಉತ್ಸಾಹ ತೋರಿಸಿದೆ. ಅತ್ತ ಅಮೆರಿಕದಲ್ಲಿ ಬಸ್ ಗಾತ್ರದ ಉರುಳುವ ರಿಯಾಕ್ಟರ್‌ಗಳ (ಉ.ರಿ) ವಿನ್ಯಾಸ ಸಿದ್ಧವಾಗುತ್ತಿದೆ. ಭೂಕುಸಿತ, ಚಂಡಮಾರುತ ದುರಂತದಲ್ಲಿ ತುರ್ತಾಗಿ ವಿದ್ಯುತ್ ಒದಗಿಸಲು ಇಂಥವು ಬೇಕು ಎಂದು ಪರಮಾಣು ಪೂರೈಕೆದಾರರು ವಶೀಲಿಕೆಯಲ್ಲಿ ತೊಡಗಿದ್ದಾರೆ. ಇನ್ನೇನು, ಸಿನಿಮಾ ಶೂಟಿಂಗಿಗೂ ಡೀಸೆಲ್ ಜನರೇಟರ್ ಬದಲಿಗೆ ಉ.ರಿ.ಗಳು ಬರಬಹುದು.

ಪರಮಾಣು ಕೆಂಡದ ಸಾಮಗ್ರಿ ಹೀಗೆಲ್ಲ ಚಲಾವಣೆಗೆ ಬಂದಿದ್ದೇ ಆದರೆ ಸುರಕ್ಷೆಯ ಗತಿಯೇನು ಎಂದು ಪರಮಾಣು ತಜ್ಞರೇ ಆತಂಕಕ್ಕೀಡಾಗಿದ್ದಾರೆ. ಆಸ್ಪತ್ರೆಗಳ ಸ್ಕ್ಯಾನಿಂಗ್ ಯಂತ್ರಗಳಲ್ಲಿ ಜೋಡಿಸಿಟ್ಟ ಬ್ಯಾಟರಿ ಸೆಲ್ ಗಾತ್ರದ ಪರಮಾಣು ಡಬ್ಬಿಯೇ ಕಾಣೆಯಾಗಿ ಹಿಂದೆ ಎಷ್ಟೊಂದು ಕಡೆ ಏನೆಲ್ಲ ಕೋಲಾಹಲ ಸೃಷ್ಟಿಯಾಗಿತ್ತು. ಆಸ್ಪತ್ರೆಗಳ ಮಂಚ, ಕುರ್ಚಿಗಳನ್ನೂ ಕರಗಿಸಿ ಹೂತು, ನಗರಗಳನ್ನೇ ಖಾಲಿ ಮಾಡಿಸಿದ ಪ್ರಸಂಗ ಕೂಡ ನಡೆದಿದೆ. ಪರಮಾಣು ಸುರಕ್ಷೆಯ ಮೇಲೆ ಕಟ್ಟುನಿಟ್ಟಿನ ನಿಗಾ ಇಡಬೇಕಾದ ಐಎಇಎ (ಅಂತರರಾಷ್ಟ್ರೀಯ ಪರಮಾಣು ಶಕ್ತಿ ನಿಗಮದ) ತಜ್ಞರು ಕಂಗೆಟ್ಟವರಂತೆ ಒಮ್ಮೆ ರಷ್ಯಾಕ್ಕೂ ಮತ್ತೊಮ್ಮೆ ಉಕ್ರೇನಿಗೂ ಈಗ ಇರಾನಿಗೂ ಧಾವಿಸಿ ಅಲ್ಲಿನ ಘಟಕಗಳ ಸುರಕ್ಷಾ ಪರೀಕ್ಷೆ ನಡೆಸುತ್ತಿದ್ದಾರೆ. ಇರಾನ್ ಕೆಲವೆಡೆ ಗೋಪ್ಯವಾಗಿ ಪರಮಾಣು ಬಾಂಬ್ ತಯಾರಿಕೆಯ ಘಟಕಗಳನ್ನು ಹೂಡಿಕೊಂಡಿದೆ. ಅದರ ಮೇಲೆ ಇಸ್ರೇಲ್ ಕಣ್ಣಿಟ್ಟಿದೆ. ಅಲ್ಲಿ ಬಾಂಬ್ ಹಾಕಬೇಡಿರೆಂದು ಐಎಇಎ ಗೋಗರೆಯುತ್ತಿದೆ. ಕದ್ದುಮುಚ್ಚಿಟ್ಟ ಸ್ಥಾವರಕ್ಕೂ ಅದು ಅಧಿಕೃತ ರಕ್ಷಣೆ ನೀಡಬೇಕಾಗಿದೆ.

ಹಿಂದೆಲ್ಲ ಭಯೋತ್ಪಾದಕರ ದಾಳಿಯನ್ನು ತಡೆಗಟ್ಟುವ ಮಟ್ಟಕ್ಕೆ ಮಾತ್ರ ಪರಮಾಣು ಸ್ಥಾವರಗಳ ಸುರಕ್ಷಾ ವ್ಯವಸ್ಥೆ ಸೀಮಿತವಾಗಿತ್ತು. ವೈರಿದೇಶವೇ ಬಾಂಬ್ ದಾಳಿ ನಡೆಸಿದರೆ ಅದರ ಕತೆಯೇ ಬೇರೆ. ಸ್ಥಾವರ ಗಟ್ಟಿಮುಟ್ಟಾಗಿದ್ದರೂ ತಂಪುನೀರಿನ ಅಥವಾ ವಿದ್ಯುತ್ ಪೂರೈಕೆ ವಾರಗಟ್ಟಲೆ ಸ್ಥಗಿತವಾದರೆ ಇಡೀ ಸ್ಥಾವರವೇ ಫುಕುಶಿಮಾ ಮಾದರಿಯಲ್ಲಿ ಸ್ಫೋಟ ಆದೀತು. ದ್ವೇಷದ ಕಿಚ್ಚಿಗೆ ದೇಶವೇ ನಿರ್ನಾಮ ಆಗಿ, ಗಡಿಯಾಚೆಗೂ ವಿಕಿರಣ ಮೇಘ ಪಸರಿಸಬಹುದು. ಕಾಳ್ಗಿಚ್ಚಿಗೆ ಗಡಿ ಇಲ್ಲವಲ್ಲ?

ಬಿಸಿ ಪ್ರಳಯದ ಕಿಚ್ಚನ್ನು ಆರಿಸಲೆಂದು ಪರಮಾಣು ಶಕ್ತಿಮೂಲವನ್ನು ಆರಿಸಿಕೊಳ್ಳುವುದು ಸರಿಯೆ? ಕಾವಲಿಯಿಂದ ಬೆಂಕಿಗೆ ಜಂಪ್ ಮಾಡಿದಂತಲ್ಲವೆ? ಚರ್ಚೆ ನಡೆಯುತ್ತಿದೆ. ಈ ಮಧ್ಯೆ ಚೀನಾದ ಪರಮಾಣು ಚಾಲಿತ ಜಲಾಂತರ್ಗಾಮಿಯೊಂದು ನಿರ್ಮಾಣ ಹಂತದಲ್ಲೇ ಮುಳುಗಿದೆ. 2000ದಲ್ಲಿ ರಷ್ಯಾದ ಅಂಥದ್ದೇ ಹಡಗು ಮುಳುಗಿ 118 ಯೋಧರ ಜೀವಂತ ಜಲಸಮಾಧಿಯಾಗಿತ್ತು.ಇನ್ನು ತೇ.ರಿ.ಗಳು ಬಂದರಂತೂ ಭಯೋತ್ಪಾದಕರಿಗೆ ದೀಪಾವಳಿ ಸಂಭ್ರಮ. ಅಂತೂ ಸೆಕೆ ತಡೆಯಲೆಂದು ಗಾಳಿ ಹಾಕಿಕೊಳ್ಳುತ್ತಲೇ ಉಡಿಯಲ್ಲಿ ಕೆಂಡ ಕಟ್ಟಿಕೊಳ್ಳುವವರ ಕತೆ ಇದು.

ಚುರುಮುರಿ

ಜೂನಿಯರ್ಸ್ ಕವಿಗೋಷ್ಠಿ

● ಗುರು ಪಿ.ಎಸ್.

ಬೆರಳುಗಳಲ್ಲಿ ಪೆನ್ನು ಹಿಡಿದು, ಅದನ್ನು ಕೆನ್ನೆಯ ಮೇಲಿಟ್ಟುಕೊಂಡು ಕವಯತ್ರಿಯಂತೆ ಮೊಬೈಲ್‌ನಲ್ಲಿ ಫೋಟೊ ತೆಗೆದುಕೊಳ್ಳುತ್ತಿದ್ದಳು ಹೆಂಡತಿ.

'ಇದೇನಿದು ನಿನ್ನ ಹೊಸ ಅವತಾರ, ಯಾಕೆ ಹೀಗೆಲ್ಲ ಫೋಟೊ ತೆಗೆದುಕೊಳ್ತಿದೀಯ' ಕೇಳಿದೆ.

'ದಸರಾ ಕವಿಗೋಷ್ಠಿಗೆ ಹೋಗ್ತಿದೀನಿ ರೀ'

'ಹೊಸಬರಿಗೆಲ್ಲ ಅಲ್ಲಿ ಅವಕಾಶವಿಲ್ಲ'.

'ನನ್ನ ಹಾಗೆ ಸಂವೇದನಾಶೀಲರಾಗಿರುವ ಕೆಲವು ಹಿರಿಯರು ಕವಿಗೋಷ್ಠಿಯಿಂದ ಹಿಂದೆ ಸರಿದಿದ್ದಾರೆ, ಅವರ ಬದಲು ನಾನು ಹೋಗ್ತಿದೀನಿ' ಎಂದಳು.

'ಯಾವ ರೀತಿಯ ಕವನ ಓದ್ತೀಯ ಅಲ್ಲಿ?'

'ಸಾಮಾಜಿಕ ಸಂವೇದನೆಗಳನ್ನುಳ್ಳ ಕವನಗಳನ್ನು ಓದಬೇಕೆಂದಿದ್ದೇನೆ'.

'ನಿನ್ನ ಸಂವೇದನೆ-ವೇದನೆ ಎಲ್ಲ ಯಾರೂ ಕೇಳಲ್ಲ. ಪಾಲಿಟಿಕ್ಸ್ ಕುರಿತು ಹೇಳಬೇಕಲ್ಲಿ'.

'ಅದಕ್ಕೂ ಪ್ರಿಪೇರ್ ಆಗಿದೀನಿ ರೀ...'

'ಹೌದಾ, ಹೇಳು ನೋಡೋಣ'.

'ಚುನಾವಣಾ ರಿಸಲ್ಟು ಬರಬೇಕು ಹೀಗೆ, ನಿರೀಕ್ಷೆಗಳೆಲ್ಲ ಸುಳ್ಳಾಗುವ ಹಾಗೆ... ಹೇಗಿದೆ ರೀ'.

'ಕವನ ತುಂಬಾ ಸಪ್ಪೆ ಆಯ್ತು, ಕಿಕ್ ಇರಲಿ'.

'ವಾಷಿಂಗ್‌ಮಷೀನ್ ಬಗ್ಗೆ ಹೇಳ್ತೀನಿ'.

'ಮತ್ತೂ, ನಿನ್ನ ಮನೆ ವಿಷಯವೇ ಆಯ್ತಲ್ಲ'

'ಸ್ವಲ್ಪ ಸಮಾಧಾನವಾಗಿ ಕೇಳ್ರೀ, ಇದು ಬಟ್ಟೆ ಒಗೆಯುವ ಮಷೀನ್ ಅಲ್ಲ, ನಾಯಕರನ್ನ ಕ್ಲೀನ್ ಮಾಡೋ ಮಷೀನ್'.

'ಹಾಗಾ? ಹೇಳು, ಹೇಳು...'

'ಇದು ಮಾಯಾ ವಾಷಿಂಗ್‌ಮಷೀನು, ಇದು ತೊಳೆಯುತ್ತದೆ ಕಪ್ಪುಚುಕ್ಕೆಯ ಕಲೆಯನ್ನು ಮಾತ್ರವಲ್ಲ, ಬಿಳಿಚುಕ್ಕೆಯ ಕಲೆಯನ್ನೂ... ಆದರೆ, ಒಂದೇ ಒಂದು ಕಂಡೀಷನ್ನು, ನೀವು ಸೇರಬೇಕು ಈ ಪಕ್ಷ ಬಿಟ್ಟು ಆ ಪಕ್ಷವನ್ನು...'

'ಅಯ್ಯೋ, ಇದೆಲ್ಲ ಹೇಳಿದರೆ ನಿನಗೆ ಅವಕಾಶವೇ ಸಿಗಲ್ಲ. ನೀನು ಹೇಳುವ ಕವನ ಹೃದಯ ಮೆಚ್ಚುವಂತಿರಬೇಕು, ಹೃದಯವನ್ನು ಚುಚ್ಚುವಂತಿರಬಾರದು'.

'ಹಾಗಾದ್ರೆ ಇದು ಕೇಳಿ... ಕವನದ ಶೀರ್ಷಿಕೆ ಬಹುಪರಾಕ್...'

'ಸ್ಟಾಪ್, ಮುಂದೆ ಹೇಳೋದೇ ಬೇಡ. ಇದು ಕ್ಲಿಕ್ ಆಗುತ್ತೆ ಹೋಗಿ ಬಾ...'.

ಚರ್ಚೆ

ಸಂಶೋಧನೆ: ಲಾಭದಾಸೆಯೇ ಮುಳುವು?

ಶೈಕ್ಷಣಿಕ ಸಂಶೋಧನಾ ಪ್ರಬಂಧಗಳಿಗೂ ಸಂಬಳಕ್ಕೂ ಸಂಬಂಧವಿಲ್ಲ ಎಂದಾದರೆ, ಈಗ ಬರುತ್ತಿರುವ ಮುಕ್ಕಾಲು ಪಾಲು ಪ್ರಕಟಣೆಗಳು ಬರುವುದೇ ಇಲ್ಲ!

● ಬಿ.ಆರ್. ಸತ್ಯನಾರಾಯಣ

'ವಿ.ವಿ.ಗಳಲ್ಲಿ ಸಂಶೋಧನೆ: ನಿಂತ ನೀರು?' ಎಂಬ ರಾಜಕುಮಾರ ಕುಲಕರ್ಣಿ ಅವರ ಲೇಖನ (ಸಂಗತ, ಅ. 4) ಸಕಾಲಿಕವಾಗಿದೆ. ಈ ವಿಷಯದ ಬಗ್ಗೆ ಶೈಕ್ಷಣಿಕ ವಲಯದಲ್ಲಿ ವ್ಯಾಪಕ ಚರ್ಚೆ ನಡೆದು, ಆಮೂಲಾಗ್ರ ಬದಲಾವಣೆ ಆಗಬೇಕಿದೆ. ಮನುಷ್ಯನ ಹಲವಾರು ಆಸಕ್ತಿಗಳಲ್ಲಿ ಕಲೆ,ನೃತ್ಯ, ಸಂಗೀತದಂತಹವುಗಳಂತೆ ಸಂಶೋಧನೆ ಎಂಬುದೂ ಆಸಕ್ತಿಯಿಂದ ಕೆಲಸ ಮಾಡಬೇಕಾದ ಒಂದು ಕ್ಷೇತ್ರ. ಆಸಕ್ತಿ ಎಂಬುದು ವೈಯಕ್ತಿಕವಾಗಿರುತ್ತದೆ. ಅದನ್ನು ಸಾರ್ವತ್ರಿಕಗೊಳಿಸುವುದು, ಎಲ್ಲರಿಗೂ ಕಡ್ಡಾಯಗೊಳಿಸುವುದು ಆಗಬಾರದು. ಆದರೆ ಸಂಶೋಧನೆ, ಅದರಲ್ಲೂ ಶೈಕ್ಷಣಿಕ ವಲಯದಲ್ಲಿನ ಸಂಶೋಧನೆಯನ್ನು ವ್ಯವಸ್ಥೆಯೇ ಒಂದು ರೀತಿಯಲ್ಲಿ ಕಡ್ಡಾಯಗೊಳಿಸಿಬಿಟ್ಟಿದೆ ಎಂದರೆ ಅತಿಶಯೋಕ್ತಿಯೇನಲ್ಲ!

ಮೊದಲಿಗೆ, ನ್ಯಾಕ್‌ನಂತಹ ಮಾನ್ಯತಾ ಸಂಸ್ಥೆಗಳು ಒಂದು ಕಾಲೇಜಿನ ಅಧ್ಯಾಪಕರು ಎಷ್ಟು ಪ್ರಬಂಧಗಳನ್ನು ಮಂಡಿಸಿದ್ದಾರೆ, ಎಷ್ಟನ್ನು ಪ್ರಕಟಿಸಿದ್ದಾರೆ ಎಂಬ ಸಂಖ್ಯೆಯನ್ನಷ್ಟೇ ನೋಡುತ್ತವೆ. ಅದರ ಗುಣಮಟ್ಟ ಪರಿಶೀಲನೆಯನ್ನು ಮಾಡುವುದಿಲ್ಲ. ಆದರೆ, ಯುಜಿಸಿ ನಿಗಾಪಟ್ಟಿಯಲ್ಲಿರುವ ನಿಯತಕಾಲಿಕಗಳಾಗಿರಬೇಕು ಅಷ್ಟೆ. ಪ್ರಕಟವಾದ ಲೇಖನಗಳನ್ನು ಬೇರೆ ಎಷ್ಟು ಜನ ಪರಾಮರ್ಶಿಸಿದ್ದಾರೆ ಅಥವಾ ಸಂಶೋಧನಾ ಲೇಖನಗಳಿಗೆ ಬಳಸಿಕೊಂಡಿದ್ದಾರೆ ಎಂಬುದಕ್ಕೆ ಬೇರೆ ಬೇರೆ ಮಾನದಂಡಗಳ ಸೂಚ್ಯಂಕಗಳಿವೆ. ಆದರೆ, ಈ ಮಾನದಂಡಗಳ ವಿಶ್ವಾಸಾರ್ಹತೆ ಪ್ರಶ್ನಾರ್ಹ. ಅದಕ್ಕಿಂತ ಹೆಚ್ಚಾಗಿ ಆ ಬಳಕೆಯ ಸೂಚ್ಯಂಕಗಳನ್ನೇ ಅಪಮಾರ್ಗದಲ್ಲಿ ಹೆಚ್ಚಿಸಿಕೊಳ್ಳುವವರು, ಹೆಚ್ಚಿಸಿಕೊಡುವವರು ಇಂದು ಶೈಕ್ಷಣಿಕ ವಲಯದ ತೆರೆಮರೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಎರಡನೆಯದಾಗಿ, ಮಂಡಿತ ಅಥವಾ ಪ್ರಕಟಿತ ಸಂಶೋಧನಾ ಲೇಖನಗಳನ್ನು ಆಧರಿಸಿ ಸಂಬಳ, ಸಾರಿಗೆಯಂತಹ ಆರ್ಥಿಕ ಸವಲತ್ತುಗಳನ್ನು ನೀಡುತ್ತಿರುವುದೂ ಸಂಶೋಧನಾ ಲೇಖನಗಳು ಹೆಚ್ಚಾಗಲು ಹಾಗೂ ಗುಣಮಟ್ಟದಲ್ಲಿ ರಾಜಿಯಾಗಲು ಕಾರಣವಾಗಿದೆ. ಯಾವುದೇ ವಿಷಯವನ್ನು ಕಡ್ಡಾಯಗೊಳಿಸುವುದರಿಂದ ಸುಸ್ಥಿರ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಾಧ್ಯವಿಲ್ಲ. ಅದರಲ್ಲೂ, ಆರ್ಥಿಕ ಲಾಭ ಇದ್ದರಂತೂ ನಮ್ಮ ದೇಶದಲ್ಲಿ ಯಾರು ಬೇಕಾದರೂ ಸಂಶೋಧಕರಾಗಿ, ಪ್ರಬಂಧ, ಮಹಾಪ್ರಬಂಧಗಳನ್ನೇ ಮಂಡಿಸಿ ಮಾನ್ಯತೆ ಪಡೆಯುತ್ತಾರೆ. ಸಂಶೋಧನಾ ಪ್ರಬಂಧಗಳಿಗೂ ಸಂಬಳಕ್ಕೂ ಸಂಬಂಧವಿಲ್ಲ ಎಂದರೆ ಈಗ ಬರುತ್ತಿರುವ ಮುಕ್ಕಾಲು ಪಾಲು ಪ್ರಕಟಣೆಗಳು ಬರುವುದೇ ಇಲ್ಲ! ಸಂಶೋಧನೆಗೆ ಬೇಕಾದ ಮೂಲ ಸೌಲಭ್ಯಗಳಿಗೆ ಮಾತ್ರ ಆರ್ಥಿಕ ಸವಲತ್ತು ಕೊಟ್ಟರೆ ಸಾಕು.

ಸಂಶೋಧನಾ ವಿದ್ಯಾರ್ಥಿಗಳ ಮೇಲೆ ಲೇಖನಗಳನ್ನು ಪ್ರಕಟಿಸುವಂತೆ ಮಾರ್ಗದರ್ಶಕರು ಒತ್ತಡ ತರುತ್ತಿದ್ದಾರೆ ಎಂಬುದು ಅರ್ಧ ಸತ್ಯದ ಮಾತು. ಏಕೆಂದರೆ ನಿಯಮಗಳಲ್ಲೇ ಸಂಶೋಧನಾ ವಿದ್ಯಾರ್ಥಿ ಇಂತಿಷ್ಟು ಲೇಖನಗಳನ್ನು ಪ್ರಕಟಿಸಿರಬೇಕು ಎಂಬ ಕಟ್ಟುಪಾಡುಗಳಿವೆ. ಈ ಕಟ್ಟುಪಾಡು ಕೂಡ ಅವರು ಅಡ್ಡಮಾರ್ಗ ಹಿಡಿಯಲು ಪ್ರೇರೇಪಿಸುವಂತಿದೆ.

ಇನ್ನು ಗ್ರಂಥಪಾಲಕರ ಪಾತ್ರದ ಬಗ್ಗೆ ಹೇಳುವುದಾದರೆ, ಈಗಿನ ಕೃತಕ ಬುದ್ಧಿಮತ್ತೆಯ ಕಾಲದಲ್ಲಿ ಅದು ತೀರಾ ನಾಜೂಕಿನ ಕೆಲಸವಾಗಿದೆ. ಬಳಕೆದಾರ ಕೇಳಿದ ಮಾಹಿತಿಯನ್ನು ಲಭ್ಯ ಮೂಲಗಳಿಂದ, ಅತ್ಯಂತ ಕಡಿಮೆ ಸಮಯದಲ್ಲಿ, ಕಡಿಮೆ ಖರ್ಚಿನಲ್ಲಿ ಒದಗಿಸುವುದು ಗ್ರಂಥಪಾಲಕ ಮಾಡಬಹುದಾದ ಕೆಲಸ. ಆದರೆ ಸಂಶೋಧಕರೇ ಉಚಿತ ಮೂಲಗಳನ್ನು ಹೆಚ್ಚು ಬಯಸುತ್ತಿದ್ದಾರೆ ಎಂದರೆ ಅದಕ್ಕೆ ಕಾರಣ, ಹಕ್ಕುಗಳನ್ನು ಹೊಂದಿರುವ ಪ್ರಕಾಶಕರು ವಿಧಿಸುತ್ತಿರುವ ದುಬಾರಿ ಶುಲ್ಕ. ಇದಕ್ಕೆ ಸರ್ಕಾರಿ ಹಾಗೂ ಸಂಸ್ಥೆಗಳ ಮಟ್ಟದಲ್ಲಿ ಇ-ಕನ್ಸೋರ್ಷಿಯಾಗಳ ಮೂಲಕ ಪರಿಹಾರ ಇದೆ. ಯುಜಿಸಿ ಪ್ರಾಯೋಜಕತ್ವದಲ್ಲಿಯೇ ಇನ್‌ಫ್ಲಿಬ್‌ನೆಟ್ (INFLIBNET), ಪದವಿ ತರಗತಿಯ ಅಧ್ಯಾಪಕರಿಗಾಗಿ ಎನ್‌ಲಿಸ್ಟ್ (NLIST) ಇ-ಕನ್ಸೋರ್ಷಿಯಾ ಇದೆ. ವೃತ್ತಿಪರ ಕೋರ್ಸುಗಳ ಸಂಶೋಧಕರಿಗಾಗಿ ಇ-ಶೋಧಸಿಂಧು, ಶೋಧಗಂಗಾದಂತಹ ಸೇವೆಗಳಿವೆ. ಅಲ್ಪಪ್ರಮಾಣದ ಶುಲ್ಕ ಪಾವತಿಸಿ ಈ ಸೇವೆ ಪಡೆಯಬಹುದು. ರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯ, ಇ.ಪಿ.ಜಿ. ಪಾಠಶಾಲದಂತಹ ಉಚಿತ ವೇದಿಕೆಗಳಿವೆ. ಆದರೆ, ಇವುಗಳಲ್ಲಿರುವ ಸಂಪನ್ಮೂಲಗಳ ವಿಶ್ವಾಸಾರ್ಹತೆ ಮತ್ತೆ ಪ್ರಶ್ನಾರ್ಹ.

ಉತ್ತಮ ಸಂಶೋಧನಾ ಸಂಪನ್ಮೂಲಗಳು ಇಂದು ಬಹುಮಟ್ಟಿಗೆ ಖಾಸಗಿ ಪ್ರಕಾಶಕರು, ಹಕ್ಕುದಾರರ ಕೈಯಲ್ಲಿವೆ. ಅದು ಅವರ ವ್ಯವಹಾರವಾದ್ದರಿಂದ ಅವರು ಅದನ್ನು ಹಣ ಮಾಡಲು ಬಳಸುತ್ತಿದ್ದಾರೆ. ಅದರಲ್ಲಿ ತಪ್ಪೇನಿಲ್ಲ. ಏಕೆಂದರೆ ನಮ್ಮ ಸರ್ಕಾರಗಳ ನೀತಿ ನಿರೂಪಣೆಗಳೇ ಹಾಗಿವೆ. ಅದಕ್ಕಿರುವ ಪರಿಹಾರವೆಂದರೆ ಮುಕ್ತ ವೇದಿಕೆ (ಓಪನ್ ಸೋರ್ಸ್). ಒಂದು ದೇಶ, ಸಮಾಜದ ಭಾಗವಾಗಿ ಶೈಕ್ಷಣಿಕ ವಲಯದಲ್ಲಿ ಉತ್ಪನ್ನವಾಗುವ ಜ್ಞಾನದ ಹಕ್ಕು ಯಾರದ್ದಾಗಿರಬೇಕು? ಇದು ಮುಖ್ಯ ಪ್ರಶ್ನೆ. ಆ ಹಕ್ಕು ಇಡೀ ಮನುಕುಲಕ್ಕೆ ಸೇರಿದ್ದು ಎಂದಾದರೆ, ಬಹುತೇಕ ಸಮಸ್ಯೆಗಳು ಬಗೆಹರಿಯುತ್ತವೆ. ಸಂಶೋಧಕರೂ ಒಮ್ಮೆ ಪಾವತಿ ಆಧಾರದ ಮೇಲಾದರೂ ತಮ್ಮ ಸಂಶೋಧನೆಯ ಫಲವನ್ನು ಸಾರ್ವಜನಿಕಗೊಳಿಸುವುದು ಒಳ್ಳೆಯದು. ಈ ಹಿನ್ನೆಲೆಯಲ್ಲಿಯೇ, ಓಪನ್ ಆ್ಯಕ್ಸೆಸ್ ಜರ್ನಲ್ಸ್, ಸ್ವಿಟ್ಜರ್ಲೆಂಡಿನ ಎಂಡಿಪಿಐ ಮತ್ತು ಡಿಒಎಜೆ ಅಂತಹ ನೂರಾರು ಮುಕ್ತ ವೇದಿಕೆಗಳು, ಸಂಸ್ಥೆಗಳು ಪ್ರಪಂಚದಾದ್ಯಂತ ಕೆಲಸ ಮಾಡುತ್ತಿವೆ. ಆದರೆ ನಡೆಯಬೇಕಾದ ದೂರ ಬಹಳವಿದೆ. ಈ ದಿಸೆಯಲ್ಲಿ ಗಂಭೀರವಾದ ಚರ್ಚೆಗಳು ನಡೆಯಬೇಕಿರುವುದು ಇಂದಿನ ತುರ್ತು ಅಗತ್ಯವಾಗಿದೆ.

ಲೇಖಕ: ಮುಖ್ಯ ಗ್ರಂಥಪಾಲಕ, ಸುರಾನಾ ಕಾಲೇಜು ಬಸವನಗುಡಿ, ಬೆಂಗಳೂರು

ವಾಚಕರ ವಾಣಿ

ಚುಟುಕು ಸಾಹಿತ್ಯ ಕೃತಿ: ಕಡೆಗಣನೆ ಏಕೆ?

ಸಾರ್ವಜನಿಕ ಗ್ರಂಥಾಲಯ ಇಲಾಖೆಯು 2021ನೇ ಸಾಲಿಗಾಗಿ ಸುಮಾರು 3,000 ಪುಸ್ತಕಗಳನ್ನು ಆಯ್ಕೆ ಮಾಡಿದೆ ಎಂದು ತಿಳಿದುಬಂದಿದೆ. ಆದರೆ ಈ ಸಲ ಚುಟುಕು ಸಾಹಿತ್ಯ ಪ್ರಕಾರದ ಒಂದೇ ಒಂದು ಕೃತಿಯನ್ನೂ ಆಯ್ಕೆ ಮಾಡಿಲ್ಲ ಎನ್ನಲಾಗಿದೆ. ಹಾಗಿದ್ದರೆ ಚುಟುಕು ಕಾವ್ಯ ಪ್ರಕಾರವಲ್ಲ ಎಂಬುದು ಆಯ್ಕೆ ಸಮಿತಿಯವರ ಭಾವನೆಯೇ? ಹಾಗೆ ಭಾವಿಸಿದ್ದರೆ ಅದು ಅವರ ತಪ್ಪುಕಲ್ಪನೆ. ಏಕೆಂದರೆ ಸಿ.ಪಿ.ಕೆ. ಅವರಂತಹ ವಿದ್ವಾಂಸರು 'ಚುಟುಕು ಮನುಕುಲದ ಆದಿಕಾವ್ಯ' ಎಂದು ಬಣ್ಣಿಸಿದ್ದಾರೆ. ದೇಜಗೌ, ಚದುರಂಗ, ದಿನಕರ ದೇಸಾಯಿ, ಅಕಬರ ಅಲಿ, ಚೆನ್ನವೀರ ಕಣವಿ, ಎಚ್.ಡುಂಡಿರಾಜ್, ಜಿನದತ್ತ ದೇಸಾಯಿ, ಬಿ.ಆರ್.ಲಕ್ಷ್ಮಣರಾವ್, ಬಿ.ಟಿ.ಲಲಿತಾ ನಾಯಕ್... ಇವರೆಲ್ಲ ಚುಟುಕು ಸಾಹಿತ್ಯ ರಚಿಸಿದ್ದಾರೆ, ಪ್ರಸಿದ್ಧರಾಗಿದ್ದಾರೆ.

ಹಿಂದಿನ ಮೂರು ದಶಕಗಳಲ್ಲಿ ರಾಜ್ಯದಾದ್ಯಂತ ಹನಿಗವನ ಬರೆಯುವವರ ಸಂಖ್ಯೆ ಅಪಾರ ಪ್ರಮಾಣದಲ್ಲಿ ಬೆಳೆದಿದೆ ಮತ್ತು ಪ್ರತಿವರ್ಷ ಪ್ರಕಟವಾಗುವ ಚುಟುಕು ಕಾವ್ಯ ಕೃತಿಗಳ ಸಂಖ್ಯೆಯೂ ಹೆಚ್ಚಾಗಿದೆ. ಸಾಹಿತ್ಯ ಸಮ್ಮೇಳನಗಳಲ್ಲೂ ಮೈಸೂರು ದಸರಾದಂತಹ ಸಂದರ್ಭಗಳಲ್ಲೂ ಚುಟುಕು ಕಾವ್ಯಗೋಷ್ಠಿಗಳಿಗೆ ಅವಕಾಶ ದೊರಕುವಂತಾಗಿದೆ. ಆದರೆ ಅದಾವ ಕಾರಣದಿಂದ ಸಮಿತಿಯು ಚುಟುಕು ಕಾವ್ಯಕೃತಿಗಳನ್ನು ಸ್ವೀಕರಿಸದಿರಲು ನಿರ್ಧರಿಸಿತೋ ತಿಳಿಯದು. ಚುಟುಕು ರಚನೆ ಸುಲಭವೇನಲ್ಲ. ಕಡಿಮೆ ಸಾಲು, ಕಡಿಮೆ ಪದಗಳಲ್ಲಿ ಹಿರಿದಾದ ಅರ್ಥ, ಸೊಗಸು ತರುವುದಕ್ಕೆ ವಿಶೇಷ ಕಾವ್ಯಪ್ರತಿಭೆ ಬೇಕು. ಇಲಾಖೆ ಕೂಡಲೇ ತನ್ನ ಈ ತಪ್ಪು ನಿರ್ಧಾರವನ್ನು ಹಿಂಪಡೆದು ಚುಟುಕು ಕಾವ್ಯದ ಉತ್ತಮ ಕೃತಿಗಳನ್ನು ಆಯ್ಕೆ ಮಾಡಲಿ. ಚುಟುಕು ಸಾಹಿತ್ಯಕ್ಕೆ ಸಲ್ಲಬೇಕಾದ ಮನ್ನಣೆಯನ್ನು ಸಲ್ಲಿಸಲಿ.

ಎಲ್.ಎಸ್.ಶಾಸ್ತ್ರಿ, ಬೆಳಗಾವಿ

'ಕೈ'ಗೆ ಬಂದ ತುತ್ತು...

ಹರಿಯಾಣ ವಿಧಾನಸಭಾ
ಚುನಾವಣೆಯಲ್ಲಿ
ಕಾಂಗ್ರೆಸ್ ಸೋಲಿಗೆ
ಸರಿಹೊಂದುವ ಗಾದೆ
'ಕೈ'ಗೆ ಬಂದ ತುತ್ತು
ಬಾಯಿಗೆ ಬರಲಿಲ್ಲ!

ಆನಂದ ರಾಮತೀರ್ಥ
ಜಮಖಂಡಿ

ಬಾಟಲಿ ನೀರಿನ ವ್ಯಾಪಾರಿ ತಂತ್ರ

ಈಗ ಕೆಲವು ಹೋಟೆಲುಗಳಲ್ಲಿ ಕುಡಿಯುವ ನೀರಿನ ಬಾಟಲಿಗಳನ್ನು ಆಹಾರ ವಿತರಿಸುವ ಮುಂಚೆ ಟೇಬಲ್ ಮೇಲೆ ಕಡ್ಡಾಯವಾಗಿ ಇಡುತ್ತಾರೆ. ಇದು ವ್ಯಾಪಾರಿ ತಂತ್ರವಿರಬಹುದು. ಆದರೆ ಗ್ರಾಹಕರಿಗೆ ಇದರಿಂದ ಆರ್ಥಿಕವಾಗಿ ಹೆಚ್ಚಿನ ಹೊರೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚುವರಿಯಾಗಿ ಪ್ಲಾಸ್ಟಿಕ್ ಕಸದ ರಾಶಿ. ಏಕೆ ಎಲ್ಲ ಹೋಟೆಲ್‌ಗಳೂ ನೀರು ಶುದ್ಧೀಕರಣ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬಾರದು? ಇನ್ನು ಮದುವೆ ಕಾರ್ಯಕ್ರಮದಲ್ಲಿನ ಪ್ಲಾಸ್ಟಿಕ್ ನೀರಿನ ಬಾಟಲಿ ಹಾವಳಿ ನೋಡಿದರೆ ಬೇಸರವಾಗುತ್ತದೆ. ವಿದ್ಯಾವಂತರು, ಉಳ್ಳವರೇ ಹೀಗೆ ಮಾಡಿದರೆ ಜನರಲ್ಲಿ ಜಾಗೃತಿ ಮೂಡುವುದಾದರೂ ಹೇಗೆ?

ಗುರು ಜಗಳೂರು, ಹರಿಹರ

ತಾಜ್‌ಮಹಲ್‌ಗೆ ಪುಸ್ತಕ ಒಯ್ಯಬಾರದೇಕೆ?

ವಿಶ್ವವಿಖ್ಯಾತ ಸ್ಮಾರಕ ತಾಜ್‌ಮಹಲ್ ಅನ್ನು ನೋಡಲು ಇತ್ತೀಚೆಗೆ ಪತಿ ಮತ್ತು ತಾಯಿಯೊಡನೆ ಹೋಗಿದ್ದೆ. ಪ್ರವೇಶ ದ್ವಾರದ ಬಳಿ ಎಲ್ಲಾ ಸ್ಮಾರಕಗಳಲ್ಲಿ ಇರುವಂತೆ ಇಲ್ಲೂ ಚೆಕಿಂಗ್ ಇತ್ತು. ಪುಸ್ತಕಪ್ರೇಮಿಯಾದ ನಾನು ನನ್ನ ಬ್ಯಾಗ್‌ನಲ್ಲಿ ಯಾವಾಗಲೂ ಯಾವುದಾದರೊಂದು ಪುಸ್ತಕವನ್ನು ಇಟ್ಟುಕೊಂಡಿರುತ್ತೇನೆ. ಹಾಗೆ ಅಂದೂ ಯಾವುದೋ ಒಂದು ಪುಸ್ತಕ ನನ್ನ ಚೀಲದಲ್ಲಿ ಇತ್ತು. ಚೆಕಿಂಗ್ ಅಧಿಕಾರಿಗಳು ನನ್ನ ಚೀಲವನ್ನು ಚೆಕ್ ಮಾಡಿ ಪುಸ್ತಕ ಹೊರತೆಗೆದು, 'ಇದನ್ನು ಒಳಗೆ ಕೊಂಡುಹೋಗುವ ಹಾಗೆ ಇಲ್ಲ' ಎಂದರು ಮತ್ತು ಅಲ್ಲೇ ಇದ್ದ ಕಸದಬುಟ್ಟಿಗೆ ನಿರ್ದಯವಾಗಿ ಎಸೆದರು. 'ದಯವಿಟ್ಟು ಹಾಗೆ ಮಾಡಬೇಡಿ. ಇದು ಅಮೂಲ್ಯ ಪುಸ್ತಕ. ನನಗೆ ಬೇಕೇ ಬೇಕು. ಯಾಕೆ ಇದನ್ನು ಒಯ್ಯಬಾರದು? ಇದರಿಂದ ಆಗುವ ಹಾನಿ ಏನು?' ಎಂದು ಕೇಳಿದೆ. 'ಕ್ಷಮಿಸಿ. ಇದು ಇಲ್ಲಿನ ರೂಲ್ಸ್. ನಾವು ಏನೂ ಮಾಡುವ ಹಾಗೆ ಇಲ್ಲ' ಎಂದರು. 'ಹಾಗಾದರೆ ತೆಗೆದು ಇಡಿ. ವಾಪಸ್ ಬರುವಾಗ ತೆಗೆದುಕೊಳ್ಳುತ್ತೇನೆ' ಎಂದು ವಿನಂತಿಸಿದೆ. 'ಅದು ಆಗುವುದಿಲ್ಲ. ನೀವು ಹೊರಹೋಗುವ ದಾರಿಯೇ ಬೇರೆ' ಎಂದು ಹೇಳಿದರು. ನಾನು ವಿನಂತಿಸಿದ್ದಷ್ಟೇ ಬಂತು. ಪುಸ್ತಕವನ್ನು ನನಗೆ ಕೊಡಲಿಲ್ಲ.

ಚೂರಿ, ಪಿಸ್ತೂಲ್, ಗ್ಯಾಸ್, ಮದ್ಯ, ಬೆಂಕಿಪೆಟ್ಟಿಗೆಯಂತಹ ವಸ್ತುಗಳನ್ನು ಒಳಗೆ ಬಿಡದೇ ಇರುವುದಕ್ಕೆ ಒಂದು ಅರ್ಥ ಉಂಟು. ಆದರೆ ನಿರುಪದ್ರವಿಯಾದ ಪುಸ್ತಕವನ್ನು ತಾಜ್‌ಮಹಲ್ ಆವರಣದ ಒಳಗೆ ಯಾಕೆ ಒಯ್ಯಬಾರದು ಎಂಬ ನನ್ನ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ.

ಸಹನಾ ಕಾಂತಬೈಲು, ಬಾಲಂಬಿ, ಮಡಿಕೇರಿ

ಜಾತಿ ಜನಗಣತಿಯಿಂದ ಹಲವು ಪ್ರಶ್ನೆಗೆ ಉತ್ತರ

ರಾಜ್ಯದಲ್ಲಿ ಪ್ರಸ್ತುತ ಅತಿ ಹೆಚ್ಚು ಚರ್ಚೆಗೆ ಒಳಗಾಗಿರುವ ವಿದ್ಯಮಾನಗಳಲ್ಲಿ ಅತಿ ಮುಖ್ಯವಾದುದೆಂದರೆ ಜಾತಿ ಜನಗಣತಿ. ಸಿದ್ದರಾಮಯ್ಯ ಅವರ ಅಧಿಕಾರದ ಮೊದಲ ಅವಧಿಯಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಉಸ್ತುವಾರಿಯಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿ ವರದಿಯು ತಡವಾಗಿಯಾದರೂ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ವಿಷಯ ಹೀಗಿರುವಾಗ, ವರದಿ ಬಿಡುಗಡೆಗೆ ಹಿಂದೆಮುಂದೆ ನೋಡುತ್ತಿರುವುದು ಏಕೆ ಎಂಬುದು ಸಾಮಾಜಿಕ ನ್ಯಾಯ ಪ್ರತಿಪಾದಕರ ಒಕ್ಕೊರಲಿನ ಪ್ರಶ್ನೆ. ರಾಜ್ಯದ ವಿವಿಧ ಸಮುದಾಯಗಳ ಸ್ಥಿತಿಗತಿ ಅರಿಯಲು ಇದರಿಂದ ಅನುಕೂಲ ಆಗಲಿದೆ.

ವಿರೋಧಿಸುವವರು ವಿರೋಧಿಸಲಿ, ಅದರ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಏಕೆಂದರೆ ರಾಜ್ಯದ ಬಹುಸಂಖ್ಯಾತರ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗೆ ಸಂಬಂಧಿಸಿದ ಹಲವು ಆಯಾಮಗಳು ಈ ವರದಿಯ ಮುಖಾಂತರ ರಾಜ್ಯದ ಜನರಿಗೆ ಹಾಗೂ ಆಡಳಿತಾರೂಢರಿಗೆ ತಿಳಿಯುತ್ತವೆ. ವರದಿಯಲ್ಲಿ ಯಾವ ಸಮುದಾಯದ ಜನಸಂಖ್ಯೆ ಎಷ್ಟಿದೆ, ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಅಡಿಯಲ್ಲಿ ಆ ಸಮುದಾಯಗಳು ಅಭಿವೃದ್ಧಿಯಾಗಿವೆಯೋ ಅಥವಾ ಹಿಂದುಳಿದಿವೆಯೋ ಎಂಬಂತಹ ಹಲವಾರು ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ. ಜೊತೆಗೆ ಹಿಂದುಳಿದವರ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಳ್ಳುವ ಭವಿಷ್ಯದ ಕಾರ್ಯಕ್ರಮಗಳಿಗೆ ಇದು ದಿಕ್ಸೂಚಿಯೂ ಆಗುತ್ತದೆ.

ಬೀರಪ್ಪ ಡಿ. ಡಂಬಳಿ, ಕೋಹಳ್ಳಿ, ಅಥಣಿ

ದಿನದ ಟ್ವೀಟ್

ಭಾಷೆಯ ಅವಗಣನೆ ಸಲ್ಲದು

ಮಾನ್ಯ ಸಾರಿಗೆ ಸಚಿವರೇ, ಸಂಸ್ಥೆಯ ಸಾರಿಗೆ ವಾಹನದಲ್ಲಿ ಕನ್ನಡದ ಪರಿಸ್ಥಿತಿ ನೋಡಿ... ಅದು ಯಾಂತ್ರಿಕ ತೊಂದರೆಯೂ ಇರಬಹುದು, ಆದರೂ ಹೀಗೆ ಆಗಬಾರದು ಅಲ್ಲವೇ? tiptur ಹೋಗಿ ತಿಪಟರು ಮತ್ತು ಊಎಊಉ, banavara ಹೋಗಿ ಊಉಉಉ ಆಗಿರುವುದು ನಗೆಪಾಟಲು ಅಷ್ಟೇ.

(ಬಾಣಾವರದಿಂದ ತಿಪಟೂರು, ತಿಪಟೂರಿನಿಂದ ಬಾಣಾವರಕ್ಕೆ ಬುಧವಾರ (ಅ. 9) ಖರೀದಿಸಿದ ಟಿಕೆಟ್ ಮೇಲೆ ಊರಿನ ಹೆಸರು ನಮೂದಿಸಬೇಕಾದ ಜಾಗದಲ್ಲಿ ಆಗಿರುವ ಅವಾಂತರಕ್ಕೆ ಪ್ರತಿಕ್ರಿಯೆ)

ಎಚ್.ಎಸ್.ಶ್ಯಾಮಾಚಾರ್, ಶ್ರೀ ಶ್ರೀಪಾದರಾಜ ಮಠ

ಕಿಡಿನುಡಿ

ಹರಿಯಾಣದಲ್ಲಿ ಬಣ ಕಚ್ಚಾಟದಿಂದ ಕಾಂಗ್ರೆಸ್ ಸೋತಿದೆ. ಇದನ್ನು ಪಾಠವೆಂದು ಪರಿಗಣಿಸದೇ ಇದ್ದಲ್ಲಿ ಕರ್ನಾಟಕದಲ್ಲೂ ಅದೇ ಆಗುತ್ತದೆ. ಇಬ್ಬರು- ಮೂವರು ಸಚಿವರು ಬಿಟ್ಟರೆ ಉಳಿದವರು ಬರೀ ಶೋಕಿ ಮಾತಿನಲ್ಲಿ ನಿರತರಾಗಿದ್ದಾರೆ. ಅವಕಾಶ ಸಿಕ್ಕಾಗ ನಾಡಿಗಾಗಿ ಉತ್ತಮ ಕೆಲಸ ಮಾಡಿ ತಮ್ಮ ವರ್ಚಸ್ಸು ಹಾಗೂ ಸಾಮರ್ಥ್ಯವನ್ನು ಅದರಲ್ಲಿ ತೋರಿಸಬೇಕೆ ವಿನಾ ಮಾಧ್ಯಮಗಳ ಮೈಕ್ ಮುಂದಲ್ಲ.

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಭಾನುವಾರ, 10-10-1999

● **ನಾಯಕತ್ವ: ವಿಧಾನಸಭಾ ಸದಸ್ಯರಿಗೆ ಸೀಮಿತ**

ನವದೆಹಲಿ, ಅ. 9- ಕರ್ನಾಟಕದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕನನ್ನು ಚುನಾಯಿತ ಶಾಸಕರಿಂದ ಮಾತ್ರ ಆಯ್ಕೆ ಮಾಡಲು ಕಾಂಗ್ರೆಸ್ ವರಿಷ್ಠ ಮಂಡಳಿಯು ನಿರ್ಧರಿಸಿದ್ದು, ಇದರಿಂದ ವಿಧಾನಸಭೆಯ ಸದಸ್ಯರಲ್ಲದ ಬೇರೆ ಸ್ಪರ್ಧಾಕಾಂಕ್ಷಿಗಳ ಆಸೆಗೆ ಬಹುತೇಕವಾಗಿ ತಣ್ಣೀರೆರಚಿದಂತಾಗಿದೆ.

ಮುಂದಿನ ದಿನಗಳಲ್ಲಿ ಯಾವುದೇ ಭಿನ್ನಮತಕ್ಕೆ ಅವಕಾಶ ಕೊಡದಿರುವಂತೆ ಮುನ್ನೆಚ್ಚರಿಕೆಯಾಗಿ ಉಪಮುಖ್ಯಮಂತ್ರಿ ಸ್ಥಾನವನ್ನು ಸೃಷ್ಟಿಸದಿರಲು ಪಕ್ಷದ ವರಿಷ್ಠ ಮಂಡಳಿ ತೀರ್ಮಾನಿಸಿದೆ ಎನ್ನಲಾಗಿದೆ.

● **ಸೋಲಿಗೆ ಸೂಕ್ಷ್ಮ ಅಂಶಗಳು ಕಾರಣ**

ಬೆಂಗಳೂರು, ಅ. 9- ರಾಜ್ಯದಲ್ಲಿ ಜೆ.ಎಚ್. ಪಟೇಲ್ ನೇತೃತ್ವದ ಸರ್ಕಾರದ ವಿರುದ್ಧ ವ್ಯಕ್ತವಾದ ಜನಾದೇಶದಿಂದಲೇ ಜನತಾದಳ (ಯು)- ಬಿಜೆಪಿ ಮೈತ್ರಿಕೂಟ ನೆಲಕಚ್ಚಿತು ಎಂಬುದು ಸರಿಯಲ್ಲ, ಚುನಾವಣೆ ಫಲಿತಾಂಶ ಏರುಪೇರಾಗುವುದಕ್ಕೆ ಅನೇಕ ಕಾರಣಗಳಿರುತ್ತವೆ ಎಂದು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ ಮುಖಂಡ, ಸಚಿವ ರಾಮಕೃಷ್ಣ ಹೆಗಡೆ ಪ್ರತಿಪಾದಿಸಿದರು.

50 ವರ್ಷಗಳ ಹಿಂದೆ

ಗುರುವಾರ, 10-10-1974

● **ರಾಯಪುರಂ ಯಾರ್ಡಿನ 500 ಟನ್ ದ್ವಿದಳ ಧಾನ್ಯ ಸರ್ಕಾರದ ಸ್ವಾಧೀನಕ್ಕೆ**

ಮದ್ರಾಸ್, ಅ. 9- ರಾಯಪುರಂ ರೈಲ್ವೆ ಯಾರ್ಡುಗಳಲ್ಲಿ ಸಗಟು ವರ್ತಕರು ಎರಡು ವಾರಗಳಿಂದ ಬಿಟ್ಟಿರುವ 500 ಟನ್‌ಗಳಷ್ಟು ಆಹಾರಧಾನ್ಯಗಳನ್ನು ತಮಿಳುನಾಡು ಸರ್ಕಾರ ಸ್ವಾಧೀನಪಡಿಸಿಕೊಳ್ಳುತ್ತದೆ.

ಅಗತ್ಯ ವಸ್ತುಗಳ ಶಾಸನದ ಮೇರೆಗೆ ವಶಪಡಿಸಿಕೊಳ್ಳುತ್ತಿರುವುದು ಇದೇ ಮೊದಲು.

● **ಕೆಪಿಸಿಸಿ ಅಧ್ಯಕ್ಷತೆಗೆ ಶನಿವಾರ ಸ್ಪರ್ಧಿ ಆಯ್ಕೆ: ಅರಸು ಅವರಿಗೆ ಅಧಿಕಾರ**

ಬೆಂಗಳೂರು, ಅ. 9- ಶನಿವಾರ ನಗರಕ್ಕೆ ಆಗಮಿಸಲಿರುವ ಕೇಂದ್ರ ಗೃಹ ಮಂತ್ರಿ ಉಮಾಶಂಕರ ದೀಕ್ಷಿತ್ ಮತ್ತು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮರಗತಂ ಚಂದ್ರಶೇಖರ್ ಅವರೊಡನೆ ಸಮಾಲೋಚಿಸಿದ ನಂತರ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಯಾರಾಗಬೇಕೆಂಬುದನ್ನು ನಿರ್ಧರಿಸಲಿದ್ದಾರೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆಗಾಗಿ ಪ್ರದೇಶ ಸಮಿತಿಯು ಭಾನುವಾರ 11.30ಕ್ಕೆ ಬಸವನಗುಡಿಯ ವಾಸವಿ ಧರ್ಮಶಾಲೆಯಲ್ಲಿ ಸಮಾವೇಶಗೊಳ್ಳಲಿದ್ದು, ಈಗಿನ ಅಧ್ಯಕ್ಷ ಕೆ.ಎಚ್.ರಂಗನಾಥ್ ತಮ್ಮ ರಾಜೀನಾಮೆಯನ್ನು ಎಐಸಿಸಿ ಅಧ್ಯಕ್ಷರಿಗೆ ಕಳುಹಿಸಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇಸ್ರೇಲ್‌ನಿಂದ ಯುದ್ಧ ವಿಸ್ತರಿಸುವ ಸೂಚನೆ; ಬೂದಿಯಿಂದ ಎದ್ದು ಬರುವುದಾಗಿ ಹಮಾಸ್ ಘೋಷಣೆ

ಗಾಜಾ ನರಕಯಾತನೆಗೆ ಮುಕ್ತಿ ಯಾವಾಗ?

ಒಂದು ವರ್ಷದ ನಂತರವೂ ಇಸ್ರೇಲ್–ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರ ಸಂಘರ್ಷ ನಿಲ್ಲುವ ಸಾಧ್ಯತೆ ಕಾಣುತ್ತಿಲ್ಲ. ಯುದ್ಧ ಹಲವು ತಿರುವು ಪಡೆಯುತ್ತಿದ್ದು, ಮಧ್ಯಪ್ರಾಚ್ಯಕ್ಕೂ ಹರಡಿದೆ. ತನ್ನ ಬೆಂಬಲಿಗ ದೇಶಗಳಾದ ಅಮೆರಿಕ, ಫ್ರಾನ್ಸ್ ಯುದ್ಧ ನಿಲ್ಲಿಸಲು ಒತ್ತಾಯ ಮಾಡುತ್ತಿದ್ದರೂ ಇಸ್ರೇಲ್ ಕಿವಿಗೊಡುತ್ತಿಲ್ಲ. ಮಧ್ಯಪ್ರಾಚ್ಯದ ಯಾವ ಭಾಗವೂ ತನಗೆ ನಿಲುಕದ್ದೇನಲ್ಲ ಎನ್ನುತ್ತಿದೆ. ಇನ್ನೊಂದೆಡೆ, ಫೀನಿಕ್ಸ್‌ನಂತೆ ಬೂದಿಯಿಂದ ಎದ್ದುಬರುವುದಾಗಿ ಹಮಾಸ್ ಘೋಷಿಸಿದೆ. ಇವರ ನಡುವೆ ಗಾಜಾ ಪಟ್ಟಿಯ ಜನರ ಬದುಕು ಮತ್ತಷ್ಟು ನರಕವಾಗಿದೆ

1,205 ಹಮಾಸ್ ಬಂಡುಕೋರರು 2023ರ ಅ.7ರಂದು ಗಾಜಾ ಪಟ್ಟಿಯಿಂದ ಇಸ್ರೇಲ್ ಮೇಲೆ ನಡೆಸಿದ ದಾಳಿಯಲ್ಲಿ ಮೃತಪಟ್ಟ ಇಸ್ರೇಲ್ ನಾಗರಿಕರು

42 ಸಾವಿರ ಇಸ್ರೇಲ್ ಹಮಾಸ್ ಬಂಡುಕೋರರ ನಡುವಿನ ಯುದ್ಧದಲ್ಲಿ ಮೃತಪಟ್ಟ ಪ್ಯಾಲೆಸ್ಟೀನಿಯರು

97,720 ಇಸ್ರೇಲ್ ದಾಳಿಯಿಂದಾಗಿ ಗಾಜಾದಲ್ಲಿ ಗಾಯಗೊಂಡ ಪ್ಯಾಲೆಸ್ಟೀನಿಯರು

22 ಲಕ್ಷ ಗಾಜಾಪಟ್ಟಿಯಲ್ಲಿ ಆಂತರಿಕವಾಗಿ ಸ್ಥಳಾಂತರಗೊಂಡವರು

4 ಲಕ್ಷ ಗಾಜಾಪಟ್ಟಿಯಲ್ಲಿ ಇನ್ನೂ ಸಿಲುಕಿಕೊಂಡಿರುವ ನಾಗರಿಕರು

97 ಹಮಾಸ್ ಬಂಡುಕೋರರ ಕೈಯಲ್ಲಿ ಒತ್ತೆಯಾಳುಗಳಾಗಿರುವ ಇಸ್ರೇಲಿಗರು

2,100 ಲೆಬನಾನ್‌ನಲ್ಲಿ ಇಸ್ರೇಲ್ ಹಿಜ್ಬುಲ್ಲಾ ನಡೆಸಿರುವ ದಾಳಿಯಲ್ಲಿ ಮೃತಪಟ್ಟವರು

12 ಲಕ್ಷ ಇಸ್ರೇಲ್ ದಾಳಿಗೆ ಬೆದರಿ ಲೆಬನಾನ್‌ನಲ್ಲಿ ಮನೆಗಳನ್ನು ತೊರೆದವರು

ಪ್ರಜಾವಾಣಿ ವಾರ್ತೆ

ಇಸ್ರೇಲ್–ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರ ಸಂಘರ್ಷ ಆರಂಭವಾಗಿ ಒಂದು ವರ್ಷ ಕಳೆದಿದೆ. ಯುದ್ಧ ನಿಲ್ಲುವ ಸಾಧ್ಯತೆ ಮಸುಕಾಗುತ್ತಾ ಸಾಗುತ್ತಿದ್ದು, ಇನ್ನಷ್ಟು ದೇಶಗಳು ಸಂಘರ್ಷದ ಭಾಗವಾಗುವ ಮೂಲಕ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಬಹುದು ಎನ್ನಲಾಗುತ್ತಿದೆ. ಅಮೆರಿಕ, ಯೂರೋಪ್‌ನ ಕೆಲವು ದೇಶಗಳು ಇಸ್ರೇಲ್ ಪರ ನಿಂತಿದ್ದರೆ, ಇರಾನ್ ಸೇರಿದಂತೆ ಹಲವು ದೇಶಗಳು ಪ್ಯಾಲೆಸ್ಟೀನ್ ಬೆಂಬಲಕ್ಕೆ ನಿಂತು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಇಸ್ರೇಲ್ ವಿರುದ್ಧ ಯುದ್ಧ ಸಾರಿವೆ. ಇದು ಮಧ್ಯ ಪ್ರಾಚ್ಯದಲ್ಲಿ ಬಿಕ್ಕಟ್ಟಿಗೆ ಕಾರಣವಾಗಿದೆ.

2023ರ ಅಕ್ಟೋಬರ್ 7ರಂದು ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ನಡೆಸಿದ ದಾಳಿಯಿಂದ ಸಂಘರ್ಷ ಆರಂಭವಾಗಿತ್ತು. ಹಮಾಸ್ ದಾಳಿಯ ಮೊದಲ ದಿನವೇ 1,200 ಮಂದಿ ಇಸ್ರೇಲಿಯನ್ನರು ಸಾವಿಗೀಡಾಗಿದ್ದರು. ಅದರ ನಂತರ ಇಸ್ರೇಲ್‌ನ 350 ಸೈನಿಕರು ಗಾಜಾದಲ್ಲಿ ಸತ್ತಿದ್ದಾರೆ. 2 ಲಕ್ಷ ಇಸ್ರೇಲಿಗರನ್ನು ಗಡಿಭಾಗದಿಂದ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ಗಾಜಾದಲ್ಲಿ ಪರಿಸ್ಥಿತಿ ಇನ್ನೂ ಘೋರವಾಗಿದೆ. ಹಮಾಸ್ ದಾಳಿಗೆ ಪ್ರತೀಕಾರವಾಗಿ ಮತ್ತು ಹಮಾಸ್ ಒತ್ತೆಯಿರಿಸಿಕೊಂಡಿದ್ದ 251 ಇಸ್ರೇಲಿಗರ ಬಿಡುಗಡೆಗಾಗಿ ಇಸ್ರೇಲ್, ಗಾಜಾ ಪಟ್ಟಿ ಮೇಲೆ ನಡೆಸಿದ ತೀವ್ರ ದಾಳಿಗಳಿಂದ ಅಲ್ಲಿನ ಬದುಕು ಅಲ್ಲೋಲಕಲ್ಲೋಲವಾಗಿದೆ. ಸುಮಾರು 42 ಸಾವಿರ ಪ್ಯಾಲೆಸ್ಟೀನಿಯರು ಸತ್ತಿದ್ದರೆ, ಅದರ ಎರಡರಷ್ಟು ಮಂದಿ ಗಾಯಗೊಂಡಿದ್ದಾರೆ. ಇದರ ನಡುವೆ ಕದನವು ಜಗತ್ತಿನ ಹಲವು ದೇಶಗಳಿಗೂ ಹರಡಿದೆ. ಲೆಬನಾನಿನಲ್ಲಿ ಪೇಜರ್, ವಾಕಿಟಾಕಿ ಸ್ಫೋಟಗಳು ಹಿಜ್ಬುಲ್ಲಾ ಬಂಡುಕೋರರ ವಿರುದ್ಧ ಇಸ್ರೇಲ್ ಸಮರ ಸಾರಿರುವುದನ್ನು ಬಹಿರಂಗಪಡಿಸಿವೆ. ಹಮಾಸ್ ನಂತರ ಲೆಬನಾನ್‌ನ ಹಿಜ್ಬುಲ್ಲಾ ಸಂಘಟನೆಯನ್ನು ಗುರಿಯಾಗಿಸಿಕೊಂಡಿರುವ ಇಸ್ರೇಲ್, ಅದರ ಮುಖ್ಯಸ್ಥ ಹಸನ್ ನಸ್ರುಲ್ಲಾನನ್ನು ಹತ್ಯೆ ಮಾಡಿದೆ. ಸಂಘಟನೆಯನ್ನು ಗುರಿಯಾಗಿಸಿಕೊಂಡು ತನ್ನ ದಾಳಿ ಮುಂದುವರಿಸಿದೆ.

ಸಂಘರ್ಷದ ಕೇಂದ್ರ ಬಿಂದು | ಇಸ್ರೇಲ್ ಮತ್ತು ನೆರೆ ರಾಷ್ಟ್ರಗಳು



ಇಸ್ರೇಲ್ ತನ್ನ ನೆರೆಹೊರೆ ರಾಷ್ಟ್ರಗಳೊಂದಿಗೆ ಉತ್ತಮ ಸಂಬಂಧ ಹೊಂದಿಲ್ಲ. ನೆರೆ ರಾಷ್ಟ್ರಗಳಲ್ಲಿನ ಬಂಡುಕೋರ ಸಂಘಟನೆಗಳು ಮತ್ತು ಇಸ್ರೇಲ್ ನಡುವೆ ನಿರಂತರ ಸಂಘರ್ಷ ನಡೆಯುತ್ತಲೇ ಇರುತ್ತದೆ. ಲೆಬನಾನ್‌ನಲ್ಲಿರುವ ಹಿಜ್ಬುಲ್ಲಾ ಮತ್ತು ಪ್ಯಾಲೆಸ್ಟೀನಿನ ಹಮಾಸ್ ಬಂಡುಕೋರ ಸಂಘಟನೆಗಳೊಂದಿಗೆ ಇಸ್ರೇಲ್ ಸಂಘರ್ಷಕ್ಕೆ ದೊಡ್ಡ ಇತಿಹಾಸವೇ ಇದೆ. ಇವುಗಳೆರಡನ್ನು ಬಿಟ್ಟು ಸಿರಿಯಾ ಹಾಗೂ ಅಲ್ಲಿನ ಶಿಯಾ ಬಂಡುಕೋರರೊಂದಿಗೆ ಆಗಾಗ ಕಲಹ ನಡೆಯುತ್ತಿರುತ್ತದೆ. ಇರಾಕ್‌ನ ಶಿಯಾ ಬಂಡುಕೋರರೊಂದಿಗೂ ಘರ್ಷಣೆ ನಡೆಯುತ್ತಿರುತ್ತದೆ. ಯೆಮನ್‌ನಲ್ಲಿನ ಹೌತಿ ಬಂಡುಕೋರರೊಂದಿಗೂ ಸಂಘರ್ಷ ಇದೆ. ಇರಾನ್ ಮತ್ತು ಇಸ್ರೇಲ್ ವೈರಿ ರಾಷ್ಟ್ರಗಳು ಎಂಬುದು ಜಗಜ್ಜಾಹೀರು. ಬಂಡುಕೋರರನ್ನು ಬೆಂಬಲಿಸುವ ಇರಾನ್, ಅವರ ಮೂಲಕ ತನ್ನ ಮೇಲೆ ಯುದ್ಧ ನಡೆಸುತ್ತಿದೆ ಎಂಬುದು ಇಸ್ರೇಲ್ ಆರೋಪ.

ಮಧ್ಯಪ್ರಾಚ್ಯಕ್ಕೆ ವ್ಯಾಪಿಸಿದ ಬಿಕ್ಕಟ್ಟು

ಇಸ್ರೇಲ್ ಹಲವು ದಿಕ್ಕಿನಲ್ಲಿ ಸಂಘರ್ಷ ನಡೆಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಇರಾನ್, ಗಾಜಾದಲ್ಲಿ ಹಮಾಸ್, ಯೆಮನ್‌ನಲ್ಲಿ ಹೌತಿಗಳು, ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಬಂಡುಕೋರರು, ಸಿರಿಯಾ ಮತ್ತು ಇರಾಕ್‌ನಲ್ಲಿ ಶಿಯಾಗಳು ಇಸ್ರೇಲ್ ವಿರುದ್ಧದ ಕದನದಲ್ಲಿ ಪ್ಯಾಲೆಸ್ಟೀನ್ ಪರ ನಿಂತಿದ್ದು, ಸಂಘರ್ಷವು ಮಧ್ಯಪ್ರಾಚ್ಯಕ್ಕೆ ವ್ಯಾಪಿಸಿದೆ. 'ಮಧ್ಯಪ್ರಾಚ್ಯದಲ್ಲಿ ನಾವು ತಲುಪಲಾಗದ ಜಾಗ ಎಂಬುದೇ ಇಲ್ಲ' ಎನ್ನುವ ಇಸ್ರೇಲ್ ಅಧ್ಯಕ್ಷ ನೆತನ್ಯಾಹು ಹೇಳಿಕೆಯು ಯುದ್ಧ ಮತ್ತಷ್ಟು ದೇಶಗಳಿಗೆ ವಿಸ್ತರಿಸ ಬಹುದು ಎಂಬುದರ ಸೂಚನೆ.

ಗಾಜಾ ಪಟ್ಟಿಯ ಪರಿಸ್ಥಿತಿಯನ್ನು ಸುಧಾರಿಸಲು ಶ್ರಮಿಸುತ್ತಿರುವ ವಿಶ್ವಸಂಸ್ಥೆ, ಯುದ್ಧವನ್ನು ನಿಲ್ಲಿಸಲು ಹಲವು ರೀತಿಯಲ್ಲಿ ಪ್ರಯತ್ನ ನಡೆಸುತ್ತಲೇ ಇದೆ. ಆದರೆ, ಯಾರ ಯಾವ ಮಾತಿಗೂ ಕಿವಿಗೊಡದ ಇಸ್ರೇಲ್, ಕದನ ವಿರಾಮಕ್ಕೆ ಸಮ್ಮತಿಸದೇ ದಾಳಿಗಳನ್ನು ಮುಂದುವರಿಸುತ್ತಿದೆ.

ಅಮೆರಿಕ ಕದನ ವಿರಾಮಕ್ಕೆ ಪ್ರಯತ್ನ ನಡೆಸಿದರೂ ಅದು ಫಲಪ್ರದವಾಗಲಿಲ್ಲ. ತನ್ನ ಪ್ರಯತ್ನಗಳ ಹೊರತಾಗಿಯೂ ಅಮೆರಿಕ, ಇಸ್ರೇಲ್‌ಗೆ ಸೇನಾ ಸಂಪನ್ಮೂಲ ಸೇರಿದಂತೆ ಹಲವು ವಿಧಗಳಲ್ಲಿ ನೆರವು ನೀಡಿದೆ. ಬ್ರಿಟನ್ ಕೂಡ ನೇರವಾಗಿಯೇ ಇಸ್ರೇಲ್ ಅನ್ನು ಬೆಂಬಲಿಸಿದೆ. ಆದರೆ, ಈಗ ಈ ಎರಡೂ ದೇಶಗಳು ನಿಲುವು ಬದಲಿಸಿದ್ದು, ಯುದ್ಧವನ್ನು ನಿಲ್ಲಿಸಲು ಪ್ರಯತ್ನಿಸುತ್ತಿವೆ. ಇಸ್ರೇಲ್‌ನ ಹಳೆಯ ಮಿತ್ರನಾದ ಫ್ರಾನ್ಸ್ ಕೂಡ ಈಗ ಇಸ್ರೇಲ್ ನಡೆಯನ್ನು ಟೀಕಿಸುತ್ತಿದೆ.

ಇಸ್ರೇಲ್‌ಗೆ ಶಸ್ತ್ರಾಸ್ತ್ರ ಪೂರೈಕೆ ಸ್ಥಗಿತಗೊಳಿಸುವಂತೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಕರೆ ನೀಡಿದ್ದರು. ಜತೆಗೆ, ಲೆಬನಾನ್ ಮತ್ತು ಗಾಜಾ ಮೇಲಿನ ದಾಳಿಯನ್ನು ನಿಲ್ಲಿಸಬೇಕು ಎಂತಲೂ ಬೆಂಜಮಿನ್ ನೆತನ್ಯಾಹು ಅವರನ್ನು ಒತ್ತಾಯಿಸಿದ್ದರು. ಆದರೆ, ನೆತನ್ಯಾಹು ಯುದ್ಧವನ್ನು ಮತ್ತಷ್ಟು ವಿಸ್ತರಿಸುವ ಮಾತುಗಳನ್ನು ಆಡುತ್ತಿದ್ದಾರೆ. ಗಾಜಾ ಮಾದರಿಯಲ್ಲಿ ಲೆಬನಾನ್ ಮೇಲೂ ದಾಳಿ ನಡೆಸುವ ಸೂಚನೆ ನೀಡುತ್ತಿದ್ದಾರೆ.

ಸಂಘರ್ಷಕ್ಕೆ ಇಳಿದ ಇರಾನ್

ಯಾವಾಗಲೂ ಹಮಾಸ್, ಹಿಜ್ಬುಲ್ಲಾ ಬಂಡುಕೋರರಿಗೆ ಬೆಂಬಲ ನೀಡುತ್ತಾ ಬಂದಿದ್ದ ಇರಾನ್, ನಸ್ರುಲ್ಲಾ ಹತ್ಯೆ ಬಳಿಕ ಇಸ್ರೇಲ್ ವಿರುದ್ಧ ನೇರ ಸಂಘರ್ಷಕ್ಕೆ ಇಳಿದಿದೆ. ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದರಿಂದ ಮಧ್ಯಪ್ರಾಚ್ಯದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ತನ್ನ ದೇಶದ ಪರಮಾಣು ಮತ್ತು ಇಂಧನ ನೆಲೆಗಳ ಮೇಲೆ ಇಸ್ರೇಲ್ ದಾಳಿ ಮಾಡಿದರೆ, ಪರಿಣಾಮ ತೀವ್ರವಾಗಿರುತ್ತದೆ ಎಂದು ಇರಾನ್ ಎಚ್ಚರಿಕೆ ನೀಡಿದೆ. ಇರಾನ್ ಜಗತ್ತಿನ 10 ಅಗ್ರಶ್ರೇಣಿಯ ಕಚ್ಚಾ ತೈಲ ರಫ್ತುದಾರ ದೇಶಗಳಲ್ಲಿ ಒಂದಾಗಿದ್ದು, ಅದರ ಇಂಧನ ನೆಲೆಗಳ ಮೇಲೆ ದಾಳಿ ನಡೆಸದಂತೆ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಕೂಡ ಇಸ್ರೇಲ್‌ಗೆ ಎಚ್ಚರಿಕೆ ನೀಡಿದ್ದಾರೆ.

ಇಸ್ರೇಲ್ ಏನಾದರೂ ಇರಾನ್ ಮೇಲೆ ದಾಳಿ ನಡೆಸಿದರೆ, ಅದರ ಪರಿಣಾಮ ಜಗತ್ತಿನ ಹಲವು ದೇಶಗಳ ಮೇಲಾಗಲಿದೆ. ಆರ್ಥಿಕ ಬಿಕ್ಕಟ್ಟಿನಿಂದ ಈಗತಾನೇ ಚೇತರಿಸಿಕೊಳ್ಳುತ್ತಿರುವ ದೇಶಗಳಿಗೆ ಇದು ಭಾರಿ ಹೊಡೆತ ನೀಡಲಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ.

ಕೊನೆಗಾಣುವುದೇ ಸಂಘರ್ಷ?

ಇನ್ನೊಂದು ತುದಿಯಲ್ಲಿ, ಯುದ್ಧ ಆರಂಭವಾಗಿ ವರ್ಷ ಪೂರೈಸಿದ ಸಂದರ್ಭದಲ್ಲಿ ಮಾತನಾಡಿರುವ ಹಮಾಸ್‌ನ ಮುಖ್ಯಸ್ಥ ಖಲೀದ್ ಮೆಶಾಲ್, ತಮ್ಮ ಸಂಘಟನೆಯು ಫೀನಿಕ್ಸ್‌ನಂತೆ ಬೂದಿಯಿಂದ ಎದ್ದು ಬರುವುದಾಗಿ ಘೋಷಿಸಿದ್ದಾರೆ. 'ನಾವು ಅಪಾರ ಶಸ್ತ್ರಾಸ್ತ್ರ ಕಳೆದುಕೊಂಡಿದ್ದೇವೆ. ಕಳೆದ ಒಂದು ವರ್ಷದಲ್ಲಿ ನಮಗೆ ಹಿನ್ನಡೆಯಾಗಿದೆ, ನಿಜ. ಆದರೆ, ನಾವು ಹೋರಾಟ ಮುಂದುವರಿಸಲಿದ್ದು, ಗಾಜಾದಲ್ಲಿ ಗೆಲುವು ನಮ್ಮದೇ' ಎಂದಿದ್ದಾರೆ. ಗಾಜಾದಲ್ಲಿ ಗುರಿ ಸಾಧನೆ ವಿಫಲವಾದ ನಂತರ ಇಸ್ರೇಲ್ ದೇಶವು ಲೆಬನಾನ್, ಈಜಿಪ್ಟ್ ಮತ್ತು ಜೋರ್ಡಾನ್ ವಿರುದ್ಧ ಪಿತೂರಿ ನಡೆಸುತ್ತಿದೆ ಎಂದೂ ಅವರು ದೂರಿದ್ದಾರೆ.

ನೆತನ್ಯಾಹು ಮತ್ತು ಖಲೀದ್ ಪ್ರತಿಕ್ರಿಯೆಗಳನ್ನು ಗಮನಿಸಿದರೆ, ಯುದ್ಧ ನಿಲ್ಲುವ ಸಾಧ್ಯತೆಗಳು ಕ್ಷೀಣ ಎನ್ನಿಸುತ್ತದೆ.

ಗಾಜಾಪಟ್ಟಿಯ ಜನರಲ್ಲಿ ಶೇ 90ರಷ್ಟು ಮಂದಿ ಸ್ಥಳಾಂತರಗೊಂಡಿದ್ದು, ತುತ್ತು ಅನ್ನ, ಗುಟುಕು ನೀರಿಗಾಗಿ ಹಪಹಪಿಸುತ್ತಿದ್ದಾರೆ. ಅಮೆರಿಕದ ಅಧ್ಯಕ್ಷೀಯ ಚುನಾವಣೆ ಮುಗಿದ ಮೇಲೆ ಕದನ ವಿರಾಮದ ಮಾತುಕತೆಗಳು ಮತ್ತೆ ಆರಂಭವಾಗುವ ಸಾಧ್ಯತೆ ಇದೆ. ಅಷ್ಟರಲ್ಲಿ ಅಲ್ಲಿನ ಬದುಕು ಮತ್ತಷ್ಟು ನರಕವಾಗಲಿದೆ. ಅಲ್ಲಿನ ಬದುಕು ಮತ್ತೆ ಎಂದಾದರೂ ಯಥಾಸ್ಥಿತಿಗೆ ಮರಳುವುದೇ ಎನ್ನುವ ಬಗ್ಗೆ ಅನುಮಾನಗಳಿವೆ.

ಆಧಾರ: ಬಿಬಿಸಿ, ಎಎಫ್‌ಪಿ, ರಾಯಿಟರ್ಸ್, ಸೆಂಟರ್ ಫಾರ್ ಸ್ಟ್ರಾಟೆಜಿಕ್ ಆ್ಯಂಡ್ ಇಂಟರ್ ನ್ಯಾಷನಲ್ ಸ್ಟಡೀಸ್

ತೈಲ ಮಾರುಕಟ್ಟೆ ಮೇಲೆ ಪರಿಣಾಮದ ಆತಂಕ

ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಬಿಕ್ಕಟ್ಟು ಇನ್ನಷ್ಟು ತೀವ್ರಗೊಂಡರೆ, ಅದು ಅಂತರರಾಷ್ಟ್ರೀಯ ತೈಲ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಬಹುದು ಎಂಬ ಆತಂಕ ಕಾಡುತ್ತಿದೆ. ಇಸ್ರೇಲ್–ಹಮಾಸ್ ಬಂಡುಕೋರರ ನಡುವೆ ವರ್ಷದಿಂದ ಮತ್ತು ಕೆಲವು ವಾರಗಳಿಂದ ಇಸ್ರೇಲ್–ಹಿಜ್ಬುಲ್ಲಾ ಬಂಡುಕೋರರ ನಡುವೆ ಸಂಘರ್ಷ ನಡೆಯುತ್ತಿದ್ದರೂ ಅಂತರರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬಹುತೇಕ ಸ್ಥಿರವಾಗಿಯೇ ಇತ್ತು. ಬಂಡುಕೋರರಿಗೆ ಬೆಂಬಲ ನೀಡುತ್ತಾ ಬಂದಿದ್ದ ಇರಾನ್ ನೇರವಾಗಿ ಇಸ್ರೇಲ್ ಜೊತೆ ಸಂಘರ್ಷಕ್ಕೆ ಇಳಿದ ನಂತರ ಕಚ್ಚಾ ತೈಲದ ಬೆಲೆ ಕೊಂಚ ಏರಿಕೆ ಕಂಡರೂ, ಮತ್ತೆ ಇಳಿದಿದೆ (ಸದ್ಯ ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 77.85 ಡಾಲರ್ ಇದೆ).

ಆದರೆ, ಸಂಘರ್ಷ ತೀವ್ರಗೊಳ್ಳುತ್ತಿರುವುದು ಅಂತರರಾಷ್ಟ್ರೀಯ ತೈಲ ಮಾರುಕಟ್ಟೆಯ ಸ್ವರೂಪವನ್ನೇ ಬದಲಾಯಿಸಬಹುದು ಎಂಬ ಆತಂಕವನ್ನು ತಜ್ಞರು ವ್ಯಕ್ತಪಡಿಸಿದ್ದಾರೆ. ಇರಾನ್ ಸೇರಿದಂತೆ ಮಧ್ಯಪ್ರಾಚ್ಯದ ರಾಷ್ಟ್ರಗಳು ಕಚ್ಚಾ ತೈಲ ಉತ್ಪಾದಕ ರಾಷ್ಟ್ರಗಳಾಗಿದ್ದು, ಅಲ್ಲಿ ನಡೆಯುವ ವಿದ್ಯಮಾನಗಳು ಜಾಗತಿಕ ತೈಲ ಪೂರೈಕೆಯ ಮೇಲೆ ಮತ್ತು ಅದರ ಬೆಲೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿವೆ.

ಸಿನಿ ಬಿಟ್ಸ್

2025ರ ಆಗಸ್ಟ್‌ಗೆ 'ಕಾಂತಾರ–2' ರಿಲೀಸ್



ರಿಷಬ್ ಶೆಟ್ಟಿ

ನಟ ರಿಷಬ್ ಶೆಟ್ಟಿ ನಟಿಸಿ ನಿರ್ದೇಶಿಸುತ್ತಿರುವ 'ಕಾಂತಾರ' ಸಿನಿಮಾ ಪ್ರೀಕ್ವೆಲ್ 2025ರ ಆಗಸ್ಟ್‌ನಲ್ಲಿ ಬಿಡುಗಡೆಯಾಗಲಿದೆ ಎಂದು ಚಿತ್ರದ ನಿರ್ಮಾಪಕ ವಿಜಯ್ ಕಿರಗಂದೂರು ತಿಳಿಸಿದ್ದಾರೆ.

ನವದೆಹಲಿಯಲ್ಲಿ ಮಂಗಳವಾರ (ಅ.8) 70ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ ನಡೆದಿತ್ತು. 'ಕಾಂತಾರ' ಚಿತ್ರಕ್ಕೆ ಅತ್ಯುತ್ತಮ ಮನರಂಜನಾ ಚಿತ್ರ ಹಾಗೂ ಚಿತ್ರದಲ್ಲಿನ ನಟನೆಗಾಗಿ ರಿಷಬ್ ಶೆಟ್ಟಿ ಅವರು ಅತ್ಯುತ್ತಮ ನಟ ಪ್ರಶಸ್ತಿ ಪಡೆದುಕೊಂಡರು. ಸಮಾರಂಭದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ವಿಜಯ್ ಕಿರಗಂದೂರು, 'ಕಾಂತಾರ ಚಿತ್ರದ ಪ್ರೀಕ್ವೆಲ್‌ನ ಚಿತ್ರೀಕರಣ ನಡೆಯುತ್ತಿದೆ. ಇಡೀ ತಂಡ ಕುಂದಾಪುರದಲ್ಲೇ ಉಳಿದುಕೊಂಡು ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದೆ. 2025ರ ಆಗಸ್ಟ್‌ನಲ್ಲಿ ಚಿತ್ರವನ್ನು ತೆರೆಯಲ್ಲಿ ನಿರೀಕ್ಷೆ ಮಾಡಬಹುದು' ಎಂದಿದ್ದಾರೆ. ಜೊತೆಗೆ ಯಶ್ ನಟನೆಯ ಕೆ.ಜಿ.ಎಫ್. ಸಿನಿಮಾದ ಮೂರನೇ ಭಾಗ ಕುರಿತು ನಾಲ್ಕೈದು ತಿಂಗಳಲ್ಲಿ ಅಪ್‌ಡೇಟ್ ಕೊಡುವುದಾಗಿ ಹೇಳಿದ್ದಾರೆ.

ಕಾಂತಾರ ಪ್ರೀಕ್ವೆಲ್‌ಗಾಗಿ ರಿಷಬ್ ದೈಹಿಕವಾಗಿಯೂ ಬದಲಾಗಿದ್ದು, ಸಿನಿಮಾಗಾಗಿ ಹತ್ತು ಕೆ.ಜಿ. ಏರಿಸಿಕೊಂಡು, ಎಂಟು ಕೆ.ಜಿ. ಇಳಿಸಿಕೊಂಡಿದ್ದಾರೆ. ಸಿನಿಮಾದಲ್ಲಿ ಹೆಚ್ಚಿನ ಪ್ರಮಾಣದ ಆ್ಯಕ್ಷನ್ಸ್ ಇದ್ದು, ಕಳರಿಪಯಟ್ಟು ತರಬೇತಿಯನ್ನೂ ರಿಷಬ್ ಪಡೆದಿದ್ದಾರೆ. ಪ್ರೀಕ್ವೆಲ್ ಅನ್ನು ಈಗಾಗಲೇ ಪ್ರೈಂ ವಿಡಿಯೊ ದೊಡ್ಡ ಮೊತ್ತಕ್ಕೆ ಖರೀದಿಸಿದೆ. ಕದಂಬರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ ದಂತಕಥೆಯ ಕಥಾಹಂದರ ಇದಾಗಿದ್ದು, ಕನ್ನಡ, ಇಂಗ್ಲಿಷ್ ಸೇರಿದಂತೆ ಏಳು ಭಾಷೆಗಳಲ್ಲಿ ಏಕಕಾಲದಲ್ಲಿ ಈ ಸಿನಿಮಾ ಬಿಡುಗಡೆಯಾಗಲಿದೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಅರವಿಂದ್ ಎಸ್.ಕಶ್ಯಪ್ ಅವರ ಛಾಯಾಚಿತ್ರಗ್ರಹಣ ಸೇರಿದಂತೆ ಮೊದಲ ಭಾಗದಲ್ಲಿ ಕಾರ್ಯನಿರ್ವಹಿಸಿದ್ದ ತಾಂತ್ರಿಕ ತಂಡವೇ ಪ್ರೀಕ್ವೆಲ್‌ನಲ್ಲೂ ಕೆಲಸ ಮಾಡುತ್ತಿದೆ.

'ಕುಲದಲ್ಲಿ ಕೀಳ್ಯಾವುದೋ' ಚಿತ್ರದಲ್ಲಿ ಮನು–ಮೌನ ಜೋಡಿ

ಮನು, ಮೌನ

ಕೆ.ರಾಮನಾರಾಯಣ್ ನಿರ್ದೇಶನದಲ್ಲಿ 'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಮಡೆನೂರ್ ಮನು ನಾಯಕರಾಗಿ ನಟಿಸುತ್ತಿರುವ 'ಕುಲದಲ್ಲಿ ಕೀಳ್ಯಾವುದೋ' ಚಿತ್ರದ ಮುಹೂರ್ತ ಇತ್ತೀಚೆಗೆ ನಡೆಯಿತು.

ಯೋಗರಾಜ್ ಸಿನಿಮಾಸ್ ಈ ಚಿತ್ರವನ್ನು ಅರ್ಪಿಸುತ್ತಿದ್ದು, ಪರ್ಲ್ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ಸಂತೋಷ್ ಕುಮಾರ್ ಎ.ಕೆ ಮತ್ತು ವಿದ್ಯಾ ಅವರು ಈ ಸಿನಿಮಾ ನಿರ್ಮಿಸುತ್ತಿದ್ದಾರೆ. ಚಿತ್ರದಲ್ಲಿ ನಾಯಕಿಯಾಗಿ 'ರಾಮಾಚಾರಿ' ಧಾರಾವಾಹಿ ಖ್ಯಾತಿಯ ಮೌನ ಗುಡ್ಡೆಮನೆ ನಟಿಸುತ್ತಿದ್ದಾರೆ. ಚಿತ್ರದ ಚಿತ್ರೀಕರಣ ರಾಮನಗರದಲ್ಲಿ ನಡೆಯುತ್ತಿದೆ.

ನಿರ್ದೇಶಕದ ಯೋಗರಾಜ್ ಭಟ್ ಹಾಗೂ ಇಸ್ಲಾವುದ್ದೀನ್ ಅವರು ಕಥೆ ಬರೆದಿದ್ದು, ಗೀತರಚನೆಕಾರರಾಗಿ, ನಿರ್ದೇಶಕರಾಗಿ ಗುರುತಿಸಿಕೊಂಡಿರುವ ಕೆ.ರಾಮನಾರಾಯಣ್ ಅವರ ಮತ್ತೊಂದು ಹೆಜ್ಜೆ ಇದಾಗಿದೆ. ಯೋಗರಾಜ್ ಭಟ್ ಹಾಗೂ ಜಯಂತ ಕಾಯ್ಕಿಣಿ ಹಾಡುಗಳನ್ನು ಬರೆದಿದ್ದು, ಮನೋಮೂರ್ತಿ ಸಂಗೀತ ನೀಡುತ್ತಿದ್ದಾರೆ. ದಿಗಂತ್, ಸೋನಾಲ್ ಮೊಂತೆರೊ, ಶರತ್ ಲೋಹಿತಾಶ್ವ, ತಬಲ ನಾಣಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಗುಂಡಣ್ಣ

ಮನಸ್ಸಿನ ಮೇಲೆ ಮೋಹಕ ಬಲೆ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

41

ಮನೋವಿಜ್ಞಾನಿಗಳು ಮನಸ್ಸಿನ ಬಲೆಯ ಬಗ್ಗೆ ಬರೀತಾರ. ಓದಬೇಕು ಅನಕೋತೀರಿ, ಆದರೆ ಮನಸ್ಸು ಯಾವುದಾದರೂ ಬಲೆಯೊಳಗೆ ಸಿಲುಕಿಬಿಡತೈತಿ. ಬಹಳ ಬಡತನ ಐತ್ರಿ, ಅದಕ್ಕ ಓದಾಕ ಆಗಲಿಲ್ಲ ಅಂತೀರಿ. ಬಡತನ ಇದ್ದರ ಓದಾಕ ಆಗಲಿಲ್ಲ ಅಂದ್ರ ಪುದುಚೇರಿಯೊಳಗ ಬೋಟು ಕಟ್ಟುವವನ ಮಗ, ಪೇಪರ್ ಮಾರಿಕೊಂಡು ಬಂದು ಓದಿ ರಾಷ್ಟ್ರಪತಿ ಆದರಲ್ಲ ಅಬ್ದುಲ್ ಕಲಾಂ, ಅವರು ಶ್ರೀಮಂತರ ಮನೆಯಲ್ಲಿ ಹುಟ್ಟಿದ್ದರೇನು? ಬಡವರ ಮನೆಯಲ್ಲಿ ಹುಟ್ಟಿ ಭಾರತದ ಭಾಗ್ಯವಿದಾತರಾದರು ಅಬ್ದುಲ್ ಕಲಾಂ.

ನಮ್ಮದು ಬಹಳ ಕಷ್ಟಾರಿ. ಮನೆ ಬಾಗಿಲು ಪಶ್ಚಿಮ ದಿಕ್ಕಿಗೆ ಐತಿ. ಅದಕ್ಕೆ ಏಳಿಗೇನೆ ಆಗವಲ್ದು ಅಂತೀರಿ. ಮನೆ ಬಾಗಿಲು ಪಶ್ಚಿಮ ದಿಕ್ಕಿಗೆ ಇದ್ದರ ಏನಾತು? ನಿಮ್ಮ ಹಿತ್ತಲಲ್ಲಿ ಮಾವಿನ ಗಿಡ ಹಚ್ಚೀರಿ, ತೆಂಗಿನ ಗಿಡ ಹಚ್ಚೀರಿ, ಆ ಗಿಡಗಳು ಪಶ್ಚಿಮ ದಿಕ್ಕು ಒಳ್ಳೇದಲ್ಲ ಅಂತ ಆ ಕಡೆ ಕಾಯಿ ಬಿಡೋದು ನಿಲ್ಲಿಸ್ಯಾವೇನು? ದಕ್ಷಿಣ ದಿಕ್ಕಿಗೆ ಒಟ್ಟಾ ಕನ್ಯಾ ನೋಡಾಕ ಹೋಗಬಾರದು ಅಂತಿರ್ತಾರ ಕೆಲವು ಮಂದಿ. ಕನ್ಯಾ ಕೊಡೊ ದಕ್ಷಿಣೆ ಬೇಕು, ಆದರೆ ದಕ್ಷಿಣ ದಿಕ್ಕಿನ ಕನ್ಯಾ ಬೇಡ ಅಂತಾರ. ಹಂಗಾದರೆ ನಮ್ಮ ಸಮಸ್ಯೆ ಏನು? ಒಬ್ಬವ ಕಷ್ಟ ಬಂತು ಅಂತಾ ಮನೆಯ ಬಾಗಿಲು, ಕಿಟಕಿ, ದೇವರ ಮನೆ ಎಲ್ಲವನ್ನೂ ಬದಲು ಮಾಡಿದ. ಆಗ ಆ ಮನೆ ಕೇಳಿತು, 'ಮನಿ ಬದಲು ಮಾಡಿದಿ, ಆದರೆ ನೀನೇ ಬದಲಾಗಲಿಲ್ಲೋ' ಅಂತು. ಬದಲಾಗಬೇಕಾಗಿದ್ದು ಮನೆಯಲ್ಲ, ಮನೆಯೊಳಗಿನ ಮನಸುಗಳು. ವಾಸ್ತು ಪ್ರಕಾರ,ಮನೆ ಕಟ್ಟೋದಲ್ಲ, ಮನೆಯೊಳಗಿರುವವರ ಮನಗಳನ್ನು ವಾಸ್ತು ಪ್ರಕಾರ ಕಟ್ಟಬೇಕು. ಇದು ಜೀವನದ ಸೂತ್ರ.

ದೇವರು ಕಾಡತಾನ, ಮನೆ ಕಾಡತೈತಿ, ನಮಗೆ ಒಟ್ಟ ಶನಿ ಕಾಡತಾನ ನೋಡ್ರಿ ಅಂತಾರ. ಶನಿ ದೇವರು ಇರೋನು ಒಬ್ಬನೆ. ಜನ ಇರೋದು ನೂರಾರು ಕೋಟಿ. ಭೂಮಂಡಲದಲ್ಲಿ ಏಷ್ಯಾಖಂಡಕ್ಕೆ ಬಂದು, ಅಲ್ಲಿಂದ ಭಾರತಕ್ಕೆ ಬಂದು, ನಂತರ ಕರ್ನಾಟಕಕ್ಕೆ ಬಂದು, ನಿಮ್ಮ ಜಿಲ್ಲೆ, ತಾಲ್ಲೂಕು ದಾಟಿ ನಿಮ್ಮೂರಿಗೆ ಬಂದು ನಿಮ್ಮ ಮನೆ ಹುಡುಕಿ ನಿಮ್ಮನ್ನು ಕಾಡುವುದಕ್ಕೆ ಶನಿಗೆ ಬೇರೆ ಕೆಲಸ ಇಲ್ಲೇನು? ಶನಿ ದೇವರು ಅಂದರ ಉತ್ಸಾಹಿ ಅವ. ಇನ್ನೊಬ್ಬರ ಜೀವ ಉಳಿಸೋದಕ್ಕ ಸಂಜೀವಿನಿ ಗುಡ್ಡನ ಹೊತ್ಕೊಂಡು ಬಂದವ ಅವ. ನಿಮ್ಮನ್ನ ಯಾಕ ಕಾಡ್ತಾನ?

ಒಬ್ಬ ಜ್ಯೋತಿಷಿ ಹತ್ತಿರ ಹೋಗಿ ತನಗೆ ಶನಿ ಕಾಡ್ತಾನ ಅಂದ. ಜ್ಯೋತಿಷಿ 'ನೂರು ರೂಪಾಯಿ ಕೊಡು ನೋಡಿ ಹೇಳ್ತೀನಿ' ಅಂದ. ಇವ 'ನೂರು ರೂಪಾಯಿ ಇಲ್ಲ' ಅಂದ. 'ಆತು 50 ರೂಪಾಯಿ ಕೊಡು' ಅಂದ. 'ಐವತ್ತೂ ಇಲ್ಲ' ಅಂದ ಅವ. ಕೊನೆಗೆ 25, 10 ರೂಪಾಯಿ ಕೇಳಿ 'ಒಂದು ರೂಪಾಯಿಯಾದರೂ ಕೊಡಪಾ' ಅಂದ ಜ್ಯೋತಿಷಿ. 'ಅದೂ ಇಲ್ಲ' ಅಂದ ಅವ. 'ಹೋಗ್ ಹೋಗ್ ನಿನ್ನ ಬಳಿಗೆ ಯಾವ ಶನಿಯೂ ಬರಲ್ಲ, ಅವ ಬಂದು ಏನ್ ಮಾಡ್ತಾನ, ನೀನೇ ಅವನಿಗೆ ಕಾಡಬೇಕು ಅಷ್ಟೆ' ಎಂದು ಕಳಿಸಿದ.

ದೇವರು ಯಾವಾಗಲೂ ಕಾಡುವುದಿಲ್ಲ. ಕಾಪಾಡ್ತಾನ ಅಷ್ಟೆ. ಕಾಡುತ್ತಾನೆ ಎನ್ನುವುದು ಮನಸ್ಸಿನ ಬಲೆ ಅಷ್ಟೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಗುರುವಾರ ಅಕ್ಟೋಬರ್ 10, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಶುಕ್ಲ ಸಪ್ತಮಿ ಗಂ. 01-53 ನಕ್ಷತ್ರ: ಪೂರ್ವಾಷಾಢ ಗಂ. 29-41 ಯೋಗ: ಅತಿಗಂಡ ಗಂ. 28-37 ಕರಣ: ವಣಿಜ ಗಂ. 12-32, ಕನ್ಯಾ ಮಾಸದ 23 ನೇ ದಿನ, ಮಳೆನಕ್ಷತ್ರ: ಚಿತ್ರ 1.

ರಾಹುಕಾಲ: ಮಧ್ಯಾಹ್ನ 01-30 – 03-00

ಸೂರ್ಯೋದಯ: 06-24 **ಸೂರ್ಯಾಸ್ತ:** 06-11

ಮುಸ್ಲಿಂ ದಿನಾಂಕ: 06 ರಬಿಯುಸ್ಸಾನಿ

ದಿನ ವಿಶೇಷ: ನವರಾತ್ರಿಯ ಎಂಟನೇ ದಿನ, ದುರ್ಗಾಷ್ಟಮಿ **ಅದೃಷ್ಟ ಸಂಖ್ಯೆ:** 3, 5

ಮೇಷ: ಹುಟ್ಟೂರಿನಲ್ಲಿ ಕೃಷಿ ಮಾಡುವ ಅಥವಾ ಕೃಷಿ ಭೂಮಿ ಖರೀದಿಸುವ ಆಲೋಚನೆ ನೆರವೇರುವುದು. ವ್ಯಾಪಾರ ವಿಸ್ತರಿಸಲು ಬೇಕಾದ ತಯಾರಿಯನ್ನು ಮಾಡಿಕೊಳ್ಳಿ. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನರಕ್ಕೇರಲು ಇದು ಸಕಾಲವಾಗಿದೆ.

ವೃಷಭ: ನಿಮ್ಮ ಪ್ರಗತಿಯನ್ನು ಎಲ್ಲೆಡೆಯೂ ಪ್ರಶಂಸಿಸುತ್ತಿರುವುದರಿಂದ ಕಾರ್ಯ ಕ್ಷೇತ್ರದಲ್ಲಿ ಹೊಸದೊಂದು ಹುಮ್ಮಸ್ಸು ಬರುವುದರ ಜೊತೆಗೆ ವೃತ್ತಿಪರ ಶತ್ರುಗಳ ಸಂಖ್ಯೆಯು ಗಗನ ಮುಟ್ಟಲಿದೆ. ವಾಹನ ರಿಪೇರಿಗಾಗಿ ಖರ್ಚು ಸಂಭವಿಸಲಿದೆ.

ಮಿಥುನ: ನೀವು ನಂಬಿರುವ ವ್ಯಕ್ತಿಗಳ ಬಗ್ಗೆ ನಿಮ್ಮ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆನಿಸಿದ್ದರೂ ಹಾಗೆ ಮಾಡದಿರಿ, ಅದು ಈ ದಿನಕ್ಕೆ ಫಲ ಪ್ರದವಲ್ಲ. ಆರಕ್ಷಕ ಸಿಬ್ಬಂದಿಗೆ ಕೆಲಸದ ಒತ್ತಡ ಅಥವಾ ಕೆಲಸದ ಸಮಯ ಹೆಚ್ಚಲಿದೆ.

ಕರ್ಕಾಟಕ: ಸಂಘ ಸಂಸ್ಥೆಗಳ ಸಭೆಗಳಲ್ಲಿ ನಿಮ್ಮ ಮಾತಿಗೆ ಬೆಲೆ ಇಲ್ಲದಂತೆ ಅಥವಾ ನಿಮ್ಮ ಮಾತನ್ನು ಅಪಾರ್ಥವಾಗಿ ಕಲ್ಪಿಸಿಕೊಂಡು ನಿಮ್ಮನ್ನು ದೂಷಿಸುವಂತಹ ಘಟನೆಗಳು ಸಂಭವಿಸಬಹುದು. ಆರೋಗ್ಯದ ಬಗ್ಗೆ ಗಮನ ನೀಡಬೇಕಾಗುತ್ತದೆ.

ಸಿಂಹ: ನಿಮ್ಮೆದುರಿಗಿರುವ ಸವಾಲನ್ನು ಎದುರಿಸುವ ಶಕ್ತಿ ಹಾಗೂ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವವು ನಿಮ್ಮಲ್ಲಿದೆ. ಎಲ್ಲಾ ವಿಷಯಗಳಲ್ಲಿಯೂ ಸಮಾಧಾನದಿಂದಿರುವುದು ಉತ್ತಮ.

ಕನ್ಯಾ: ಉತ್ತಮ ಭವಿಷ್ಯಕ್ಕಾಗಿ ಯೋಜನೆಗಳನ್ನು ರೂಪಿಸುವಲ್ಲಿ ಪತ್ನಿಯ ಸಹಾಯವನ್ನು, ಸಲಹೆಯನ್ನು ಸ್ವೀಕರಿಸಿ. ದಾಂಪತ್ಯದಲ್ಲಿ ಹೊಂದಾಣಿಕೆಯ ಮನೋಭಾವದಿಂದ ಸಾಮರಸ್ಯ ವೃದ್ಧಿಯಾಗುವುದು.

ತುಲಾ: ಬೇಜವಾಬ್ದಾರಿತನದಿಂದ ಮಾಡಿದ ತಪ್ಪುಗಳಿಗೆ ಶಿಕ್ಷೆ ಅನುಭವಿಸಬೇಕಾಗುತ್ತದೆ. ಸಂಶೋಧನಾ ಕಾರ್ಯಗಳಲ್ಲಿ ಆಸಕ್ತಿ ವೃದ್ಧಿಯಾಗುವುದು. ಸಾಧು ಸಂತರ ಭೇಟಿಯಿಂದ ಮನಸ್ಸಿಗೆ ಸಮಾಧಾನ ಕಂಡುಕೊಳ್ಳಬಹುದು.

ವೃಶ್ಚಿಕ: ಮನೆಯವರ ಸಹಾಯದಿಂದ ನಿಮ್ಮ ಹಣಕಾಸಿನ ತೊಂದರೆಗಳು ದೂರಾಗಿ ಈ ದಿನ ಹೊಸ ಯೋಜನೆಗೆ ಚಾಲನೆಯು ದೊರೆಯಲಿದೆ. ನಿಮ್ಮನ್ನು ಅವಲಂಬಿಸಿರುವವರನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಚ್ಚಲಿದೆ.

ಧನು: ಬರುವ ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗ ಪಡೆದುಕೊಳ್ಳುವುದು ನಿಮಗೆ ಬಿಟ್ಟ ವಿಷಯಗಳಗಿರುತ್ತದೆ. ಷೇರುಪೇಟೆಯ ವ್ಯವಹಾರಗಳಲ್ಲಿ ಲಾಭಾಂಶ ಕಡಿಮೆ ಇರುವುದು.

ಮಕರ: ನಿಮ್ಮ ಶತ್ರುಗಳಿಗೂ ಶುಭವನ್ನು ಹಾರೈಸುವ ರೀತಿಯಲ್ಲಿ ನಿಮ್ಮ ವ್ಯಕ್ತಿತ್ವ ರೂಪಿಸಿಕೊಂಡಲ್ಲಿ ನಿಮಗೆ ಶ್ರೇಯಸ್ಸು ಉಂಟಾಗುವುದು. ಬರಬೇಕಾಗಿದ್ದ ಹಣ ವಸೂಲು ಮಾಡಿಕೊಳ್ಳಲು ನಿಷ್ಠುರವಾಗಿ ವರ್ತಿಸಬೇಕಾಗುವುದು.

ಕುಂಭ: ಆಲೋಚಿಸಿದಂತೆ ಕೆಲಸಗಳು ನಡೆಯದೇ ಹಿನ್ನಡೆ ಎಂಬಂತೆ ನಿಮ್ಮ ಮನಸ್ಸಿಗೆ ಕಾಣಬಹುದು, ಆದರೆ ದೇವರ ಆಶೀರ್ವಾದ ನಿಮ್ಮ ಮೇಲಿರುವ ಕಾರಣ ನಿಮ್ಮ ಕೆಲಸಗಳು ಪೂರ್ಣಗೊಳ್ಳುತ್ತವೆ.

ಮೀನ: ಮಳೆಯಲ್ಲಿ ನೆನೆಯುವುದು ಅಥವಾ ನಿಮ್ಮ ದೇಹಕ್ಕೆ ಅಹಿತಕರವಾದ ಕೆಲಸದ ಕಾರಣದಿಂದ ಜ್ವರಾದಿ ಬಾಧೆಗಳು ಕಾಣಿಸಿಕೊಳ್ಳಬಹುದು. ಇಂದು ನಿಮ್ಮ ಗ್ರಹಗತಿಗಳು ಉತ್ತಮವಾಗಿದ್ದು ಅದೃಷ್ಟ ಹುಡುಕಿಕೊಂಡು ಬರಲಿದೆ.

ಪದಬಂಧ 5828

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈ ವಿಧವಾಗಿ ಪ್ರಾರಂಭವಾಗಿರುವ ಕಲಹ (3)
3.ಮಾನಿನಿಯ ಮೇಲೇ ಈ ಸಂದೇಹ! (3)
5.ಎಲ್ಲವೂ ನಶ್ವರವೆಂದು ಹೇಳುತ್ತಿರುವ ಮನುಷ್ಯ (2)
6.ಕತ್ತರಿಸುವ ಸಾಧನವಿಲ್ಲಿ ಉಲ್ಟಾ ಆಗಿದೆ (3)
7.ಪ್ರಾಣಾಯಾಮಮಾಡುವಾಗ ಸಾವನ್ನುಂಟುಮಾಡಿದವನು (2)
9.ಜ್ವಾಲಾಮುಖಿಯಿಂದ ಹೊರಹೊಮ್ಮುವ ಧಾತುಗಳರಸ (4)
11.ಕಾಡಿನ ಮಧ್ಯಭಾಗ (4)
12.ತಟಾಕದ ದಡ (2)
14.ಕಾಳನ್ನು ಪಡೆಯಲು ನಡೆದ ಯುದ್ಧ (3)
16.ಸರೋವರದ ಹತ್ತಿರ ಬಿದ್ದಿರುವ ಮಾಲೆ (2)
17.ತಿರುವು ಮುರುವಾಗಿರುವ ಪ್ರತಿಕೃತಿ (3)
18.ಹತ್ತು ವರ್ಷಗಳ ಅವಧಿ (3)

ಮೇಲಿಂದ ಕೆಳಕ್ಕೆ

1.ಕೊನೆಗಿದ್ದ ವರನ ಒಕ್ಕಣೆ! (3)
2.ದಳ್ಳಾಳಿಗೆ ಕಾಣಿಸಿದ್ದು ಪ್ರಜ್ವಲಿಸುವ ಬೆಂಕಿ (3)
3.ಗುಣವನ್ನು ಹೇಳುವುದು (5)
4.ನಿಶ್ಚಿತಾರ್ಥಕ್ಕೆ ಹೋಗಬೇಕೆನ್ನುವ ಗೊತ್ತುವಳಿ! (3)
5.ಕಾಲುಗುರಿನಿಂದ ತಲೆಯ ಮುಡಿಯವರೆಗೆ! (5)
8.ಮರದ ಹತ್ತಿರ ನೋವಿನಿಂದ ನರಳುವವನಿಗೆ ಚಿತ್ತವಿಕಲ್ಪ (5)
10.ಒಂದೇ ಕಾಲದಲ್ಲಿದ್ದವನು (5)
13.ಟವಲು ಹಿಡಿದಾತನ ಕೈಯಲ್ಲಿರುವ ಅಂಚೆ (3)
15.ಗದ್ದಲ ನೋಡಿ ಬಿಗಿದ ಕಂಠ (3)
16.ಈತ ಸರಿಸಮನಾದವನು (3)



5827ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುಪ್ರತೀಕ 3.ವಜ್ರೋತ್ಸವ 5.ದಹನ 7.ನಗು 9.ಸಾಮಂತ 11.ಲಾಕ್ಷಣಿಕ 12.ಪರಪಂಚ 13.ಮುರಿಸು 14.ನೇಮ 16.ಅರಸ 18.ಕರೆಯೋಲೆ 19.ವಿದ್ಯಮಾನ

ಮೇಲಿಂದ ಕೆಳಕ್ಕೆ: 1.ಸುಮ್ಮಾನ 2.ಕದ 3.ವನ 4.ವರಾತ 6.ಹಸ್ತಕ 8.ಗುಲಾಮಗಿರಿ 10.ಮಂತ್ರಾಲೋಚನೆ 12.ಪದರ 13.ಮುದುಕ 15.ಮದನ 16.ಅಲೆ 17.ಸವಿ

ಸುಡೊಕು 6213

8		6		4		3		5
	3		5					
	9	2		3		7		1
2	1		9		3	6		
				1			5	3
3	8			5			7	
9		8						7
				9			3	
4		3			1	2		6

ಆಡುವುದು ಹೇಗೆ?

ಮನೆ–ಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6212 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಹರಿಯಾಣ ವಿಧಾನಸಭೆ ಚುನಾವಣೆ ಫಲಿತಾಂಶದಿಂದ 'ಇಂಡಿಯಾ' ಮೈತ್ರಿಕೂಟದಲ್ಲಿ ಬಿರುಕು

ಕಾಂಗ್ರೆಸ್ ವಿರುದ್ಧ 'ಮಿತ್ರ'ರ ಮುನಿಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ವಿಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಸರಳ ಬಹುಮತ ಪಡೆಯುವಲ್ಲಿ ವಿಫಲವಾಗಿರುವಂತೆಯೇ, ಇತರ ಅಂಗಪಕ್ಷಗಳು ಕಾಂಗ್ರೆಸ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿವೆ.

'ಮಿತ್ರ ಪಕ್ಷಗಳಿಗಿಂತ ತಾನೇ ಹೆಚ್ಚು' ಎಂಬ ಧೋರಣೆ ತಳೆದಿದ್ದೇಕೆ ಎಂದು 'ಇಂಡಿಯಾ' ಅಂಗಪಕ್ಷಗಳು ಕಾಂಗ್ರೆಸ್ ಅನ್ನು ಪ್ರಶ್ನಿಸಿವೆ, 'ತನಗೆ ಎದುರಾಗಿದ್ದ ತೊಂದರೆಗಳ ನಿವಾರಣೆಗೆ ನಮ್ಮ ಸ್ನೇಹಪರತೆಯನ್ನು ಬಳಸಿಕೊಂಡ ಕಾಂಗ್ರೆಸ್, ನಮ್ಮ ಸಾಮರ್ಥ್ಯವನ್ನು ಕಡೆಗಣಿಸಿತು' ಎಂದೂ ದೂರಿವೆ.

ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ನಿರೀಕ್ಷಿತ ಫಲಿತಾಂಶ ಸಿಗದ ಕಾರಣ, 'ಇಂಡಿಯಾ' ಕೂಟದ 'ಮಿತ್ರ' ಪಕ್ಷಗಳು, ಈಗ ಕಾಂಗ್ರೆಸ್ ವಿರುದ್ಧ ಮುನಿಸಿಕೊಂಡಿವೆ. ಉತ್ತರ ಪ್ರದೇಶದ 6 ವಿಧಾನಸಭಾ ಕ್ಷೇತ್ರಗಳಿಗೆ ನಡೆಯಲಿರುವ ಉಪಚುನಾವಣೆಗೆ ಸಮಾಜವಾದಿ ಪಕ್ಷವು ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿರುವುದು ಇದಕ್ಕೆ ತಾಜಾ ನಿದರ್ಶನ.

ತನಗೆ ಐದು ಸೀಟು ಬಿಟ್ಟುಕೊಡಬೇಕು ಎಂಬುದು ಕಾಂಗ್ರೆಸ್ ಬೇಡಿಕೆಯಾಗಿದೆ. ಇದರ ನಡುವೆಯೇ ಈ ಬೆಳವಣಿಗೆ ನಡೆದಿದೆ.

ಎಎಪಿ ಟೀಕೆ: ಮತ್ತೊಂದು ಮಿತ್ರ ಪಕ್ಷವಾದ ಆಮ್ ಆದ್ಮಿ ಪಕ್ಷ (ಎಎಪಿ) ಕೂಡ ಕಾಂಗ್ರೆಸ್ ವಿರುದ್ಧ ಕಿಡಿ ಕಾರಿದ್ದು, 'ಅತಿಯಾದ ವಿಶ್ವಾಸ'ವೇ ಕಾಂಗ್ರೆಸ್‌ಗೆ ಹಿನ್ನಡೆಯಾಗಲು ಕಾರಣ ಎಂದಿದೆ. ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲು ತಾನು ಸಮರ್ಥ ಎಂದೂ ಹೇಳಿದೆ.

ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಎಎಪಿ, 10 ಸೀಟುಗಳನ್ನು ಕೇಳಿತ್ತು. ಏಳು ಸೀಟು ನೀಡುವುದಾಗಿ ಕಾಂಗ್ರೆಸ್ ಹೇಳಿತ್ತು. ಇದಕ್ಕೆ ಒಪ್ಪಿಕೊಳ್ಳದ ಎಎಪಿ, ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿತ್ತು. 'ಎಲ್ಲಿ ತಪ್ಪಾಗಿದೆ ಎಂಬ ಬಗ್ಗೆ ಕಾಂಗ್ರೆಸ್ ಪಕ್ಷ ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದು ನ್ಯಾಷನಲ್ ಕಾಂಗ್ರೆಸ್‌ನ ಒಮರ್ ಅಬ್ದುಲ್ಲಾ ಹಾಗೂ ಶಿವಸೇನಾ (ಯುಬಿಟಿ) ಮುಖಂಡ ಸಂಜಯ್ ರಾವುತ್ ಹೇಳಿದ್ದಾರೆ.

'ಜಾತಿ ಗಣತಿ ಹಾಗೂ ಕುತಂತ್ರದಿಂದ ಕೂಡಿದ ಕೋಮುವಾದಿ ಪ್ರಚಾರ'ದಂತಹ ವಿಷಯಗಳ ಆಚೆಗೂ ಇರುವ ಇತರ ಸಂಗತಿಗಳ ಬಗ್ಗೆ ಆತ್ಮಾವಲೋಕನ ನಡೆಸುವಂತೆ ಕಾಂಗ್ರೆಸ್‌ಗೆ ಸಿಪಿಎಂ ಕಿವಿಮಾತು ಹೇಳಿದೆ. 'ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭಾರಿ ಸಾಧನೆ ಮಾಡಿದೆ ಎಂಬುದು ಭ್ರಮೆ ಅಷ್ಟೆ. ಬಿಜೆಪಿ ವಿರುದ್ಧದ ನೇರ ಹಣಾಹಣಿಯಲ್ಲಿ ಕಾಂಗ್ರೆಸಗೆ ಸೋಲು ನಿಶ್ಚಿತ' ಎಂದು ಕೆಲ ಮಿತ್ರಪಕ್ಷಗಳು ದೂರಿವೆ.

ಮಿತ್ರಪಕ್ಷಗಳು ಹೇಳಿದ್ದೇನು...

- ಲೋಕಸಭಾ ಚುನಾವಣೆಯಲ್ಲಿ ಕಡಿಮೆ ಸ್ಥಾನಗಳನ್ನು ಗೆದ್ದು ಹಿನ್ನಡೆ ಅನುಭವಿಸಿದ್ದ ಬಿಜೆಪಿಗೆ ಕಾಂಗ್ರೆಸ್ ಪಕ್ಷ 'ಜೀವ ರಕ್ಷಕ' ಸಾಧನ ನೀಡಿದಂತಾಗಿದೆ. ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭೆಗಳಿಗೆ ನಡೆಯಲಿರುವ ಚುನಾವಣೆ ವೇಳೆ ಕಾಂಗ್ರೆಸ್ ತನ್ನ ಮಿತ್ರ ಪಕ್ಷಗಳನ್ನು ಸರಿಯಾಗಿ ನಡೆಸಿಕೊಳ್ಳಬೇಕು
- ಮಿತ್ರ ಪಕ್ಷಗಳ ನೆರವಿನಿಂದ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಸ್ಥಾನಗಳನ್ನು ದ್ವಿಗುಣ ಮಾಡಿಕೊಂಡಿತು. ಆದರೆ, ಹರಿಯಾಣ ವಿಧಾನಸಭೆ ಚುನಾವಣೆ ವೇಳೆ ಮಿತ್ರಪಕ್ಷಗಳಾದ ಎಎಪಿ ಹಾಗೂ ಎಸ್‌ಪಿ ಅನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಕಾಂಗ್ರೆಸ್ ಪುನಃ ತನ್ನ 'ಅಹಂಕಾರ ಧೋರಣೆ' ಮುಂದುವರಿಸಿದೆ
- ತಾನು ದುರ್ಬಲವಾಗಿದ್ದ ಸಂದರ್ಭಗಳಲ್ಲಿ ಮಾತ್ರ ಕಾಂಗ್ರೆಸ್ ಔದಾರ್ಯ ತೋರಿಸುತ್ತದೆ. ಛತ್ತೀಸಗಢ, ಮಧ್ಯಪ್ರದೇಶ, ರಾಜಸ್ಥಾನ ವಿಧಾನಸಭೆ ಚುನಾವಣೆಗಳ ಫಲಿತಾಂಶದಿಂದ ಇದು ಗೊತ್ತಾಗಿದೆ. ಈ ರಾಜ್ಯಗಳ ವಿಧಾನ ಸಭೆಗಳಿಗೆ ನಡೆದ ಚುನಾವಣೆಯಲ್ಲಿ ಮಿತ್ರಪಕ್ಷಗಳ ಬೇಡಿಕೆಗಳನ್ನು ಕಾಂಗ್ರೆಸ್ ತಿರಸ್ಕರಿಸಿತ್ತು

ಪ್ರಜಾ ಮತ
ಜನತಂತ್ರದ ಹಬ್ಬ

'ಅನಿರೀಕ್ಷಿತ' ಫಲಿತಾಂಶದ ಬಗ್ಗೆ ಪರಾಮರ್ಶೆ: ರಾಹುಲ್

ನವದೆಹಲಿ: 'ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ 'ಅನಿರೀಕ್ಷಿತ' ಫಲಿತಾಂಶ ಬಂದಿದ್ದು, ಈ ಕುರಿತು ಪರಾಮರ್ಶಿಸಿ ಚುನಾವಣಾ ಆಯೋಗದ ಗಮನಕ್ಕೆ ತರಲಾಗುವುದು' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ತಿಳಿಸಿದ್ದಾರೆ.

'ನಮ್ಮನ್ನು ಬೆಂಬಲಿಸಿದ್ದಕ್ಕಾಗಿ ಹರಿಯಾಣದ ಎಲ್ಲ ಜನರಿಗೆ ಹಾಗೂ ಅವಿರತ ದುಡಿದ ನಮ್ಮ ಕಾರ್ಯಕರ್ತರಿಗೆ ಧನ್ಯವಾದ ಅರ್ಪಿಸುವುದಾಗಿ' ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.'ನಾವು ಸಾಮಾಜಿಕ ಮತ್ತು ಆರ್ಥಿಕ ನ್ಯಾಯ, ಹಕ್ಕುಗಳು, ನಾಯಕ್ಕಾಗಿ ಹೋರಾಡುವುದನ್ನು ಮುಂದುವರಿಸುತ್ತೇವೆ. ನಿಮ್ಮ ಧ್ವನಿಯಾಗಿ ದುಡಿಯುತ್ತೇವೆ' ಎಂದು ಅವರು ಹೇಳಿದ್ದಾರೆ.

ಇದೇ ವೇಳೆ ಜಮ್ಮು ಮತ್ತು ಕಾಶ್ಮೀರದ ಜನರಿಗೆ ಹೃತ್ಪೂರ್ವಕ ಧನ್ಯವಾದಗಳು ಎಂದಿರುವ ಅವರು, 'ಇಂಡಿಯಾ ಮೈತ್ರಿಯ ಈ ಗೆಲುವು ಸಂವಿಧಾನದ ಗೆಲುವು ಮತ್ತು ಪ್ರಜಾಪ್ರಭುತ್ವದ ಸ್ವಾಭಿಮಾನದ ಗೆಲುವಾಗಿದೆ' ಎಂದಿದ್ದಾರೆ. ಚುನಾವಣೆ ಕುರಿತು ಮಂಗಳವಾರ ಪ್ರತಿಕ್ರಿಯಿಸಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಹರಿಯಾಣದಲ್ಲಿ ಅನಿರೀಕ್ಷಿತ ಫಲಿತಾಂಶ ಬಂದಿದ್ದು, ತಳಮಟ್ಟದ ಕಾರ್ಯಕರ್ತರಿಂದ ಮಾಹಿತಿ ಪಡೆದು ಸಮಗ್ರವಾಗಿ ಪ್ರತಿಕ್ರಿಯಿಸುವುದಾಗಿ' ಹೇಳಿದ್ದರು.

'ಮತಎಣಿಕೆಗೂ ಮೊದಲೇ ಹಲವು ಇವಿಎಂಗಳಲ್ಲಿ ಶೇ 99ರಷ್ಟು ಬ್ಯಾಟರಿ ಚಾರ್ಜ್ ಇತ್ತು. ಎಲ್ಲೆಲ್ಲಿ ಶೇ 99ರಷ್ಟು ಚಾರ್ಜ್ ಇದೆಯೊ ಅಲ್ಲಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಶೇ 60 ಅಥವಾ ಶೇ 70ರಷ್ಟು ಬ್ಯಾಟರಿ ಚಾರ್ಜ್ ಇದ್ದ ಇವಿಎಂಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ' ಎಂದು ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ದೂರಿದ್ದರು.

ಸುದ್ದಿ 2 ನಿಮಿಷ

ದಾಖಲೆ ಸಲ್ಲಿಕೆಗೆ ಅವಕಾಶ ನೀಡಿದ ದೆಹಲಿ ಹೈಕೋರ್ಟ್

ನವದೆಹಲಿ(ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಪೌರತ್ವ ವಿಚಾರಕ್ಕೆ ಸಂಬಂಧಿಸಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇರುವ ಅರ್ಜಿಯ ನಕಲು ಪ್ರತಿಯನ್ನು ಸಲ್ಲಿಸುವುದಕ್ಕೆ ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಅವರಿಗೆ ದೆಹಲಿ ಹೈಕೋರ್ಟ್ ಸಮಯಾವಕಾಶ ನೀಡಿ ಶುಕ್ರವಾರ ಆದೇಶಿಸಿದೆ.

ಸ್ವಾಮಿ ಅವರ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಮನಮೋಹನ್ ಹಾಗೂ ನ್ಯಾಯಮೂರ್ತಿ ತುಷಾರರಾವ್ ಗೇದೆಲಾ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

'ಅಲಹಾಬಾದ್ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯ ಪ್ರತಿಯನ್ನು ನಾನು ಪಡೆದುಕೊಂಡಿದ್ದೇನೆ. ಆ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಅರ್ಜಿಯಲ್ಲಿನ ನಿವೇದನೆ ಹಾಗೂ ಸದ್ಯ ಈ ಹೈಕೋರ್ಟ್‌ನಲ್ಲಿರುವ ಅರ್ಜಿಯಲ್ಲಿನ ವಿಷಯಗಳೇ ಬೇರೆ' ಎಂದು ಸುಬ್ರಮಣಿಯನ್ ಸ್ವಾಮಿ ನ್ಯಾಯಪೀಠಕ್ಕೆ ತಿಳಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ಅರ್ಜಿಯ ಪ್ರತಿ ಹಾಗೂ ಇತರ ದಾಖಲೆಗಳನ್ನು, ಈ ಹಿಂದಿನ ಆದೇಶದ ಅನುಸಾರ ಎಲೆಕ್ಟ್ರಾನಿಕ್ ನಮೂನೆಯಲ್ಲಿ ಸಲ್ಲಿಸುವಂತೆ ಅರ್ಜಿದಾರ ಸ್ವಾಮಿ ಅವರಿಗೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ನವೆಂಬರ್ 6ಕ್ಕೆ ಮುಂದೂಡಿತು.

ನಿವೃತ್ತ ಡಿಜಿಪಿ ಶ್ರೀಲೇಖಾ ಬಿಜೆಪಿಗೆ

ತಿರುವನಂತಪುರ: ಕೇರಳ ಕೇಡರ್‌ನ ಮೊದಲ ಮಹಿಳಾ ಐಪಿಎಸ್ ಅಧಿಕಾರಿ, ನಿವೃತ್ತ ಡಿಜಿಪಿ ಆರ್.ಶ್ರೀಲೇಖಾ ಬುಧವಾರ ಬಿಜೆಪಿಗೆ ಸೇರ್ಪಡೆಯಾದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್, ಜಿಲ್ಲಾ ಘಟಕದ ಅಧ್ಯಕ್ಷ ವಿ.ವಿ. ರಾಜೇಶ್ ಸಮಕ್ಷಮದಲ್ಲಿ ಸದಸ್ಯತ್ವ ಪಡೆದರು.

'ಪ್ರಧಾನಿ ಮೋದಿಯವರ ವರ್ಚಸ್ಸು ಬಿಜೆಪಿ ಸೇರುವಂತೆ ನನ್ನ ಮೇಲೆ ಪ್ರಭಾವ ಬೀರಿದೆ. ಪಕ್ಷದಿಂದ ಏನನ್ನು ಬಯಸಲ್ಲ. ಜನಸೇವೆಗೆ ಸಿಕ್ಕ ಮತ್ತೊಂದು ಅವಕಾಶವಿದು. ಜನರಿಗಾಗಿ ಕೆಲಸ ಮಾಡುವೆ' ಎಂದು ಶ್ರೀಲೇಖಾ ಹೇಳಿದರು.

'ಪೊಲೀಸ್ ಅಧಿಕಾರಿಯಾಗಿ ಕಳಂಕರಹಿತ ದಾಖಲೆ ಹೊಂದಿರುವ ನಿವೃತ್ತ ಡಿಜಿಪಿಯ ಅನುಭವವು ಪಕ್ಷಕ್ಕೆ ಹೆಚ್ಚು ಲಾಭವಾಗಲಿದೆ. 2026ರಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು ನಾವು ಶ್ರಮಿಸುತ್ತೇವೆ' ಎಂದು ಸುರೇಂದ್ರನ್ ಹೇಳಿದರು.

1987ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಶ್ರೀಲೇಖಾ, 2020ರಲ್ಲಿ ನಿವೃತ್ತರಾಗುವ ಮುನ್ನ ಪ್ರಮುಖ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಹಲವು ಪುಸ್ತಕಗಳನ್ನು ಬರೆದಿದ್ದಾರೆ.

ಮತ್ತೆ ಪಾಕ್‌ನ ಹತ್ತು ಪ್ರಜೆಗಳ ಬಂಧನ

ಎರಡನೇ ಮುಖಪುಟದಿಂದ...

ಮೆಹನೂರ್, ನುಸ್ರತ್, ಫರ್ಜಾನಾ, ರುಕ್ಸಾನಾ, ಅಮೀದಾ, ನೌಸಾನ್ (ಎಲ್ಲರೂ ಮಹಿಳೆಯರು) ಮತ್ತು ಫರ್ವಾಜ್, ಸಫೀಕ್ ರೆಹಮಾನ್, ಸೈಫ್ ಅಲಿ, ಸಲೀಂ ಖಾನ್ ಬಂಧಿತರು.

ಇವರಲ್ಲಿ ಐವರು ದೆಹಲಿಯಲ್ಲಿ, ಮೂವರು ರಾಜಸ್ಥಾನದ ಅಜ್ಮೀರ್‌ನಲ್ಲಿ ಮತ್ತು ಮತ್ತೊಬ್ಬ ಉತ್ತರ ಪ್ರದೇಶದಲ್ಲಿ ವಾಸವಾಗಿದ್ದ. ಬಂಧಿತರೆಲ್ಲರೂ ಮೆಹದಿ ಫೌಂಡೇಷನ್ ಧರ್ಮಗುರು ಯೂನಸ್ ಅಲ್ಗೋರ್ ಪ್ರವಚನಗಳ ಪ್ರಚಾರಕರು ಎಂದು ಪೊಲೀಸರು ತಿಳಿಸಿದ್ದಾರೆ.

ಎಲ್ಲರನ್ನೂ ಬುಧವಾರ ಬಿಗಿ ಭದ್ರತೆಯಲ್ಲಿ ಆನೇಕಲ್ ಸರ್ಕಾರಿ ಆಸ್ಪತ್ರೆಗೆ ಕರೆತಂದು ವೈದ್ಯಕೀಯ ತಪಾಸಣೆ ನಡೆಸಲಾಯಿತು. ಸಂಜೆ ನ್ಯಾಯಾಲಯಕ್ಕೆಹಾಜರುಪಡಿಸಲಾಗಿದ್ದು, 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಆನೇಕಲ್ ತಾಲ್ಲೂಕಿನ ರಾಜಾಪುರದ ಅನಘ ಬಡಾವಣೆಯಲ್ಲಿ ಒಂದೇ ಕುಟುಂಬದ ನಾಲ್ವರು ಮತ್ತು ಬೆಂಗಳೂರಿನ ಪೀಣ್ಯದಲ್ಲಿ ಒಂದೇ ಕುಟುಂಬದ ಮೂವರನ್ನು ಜಿಗಣಿ ಪೊಲೀಸರು ವಾರದ ಹಿಂದೆ ಬಂಧಿಸಿದ್ದರು.

ಪರ್ವೇಜ್ ಸಂಪರ್ಕದಲ್ಲಿದ್ದಾರೆ

ಎರಡನೇ ಮುಖಪುಟದಿಂದ...

2007ರಲ್ಲಿ ಭಾರತಕ್ಕೆ ನುಸುಳಿ ಬಂದಿರುವ ಪಾಕಿಸ್ತಾನದ 63 ಪ್ರಜೆಗಳು ಹೆಸರು ಬದಲಿಸಿಕೊಂಡು ಬೇರೆ, ಬೇರೆ ರಾಜ್ಯಗಳಲ್ಲಿ ನೆಲಸಿದ್ದಾರೆ. ಇವರಲ್ಲಿ ಬಹುತೇಕರು ಪರ್ವೇಜ್ ಅಹಮದ್ ಸಂಪರ್ಕದಲ್ಲಿದ್ದಾರೆ ಎಂದು ತಿಳಿದು ಬಂದಿದೆ.

ನೆರೆಯ ಬಾಂಗ್ಲಾದೇಶದ ಮೂಲಕ ಭಾರತದೊಳಗೆ ನುಸುಳಿ ಬರುವ ಪಾಕಿಸ್ತಾನ ಪ್ರಜೆಗಳಿಗೆ ಶಾಶ್ವತವಾಗಿ ಇಲ್ಲಿ ಉಳಿಯಲು ಅನುಕೂಲವಾಗುವಂತೆ ಪರ್ವೇಜ್ ಅಹಮದ್ ಅವರಿಗೆ ಆಧಾರ್ ಕಾರ್ಡ್, ಪಾಸ್‌ಪೋರ್ಟ್ ಸೇರಿದಂತೆ ವಿವಿಧ ದಾಖಲೆಪಡೆಯಲು ನೆರವಾಗುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಭೇಟಿ ಮಾಡಿದ ನಾಯಬ್ ಸಿಂಗ್ ಸೈನಿ

ಸರ್ಕಾರ ರಚನೆ: ಗರಿಗೆದರಿದ ಚಟುವಟಿಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಹರಿಯಾಣ ವಿಧಾನಸಭೆಯಲ್ಲಿ ಬಹುಮತ ಪಡೆದಿರುವ ಬಿಜೆಪಿ ಪಾಳೆಯದಲ್ಲಿ ಹೊಸ ಸರ್ಕಾರ ರಚನೆಯ ಚಟುವಟಿಕೆಗಳು ಗರಿಗೆದರಿವೆ. ರಾಜ್ಯದಲ್ಲಿ ಸತತ ಮೂರನೇ ಅವಧಿಗೆ ಸರ್ಕಾರ ರಚಿಸುತ್ತಿರುವ ಬಿಜೆಪಿಯು, ಬುಧವಾರ ಹಲವು ಸಭೆಗಳನ್ನು ನಡೆಸಿದೆ.

ಹರಿಯಾಣದ ಉಸ್ತುವಾರಿ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯ ಪ್ರಮುಖ ನಾಯಕರನ್ನು ಬುಧವಾರ ಇಲ್ಲಿ ಭೇಟಿ ಮಾಡಿದರು. ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ನಿವಾಸದಲ್ಲಿ ನಡೆದ ಮಹತ್ವದ ಸಭೆಯಲ್ಲಿ ಭಾಗಿಯಾಗಿದ್ದರು. ಅಲ್ಲದೆ ಸೈನಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನೂ ಭೇಟಿ ಮಾಡಿದರು.

ನಡ್ಡಾ ನಿವಾಸದಲ್ಲಿ ನಡೆದ ಸಭೆಯಲ್ಲಿ ಸರ್ಕಾರ ರಚನೆ ಹಾಗೂ ಸಂಪುಟಕ್ಕೆ ಯಾರನ್ನು ಸೇರಿಸಿಕೊಳ್ಳಬೇಕು ಎಂಬ ಕುರಿತು ಚರ್ಚೆಗಳು ನಡೆದಿವೆ ಎಂದು ಮೂಲಗಳು ಹೇಳಿವೆ. ಈ ಸಭೆಯಲ್ಲಿ ಬಿಜೆಪಿ ಹರಿಯಾಣ ಘಟಕದ ಅಧ್ಯಕ್ಷ ಮೋಹನ್ ಲಾಲ್ ಬಡೋಲಿ ಅವರೂ ಇದ್ದರು. 'ನಾನು, ಮುಖ್ಯಮಂತ್ರಿ ಸೈನಿ ಮತ್ತು ಪಕ್ಷದ ಇತರ ನಾಯಕರು ನಮ್ಮ ಕೇಂದ್ರ ನಾಯಕರನ್ನು ಸೌಜನ್ಯಪೂರ್ವಕವಾಗಿ ಭೇಟಿ ಮಾಡಲು ಬಂದಿದ್ದೇವೆ' ಎಂದು ಬಡೋಲಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಹರಿಯಾಣ ಸರ್ಕಾರದಲ್ಲಿ 12ರಿಂದ 14 ಮಂದಿ ಕ್ಯಾಬಿನೆಟ್ ದರ್ಜೆಯ ಸಚಿವರು ಇರಲು ಅವಕಾಶ ಇದೆ. ಸೈನಿ ಜೊತೆ ಮಹಿಪಾಲ್ ಧಂಡಾ ಮತ್ತು ಮೂಲಚಂದ್ ಶರ್ಮ ಅವರು ಸಂಪುಟ ಸೇರುವ ಸಾಧ್ಯತೆ ಇದೆ. ಸಂಪುಟದಲ್ಲಿ ಹೊಸ ಮುಖಗಳಿಗೆ ಅವಕಾಶ ಸಿಗುವ ಸಾಧ್ಯತೆಯೂ ಇದೆ ಎಂದು ಬಿಜೆಪಿ ಮೂಲಗಳು ಹೇಳಿವೆ. ದಸರಾ ಹಬ್ಬದ ಸಂದರ್ಭದಲ್ಲಿ ಅಥವಾ ಹಬ್ಬ ಮುಗಿದ ತಕ್ಷಣ ಹೊಸ ಸರ್ಕಾರ ರಚನೆ, ಮುಖ್ಯಮಂತ್ರಿ ಮತ್ತು ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭ ಆಯೋಜಿಸಲು ಚಿಂತನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಹೊಸದಾಗಿ ರಚನೆಯಾಗಲಿರುವ ಸರ್ಕಾರದಲ್ಲಿ ಸೈನಿ ಅವರೇ ಮುಖ್ಯಮಂತ್ರಿ ಆಗುವ ಸಾಧ್ಯತೆ ಇದೆ. ಪಕ್ಷವು ಅಧಿಕಾರಕ್ಕೆ ಮರಳಿದಲ್ಲಿ ಸೈನಿ ಅವರೇ ಮುಖ್ಯಮಂತ್ರಿ ಆಗಲಿದ್ದಾರೆ ಎಂಬುದನ್ನು ಬಿಜೆಪಿ ನಾಯಕರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಸೂಚ್ಯವಾಗಿ ಹೇಳಿದ್ದರು.

ಪ್ರಧಾನಿ ಹಾಗೂ ಬಿಜೆಪಿಯ ನಾಯಕರನ್ನು ಭೇಟಿ ಮಾಡಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಸೈನಿ ಅವರು, ಪಕ್ಷವು ಹರಿಯಾಣದಲ್ಲಿ ಸಾಧಿಸಿರುವ ಜಯಕ್ಕೆ ಮೋದಿ ಅವರ ನೀತಿಗಳು ಕಾರಣ ಎಂದು ಹೇಳಿದರು. 'ದೇಶದ ಅತ್ಯಂತ ಯಶಸ್ವಿ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದೆ. ಹರಿಯಾಣದ ಜನಾದೇಶದ ಬಗ್ಗೆ ಚರ್ಚಿಸಿದೆ. ಪ್ರಧಾನಿಯವರ ನೀತಿಗಳಲ್ಲಿ ಜನ ಇರಿಸಿರುವ ವಿಶ್ವಾಸಕ್ಕೆ, ಒಳ್ಳೆಯ ಆಡಳಿತಕ್ಕೆ, ಸಮಾನತೆಗೆ ಹಾಗೂ ಬಡವರ ಅಭಿವೃದ್ಧಿಗೆ ಸಿಕ್ಕ ಜಯ ಇದು' ಎಂದು ಸೈನಿ ಅವರು ಎಕ್ಸ್ ಮೂಲಕ ಹೇಳಿದ್ದಾರೆ.

ಹರಿಯಾಣದ ಉಸ್ತುವಾರಿ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ನವದೆಹಲಿಯಲ್ಲಿ ಬುಧವಾರ ಭೇಟಿ ಮಾಡಿದರು. —ಪಿಟಿಐ ಚಿತ್ರ

ಪಕ್ಷೇತರ ಶಾಸಕರ ಬೆಂಬಲ

ಚಂಡೀಗಢ (ಪಿಟಿಐ): ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಜಯ ಸಾಧಿಸಿರುವ ದೇವೇಂದ್ರ ಕಾದಿಯಾನ್, ಸಾವಿತ್ರಿ ಜಿಂದಾಲ್ ಮತ್ತು ರಾಜೇಶ್ ಜೂನ್ ಅವರು ಬಿಜೆಪಿಗೆ ಬೆಂಬಲ ನೀಡಲು ತೀರ್ಮಾನಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಕತ್ತೆ, ಒಂಟೆ ಅನ್ನುವಂತಿಲ್ಲ

ಪ್ರಜಾವಾಣಿ ವಾರ್ತೆ

ಪಟ್ನಾ: ಬಿಹಾರದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ವಿರುದ್ಧ ಕೀಳುಮಟ್ಟದ ಭಾಷೆ ಬಳಸುತ್ತಿರುವ ಬಗ್ಗೆ ಪೋಷಕರಿಂದ ವ್ಯಾಪಕ ದೂರುಗಳು ಬಂದ ಬೆನ್ನಲ್ಲೇ ನಿತೀಶ್ ಕುಮಾರ್ ನೇತೃತ್ವದ ಸರ್ಕಾರವು ಈ ಕುರಿತು ಕಟ್ಟುನಿಟ್ಟಿನ ಮಾರ್ಗಸೂಚಿಯನ್ನು ಹೊರಡಿಸಿದ್ದು ತಕ್ಷಣದಿಂದಲೇ ಇದು ಪಾಲನೆ ಆಗಬೇಕು ಎಂದು ಸೂಚಿಸಿದೆ.

ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳನ್ನು 'ಕತ್ತೆ', ಎತ್ತರ ಇರುವ ವಿದ್ಯಾರ್ಥಿಗಳನ್ನು 'ಒಂಟೆ' ಎಂದು ನಿಂದಿಸುವಂತಿಲ್ಲ. ಸುಂದರವಾಗಿ ಕಾಣದ ಮಕ್ಕಳನ್ನು 'ಕಪ್ಪು' ವರ್ಣದ ಪದಗಳನ್ನು ಬಳಸಿ ಕೀಳಾಗಿ ನೋಡುವಂತಿಲ್ಲ. ಅಲ್ಲದೆ 'ಮಂದ ಬುದ್ಧಿ' ಎಂಬ ಪದಗಳನ್ನೂ ಬಳಸುವಂತಿಲ್ಲ ಎಂದು ಶಿಕ್ಷಣ ಇಲಾಖೆ ಮಾರ್ಗಸೂಚಿಯಲ್ಲಿ ತಿಳಿಸಿದೆ.

ಶಿಕ್ಷಕರು ತಮ್ಮ ಮಕ್ಕಳನ್ನು ವಿವಿಧ ಅಪಮಾನಕರ ಪದಗಳನ್ನು ಬಳಸಿ ನಿಂದಿಸುತ್ತಿದ್ದ ಕುರಿತು, ಬಿಹಾರದ ವಿವಿಧ ಸರ್ಕಾರಿ ಶಾಲೆಗಳ ಪ್ರಾಂಶುಪಾಲರಿಗೆ ಪೋಷಕರು ಹಲವು ದೂರುಗಳನ್ನು ಸಲ್ಲಿಸಿದ್ದರು. ಆದರೆ, ಪ್ರಾಂಶುಪಾಲರು ಇವುಗಳನ್ನು ನಿರ್ಲಕ್ಷಿಸಿದ್ದ ಕಾರಣ, ಪೋಷಕರ ಆಕ್ರೋಶ ತೀವ್ರಗೊಂಡಿತ್ತು.

ವಿಷಯದ ಗಾಂಭೀರ್ಯ ಅರಿತ ಶಿಕ್ಷಣ ಇಲಾಖೆಯು ಈ ಕುರಿತು ಮಾರ್ಗಸೂಚಿ ಪ್ರಕಟಿಸಿದೆ. ಅಲ್ಲದೆ ವಿದ್ಯಾರ್ಥಿಗಳ ವಿರುದ್ಧ ಅವಹೇಳನಕಾರಿ ಪದಗಳನ್ನು ಬಳಸುವ ಶಿಕ್ಷಕರನ್ನು ಗುರುತಿಸಿ, ಅವುಗಳನ್ನು ಬಳಸದಂತೆ ಎಚ್ಚರಿಕೆ ನೀಡಬೇಕು ಮತ್ತು ಶಾಲಾ ಅವರಣದಲ್ಲಿ ಆರೋಗ್ಯಕರ ವಾತಾವರಣ ಇರುವಂತೆ ನೋಡಿಕೊಳ್ಳಬೇಕು ಎಂದು ಸರ್ಕಾರಿ ಶಾಲೆಗಳ ಪ್ರಾಂಶುಪಾಲರಿಗೆ ಸರ್ಕಾರ ಸೂಚನೆ ನೀಡಿದೆ.

ಶಾಲೆಗಳಲ್ಲಿ ನಡೆಯುವ ಪೋಷಕರು ಮತ್ತು ಶಿಕ್ಷಕರ ಸಭೆಯಲ್ಲಿ ಹೇಗೆ ಶಿಕ್ಷಕರು ಮಕ್ಕಳ ಮೌಲ್ಯಮಾಪನ ಮಾಡುತ್ತಾರೆಯೋ ಹಾಗೆಯೇ ವಿದ್ಯಾರ್ಥಿಗಳೂ ಶಿಕ್ಷಕರ ಮೌಲ್ಯ ನಿರ್ಣಯ ಮಾಡಬೇಕು ಎಂದು ಪ್ರಾಂಶುಪಾಲರಿಗೆ ತಿಳಿಸಲಾಗಿದೆ ಎಂದು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪ್ರತಿಭಾವಂತ ವಿದ್ಯಾರ್ಥಿಗಳನ್ನಷ್ಟೇ ಅಲ್ಲದೆ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೂ ತರಗತಿಯ ನಾಯಕತ್ವ ವಹಿಸಲು ಅವಕಾಶ ಮಾಡಿಕೊಡಬೇಕು. ಇದರಿಂದ ಅವರಲ್ಲೂ ನಾಯಕತ್ವದ ಗುಣಗಳು ಬೆಳೆಯುತ್ತವೆ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

'ಕಾಂಗ್ರೆಸ್ ದ್ವೇಷ ಹರಡುವ ಕಾರ್ಖಾನೆ'

ಮುಂಬೈ (ಪಿಟಿಐ): 'ಕಾಂಗ್ರೆಸ್ ಬೇಜವಾಬ್ದಾರಿಯುತ ಪಕ್ಷವಾಗಿದ್ದು, ದ್ವೇಷ ಹರಡುವ ಕಾರ್ಖಾನೆಯಾಗಿದೆ' ಎಂದು ದೂರಿರುವ ಪ್ರಧಾನಿ ನರೇಂದ್ರ ಮೋದಿ, 'ಕಾಂಗ್ರೆಸ್ ಹಿಂದೂಗಳನ್ನು ವಿಭಜಿಸುವ ಮತ್ತು ಒಂದು ಸಮುದಾಯವನ್ನು ಮತ್ತೊಂದು ಸಮುದಾಯದ ವಿರುದ್ಧ ಎತ್ತಿಕಟ್ಟಲು ಬಯಸುವ ಪಕ್ಷವಾಗಿದೆ' ಎಂದು ಹೇಳಿದರು.

'ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿದ್ದು, ಇದು ದೇಶದ ಮನಸ್ಥಿತಿಯನ್ನು ತೋರಿಸುತ್ತದೆ' ಎಂದ ಅವರು, 'ಮಹಾರಾಷ್ಟ್ರದಲ್ಲಿ ನಾವು ದೊಡ್ಡ ಗೆಲುವು ಪಡೆಯಬೇಕಿದೆ' ಎಂದು ತಿಳಿಸಿದರು.

ಮಹಾರಾಷ್ಟ್ರದಲ್ಲಿನ ₹7,600 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ವರ್ಚುವಲ್ ಆಗಿ ಉದ್ಘಾಟಿಸಿ ಅವರು ಮಾತನಾಡಿದರು.

'ಮಹಾರಾಷ್ಟ್ರದಲ್ಲಿ ವಿರೋಧ ಪಕ್ಷಗಳ ಮೈತ್ರಿಯಾದ ಮಹಾ ವಿಕಾಸ ಅಘಾಡಿಯು (ಎಂವಿಎ) ರಾಜ್ಯವನ್ನು ದುರ್ಬಲಗೊಳಿಸಲು ಅಧಿಕಾರಕ್ಕೆ ಬರಲು ಬಯಸುತ್ತಿದೆ. ಆದರೆ, ಆಡಳಿತಾರೂಢ ಮಹಾಯುತಿಯು ರಾಜ್ಯವನ್ನು ಸದೃಢಗೊಳಿಸುತ್ತಿದೆ' ಎಂದರು. 288 ಸದಸ್ಯ ಬಲದ ಮಹಾರಾಷ್ಟ್ರ ವಿಧಾನಸಭೆಗೆ ಮುಂದಿನ ತಿಂಗಳು ಚುನಾವಣೆ ನಡೆಯುವ ಸಾಧ್ಯತೆ ಇದೆ.

'ಮಹಾರಾಷ್ಟ್ರದಲ್ಲಿ ಅಭಿವೃದ್ಧಿ ಯೋಜನೆಗಳು ತ್ವರಿತಗತಿಯಲ್ಲಿ ಅನುಷ್ಠಾನವಾಗುತ್ತಿವೆ. ಈ ಪರಿಯ ಪ್ರಗತಿಯನ್ನು ಮಹಾರಾಷ್ಟ್ರ ಹಿಂದೆಂದೂ ಕಂಡಿರಲಿಲ್ಲ. ಆದರೆ, ಕಾಂಗ್ರೆಸ್ ಆಳ್ವಿಕೆಯಲ್ಲಿ ರಾಜ್ಯದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿತ್ತು. ಕಾಂಗ್ರೆಸ್‌ಗೆ ಅಭಿವೃದ್ಧಿಯ ಬಗ್ಗೆ ಕಾಳಜಿಯಿಲ್ಲ' ಎಂದು ಅವರು ಹೇಳಿದರು.

'ಬಡವರು, ರೈತರು, ಯುವ ಜನರು ಮತ್ತು ಮಹಿಳೆಯರ ಅಭಿವೃದ್ಧಿಯ ಜತೆಗೆ ವಿಕಸಿತ ಭಾರತ ನಮ್ಮ ಗುರಿ' ಎಂದ ಪ್ರಧಾನಿ ಮೋದಿ, 'ಕಾಂಗ್ರೆಸ್ ಮುಸ್ಲಿಂ ಸಮುದಾಯದವರಲ್ಲಿ ಆತಂಕ ಹುಟ್ಟಿಸಿ, ತಮ್ಮ ಮತ ಬ್ಯಾಂಕ್ ಆಗಿ ಪರಿವರ್ತಿಸಿಕೊಳ್ಳುತ್ತದೆ' ಎಂದು ದೂರಿದರು.

ಪ್ರಧಾನಿ ರಾಜಕೀಯ ಭಾಷಣ: ಕಾಂಗ್ರೆಸ್

ನವದೆಹಲಿ (ಪಿಟಿಐ): 'ಸರ್ಕಾರಿ ಕಾರ್ಯಕ್ರಮದ ವೇದಿಕೆಯನ್ನು ಪ್ರಧಾನಿ ಅವರು ರಾಜಕೀಯ ಭಾಷಣಕ್ಕೆ ಬಳಸಿದ್ದು ಸರಿಯಲ್ಲ' ಎಂದು ಕಾಂಗ್ರೆಸ್ ಕಿಡಿಕಾರಿದೆ.

ಈ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ, 'ತೆರಿಗೆದಾರರ ಹಣವನ್ನು ತಮ್ಮ ರಾಜಕೀಯ ಭಾಷಣಕ್ಕೆ ಮತ್ತು ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಲು ಬಳಸಿದ್ದು ಎಷ್ಟು ಸರಿ' ಎಂದು ಅವರು ಪ್ರಶ್ನಿಸಿದ್ದಾರೆ.

ಬಿಜೆಪಿ ಆದೇಶದಂತೆ ಸಿ.ಎಂ ನಿವಾಸ ತೆರವು: ಆರೋಪ

ನವದೆಹಲಿ (ಪಿಟಿಐ): ಬಿಜೆಪಿಯ ಆದೇಶದ ಮೇರೆಗೆ 'ದೆಹಲಿ ಮುಖ್ಯಮಂತ್ರಿ ಅಧಿಕೃತ ನಿವಾಸ'ವನ್ನು ಖಾಲಿ ಮಾಡಿಸಲಾಗಿದೆ ಎಂದು ಮುಖ್ಯಮಂತ್ರಿ ಕಚೇರಿ (ಸಿಎಂಒ) ಬುಧವಾರ ಆರೋಪಿಸಿದೆ.

ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಬಿಜೆಪಿಯ ಕೆಲವು ನಾಯಕರಿಗೆ ಈ ನಿವಾಸವನ್ನು ಮಂಜೂರು ಮಾಡಲು ಬಯಸಿದ್ದು, ಮುಖ್ಯಮಂತ್ರಿ ಆತಿಶಿ ಅವರ ವಸ್ತುಗಳನ್ನು ಸಿ.ಎಂ ಅಧಿಕೃತ ನಿವಾಸದಿಂದ ಹೊರಹಾಕಲಾಗಿದೆ ಎಂದು ಸಿಎಂಒ ಹೇಳಿಕೆಯಲ್ಲಿ ತಿಳಿಸಿದೆ.

ಈ ಆರೋಪಗಳಿಗೆ ಲೆಫ್ಟಿನೆಂಟ್ ಗವರ್ನರ್ ಕಚೇರಿ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸಿ.ಎಂ ಸ್ಥಾನಕ್ಕೆ ರಾಜೀನಾಮೆ ನೀಡುವವರೆಗೂ ಈ ನಿವಾಸದಲ್ಲಿದ್ದ ಅರವಿಂದ ಕೇಜ್ರಿವಾಲ್, ಇತ್ತೀಚೆಗಷ್ಟೇ ಈ ನಿವಾಸ ತೆರವು ಮಾಡಿದ್ದರು.

ಸಿ.ಎಂ ಆಗಿ ಆತಿಶಿ ಅವರು ಅಧಿಕಾರ ವಹಿಸಿಕೊಂಡ ಮೇಲೆ, ಸೋಮವಾರವಷ್ಟೇ ಈ ಬಂಗಲೆ ಪ್ರವೇಶಿಸಿದ್ದರು.

'ಸಿ.ಎಂ ಆತಿಶಿ ಅವರು ಬಂಗಲೆಯಲ್ಲಿರುವ ಕ್ಯಾಂಪ್ ಕಚೇರಿಯಲ್ಲಿ ಸಭೆ ನಡೆಸಿದರು. ಆದರೆ, ನಂತರ ಅಲ್ಲಿದ್ದ ಸಿಬ್ಬಂದಿಯನ್ನು ತೆಗೆದು ಹಾಕಲಾಯಿತು. ಅಧಿಕಾರಿಗಳು ಬಿಜೆಪಿಯ ಒತ್ತಡಕ್ಕೆ ಮಣಿದು, ಶಿಷ್ಟಾಚಾರವನ್ನು ಉಲ್ಲಂಘಿಸಿ ಆತಿಶಿ ಅವರಿಗೆ ಅಧಿಕೃತ ನಿವಾಸವನ್ನು ಮಂಜೂರು ಮಾಡಿಲ್ಲ' ಎಂದು ಎಎಪಿ ಹಿರಿಯ ನಾಯಕ ಸಂಜಯ್ ಸಿಂಗ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದೆಹಲಿಯ ವಿರೋಧ ಪಕ್ಷದ ನಾಯಕ ವಿಜೇಂದರ್ ಗುಪ್ತಾ, ಮುಖ್ಯಮಂತ್ರಿ ಬಂಗಲೆಯನ್ನು ಕಾನೂನು ಬಾಹಿರವಾಗಿ ಆಕ್ರಮಿಸಿಕೊಂಡಿದ್ದಾರೆ ಎಂದು ಆರೋಪಿಸಿದ್ದು, ಈ ನಿವಾಸಕ್ಕೆ ಬೀಗಮುದ್ರೆ ಹಾಕಬೇಕು ಎಂದು ಒತ್ತಾಯಿಸಿದ್ದಾರೆ.

'ಬಂಗಲೆಯನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿಲ್ಲ. ಕೇಜ್ರಿವಾಲ್ ಅವರ ಬಳಿ ಈ ನಿವಾಸದ ಕೀಗಳು ಇನ್ನೂ ಇವೆ' ಎಂದು ಆರೋಪಿಸಿದ್ದಾರೆ.

ಈ ಆರೋಪಗಳನ್ನು ತಳ್ಳಿಹಾಕಿದ ಸಂಜಯ್ ಸಿಂಗ್, ಕೇಜ್ರಿವಾಲ್ ಅವರು ಸಿ.ಎಂ ಅಧಿಕೃತ ನಿವಾಸವನ್ನು ಖಾಲಿ ಮಾಡಿರುವುದಕ್ಕೆ ದಾಖಲೆಗಳಿದ್ದರೂ ಬಿಜೆಪಿಯು ಈ ವಿಷಯದಲ್ಲಿ ಸುಳ್ಳು ಹೇಳುತ್ತಿದೆ. ಎಎಪಿಯನ್ನು ದುರ್ಬಲಗೊಳಿಸುವ ಮತ್ತು ಪಕ್ಷವನ್ನು ಒಡೆಯುವ ತಂತ್ರಗಳು ವಿಫಲವಾಗಿರುವುದರಿಂದ ದೆಹಲಿಯಲ್ಲಿ ಗೊಂದಲವನ್ನು ಸೃಷ್ಟಿಸಲು ಬಿಜೆಪಿ ಯತ್ನಿಸುತ್ತಿದೆ ಎಂದು ಹೇಳಿದ್ದಾರೆ.

ಮಲಬಾರ್ ಸಮರಾಭ್ಯಾಸ ಆರಂಭ

ಹೈದರಾಬಾದ್: ನಾಲ್ಕು ರಾಷ್ಟ್ರಗಳ ನೌಕಾಪಡೆಗಳನ್ನು ಒಳಗೊಂಡ 'ಮಲಬಾರ್ ಸಮರಾಭ್ಯಾಸ–2024'ನ 28ನೇ ಆವೃತ್ತಿಯ ತಾಲೀಮು ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿ ಬುಧವಾರ ಆರಂಭವಾಯಿತು.

ಅಕ್ಟೋಬರ್ 18ರವರೆಗೆ ಬಂದರು ಮತ್ತು ಸಮುದ್ರದಲ್ಲಿ ತಾಲೀಮು ನಡೆಯಲಿದೆ. ಈ ಸಂದರ್ಭದಲ್ಲಿ ಭಾರತ, ಅಮೆರಿಕ, ಆಸ್ಟ್ರೇಲಿಯಾ ಮತ್ತು ಜಪಾನ್‌ನ ನೌಕಾಪಡೆಗಳು ಹಲವು ಸಂಕೀರ್ಣ ಅಭ್ಯಾಸಗಳನ್ನು ನಡೆಸ ಲಿವೆ. ಕ್ಷಿಪಣಿ ನಿರೋಧಕಗಳು, ಜಲಾಂತರ್ಗಾಮಿ ಪ್ರತಿಬಂಧಕಗಳು, ಬಹು ಕಾರ್ಯಕ್ಕೆ ಬಳಕೆಯಾಗುವ ಹಡಗುಗಳು, ಜಲಾಂತರ್ಗಾಮಿಗಳು, ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳನ್ನು ಬಳಸಿ ಅಭ್ಯಾಸ ನಡೆಸಲಾಗುತ್ತದೆ.

ಉದ್ಘಾಟನಾ ಕಾರ್ಯಕ್ರಮದಲ್ಲಿ ನಾಲ್ಕು ದೇಶಗಳ ನೌಕಾಪಡೆ ಮತ್ತು ಸೇನೆಯ ಪ್ರಮುಖ ಗೌರವಾನ್ವಿತರು ಭಾಗಿಯಾಗಿದ್ದರು. 1992ರಲ್ಲಿ ಮಲಬಾರ್ ಸಮರಾಭ್ಯಾಸ ಆರಂಭಿಸಲಾಯಿತು.

ಕೋಲ್ಕತ್ತದಲ್ಲಿ ಬಾಲಕಿ ಅತ್ಯಾಚಾರ, ಕೊಲೆ ಪ್ರಕರಣ: ಎಸ್‌ಐಟಿ ರಚನೆ

ಕೋಲ್ಕತ್ತ (ಪಿಟಿಐ): ದಕ್ಷಿಣ ಪರಗಣ 24 ಜಿಲ್ಲೆಯ ಕುಲ್ತಾಲಿಯಲ್ಲಿ 10 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ನಡೆಸಿದ ಪ್ರಕರಣದ ತನಿಖೆಗೆ ಪಶ್ಚಿಮ ಬಂಗಾಳ ಸರ್ಕಾರ ವಿಶೇಷ ತನಿಖಾ ದಳವನ್ನು (ಎಸ್‌ಐಟಿ) ರಚಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಬಾರುಯೀಪುರದ ಪೊಲೀಸ್ ವರಿಷ್ಠಾಧಿಕಾರಿ ಚಂದ್ರ ಥಾಲಿ ಅವರ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿದೆ. ಈ ಪ್ರಕರಣದಲ್ಲಿ ನ್ಯಾಯ ಒದಗಿಸಿ, ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುವುದು ನಮ್ಮ ಬದ್ಧತೆ ಎಂದು ಸ್ಥಳೀಯರಿಗೆ ಖಚಿತ ಪಡಿಸುತ್ತೇವೆ' ಎಂದು ಹೇಳಿದರು.

ಪ್ರಕರಣಕ್ಕೆ ಸಂಬಂಧಿಸಿ ಈವರೆಗೆ ಒಬ್ಬರನ್ನು ಬಂಧಿಸಲಾಗಿದೆ.

ಅಕ್ಟೋಬರ್ 5ರಂದು ನಡೆದ ಘಟನೆಗೆ ರಾಜ್ಯದಾದ್ಯಂತ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಸ್ಥಳೀಯರು ರಸ್ತೆ ತಡೆ ನಡೆಸಿ, ಪೊಲೀಸ್ ವಾಹನದ ಮೇಲೆ ಕಲ್ಲು ತೂರಾಟ ನಡೆಸಿ ಇತ್ತೀಚೆಗೆ ಆಕ್ರೋಶ ಹೊರಹಾಕಿದ್ದರು.

ಸೂರತ್ : ಸಾಮೂಹಿಕ ಅತ್ಯಾಚಾರ

ಸೂರತ್ (ಪಿಟಿಐ): ನವರಾತ್ರಿ ಹಬ್ಬದ ಅಂಗವಾಗಿ ಸ್ನೇಹಿತನೊಟ್ಟಿಗೆ ಸುತ್ತಾಡಲು ಹೋಗಿದ್ದ ಬಾಲಕಿ ಮೇಲೆ ಗುಜರಾತ್‌ನ ಸೂರತ್ ಜಿಲ್ಲೆಯಲ್ಲಿ ಮೂವರು ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ಬುಧವಾರ ತಿಳಿಸಿದರು.

ಮಾಂಗ್ರೋಲ್ ತಾಲ್ಲೂಕಿನ ಮೋತಾ ಬೋರ್ಸಾರಾ ಗ್ರಾಮದ ನಿರ್ಜನ ಪ್ರದೇಶದಲ್ಲಿ ಮಂಗಳವಾರ ರಾತ್ರಿ 11 ಗಂಟೆ ಸುಮಾರಿಗೆ 17 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಹಿತೇಶ್ ಜ್ಯೋಯಸರ್ ತಿಳಿಸಿದರು.

ಕೋಚಿಂಗ್ ತರಗತಿ ಮುಗಿದ ನಂತರ ಸ್ನೇಹಿತರನ್ನು ಭೇಟಿಯಾಗಲು ಸಂತ್ರಸ್ತೆ ತೆರಳಿದ್ದರು. ರಾತ್ರಿ 10:30ಕ್ಕೆ ಇಬ್ಬರು ಸ್ನೇಹಿತರೊಂದಿಗೆ ಐಸ್‌ಕ್ರೀಮ್ ಸೇವಿಸಿದ್ದರು. ನಂತರ ಆಕೆ ಮತ್ತು ಸ್ನೇಹಿತ ನಿರ್ಜನ ಪ್ರದೇಶದಲ್ಲಿ ಕುಳಿತಿದ್ದರು. ಈ ಸಂದರ್ಭದಲ್ಲಿ ಮೂವರು ಸ್ಥಳಕ್ಕೆ ಬಂದು ಹೆಣ್ಣುಮಗಳ ಮೇಲೆ ಅತ್ಯಾಚಾರ ಎಸಗಿದ್ದಾರೆ. ಆಕೆಯ ಜೊತೆಗಿದ್ದ ಸ್ನೇಹಿತ ಸ್ಥಳದಿಂದ ಓಡಿಹೋಗಿದ್ದ. ನಂತರ ಆತ ಸ್ಥಳೀಯರಿಗೆ ವಿಷಯ ತಿಳಿಸಿದ್ದ. ಬಳಿಕ ಸ್ಥಳೀಯರು ಹಾಗೂ ಪೊಲೀಸರು ಸ್ಥಳಕ್ಕೆ ಧಾವಿಸಿ ಶೋಧ ನಡೆಸಿದರು ಎಂದು ಹೇಳಿದರು.

ಪ್ರಕರಣಕ್ಕೆ ಸಂಬಂಧಿಸಿ ಬೈಕ್‌ವೊಂದನ್ನು ವಶಕ್ಕೆ ಪಡೆಯಲಾಗಿದೆ. ಇಬ್ಬರು ಆರೋಪಿಗಳನ್ನು ಗುರುತಿಸಲಾಗಿದ್ದು, ಅವರ ಬಂಧನಕ್ಕಾಗಿ ತನಿಖೆಯನ್ನು ಚುರುಕುಗೊಳಿಸಲಾಗಿದೆ ಎಂದರು. ಪ್ರಕರಣದ ಸೂಕ್ಷ್ಮತೆಯನ್ನು ಅರಿತು ಹಿರಿಯ ಪೊಲೀಸ್ ಅಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ಕೋಲ್ಕತ್ತ: ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ, ಕೊಲೆ ಪ್ರಕರಣ

11 ಸಾಕ್ಷ್ಯಗಳ ಪಟ್ಟಿ ಮಾಡಿದ ಸಿಬಿಐ

ಕೋಲ್ಕತ್ತ(ಪಿಟಿಐ): ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಮತ್ತು ಆಕೆಯ ಕೊಲೆ ಪ್ರಕರಣ ಕುರಿತು ಆರೋಪಪಟ್ಟಿ ಸಲ್ಲಿಸಿರುವ ಸಿಬಿಐ, ಆರೋಪಿ ವಿರುದ್ಧ 11 ಸಾಕ್ಷ್ಯಗಳನ್ನು ಉಲ್ಲೇಖಿಸಿದೆ.

ಸಂಜಯ್ ರಾಯ್

'ಸಂಜಯ್ ರಾಯ್ ಈ ಪ್ರಕರಣದ ಏಕೈಕ ಆರೋಪಿ' ಎಂದಿರುವ ಸಿಬಿಐ, ಆತನ ರಕ್ತದ ಮಾದರಿಗಳು, ಡಿಎನ್‌ಎ ವರದಿಯೂ ಸೇರಿದಂತೆ ಇತರ ಸಾಕ್ಷ್ಯಗಳ ಕುರಿತು ಆರೋಪ ಪಟ್ಟಿಯಲ್ಲಿ ವಿವರಿಸಿದೆ.

ಕೋಲ್ಕತ್ತ ಪೊಲೀಸರು ಸಂಜಯ್ ರಾಯ್ ಅವರನ್ನು ಆಗಸ್ಟ್ 10ರಂದು ಬಂಧಿಸಿದ್ದಾರೆ. ಸ್ಥಳೀಯ ನ್ಯಾಯಾಲಯಕ್ಕೆ ಸಿಬಿಐ ಸೋಮವಾರ ಆರೋಪಪಟ್ಟಿ ಸಲ್ಲಿಸಿದ್ದು, ಸಂತ್ರಸ್ತೆಯ ಹೆಸರನ್ನು ಇಂಗ್ಲಿಷ್ ವರ್ಣ ಮಾಲೆಯ 'ವಿ' ಎಂಬುದಾಗಿ ಉಲ್ಲೇಖಿಸಿದೆ.

ಆರೋಪಪಟ್ಟಿಯಲ್ಲಿನ ಉಲ್ಲೇಖಗಳು

- ಸಂತ್ರಸ್ತೆಯ ದೇಹದಲ್ಲಿ ಆರೋಪಿಯ ಡಿಎನ್‌ಎ ಪತ್ತೆಯಾಗಿದೆ. ಸಂತ್ರಸ್ತೆಯ ಮೃತದೇಹದ ಪರೀಕ್ಷೆಯಿಂದ ಇದು ದೃಢಪಟ್ಟಿದೆ
- ಆರೋಪಿಯ ಜೀನ್ಸ್ ಪ್ಯಾಂಟ್ ಹಾಗೂ ಪಾದರಕ್ಷೆಗಳ ಮೇಲೆ ಸಂತ್ರಸ್ತೆಯ ರಕ್ತದ ಕಲೆಗಳು ಕಂಡುಬಂದಿವೆ.
- ಅಪರಾಧ ನಡೆದ ಸ್ಥಳದಲ್ಲಿ ಸಿಕ್ಕಿರುವ ಸಣ್ಣ ಕೂದಲುಗಳು ಆರೋಪಿ ಸಂಜಯ್ ರಾಯ್‌ನ ಕೂದಲಿನೊಂದಿಗೆ ಹೊಂದಿಕೆಯಾಗುತ್ತವೆ
- ಸಿ.ಸಿ.ಟಿವಿಯಲ್ಲಿ ದಾಖಲಾದ ದೃಶ್ಯಗಳು ಹಾಗೂ ಆರೋಪಿಯ ಮೊಬೈಲ್ ಫೋನಿಗೆ ಸಂಬಂಧಿಸಿದ ಲೊಕೇಶನ್ ಕುರಿತು ಮಾಹಿತಿ ಸಂಗ್ರಹಿಸಲಾಗಿದೆ. ಅಪರಾಧ ನಡೆದ ದಿನ ಆರೋಪಿಯು ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದ 3ನೇ ಮಹಡಿಯಲ್ಲಿದ್ದ ಎಂಬುದು ಈ ದೃಶ್ಯಗಳಿಂದ ದೃಢಪಟ್ಟಿದೆ
- ಸಂತ್ರಸ್ತೆಯು ಪ್ರತಿರೋಧ ಒಡ್ಡಿದ್ದ ವೇಳೆ/ತಪ್ಪಿಸಿಕೊಳ್ಳುವುದಕ್ಕಾಗಿ ಆತನೊಂದಿಗೆ ಸಂಘರ್ಷ ನಡೆಸಿದ ಸಂದರ್ಭದಲ್ಲಿ ಆರೋಪಿಗೆ ಗಾಯಗಳಾಗಿವೆ
- ಅಪರಾಧ ನಡೆದ ಸ್ಥಳದತ್ತ ತೆರಳುವಾಗ ಆರೋಪಿಯು ಬ್ಲೂಟೂತ್ ಇಯರ್‌ಫೋನ್ ಧರಿಸಿದ್ದ. ಆ ಸ್ಥಳದಿಂದ ನಿರ್ಗಮಿಸಿದ ವೇಳೆ ಆತನ ಕೊರಳಲ್ಲಿ ಬ್ಲೂಟೂತ್ ಸಾಧನ ಇದ್ದಿರಲಿಲ್ಲ. ಇದನ್ನು ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯದ (ಸಿಎಫ್‌ಎಸ್‌ಎಲ್) ವರದಿಯಲ್ಲಿ ಹೇಳಲಾಗಿದೆ
- ಸಂತ್ರಸ್ತೆಯ ಕನ್ಯಾಪೊರೆಗೆ ಗಾಯಗಳಾಗಿವೆ. ಇದು ಸಂತ್ರಸ್ತೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ.
- ಸಂತ್ರಸ್ತೆಯ ಮೊಲೆತೊಟ್ಟುಗಳ ಮೇಲಿದ್ದ ಲಾಲಾರಸವನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದು ಆರೋಪಿ ಸಂಜಯ್ ರಾಯ್‌ದೇ ಎಂಬುದು ದೃಢಪಟ್ಟಿದೆ
- ಮರಣೋತ್ತರ ಪರೀಕ್ಷೆ ವೇಳೆ, ಸಂತ್ರಸ್ತೆಯ ದೇಹದಲ್ಲಿ, ವಿಶೇಷವಾಗಿ ಕೀಲುಗಳಲ್ಲಿ ಬಿಗಿತ ಕಂಡುಬಂದಿತ್ತು. ಇದು ಪರೀಕ್ಷೆಗೂ 12–18 ಗಂಟೆ ಮೊದಲೇ ಆಕೆ ಮೃತಪಟ್ಟಿದ್ದಳು ಎಂಬುದನ್ನು ಹೇಳುತ್ತದೆ
- ವೈದ್ಯ ವಿದ್ಯಾರ್ಥಿನಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಲಾಗಿದೆ

ಅಲಿ ಆತ್ಮಹತ್ಯೆಗೆ ಪ್ರಚೋದನೆ: ಕಾಂಗ್ರೆಸ್ ಮುಖಂಡ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಅಬ್ದುಲ್ ಸತ್ತಾರ್

ನದಾವರ್ ಶಾಫಿ

ಮೊಹಮ್ಮದ್ ಮುಸ್ತಫಾ

ಮಂಗಳೂರು: ನಗರದ ಮುಸ್ಲಿಂ ಮುಖಂಡ ಹಾಗೂ ಉದ್ಯಮಿ ಬಿ.ಎಂ.ಮುಮ್ತಾಜ್ ಅಲಿ ಅವರಿಗೆ ಬೆದರಿಕೆ ಒಡ್ಡಿ ಹಣ ಸುಲಿಗೆ ಮಾಡಿದ ಹಾಗೂ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣ ಸಂಬಂಧ ಕಾಂಗ್ರೆಸ್ ಮುಖಂಡ ಸೇರಿ ಮತ್ತೆ ಮೂವರು ಆರೋಪಿಗಳನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಐದಕ್ಕೆ ಏರಿದೆ.

'ಕಾಂಗ್ರೆಸ್ ಮುಖಂಡ ಕಾಟಿಪಳ್ಳದ ಅಬ್ದುಲ್ ಸತ್ತಾರ್, ಕೃಷ್ಣಾಪುರದ ಮಹಮ್ಮದ್ ಮುಸ್ತಫಾ ಹಾಗೂ ಸಜಿಪಮುನ್ನೂರಿನ ನದಾವರ್ ಶಾಫಿ ಬಂಧಿತರು. ಈ ಪ್ರಕರಣದಲ್ಲಿ ಈ ಮೊದಲೇ ಬಂಧಿಸಲಾಗಿದ್ದ ಕೃಷ್ಣಾಪುರದ ರೆಹಮತ್ ಹಾಗೂ ಆಕೆಯ ಪತಿ ಶೋಯಿಬ್ ಅವರನ್ನು ನ್ಯಾಯಾಲಯವು ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ' ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್‌ವಾಲ್ ತಿಳಿಸಿದ್ದಾರೆ.

ಮುಮ್ತಾಜ್ ಅಲಿ ಅವರು ಭಾನುವಾರ ಮುಂಜಾನೆ ಕೂಳೂರು ಸೇತುವೆ ಮೇಲಿನಿಂದ ಫಲ್ಗುಣಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದರು. 'ಆರೋಪಿಗಳು ಅಲಿ ಅವರಿಗೆ 2024ರ ಜುಲೈನಿಂದ ಬೆದರಿಕೆ ಒಡ್ಡಿ ₹50 ಲಕ್ಷಕ್ಕಿಂತಲೂ ಹೆಚ್ಚು ಹಣ ವಸೂಲಿ ಮಾಡಿದ್ದಾರೆ. ಮತ್ತಷ್ಟು ಹಣ ನೀಡದಿದ್ದರೆ, ರೆಹಮತ್ ಜೊತೆ ಅಕ್ರಮ ಸಂಬಂಧವಿದೆ ಎಂದು ಅಪಪ್ರಚಾರ ಮಾಡುತ್ತೇವೆ ಎಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು' ಎಂದು ಅಲಿ ಅವರ ತಮ್ಮ ಹೈದರ್ ಅಲಿ ದೂರು ನೀಡಿದ್ದರು.

ಅಬ್ದುಲ್ ಸತ್ತಾರ್ ಬಂಧನದ ಬಳಿಕ ಆತನನ್ನು ಕಾಂಗ್ರೆಸ್ ಪಕ್ಷದಿಂದ ಆರು ವರ್ಷ ಉಚ್ಚಾಟನೆ ಮಾಡಲಾಗಿದೆ. 'ಅಬ್ದುಲ್ ಸತ್ತಾರ್ ಯುವ ಕಾಂಗ್ರೆಸ್‌ನ ಸುರತ್ಕಲ್ ಘಟಕದ ಮಾಜಿ ಅಧ್ಯಕ್ಷ. ಸುರತ್ಕಲ್ ಭಾಗದಲ್ಲಿ ಪಕ್ಷದ ಸಂಘಟನೆಯಲ್ಲಿ ಸಕ್ರಿಯನಾಗಿದ್ದ' ಎಂದು ಪಕ್ಷದ ಮೂಲಗಳು ತಿಳಿಸಿವೆ.

'ಸಿ.ಎಂ ಕುರ್ಚಿಗೆ ಯತ್ನ ತಪ್ಪೇನಿಲ್ಲ ಎಂದಿಲ್ಲ'

ಪ್ರಜಾವಾಣಿ ವಾರ್ತೆ


ಕೃಷ್ಣ ಬೈರೇಗೌಡ

ಬೆಂಗಳೂರು: 'ಕಾಂಗ್ರೆಸ್‌ನ ಬೇರೆ ಯಾರಾದರೂ ಮುಖ್ಯಮಂತ್ರಿ ಆಗುವ ಪ್ರಯತ್ನ ನಡೆಸಿದ್ದರೆ ನಡೆಸಲಿ ಎಂದು ನಾನು ಹೇಳಿಲ್ಲ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸ್ಪಷ್ಟನೆ ನೀಡಿದ್ದಾರೆ.

'ಸಿ.ಎಂ ಕುರ್ಚಿಗೆ ಯತ್ನ ತಪ್ಪೇನಿಲ್ಲ' ಎಂಬ ಶೀರ್ಷಿಕೆಯಡಿ ಪ್ರಕಟವಾದ ವರದಿಗೆ ಸಂಬಂಧಿಸಿ ಅವರು ಸ್ಪಷ್ಟನೆ ನೀಡಿದ್ದಾರೆ. 'ಒಳ್ಳೆಯ ಕೆಲಸ ಮಾಡಿದ ಮಾತ್ರಕ್ಕೆ ನಾನು ಮುಖ್ಯಮಂತ್ರಿ ಕುರ್ಚಿ ಗಿಟ್ಟಿಸಿಕೊಳ್ಳಲು ಹವಣಿಸುತ್ತಿದ್ದೇನೆ ಎಂಬುದು ಸರಿಯಲ್ಲ ಎಂದು ನಾನು ಹೇಳಿದ್ದಾಗಿ ವರದಿಯಲ್ಲಿದೆ. ಅಂತಹ ಮಾತುಗಳನ್ನು ನಾನು ಆಡಿಲ್ಲ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಬೆಳಗಾವಿಯ ಚನ್ನಮ್ಮನ ಕಿತ್ತೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ್ದೆ. ಮುಖ್ಯಮಂತ್ರಿ ಹುದ್ದೆಯ ವಿಷಯಕ್ಕೆ ಸಂಬಂಧಿಸಿದಂತೆ ಯಾರ್ಯಾರು ಏನೇನು ಪ್ರಯತ್ನ ನಡೆಸುತ್ತಿದ್ದಾರೋ ಅದು ಅವರ ವೈಯಕ್ತಿಕ ವಿಷಯ. ಪಕ್ಷದ ಹಂತದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೇಳಿದ್ದೆ. ಅದನ್ನು ತಪ್ಪಾಗಿ ವರದಿ ಮಾಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಶಿವಮೂರ್ತಿ ಶರಣರ ಬಂಧನಕ್ಕೆ ಮನವಿ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಶಿವಮೂರ್ತಿ ಶರಣರು ತಮ್ಮ ವಿರುದ್ಧದ 2ನೇ ಪೋಕ್ಸೊ ಪ್ರಕರಣದಲ್ಲಿ ಜಾಮೀನು ಪಡೆದಿಲ್ಲ. ಆದರೂ ಅವರನ್ನು ಬಿಡುಗಡೆ ಮಾಡಿರುವುದು ಆತಂಕ ಮೂಡಿಸಿದೆ. ಆರೋಪಿ ಪ್ರಭಾವಿಯಾಗಿದ್ದು, ಸಾಕ್ಷಿಗಳನ್ನು ನಾಶಪಡಿಸುವ ಸಾಧ್ಯತೆ ಇದೆ. ಆದ್ದರಿಂದ ಅವರನ್ನು ಕೂಡಲೇ ಬಂಧಿಸಬೇಕು' ಎಂದು ಒತ್ತಾಯಿಸಿ ಸಂತ್ರಸ್ತ ಬಾಲಕಿಯ ತಾಯಿ ಬುಧವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

'ಕಾರಾಗೃಹದಿಂದ ಹೊರಬಂದ ಸ್ವಾಮೀಜಿಯನ್ನು ಅವರ ಸಹಚರರು ಮತ್ತು ಬೆಂಬಲಿಗರು ಹಾರ ಹಾಕಿ, ಜೈಕಾರ ಕೂಗಿ ಬರಮಾಡಿಕೊಂಡಿರುವುದು ಭಯ ಮೂಡಿಸಿದೆ. ಅವರು ಈಗ ಹೊರಗಿರುವ ಕಾರಣ ಅವರ ಬೆಂಬಲಿಗರಿಂದ ನನಗೆ, ನನ್ನ ಮಕ್ಕಳಿಗೆ ತೊಂದರೆಯಾಗಬಹುದು. ಹೀಗಾಗಿ ಶರಣರನ್ನು ಬಂಧಿಸಿ ನಮಗೆ ರಕ್ಷಣೆ ನೀಡಿ' ಎಂದು ಕೋರಿದ್ದಾರೆ.

ನ. 20ರಂದು ಬಂಧಿಸಿ ಬಿಡುಗಡೆ: ಮಠದಲ್ಲಿ ಅಡುಗೆ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದರು. ಸಂತ್ರಸ್ತೆಯರು ಹಾಗೂ ಮಹಿಳೆ ನೀಡಿದ್ದ ದೂರಿನ ಆಧಾರದಲ್ಲಿ ಶರಣರ ವಿರುದ್ಧ 2 ಪೋಕ್ಸೊ ಪ್ರಕರಣಗಳು ದಾಖಲಾಗಿದ್ದವು. ಮೊದಲ ಪ್ರಕರಣದಲ್ಲಿ 2023ರ ನ.8ರಂದು ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. 2ನೇ ಪ್ರಕರಣದಲ್ಲಿ ಜಾಮೀನು ಪಡೆಯದ ಕಾರಣ ಅವರನ್ನು ನ. 20ರಂದು ಮತ್ತೆ ಬಂಧಿಸಲಾಗಿತ್ತು. ಆದರೆ ಹೈಕೋರ್ಟ್ ಸೂಚನೆ ಮೇರೆಗೆ ಅಂದೇ ಬಿಡುಗಡೆ ಮಾಡಲಾಗಿತ್ತು.

ಹೈಕೋರ್ಟ್ ಜಾಮೀನಿಗೆ ತಡೆ ನೀಡಿದ್ದ ಸುಪ್ರೀಂ ಕೋರ್ಟ್, 4 ತಿಂಗಳೊಳಗೆ ಪ್ರಮುಖ ಸಾಕ್ಷಿಗಳ ವಿಚಾರಣೆ ಪೂರ್ಣಗೊಳಿಸುವಂತೆ ಸೂಚಿಸಿತ್ತು. ಹೀಗಾಗಿ ಮೇ 24ರಂದು ಕೋರ್ಟ್ ಎದುರು ಶರಣಾಗಿದ್ದ ಶರಣರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. 'ಇದೀಗ ಸಾಕ್ಷಿಗಳ ವಿಚಾರಣೆ ಅಂತ್ಯಗೊಂಡಿದ್ದು, ಜಾಮೀನಿಗಿದ್ದ ತಡೆ ತೆರವುಗೊಂಡಿದೆ.

'ಸಂತ್ರಸ್ತ ಬಾಲಕಿಯ ತಾಯಿ ಸಲ್ಲಿಸಿರುವ ಮನವಿ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುತ್ತೇವೆ' ಎಂದು ಎಸ್ಪಿ ರಂಜಿತ್ ಕುಮಾರ್ ಬಂಡಾರು ತಿಳಿಸಿದ್ದಾರೆ.

'ಶಿವಮೂರ್ತಿ ಶರಣರು ಜೈಲಿನಿಂದ ಬಿಡುಗಡೆಯಾಗುವಾಗ ಪೋಕ್ಸೊ ಕಾಯ್ದೆ ಉಲ್ಲಂಘನೆಯಾಗಿದೆ. ಪ್ರಕರಣದ ಬಗ್ಗೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ನಿರ್ಧರಿಸಿದ್ದೇವೆ' ಎಂದು ಮೈಸೂರಿನ ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಗೊ.ರು.ಚ ಅವರಿಗೆ ರಾಷ್ಟ್ರೀಯ ಪ್ರಶಸ್ತಿ

ಗದಗ: ತೋಂಟದ ಸಿದ್ಧಲಿಂಗ ಶ್ರೀಗಳ ಸ್ಮರಣಾರ್ಥ ನೀಡುವ 'ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ'ಗೆ ಶರಣ ಸಾಹಿತಿ ಗೊ.ರು.ಚನ್ನಬಸಪ್ಪ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ತೋಂಟದಾರ್ಯ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಎಸ್. ಪಟ್ಟಣಶೆಟ್ಟರ ತಿಳಿಸಿದ್ದಾರೆ.

'ಅ.14ರಂದು ನಗರದ ತೋಂಟದಾರ್ಯ ಮಠದಲ್ಲಿ ನಡೆಯುವ ಸಿದ್ಧಲಿಂಗ ಸ್ವಾಮೀಜಿಯವರ ಆರನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರಶಸ್ತಿಯು ₹5 ಲಕ್ಷ ನಗದು, ಫಲಕ ಒಳಗೊಂಡಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಇಟಿ: 2ನೇ ಸುತ್ತು 15ರವರೆಗೆ ಅವಕಾಶ

ಬೆಂಗಳೂರು: ಸಿಇಟಿ ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಿದ್ದು, ಕಾಲೇಜಿಗೆ ಪ್ರವೇಶ ಪಡೆಯಲು ಅ. 15ವರೆಗೆ ಅವಕಾಶ ನೀಡಲಾಗಿದೆ.

ಶುಲ್ಕ ಪಾವತಿಸಿದ ನಂತರ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ಕಾಲೇಜಿಗೆ ಹೋಗಿ ವರದಿ ಮಾಡಿಕೊಳ್ಳಬಹುದು. ಹಿಂದಿನ ಸುತ್ತಿನಲ್ಲಿ ಪಾವತಿಸಿರುವ ಶುಲ್ಕವು ಈ ಸುತ್ತಿನಲ್ಲಿ ಹಂಚಿಕೆಯಾಗಿರುವ ಸೀಟಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ ಎಂದು ಕೆಇಎ ಹೇಳಿದೆ.

ಶುಲ್ಕ ಪಾವತಿಸಿದ ವೈದ್ಯಕೀಯ ಅಭ್ಯರ್ಥಿಗಳು ಮಾಪ್‌ಅಪ್ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ ವರೆಗೆ ಕಾಯಲು ಸೂಚಿಸಲಾಗಿದೆ.

ಎಸ್‌ಎಸ್‌ಎಲ್‌ಸಿ: ಈ ವರ್ಷ ಕೃಪಾಂಕ ಇಲ್ಲ

ಒಂದನೇ ಪುಟದಿಂದ...

ವೆಬ್‌ಕಾಸ್ಟಿಂಗ್ ವ್ಯವಸ್ಥೆಯಿಂದಾಗಿ ಪರೀಕ್ಷಾ ನಕಲಿಗೆ ಅವಕಾಶ ಇಲ್ಲವಾಗಿದೆ. ವಿದ್ಯಾರ್ಥಿಗಳಲ್ಲೂ ಆತ್ಮಸ್ಥೈರ್ಯ ಮೂಡಿದೆ. ಪರೀಕ್ಷಾ ಸುಧಾರಣೆ ಬಗ್ಗೆ ಭಯ ಹೋಗಲಾಡಿಸಲಾಗಿದೆ. ಕಲಿಕಾ ಗುಣಮಟ್ಟ ಹೆಚ್ಚಿಸಿ, ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸನ್ನದ್ಧಗೊಳಿಸಲಾಗುತ್ತಿದೆ. ಈ ಬಾರಿ ಕೃಪಾಂಕದ ನೆರವಿಲ್ಲದೆ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರುವ ವಿಶ್ವಾಸವಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಕೃಪಾಂಕ ನೀಡುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಇಂತಹ ವ್ಯವಸ್ಥೆ ರದ್ದು ಮಾಡುವಂತೆ ಸೂಚಿಸಿದ್ದರು.

2023ರ ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನದ ನಂತರ ಫಲಿತಾಂಶ ಶೇ 53ರಷ್ಟಿತ್ತು. ಹಾಗಾಗಿ, ಶಾಲಾ ಶಿಕ್ಷಣ ಇಲಾಖೆ ಕೃಪಾಂಕ ನಿಯಮದಲ್ಲಿ ಸಡಿಲಿಕೆ ಮಾಡಿತ್ತು. ಕೃಪಾಂಕ ಪಡೆಯಲು ಇದ್ದ ಶೇ 35 ಅರ್ಹ ಅಂಕಗಳನ್ನು 25ಕ್ಕೆ ಇಳಿಸಿ, ಗರಿಷ್ಠ 20 ಕೃಪಾಂಕ ನೀಡಲಾಗಿತ್ತು. ಇದರಿಂದ ಒಟ್ಟಾರೆ ಫಲಿತಾಂಶ ಶೇ 73.40ಕ್ಕೆ ಹಿಗ್ಗಿತ್ತು. ಕೃಪಾಂಕ ನೀಡದೆ ಇದ್ದಿದ್ದರೆ ಕಳೆದ ಬಾರಿಗಿಂತ (2023ರ ಫಲಿತಾಂಶ ಶೇ 83.89) ಶೇ 30ರಷ್ಟು ಫಲಿತಾಂಶ ಕುಸಿತವಾಗುತ್ತಿತ್ತು. ಪರೀಕ್ಷೆ ಬರೆದಿದ್ದ 8.59 ಲಕ್ಷ ವಿದ್ಯಾರ್ಥಿಗಳಲ್ಲಿ 1.69 ಲಕ್ಷ ವಿದ್ಯಾರ್ಥಿಗಳು ಕೃಪಾಂಕದ ಕೃಪೆಯಿಂದ ತೇರ್ಗಡೆಯಾಗಿದ್ದರು.

ನಿಧನ ವಾರ್ತೆ

ನರೇಂದ್ರ ಖೇಣಿ

ಬೀದರ್: ವಿಧಾನ ಪರಿಷತ್ ಮಾಜಿ ಸದಸ್ಯ ನರೇಂದ್ರ ಖೇಣಿ (90) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಖೇಣಿ ಅವರು 1968 ಹಾಗೂ 1980ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದರು. ಮಾಜಿ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸು ಹಾಗೂ ವೀರೇಂದ್ರ ಪಾಟೀಲ ಅವರೊಂದಿಗೆ ಒಡನಾಟ ಹೊಂದಿದ್ದರು. ಸ್ವಗ್ರಾಮ ಬೀದರ್ ತಾಲ್ಲೂಕಿನ ರಂಜೋಳಖೇಣಿಯಲ್ಲಿ ಗುರುವಾರ (ಅ.10) ಮಧ್ಯಾಹ್ನ 2ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಾಲೆ ಬಳಿ ಜಿಲೆಟಿನ್ ಕಡ್ಡಿ ಸ್ಫೋಟ ತುಂಡಾದ ವಿದ್ಯಾರ್ಥಿ ಕೈ ಬೆರಳುಗಳು

ಪ್ರಜಾವಾಣಿ ವಾರ್ತೆ

ಗುಬ್ಬಿ(ತುಮಕೂರು): ಸಿ.ಎಸ್.ಪುರ ಹೋಬಳಿ ಇಡಗೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆ ಆವರಣ ಗೋಡೆ ನಿರ್ಮಾಣಕ್ಕಾಗಿ ತಂದಿದ್ದ ಕಲ್ಲುಗಳ ನಡುವಿದ್ದ ಜಿಲೆಟಿನ್ ಕಡ್ಡಿ ಬುಧವಾರ ಸ್ಫೋಟಗೊಂಡು ವಿದ್ಯಾರ್ಥಿಯೊಬ್ಬನ ಕೈ ಬೆರಳುಗಳು ತುಂಡಾಗಿವೆ.

ಶಾಲೆಯ 10ನೇ ತರಗತಿ ವಿದ್ಯಾರ್ಥಿ ಮೋನಿಶ್ ಗೌಡ (15) ಬಲಗೈನ ಮೂರು ಬೆರಳು ಛಿದ್ರಗೊಂಡಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಸದ್ಯ ಆತನನ್ನು ತುಮಕೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿದೆ.

ನರೇಗಾ ಕಾಮಗಾರಿ ಅಡಿ ಶಾಲೆಯ ಕಾಂಪೌಂಡ್ ನಿರ್ಮಿಸಲು ಕಲ್ಲುಗಳನ್ನು ತಂದು ಶಾಲೆ ಬಳಿ ಸುರಿಯಲಾಗಿತ್ತು. ಕಲ್ಲುಗಳ ರಾಶಿ ನಡುವೆ ಬಿದ್ದಿದ್ದ ವೈರ್ ಜೋಡಿಸಲಾಗಿದ್ದ ಜಿಲೆಟಿನ್ ಕಡ್ಡಿಯನ್ನು ಮೋನಿಶ್ ಕುತೂಹಲದಿಂದ ಎತ್ತಿಕೊಂಡಿದ್ದ.

ಶಾಲೆ ಒಳಗೆ ಕೊಂಡೊಯ್ಯುತ್ತಿದ್ದಾಗ ಕೈ ಬಿಸಿಯಾದ ಅನುಭವಕ್ಕೆ ಬಂದ ತಕ್ಷಣ ಅದನ್ನು ಶಾಲೆಯ ಮೈದಾನದಲ್ಲಿ ಎಸೆದಿದ್ದಾನೆ. ಅಷ್ಟರಲ್ಲಿ ಕೈಯಲ್ಲಿಯೇ ಜಿಲೆಟಿನ್ ಕಡ್ಡಿ ಸ್ಫೋಟಗೊಂಡು ವಿದ್ಯಾರ್ಥಿಯ ಕೈ ಬೆರಳುಗಳು ತುಂಡಾಗಿವೆ.

ಸ್ಫೋಟದ ಶಬ್ದ ಸುತ್ತಲಿನ ಒಂದು ಕಿ.ಮೀ. ವ್ಯಾಪ್ತಿವರೆಗೂ ಕೇಳಿಸಿದ್ದು, ಶಬ್ದಕ್ಕೆ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಬೆಚ್ಚಿ ಬಿದ್ದಿದ್ದಾರೆ. ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ಬಾಂಬ್ ನಿಷ್ಕ್ರಿಯ ತಂಡ ಕಲ್ಲುಗಳ ನಡುವೆ ಇದ್ದ ಮತ್ತಷ್ಟು ಜಿಲೆಟಿನ್ ಕಡ್ಡಿಗಳನ್ನು ನಿಷ್ಕ್ರಿಯಗೊಳಿಸಿತು.

ಶಾಲೆಗೆ ದಸರಾ ರಜೆ ಇದ್ದರೂ 10ನೇ ತರಗತಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ ಇದ್ದ ಕಾರಣ ಆ ತರಗತಿ ವಿದ್ಯಾರ್ಥಿಗಳು ಶಾಲೆಗೆ ಬಂದಿದ್ದರು. ಈ ಘಟನೆಯ ನಂತರ ವಿದ್ಯಾರ್ಥಿಗಳನ್ನು ಮನೆಗೆ ಕಳಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಸಿಪಿಐ ಗೋಪಿನಾಥ್, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಶಿವಪ್ರಕಾಶ್ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು. ಸಂತ್ರಸ್ತ ಬಾಲಕನ ತಾಯಿ ಸಿ.ಎಸ್. ಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

TAMILNADU NEWSPRINT AND PAPERS LIMITED
Mondipatti, Manapparai Tk, Trichy Dist. - 621 306.
Ph.: 04332 - 261600. Email : purchase.wood@tnpl.co.in

NOTICE INVITING TENDERS

Tender No.	Scope of work	Due date
242523 002377	Supply of Debarked Eucalyptus pulpwood from open market sources of Karnataka to TNPL Unit-II at Mondipatti.	28.10.2024

Corrigendum if any will be issued in TNPL Website only. Detailed requirements, Period, Terms & conditions, Tender fee, EMD, etc., are available in the tender document which can be downloaded from website : www.tnpl.com

DIPR/4200/Tender/2024 | TNPL - Maker of bagasse based eco-friendly Paper

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
(CIN-U01135KA973SGC002378)
''ಬೀಜ ಭವನ'', ಹೆಬ್ಬಾಳ, ಬೆಂಗಳೂರು-560 024. ಫೋನ್: 080-23415652/5656, 23416953, ಇ-ಮೇಲ್ : seclksscltd@gmail.com
ಸಂ. ಕರಾಬೀನಿನಿ/ಕಾರ್ಯಕಾರಿ/2804/2024-25 ದಿನಾಂಕ: 09.10.2024

ನೋಟಿಸು

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ ಈಕ್ವಿಟಿ ಷೇರುದಾರರ ಗಮನಕ್ಕಾಗಿ

ದಿನಾಂಕ 10-07-2024 ರಂದು ನಡೆದ ನಿಗಮದ 313ನೇ ನಿರ್ದೇಶಕ ಮಂಡಳಿ ಸಭೆಯ ನಿರ್ಣಯದಂತೆ, ನಿಗಮದ ಬೀಜೋತ್ಪಾದಕ ಈಕ್ವಿಟಿ ಷೇರುದಾರರು 2016-17ನೇ ಸಾಲಿನಿಂದ 2022-23ರ ವರೆಗೆ ಅಂದರೆ ಸತತವಾಗಿ 7 ವರ್ಷಗಳಿಂದ ಷೇರು ಬಂಡವಾಳದ ಮೇಲಿನ ಡಿವಿಡೆಂಡ್ ಮೊತ್ತವನ್ನು ನಗದೀಕರಿಸಿಕೊಳ್ಳದಿರುವ ಡಿವಿಡೆಂಡ್ ಮೊತ್ತ ಮತ್ತು ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ (Investor Education and Protection Fund -IEPF) ವರ್ಗಾವಣೆ ಮಾಡಬೇಕಾಗಿರುವ ಹಿನ್ನೆಲೆಯಲ್ಲಿ ಷೇರುದಾರರಿಗೆ ಮನವಿಪತ್ರದೊಂದಿಗೆ KYC ದಾಖಲೆ/ಮಾಹಿತಿಯನ್ನು **ದಿನಾಂಕ 15.02.2025 ರ ಒಳಗಾಗಿ** ಒದಗಿಸಲು ತಿಳಿಸಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಂಪನಿಯ ವೆಬ್‌ಸೈಟ್ : **https://ksscl.karnataka.gov.in** ಅಥವಾ ನೊಂದಾಯಿತ ಕಛೇರಿ/ಕೇಂದ್ರ ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸಹಿ/-ವ್ಯವಸ್ಥಾಪಕ ನಿರ್ದೇಶಕರು

ಬಿ.ಎಂ. ಎಜುಕೇಷನಲ್ ಟ್ರಸ್ಟ್ (ರಿ.)
ಮಳವಳ್ಳಿ, ಮಂಡ್ಯ ಜಿಲ್ಲೆ

ಬೇಕಾಗಿದ್ದಾರೆ

ಬಿ.ಎಂ. ಎಜುಕೇಷನಲ್ ಟ್ರಸ್ಟ್ (ರಿ.)ನ ವತಿಯಿಂದ ಮಳವಳ್ಳಿ ಟೌನ್, ಮಂಡ್ಯ ಜಿಲ್ಲೆಯಲ್ಲಿ ಮುಂಬರುವ ಶೈಕ್ಷಣಿಕ ವರ್ಷದಿಂದ CBSE ಶಾಲೆಯನ್ನು ಪ್ರಾರಂಭಿಸಲಾಗುತ್ತಿದ್ದು, ಸದರಿ ಶಾಲೆಗೆ CBSE ಶಾಲೆಗಳಲ್ಲಿ ನುರಿತ ಹಾಗೂ ಅನುಭವವುಳ್ಳ ಪ್ರಾಂಶುಪಾಲರನ್ನು ನೇಮಕ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತರು
Email : ramakrishnam915@gmail.com
ವಿಳಾಸದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

ಕಡೆಯ ದಿನಾಂಕ: 25-10-2024

ಮೊ.: 7411764640

ಸಹಿ/- ಕಾರ್ಯದರ್ಶಿ, ಬಿ.ಎಂ. ಎಜುಕೇಷನ್ ಟ್ರಸ್ಟ್ (ರಿ.)

ಅಭಿಯಾನ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಜೀವನೋಪಾಯ ಅಭಿಯಾನ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತ ಮತ್ತು ಜೀವನೋಪಾಯ ಇಲಾಖೆ.
4, ಮೈಶುಗರ್ ಕಟ್ಟಡ, ಜೆ.ಸಿ. ರಸ್ತೆ, ಟೌನ್ ಹಾಲ್ ಹತ್ತಿರ, ಬೆಂಗಳೂರು-560002.
ಇ-ಮೇಲ್: nrlmkarnataka@gmail.com

ಸಂಖ್ಯೆ: KSRLPS/DDUG/GEN/24/2024-DDUGKY ದಿನಾಂಕ: 09-10-2024

ಟೆಂಡರ್ ಪ್ರಕಟಣೆ

ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್‌ನ ಡಿಡಿಯು-ಜಿಕೆವೈ ಯೋಜನೆಯಡಿಯಲ್ಲಿ ವಿವಿಧ ಸಂಸ್ಥೆಗಳು ಮತ್ತು ಸಂಸ್ಥೆಗಳ ಮುಖ್ಯಸ್ಥರುಗಳು (CxO) ಮತ್ತು ಡಿಡಿಯು-ಜಿಕೆವೈ ಅಲ್ಯುಮಿನಿ ಸಭೆ ಅಗತ್ಯ ಸೇವೆಗಾಗಿ ಅರ್ಹ ಆಸಕ್ತ ಸಂಸ್ಥೆಗಳಿಂದ ಪ್ರಸ್ತಾವನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ದಿನಾಂಕ: 09.10.2024 ರಂದು ಆಹ್ವಾನಿಸಿದ್ದು, ಆಸಕ್ತ ಸಂಸ್ಥೆಗಳು/ಬಿಡ್ಡುದಾರರು http://www.kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರ್‌ನ್ನು **ದಿನಾಂಕ: 23.10.2024ರ ಸಂಜೆ 5.00** ರೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ. Tender Reference No:KSRLPS/2024-25/SE0028. ಇಲ್ಲಿಂದ ಪಡೆಯಬಹುದಾಗಿದೆ.

ಸಹಿ/-
ಅಪರ ಅಭಿಯಾನ ನಿರ್ದೇಶಕರು
ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/2457/ಆಕಾರ್/2024-25

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ನಂ. 55, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560020.
ದೂರವಾಣಿ: 23460085 / 8949 / 2436, ಫ್ಯಾಕ್ಸ್: 080-23567060
ಇಮೇಲ್: ksdb.ho@gmail.com, kscb_blr@rediffmail.com
ವೆಬ್‌ಸೈಟ್ : https://ksdb.karnataka.gov.in

ಸಂ: KSDB/EE/No. 1 Div/STT/PB/IFT-4/2024-25/594 ದಿನಾಂಕ: 09-10-2024

ಅಲ್ಪಾವಧಿ ಮರುಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)-2ನೇ ಕರೆ

ಕಾರ್ಯಪಾಲಕ ಅಭಿಯಂತರರು, ನಂ. 1ನೇ ವಿಭಾಗ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರ ಕಛೇರಿಯಿಂದ **2023-24ನೇ ಸಾಲಿನ ಮಂಡಳಿಯ ಲೆಕ್ಕಶೀರ್ಷಿಕೆ 5475-00-115-0-06 (ಉಪ ಲೆಕ್ಕ ಶೀರ್ಷಿಕೆ: 106)** ರಡಿಯಲ್ಲಿ **1. Providing External Water supply, External sanitary, External Electrical Service Connection and other Additional works for Construction of 504 Houses for the slum dwellers at Magadi Assembly Constituency, Ramanagara District under PMAY-HFA.** ಸದರಿ ಕಾಮಗಾರಿಗೆ ಕೆಡಬ್ಲ್ಯೂ-4ರಂತೆ ಕಾಮಗಾರಿಯ ಅಂದಾಜು ಮೊತ್ತ **ರೂ. 170.71 ಲಕ್ಷಗಳು.** ಟೆಂಡರ್‌ಗಿಟ್ಟ ಮೊತ್ತ: **ರೂ. 106.75 ಲಕ್ಷಗಳು** (ಜಿಎಸ್‌ಟಿ ಹೊರತುಪಡಿಸಿ). ಇಎಂಡಿ ಮೊತ್ತ: **ರೂ. 1,60,200/-ಗಳು** ಹಾಗೂ **2. Providing CC roads and RCC drain works for construction of 504 houses for the slum dwellers at Magadi Assembly Constituency, Bengaluru City under PMAY-HFA.** ಸದರಿ ಕಾಮಗಾರಿಗೆ ಕೆಡಬ್ಲ್ಯೂ-4ರಂತೆ ಕಾಮಗಾರಿಯ ಅಂದಾಜು ಮೊತ್ತ **ರೂ. 148.82 ಲಕ್ಷಗಳು.** ಟೆಂಡರ್‌ಗಿಟ್ಟ ಮೊತ್ತ: **ರೂ.125.92 ಲಕ್ಷಗಳು** (ಜಿಎಸ್‌ಟಿ ಹೊರತುಪಡಿಸಿ). ಇಎಂಡಿ ಮೊತ್ತ: **ರೂ. 1,90,000/-ಗಳು** . ಸದರಿ ಕಾಮಗಾರಿಗಳಿಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಮರುಟೆಂಡರ್ ಅನ್ನು ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದ್ದು, ಕಾಮಗಾರಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **19.10.2024ರ ಸಂಜೆ 4.00 ಗಂಟೆವರೆಗೆ.** ಆಸಕ್ತಿಯುಳ್ಳ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಪ್ರಿ-ಬಿಡ್ ಮೀಟಿಂಗ್ ದಿನಾಂಕ: **15.10.2024ರ ಸಂಜೆ 4.00 ಗಂಟೆಗೆ.** ಟೆಂಡರ್ ವ್ಯತ್ಯಾಸದ ಮೊತ್ತ (ಡಿಡಿ) ಸಲ್ಲಿಸಲು ಕೊನೆಯ ದಿನಾಂಕ: **21.10.2024ರ ಸಂಜೆ 4.00 ಗಂಟೆಗಳು.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **22.10.2024ರ ಸಂಜೆ 4.00 ಗಂಟೆಗೆ** ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: **23.10.2024ರ ಸಂಜೆ 4.00 ಗಂಟೆಗೆ.**

ಸದರಿ ಕಾಮಗಾರಿಗೆ / ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ದಿನಾಂಕ: **19.10.2024ರ ಸಂಜೆ 4.00 ಗಂಟೆಯೊಳಗೆ https://www.kppp.karnataka.gov.in** ರಲ್ಲಿ ವೀಕ್ಷಿಸಬಹುದಾಗಿರುತ್ತದೆ ಹಾಗೂ ಕಛೇರಿ ಸಮಯದಲ್ಲಿ **ನಂ. 1ನೇ ವಿಭಾಗ, ಕಕೊಅಮ, ಬೆಂಗಳೂರು** ಕಛೇರಿಗೆ ಭೇಟಿ ನೀಡಿ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ನಂ. 1ನೇ ವಿಭಾಗ, ಕಕೊಅಮ, ಬೆಂಗಳೂರು
DIPR/CP/YC/2462/2024-25

KARNATAKA ITI UDYOGA SOCIETY (KIUS)
DEPARTMENT OF INDUSTRIAL TRAINING & EMPLOYMENT
Koushalya Bhavan, Dairy Circle, Bannerughatta Road, Bengaluru - 560029. Tel: 080-25189100, Fax: 080-25189102
E-mail: pscet.bangalore@gmail.com, kius.dite@gmail.com
Website: www.emptrg.kar.nic.in

No: DITE/KIUS/Man Power/CR-06/2022-23 Date: 08-10-2024

NOTIFICATION

Karnataka ITI Udyoga Society invites Applications for System Analyst. E-office Assistant and Data Entry Operator under KIUS on Contract Basis for the details given below.

1) System Analyst: 01
Qualification & Requirements: Degree in Computer Science or IT.
2) E-office Assistant: 01
Qualification & Requirements: Degree in Computer Science or IT.
3) Data Entry Operator: 01
Qualification & Requirements: Any Degree / Diploma / PUC.

Details and Other Information: • Interested candidates can submit the resume **from 09-10-2024 to 19-10-2024** with all details with qualification and requirements as specified. • Other details of information can be obtained from this office during working hours. • Payment will be made as per the discretion of KIUS.

Sd/- Member Secretary/Joint Director (Adm)
Karnataka ITI Udyoga Society, Bengaluru.
DIPR/CP/2469/Adverto/2024-25

ಕರ್ನಾಟಕ ಸರ್ಕಾರ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ ಹಾವೇರಿ.

ಇ-ಟೆಂಡರ್ ಪ್ರಕಟಣೆ

ಸಂ: ಹಾಜಿಪಂ/ಆಡಳಿತ-4/ಹೊರಗುತ್ತಿಗೆ/ಇ-ಟೆಂಡರ/2024-25. ದಿನಾಂಕ:04-10-2024

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾವೇರಿ ಇವರ ಕಾರ್ಯಾಲಯಕ್ಕೆ ಬೆರಳಚ್ಚುಗಾರರು/ಶೀಘ್ರ ಲಿಪಿಗಾರರು/ ವಾಹನ ಚಾಲಕರು/'ಡಿ'ಗ್ರೂಪ್ - ಸಿಬ್ಬಂದಿ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಹೊರ ಸಂಪನ್ಮೂಲ ಏಜೆನ್ಸಿಗಳಿಂದ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರ ಕೆಳಗಿನಂತಿದೆ:

1) E-Tender Number: RDPR/2024-25/SE1756
2) ಟೆಂಡರಗಿಟ್ಟ ಅಂದಾಜು ಮೊತ್ತ ರೂ. 66.76 ಲಕ್ಷಗಳು.
3) E.M.D ಮೊತ್ತ ರೂ. ಇ-ಪೋರ್ಟಲ್‌ನಲ್ಲಿರುವಂತೆ.
4) ಟೆಂಡರ ದಾಖಲೆಗಳನ್ನು ಇ-ಪ್ರೊಕ್ಯೂರಮೆಂಟ್ ನಿಂದ ಡೌನ್‌ಲೋಡ್ ಮಾಡಿಕೊಂಡು ದಿ: 19-10-2024 ಸಂಜೆ 4.00 ರವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.
5) ಇ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿ: 21-10-2024. 11.00 A.M.
6) ಇ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿ: 23-10-2024. 12.00 A.M.

ಕೆಲಸದ ಹೆಸರು/ಪೂರೈಕೆದಾರರ ಅರ್ಹತೆ/ಟೆಂಡರ್ ನಿಯಮಗಳು/ಟೆಂಡರ್ ಪ್ರೊಸೆಸಿಂಗ್ ಫೀ ಇತ್ಯಾದಿ ವಿವರಗಳಿಗೆ http://kppp.karnataka.gov.in ಮೂಲಕ ಪಡೆಯಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/-
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ ಹಾವೇರಿ
DIPO/D.P/337/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ವಿಜಯನಗರ.

ಸಂಖ್ಯೆ: EE/RWS&SD/VJNR/e-tender/Tech/2024-25/637
ದಿನಾಂಕ:07.10.2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ- 11/2024-25.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರು 2024-25ನೇ ಸಾಲಿನ ಎಸ್.ಬಿ.ಎಂ ಯೋಜನೆಯಡಿ ಅನುಮೋಧನೆಯಾದ ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲ್ಲೂಕಿನ ಉಜ್ಜಿನಿ ಗ್ರಾಮದಲ್ಲಿನ ಎಂ.ಆರ್.ಎಫ್ ಕಾಮಗಾರಿಗೆ ರೂ 250 ಲಕ್ಷ ರೂಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ-ಪ್ರೋಕ್ಯೂರಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ **ದಿನಾಂಕ:08.10.2024 ರಿಂದ 25.10.2024**ರ ಸಾಯಂಕಾಲ 05.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ ಮತ್ತು ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ **ದಿನಾಂಕ:28-10-2024**ರಂದು ಸಾಯಂಕಾಲ 5.05 ಗಂಟೆಗೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ವೆಬ್‌ಸೈಟ್‌ನಲ್ಲಿ ಪಡೆಯಬಹುದು. **(www.kppp.karnataka.gov.in)** ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜನೀಯರ್,
ಗ್ರಾ.ನೀ.ಸ&ನೈ. ವಿಭಾಗ, ವಿಜಯನಗರ.
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/308

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಹಳಿಯಾಳ ವಿಭಾಗ (ಉ.ಕ)
ಇ-ಮೇಲ್ : midhly@yahoo.co.in | ಫೋ.ನಂ: 08284-220113

ನಂ:ಕಾನಿಅ/ಸನೀವಿಹ/ತಾವಿ/ಅಲ್ಪಾವಧಿ ಟೆಂಡರ್/4702/2024-25/ ದಿನಾಂಕ: 04/10/2024

ಅಲ್ಪಾವಧಿ ಟೆಂಡರ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ಕೆ.ಡಬ್ಲ್ಯೂ-4

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ KW-4 (ದ್ವಿ-ಲಕೋಟೆ) ಪದ್ಧತಿಯಲ್ಲಿ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ" ಮುಖಾಂತರ ಟೆಂಡರ ಕರೆಯಲಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)	ಟೆಂಡರನಲ್ಲಿ ಭಾಗವಹಿಸುವ ಶುಲ್ಕ	ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಅವಧಿ (ಮಳೆಗಾಲ ಸಹಿತ)
"4702-00-101-5-02-139 ಪಶ್ಚಿಮವಾಹಿನಿ ಯೋಜನೆಗಳು"					
1.	ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲೂಕಿನ ಬಿಳಗಿ ಪಂಚಾಯತದ ತಾರಖಂಡ ಗ್ರಾಮದಲ್ಲಿ ಬಿಳಗಿ ಹೊಳೆಗೆ ಅಡ್ಡಲಾಗಿ ಬಂದಾರ ನಿರ್ಮಾಣ ಬಾಕಿ ಕಾಮಗಾರಿ (ಇಂಡೆಂಟ್ ನಂ: 2488)	193.44	2,91,000/-	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ನಿಯಮದ ಪ್ರಕಾರ	9 ತಿಂಗಳು

ಖಾಲಿ ಟೆಂಡರ ಫಾರಂಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ವೆಬ್‌ಸೈಟ್ ವಿಳಾಸ : "https://kppp.karnataka.gov.in" ದಲ್ಲಿ ದಿನಾಂಕ: 08-10-2024 ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ: 15-10-2024 ರೊಳಗಾಗಿ ಅನುಮಾನಗಳಿದ್ದರೆ ಕಚೇರಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು ದಿನಾಂಕ:16-10-2024 ರ ಸಾಯಂಕಾಲ 05.15 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ:18-10-2024 ಸಾಯಂಕಾಲ 05.30 ಗಂಟೆಗೆ ತೆರೆಯಲಾಗುವುದು. ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಕೆ.ಡಬ್ಲ್ಯೂ-4 ಬಿಡ್ ಡಾಕ್ಯುಮೆಂಟ್ ರಲ್ಲಿರುವಂತೆ ಪರಿಗಣಿಸಲಾಗುವುದು ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- (ಪ್ರಶಾಂತ ಸಿ.ಎಸ್) ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಹಳಿಯಾಳ ವಿಭಾಗ (ಉ.ಕ)

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.
ಇ-ಮೇಲ್: dir-mines@karnataka.gov.in

ಸಂ: ಡಿಎಂಜಿ-17012/17/2024/2024-25 ದಿನಾಂಕ: 08.10.2024

ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ
ಚಿನ್ನ, ಬಾಕ್ಸೈಟ್ ಮತ್ತು ತಾಮ್ರದ ಬ್ಲಾಕ್‌ಗಳಿಗೆ ಸಂಯೋಜಿತ ಪರವಾನಗಿ ನೀಡಲು ಬಿಡ್‌ಗಳ ಆಹ್ವಾನ

Mines and Minerals (Development and Regulation) Act 1957ರ ಸೆಕ್ಷನ್ (11) ಅಡಿಯಲ್ಲಿ ಪ್ರದತ್ತ ವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 ರ ಪ್ರಕಾರ ಮತ್ತು ಅದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ವಿದ್ಯುನ್ಮಾನ ಹರಾಜಿನ ಮೂಲಕ ಸಂಯೋಜಿತ ಪರವಾನಗಿ ನೀಡಲು 1 ಬಾಕ್ಸೈಟ್ ಬ್ಲಾಕ್, 1ತಾಮ್ರದಬ್ಲಾಕ್ ಮತ್ತು 4 ಚಿನ್ನದ ಬ್ಲಾಕ್‌ಗಳನ್ನು ಕರ್ನಾಟಕ ಸರ್ಕಾರವು ಗುರುತಿಸಿ ಬಿಡ್‌ಗಳನ್ನು ಆಹ್ವಾನಿಸಿದೆ.

ಹರಾಜಿನ ಮೂಲಕ ಸಂಯೋಜಿತ ಪರವಾನಗಿಗಾಗಿ ಖನಿಜ ಬ್ಲಾಕ್‌ಗಳ ಪಟ್ಟಿ:

S. No.	Name of the block	Mineral	Concession Area (in Ha/Sq. Km)	Estimated resources (in MMT)	Tender fee
1.	Sivalinganahalli Gold Block	Gold	23.48 sqkm	-	INR 2,00,000/- + 18% GST
2.	Salagudda Gold Block	Gold	22.02 sqkm	-	INR 2,00,000/- + 18% GST
3.	Jainapura Gold Block	Gold	19.45 sqkm	-	INR 2,00,000/- + 18% GST
4.	Shankarikoppa Gold Block	Gold	15.85 sqkm	-	INR 2,00,000/- + 18% GST
5.	Navge Bauxite (Aluminous laterite) Block	Aluminous laterite (Bauxite)	60.00 Ha	0.083107	INR 2,00,000/- + 18% GST
6.	Hunasihuli Copper Block	Copper	200.00 Ha	1.340000	INR 2,00,000/- + 18% GST

ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವ ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ.

ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ-ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (http://www. mstcecommerce.com/ auctionhome/mlcln/mlcl_listing.jsp). ನಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು.

ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಯಶಸ್ವಿ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (http://www. mstcecommerce.com/ auctionhome/mlcln/mlcl_listing.jsp). ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಶುಲ್ಕ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ಗಳನ್ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.

ಟೆಂಡರ್ ದಸ್ತಾವೇಜನ್ನು ಖರೀದಿಸುವಲ್ಲಿ ಶೇಕಡ 18 ರಷ್ಟು ಜಿಎಸ್‌ಟಿ ಅನ್ವಯಿಸುತ್ತದೆ. ಅನ್ವಯಿಸುವ ಜಿ.ಎಸ್.ಟಿಯನ್ನು ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್ಡುದಾರರು ಪಾವತಿಸತಕ್ಕದ್ದು. ಅನ್ವಯವಾಗುವ ಜಿಎಸ್‌ಟಿಯನ್ನು ರಿವರ್ಸ್ ಚಾರ್ಜ್ ಕಾರ್ಯ ವಿಧಾನದಡಿಯಲ್ಲಿ ಸಂಭಾವ್ಯ ಬಿಡ್ಡರ್ ಸ್ವತಃ ಪಾವತಿಸಬೇಕಾಗುತ್ತದೆ. ಅನ್ವಯವಾಗುವ ಜಿ.ಎಸ್.ಟಿಯನ್ನು ಪಾವತಿಸುವುದು ಬಿಡ್ಡುದಾರರದ್ದೇ ಕಾನೂನಾತ್ಮಕ ಮತ್ತು ಶಾಸನಬದ್ಧ ಹೊಣೆಯಾಗಿರುತ್ತದೆ. ಈ ಸಂಬಂಧ ಇಲಾಖೆ ಅಥವಾ ಎಂ.ಎಸ್.ಟಿ.ಸಿ ಯು ಭಾದ್ಯರಾಗುವುದಿಲ್ಲ.

ಟೆಂಡರ್ ದಸ್ತಾವೇಜುಗಳ ಮಾರಾಟವು ದಿನಾಂಕ: 09.10.2024 ರಿಂದ ಪ್ರಾರಂಭವಾಗುತ್ತದೆ. ದಿನಾಂಕ: 25.11.2024 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಆರಂಭಿಕ ಬೆಲೆ ಆಫರ್ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್‌ಸೈಟ್‌ನಲ್ಲಿ ದಿನಾಂಕ: 26.11.2024 ರ 17.00 ಗಂಟೆ ಒಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ದಿನಾಂಕ: 26.11.2024 ರ 17.00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬೇಕಾಗುತ್ತದೆ.

ಸಹಿ/-
ನಿರ್ದೇಶಕರು,
DIPR/CP/2439/Zenkar/2024-25

ಬಿಸಿಯೂಟಕ್ಕೆ ಉಪ್ಪು ಬಳಕೆ: ಸಿಬ್ಬಂದಿಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕ ಉಪ್ಪು ಸೇವಿಸುವ ಮಕ್ಕಳು ಆರೋಗ್ಯ ಸಮಸ್ಯೆ ಎದುರಿಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಶಾಲಾ ಶಿಕ್ಷಣ ಇಲಾಖೆ, ಬಿಸಿಯೂಟ ತಯಾರಕರಿಗೆ ತರಬೇತಿ ನೀಡಲು ಮುಂದಾಗಿದೆ.

ಬಿಸಿಯೂಟಕ್ಕಾಗಿ ಸಿದ್ಧಪಡಿಸುವ ಅಡುಗೆಗೆ ಸಮತೋಲನ ಪ್ರಮಾಣದಲ್ಲಿ ಉಪ್ಪನ್ನು ಬಳಸುವ ಕುರಿತು ತರಬೇತಿ ನೀಡಲು 'ವಿಷನ್ ಫಾರ್ ಸೋಶಿಯಲ್ ಡೆವಲಪ್‌ಮೆಂಟ್' ಸಂಸ್ಥೆ ಜತೆ ಒಪ್ಪಂದ ಮಾಡಿಕೊಂಡಿದೆ. ತರಬೇತಿ ನೀಡುವ ಕಾರ್ಯಕ್ರಮಕ್ಕೆ ಧಾರವಾಡದಲ್ಲಿ ಚಾಲನೆ ನೀಡಲಾಗುತ್ತಿದೆ. ಸಂಸ್ಥೆ ಈಗಾಗಲೇ ಬೆಂಗಳೂರು ಮತ್ತು ಮೈಸೂರಿನ ಆಯ್ದ ಶಾಲೆಗಳಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆಸಿದೆ. 5,000 ಮಕ್ಕಳು, 500 ಶಿಕ್ಷಕರ ಅಭಿಪ್ರಾಯ ಪಡೆದು, 200 ಅಡುಗೆ ಸಿಬ್ಬಂದಿಗೆ ತರಬೇತಿ ನೀಡಿದೆ.

ಕಂದಾಯ ಇಲಾಖೆ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು.

ಸಂಖ್ಯೆ: ಸಿಸಿಎ/ಸಿಆರ್/10/18–19 ದಿನಾಂಕ: 09.10.2024

ವಿಚಾರಣಾ ನೋಟೀಸ್ ಪತ್ರಿಕಾ ಪ್ರಕಟಣೆ ಮೂಲಕ

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಜೋಗೇರಹಳ್ಳಿ ಗ್ರಾಮದ ಸ.ನಂ.21ರ ಸರ್ಕಾರಿ ಗೋಮಾಳ ಜಮೀನಿನಲ್ಲಿ ಅಕ್ರಮವಾಗಿ ಪೋಡಿ ದುರಸ್ತಿ ಕಾರ್ಯವನ್ನು ಕೈಗೊಂಡು ಪಹಣಿಯಲ್ಲಿ ಹೊಸ ನಂಬರ್‌ಗಳನ್ನು ಇಂಡೀಕರಿಸಲು ಕ್ರಮವಹಿಸಿರುವ ಶ್ರೀ. ಶ್ರೀರಾಮ್, ಹಿಂದಿನ ಆರ್.ಆರ್. ಶಿರಸ್ತೇದಾರರು, ಬೆಂಗಳೂರು ದಕ್ಷಿಣ ತಾಲ್ಲೂಕು ಕಾರ್ಯಾಲಯ ಮತ್ತು ಇತರರ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಸರ್ಕಾರದ ಆದೇಶ ಸಂ: ಆರ್.ಡಿ 86 ಎಡಿಇ 2021 ಬೆಂಗಳೂರು ದಿನಾಂಕ: 16.02.2023 ರಂತೆ ಆದೇಶಿಸಿ, ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕುರವರನ್ನು ಮಂಡನಾಧಿಕಾರಿಯನ್ನಾಗಿ ಆದೇಶಿಸಲಾಗಿರುತ್ತದೆ. ಈ ಆದೇಶದಂತೆ ನಿವೃತ್ತಿಗೊಂಡಿರುವ ನೌಕರರಾದ ಶ್ರೀ. ಶ್ರೀರಾಮ್, ಹಿಂದಿನ ಆರ್.ಆರ್. ಶಿರಸ್ತೇದಾರ್‌ರವರಿಗೆ ವಿಚಾರಣೆಗಾಗಿ ನೋಟಿಸ್ ಹೊರಡಿಸಲಾಗಿದ್ದು, ನೋಟಿಸ್‌ಗಳು ನೌಕರರ ವಾಸ ಸ್ಥಳಕ್ಕೆ ಜಾರಿಯಾಗಿರುವುದಿಲ್ಲ.

ಆದ ಕಾರಣ ಈ ಪತ್ರಿಕಾ ಪ್ರಕಟಣೆಯನ್ನು ಹೊರಡಿಸುತ್ತಾ, ಪ್ರಕರಣದ ವಿಚಾರಣೆಯು ದಿನಾಂಕ: 19.10.2024ರಂದು ಬೆಳಗ್ಗೆ 11.00 ಗಂಟೆಗೆ ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಕೊಠಡಿಯಲ್ಲಿ ನಡೆಯಲಿದ್ದು, ವಿಚಾರಣೆಗೆ ಹಾಜರಾಗಲು ನೌಕರರಿಗೆ ಸೂಚನೆ ನೀಡಿದೆ. ತಪ್ಪಿದ್ದಲ್ಲಿ ಸಿಸಿಎ ನಿಯಮಾವಳಿಗಳನ್ವಯ ಮುಂದಿನ ನಡವಳಿಯನ್ನು ಕೈಗೊಳ್ಳಲಾಗುವುದು.

ಸಹಿ/– ವಿಚಾರಣಾಧಿಕಾರಿ ಹಾಗೂ
ಅಪರ ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ರವರಿಗೆ,
ಶ್ರೀ. ಶ್ರೀರಾಮ್,
ನಿವೃತ್ತ ನೌಕರರು, ಹಿಂದಿನ ಆರ್.ಆರ್. ಶಿರಸ್ತೇದಾರ್,
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064.
ವೆಬ್‌ಸೈಟ್: www.rwf.indianrailways.gov.in

ಇ–ಟೆಂಡರ್ ಸೂಚನೆ
ಸಂ.: ಆರ್‌ಡಬ್ಲ್ಯೂಎಫ್/ಡಬ್ಲ್ಯೂ/24–25/08 ದಿ. 07.10.2024

ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ, ಉಪ ಮುಖ್ಯ ಇಂಜಿನಿಯರ್ ಕೆಳಗಿನ ಕಾಮಗಾರಿಗಳಿಗಾಗಿ ಎಲೆಕ್ಟ್ರಾನಿಕ್ ಟೆಂಡರುಗಳನ್ನು ಆನ್‌ಲೈನ್ ವೆಬ್‌ಸೈಟ್ http://www.ireps.gov.in (Works) ಮೂಲಕ ಆಹ್ವಾನಿಸಿದ್ದಾರೆ.

ಟೆಂಡರ್ ಸಂ.: ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/1039. **ವಿವರಗಳು: ಉ.ಕಾ–1:** ರೈ.ಗಾ.ಕಾ.ಯ ಕಾರ್ಖಾನೆ ಅವರಣದಲ್ಲಿ ಹೈಡ್ರಾಲಿಕ್ ಚಾಲಿತ ರೈಲ್ ಬ್ರೇಕರ್‌ಗಳ ಕಾರ್ಯಾರಂಭಗೊಳಿಸುವುದಕ್ಕಾಗಿ ಆರ್‌ಸಿಸಿ ಪಿಟ್ ನ ನಿರ್ಮಾಣ ಕಾರ್ಯಗಳು. **ಉ.ಕಾ–2:** ಆಕ್ಸೆಲ್ ಮಶೀನ್ ಶಾಪ್‌ನಲ್ಲಿ ಎಂಎಸ್ ಫ್ಲೋರ್ ಪ್ಲೇಟ್‌ನ ವ್ಯವಸ್ಥೆ ಹಾಗೂ ರೈ.ಗಾ.ಕಾ.ಯ ಕಾರ್ಖಾನೆ ಅವರಣದಲ್ಲಿ ಫಯರ್ ಪೈಪ್‌ಲೈನ್‌ಗಳ ದುರಸ್ತಿ ಕಾರ್ಯ. **ಅಂದಾಜು ಮೌಲ್ಯ:** ರೂ. 1,94,38,700.30/–. **ಕೊನೆಯ ದಿನಾಂಕ & ಸಮಯ:** 30.10.2024, ಬೆಳಗ್ಗೆ 11.00 ಗಂಟೆಗೆ.

ಉಪ ಮುಖ್ಯ ಇಂಜಿನಿಯರ್

ಶಾಲಾ ಶಿಕ್ಷಣ ಇಲಾಖೆ ಮತ್ತು 'ಜೆ–ಪಿಎಎಲ್ ದಕ್ಷಿಣ ಏಷ್ಯಾ' ಒಪ್ಪಂದ

ಎಲ್‌ಕೆಜಿಯಿಂದಲೇ 'ಆಟ ಆಧಾರಿತ ಗಣಿತ ಪಠ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಆರಂಭಿಸಿರುವ ಪೂರ್ವ ಪ್ರಾಥಮಿಕ ಶಾಲಾ ಮಕ್ಕಳಿಗೂ 'ಆಟ ಆಧಾರಿತ ಗಣಿತ ಪಠ್ಯಕ್ರಮ' ಪರಿಚಯಿಸಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದೆ.

ಬುನಾದಿ ಹಂತದಿಂದಲೇ ಕಲಿಕೆ ಮತ್ತು ಬೋಧನೆಯ ಗುಣಮಟ್ಟ ಸುಧಾರಿಸಲು, ನಾವೀನ್ಯತೆಗೆ ಒತ್ತು ನೀಡಲು ಶಿಕ್ಷಣ ಇಲಾಖೆ 'ಜೆ–ಪಿಎಎಲ್ ದಕ್ಷಿಣ ಏಷ್ಯಾ' ಜತೆ ಬುಧವಾರ ಒಪ್ಪಂದ ಮಾಡಿಕೊಂಡಿತು.

ಒಪ್ಪಂದದ ನಂತರ ಮಾತನಾಡಿದ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್, ಜಾಗತಿಕ ಸಂಶೋಧನಾ ಕೇಂದ್ರವಾಗಿರುವ ಜೆ–ಪಿಎಎಲ್ 900ಕ್ಕೂ ಹೆಚ್ಚು ಸಂಯೋಜಿತ ಸಂಶೋಧಕರನ್ನು ಒಳಗೊಂಡಿದೆ. 2003ರಿಂದಲೂ ಶಿಕ್ಷಣ ಕ್ಷೇತ್ರದ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿದೆ. ಇಂತಹ ಸಂಸ್ಥೆಯ ಕಲಿಕಾ ಪ್ರಯೋಗಾಲಯ, ತಾಂತ್ರಿಕ ಪರಿಣತರನ್ನು ಬಳಸಿಕೊಂಡು ಸರ್ಕಾರಿ ಶಾಲಾ ಮಕ್ಕಳ ಕಲಿಕೆಯನ್ನು ಬಲಪಡಿಸಲಾಗುವುದು ಎಂದರು.

ಒಪ್ಪಂದದ ಪ್ರಕಾರ ಮೊದಲ ಹಂತದಲ್ಲಿ ಪೂರ್ವಪ್ರಾಥಮಿಕ ಶಾಲೆಯ ಮಕ್ಕಳ ಗಣಿತ ಕಲಿಕೆಗೆ 'ಚಿಲಿ–ಪಿಲಿ' ಪರಿಚಯ, 6, 7 ಮತ್ತು 8ನೇ ತರಗತಿಗಳಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆಗೆ 'ಮರು ಸಿಂಚನ' ಹಾಗೂ 3ರಿಂದ 8ನೇ ತಗರತಿಯ ಮಕ್ಕಳಿಗೆ 'ಗಣಿತ–ಗಣಕ' ಕಲಿಕೆಯನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸಲು ನೆರವು ದೊರೆಯಲಿದೆ.

ಸರ್ಕಾರಿ ಶಾಲೆಯ ಶಿಕ್ಷಕರಿಗೆ ವಾರಕ್ಕೆ ಒಂದು ದಿನ ಕನಿಷ್ಠ 45 ನಿಮಿಷ ಮೊಬೈಲ್ ಫೋನ್‌ಗಳ ಮೂಲಕ ವಿಶೇಷ ತರಗತಿ ನೀಡಲಾಗುತ್ತದೆ. ವಿದ್ಯಾರ್ಥಿ ಗಳಿಗೆ ಪರಿಕಲ್ಪನೆಗಳನ್ನು ವಿವರಿಸಲು, ಗಣಿತದ ಸಮಸ್ಯೆಗಳನ್ನು ಪರಿಹರಿಸಲು ಸಂಸ್ಥೆಯ ಪ್ರತಿನಿಧಿಗಳು ನೆರವಾಗಲಿದ್ದಾರೆ ಎಂದು ತಿಳಿಸಿದರು.

ಸರ್ಕಾರಿ ಶಾಲಾ ಮಕ್ಕಳ ಕಲಿಕೆಯ ಬಲವರ್ಧನೆಗೆ ಜೆ–ಪಿಎಎಲ್ ದಕ್ಷಿಣ ಏಷ್ಯಾ, ಶಾಲಾ ಶಿಕ್ಷಣ ಇಲಾಖೆ ನಡುವೆ ಬುಧವಾರ ಒಪ್ಪಂದ ಮಾಡಿಕೊಳ್ಳಲಾಯಿತು. ರಿತೇಶ್‌ಕುಮಾರ್ ಸಿಂಗ್, ಕೆ.ಎನ್. ರಮೇಶ್, ಮಧು ಬಂಗಾರಪ್ಪ, ಇಕ್ಬಾಲ್ ಧಲಿವಾಲ್, ಶೋಭಿನಿ ಮುಖರ್ಜಿ ಉಪಸ್ಥಿತರಿದ್ದರು

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಸರ್ಕಾರಿ ಶಾಲೆಗಳಲ್ಲಿ ಬೋಧನೆ-ಕಲಿಕಾ ಪ್ರಕ್ರಿಯೆಯಲ್ಲಿ ತಂತ್ರಜ್ಞಾನದ ಬಳಕೆ ಅಗತ್ಯವಾಗಿದೆ. ಜೆ-ಪಿಎಎಲ್ ಸರ್ಕಾರಿ ಶಾಲಾ ಶಿಕ್ಷಣ ವ್ಯವಸ್ಥೆ ಬಲಪಡಿಸಲು ಉಚಿತವಾಗಿ ನೆರವಾಗುತ್ತಿದೆ. ಮೊದಲ ಹಂತದಲ್ಲಿ 9,000 ಶಾಲೆಗಳ ಶಿಕ್ಷಕರಿಗೆ ತರಬೇತಿ ನೀಡಲಿದೆ ಎಂದರು.

ಜೆ-ಪಿಎಎಲ್ ಸಂಸ್ಥೆಯ ಜಾಗತಿಕ ಕಾರ್ಯನಿರ್ವಾಹಕ ನಿರ್ದೇಶಕ ಇಕ್ಬಾಲ್ ಧಲಿವಾಲ್, ನಿರ್ದೇಶಕಿ ಶೋಭಿನಿ ಮುಖರ್ಜಿ, ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕ ಕೆ.ಎನ್. ರಮೇಶ್ ಉಪಸ್ಥಿತರಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Industrial And Factory

AVAILABLE OF
Industrial Shed of 95000 sqft at Soukya Road, Whitefield. Contact:9341234288/ 9663224353/ 9845417487.

IN THE HIGH COURT OF KARNATAKA, BENGALURU
Notice to the Respondent Nos.1 & 2
Vide order dated: 11.09.2024 / 30.09.2024
R.F.A.No .129 / 2016
Puy Vast Maritime India Pvt. Ltd.,
Rep. by its G.P.A. Holder, Sri Thirumurthi
---- Appellant
(By Sriyuths: Joseph Anthony, Shirish Krishna, Monica Patil & Sangamesh advs. for appellant)
v/s
M/s. Sri. Vijayalakshmi Minerals
Rep. by its Proprietor
Mrs. Vijayalakshmi R.S. & Another
---- Respondents
To,
Respondent:
1. M/s. Sri Vijayalakshmi Minerals
No.1644, Sri. Rama, 30th Cross, 15th Main Road, Banashankari 2nd Stage, Bangalore
Rep. by its Proprietor, Mrs. Vijayalakshmi R.S.
2. Mrs. Vijayalakshmi R.S.
W/o R.L. Subramanya Swamy,
No.1644, 30th Cross, 15th Main Road,
Banashankari 2nd Stage, Bangalore
Appeal from the Judgement & Decree dated:19.03.2015 passed in OS.No.49/2010 on the file of the XIX Addl. City Civil & Sessions Judge, Bengaluru.
Notice is hereby given to you to appear in this court either in person or through Counsel duly instructed or through some one authorized by law, to act for you in the above appeal on 25.10.2024 in case you intend to contest the appeal. if you fail to appear, the same will be dealt with, heard and decided in your absence.
Issued under my hand and the seal of this court, this the 11.09.2024 / 30.09.2024.
BY ORDER OF THE COURT,
ASSISTANT REGISTRAR

PUBLIC NOTICE

PUBLIC NOTICE
THIS IS TO NOTIFY THE GENERAL PUBLIC that our client proposes to purchase the below mentioned Schedule Property from (1) **Mrs. PARVEEN ADIL JASSAWALA,** Wife of Mr.Adil Jal Jassawala, Aged about 72 years, (2) **Mr.ADIL JAL JASSAWALA**, Son of Late Jal Burjorji Jassawala, Aged about 68 years, and (3) **Mr.DANESH ADIL JASSAWALA,** Son of Mr.Adil Jal Jassawala, Aged about 38 years, all residing at 3-B Karai Estate, 248, Javji Dadaji Road, Above Swati Snacks Restaurant, Tardeo, Mumbai – 400007, who have represented that they acquired ownership and possession to the Schedule Property in terms of (1) Will dated 25/01/2006 executed by Mr.Godrez K. Irani; (2) Release Deed dated 28/07/2017, registered as Document No.INR-1-03833/2017-18 in Book-I and stored in C.D.No.INRD195 in the Office of the Sub-Registrar, Indiranagar, Bangalore, (3) Rectification Deed dated 06/04/2024, registered as Document No.SHV-1-00190-2024-25, in Book-I in the office of Sub-Registrar, Shivajinagar, Bangalore & (4) Gift Deed dated 06/04/2024, registered as Document No.SHV-1-00192-2024-25 in Book-I in the office of Sub-Registrar, Shivajinagar, Bangalore. Persons objecting for the proposed purchase or having any right in the Schedule Property may lodge their objections and/or claims with the undersigned along with supporting documentary evidence within Ten days from the date of this publication and objections and/or claims received thereafter will not be binding on our client and he will proceed to purchase the Schedule Property as if there are no claimants/objections.
SCHEDULE PROPERTY
All that Three (3) Bedroom Duplex Apartment bearing No.002, on the Ground Floor and First Floor in a Residential Apartment building known as **"The Nest"** and Apartment bearing No.247/1 situated at Defence Colony, Indiranagar, Old Ward No.74, New Ward No. 80/Hoysalanagar, PID No.74-2-247/1, Bangalore with a super built up area of 2500 Sq.Ft, together with L Shaped Garden Area measuring 1500 Square Feet, together with One Car Parking Slot in the Basement, together with undivided land share of 1315 Square Feet in the development, which is built on Municipal No.247, situated at 80 Feet Road, Defence Colony, Indiranagar, Bengaluru-560038.
YASEEN BABU, ABDUL AMEEN.M, K.M. LEGAL ADVOCATES,
No.1C, 'WILOCRISA', # 14, Rest House Crescent Road, BANGALORE-560001.
Ph : +91 9845855933
email: kmlegaladvocates@gmail.com
Place: Bangalore **Date**: 10/10/2024

BUSINESS

Business Offers

General

BUSINESS OPPORTUNITY to Earn 50k/m part/ Full time, in Property Development co. Interested call me 9663391355.

PERSONAL

Change of Name

CHANGE OF NAME
I, **AFROSE KHAN** RESIDENT OF NO.7/9, SOUTH STREET, 2nd CROSS, NEELASANDRA, BANGALORE KARNATAKA 560047. I HAVE CHANGED MY NAME **KHALEEL AFROSE KHAN** TO **AFROSE KHAN** VIDE AFFIDAVIT DATED 25 SEPTEMBER 2024. NOTARY NAME S.T.THIPPESWAMY ADVOCATE & NOTARY BENGALURU. HENCEFORTH I SHALL BE CALLED **AFROSE KHAN**

I, MRINMAYI_GIRISH MAHAJAN D/o.Girish Rameshwar Mahajan W/o.Nishad Shekhar Nerurkar R/a#104 A_Block Gopalan Millennium Habitat Near ITPL Main`Road Kundalahalli Bangalore 560037 have changed my`Name to MRINMAYI_NERURKAR vide`affidavit dated:8.10.2024 before`Notary Yankoba Bengaluru

I, MALGI Virupaxappa Residing at No. 2505, 1st floor, 14th cross, 14th Main, Kumaraswamy Layout 2nd Stage, Bangalore - 560078 have changed my name to MALGI VIRUPAKSHAPPA vide affidavit dated 09/10/2024 before notary L. Puttaraju, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CHANGE OF NAME
I, **SUDHA BHAKTAN NAIR,** Residing at #191, KHB Colony, 5th Block, Koramangala, Bengaluru-95 have changed my name to **SUDHA NAIR** vide affidavit dated 8.10.2024 before Notary B.M. Chandrashekar, Bengaluru. Henceforth I shall be known as **SUDHA NAIR** only.

I, GOPAL_KRISHNA S/o.Kempanna R/a#429/1 Yedallapa Street,Near Basavana Temple,Attibele Town Anekal_Taluk Bangaluru 562107 have`changed my_Name to GOPAL_KRISHNA K. vide`affidavit dated:5.10.2024 before_Notary Muniswamy. Anekal-562107

CHANGE OF NAME
I, **G. LOKESH BABU** residing at #66,3rd Cross, Akshyanagar, Attur Layout, Yelahanka, Bengaluru-560064, have changed my minor son's name from **L DHANUSH BABU** to **L DHRUVA TEJ** vide affidavit dated 09.10.2024, before notary K P Ramesh, Bengaluru. Henceforth he shall be called as **L DHRUVA TEJ** only

I, P Vani, changed my name to Vani K. mistakenly updated in DL Kindly update my name for future references

I, TAYIBA Fathima Syed D/o Nazeem C.M.aged about 22 years, residing at Ward No 27, Shanthi Nagara, Chintamani Town, Chikkaballapura Dist. Have changed my father's name from Nazeem Chintamani Nazeem to Nazeem Chintamani Mohammed Vide affidavit dated 06.09.2024 before Notary Manjunatha Reddy Chintamani. Henceforth he shall be called as Nazeem Chintamani Mohammed only

DH Classifieds ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
*Conditions apply
Book your ad with us now! For more details contact:
9845114560 | 9901641752

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಉ.ನಿ/10/2024–25 ದಿನಾಂಕ: 09.10.2024

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ: 03.09.2014ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2) ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 (ಹದಿನೈದು)** ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಪಿ. ಕೃಷ್ಣಮೂರ್ತಿ ಬಿನ್ ಲೇ. ಪಿಳ್ಳಪ್ಪ	ಆನೇಕಲ್	ಕಸಬಾ	ಸಬ್‌ಮಂಗಲ	89/2ಎ1 (ಹಳೇ ಸ.ನಂ. 89/2	0–18.12	ಸಾರಿಗೆ ಮತ್ತು ಸಂಪರ್ಕ	ವಸತಿ
2					89/6 (ಹಳೇ ಸ.ನಂ. 89/2ಎ1)	0–9.04		

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/2446/2024–25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ: ಬೆಂಅಪ್ರಾ/ಆ/ಉಕಾ–1/ಸಿ.ವಿ/668/2024–25 ದಿನಾಂಕ: 09.10.2024

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿನ ಕಾನೂನು ವಿಭಾಗಕ್ಕೆ ಕಾನೂನು ಅಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಈ ಕೆಳಕಂಡ ಅರ್ಹತಾ ಷರತ್ತುಗಳನ್ನು ಪೂರಸುವ ನಿವೃತ್ತ ಜಿಲ್ಲಾ ನ್ಯಾಯಾಧೀಶರು/ಕಾನೂನು ಇಲಾಖೆ ಅಥವಾ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ನಿವೃತ್ತ ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಯ ಪದನಾಮ	ಕಾನೂನು ಅಧಿಕಾರಿ
ಹುದ್ದೆಗಳ ಸಂಖ್ಯೆ	04
ನೇಮಕಾತಿಗೆ ಅರ್ಹತೆ	ಕರ್ನಾಟಕ ನ್ಯಾಯಾಂಗ ಸೇವೆಯಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ಕನಿಷ್ಠ 05 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾದ ಜಿಲ್ಲಾ ನ್ಯಾಯಾಧೀಶರು ಅಥವಾ ಸರ್ಕಾರದ ಕಾನೂನು ಇಲಾಖೆ ಅಥವಾ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯಲ್ಲಿ ಹೆಚ್ಚುವರಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ನಿವೃತ್ತ ಅಧಿಕಾರಿಗಳು.
ಪರಿಗಣಿಸುವ ಮಾನದಂಡ	1) ವಯೋನಿವೃತ್ತಿಯಾಗಿರಬೇಕು. 2) ಸ್ವಯಂ ನಿವೃತ್ತಿ ಪಡೆದಿರಬಾರದು. 3) ದುರ್ನಡತೆಯ ಕಾರಣಗಳಿಗಾಗಿ ಸೇವೆಯಿಂದ ವಜಾಗೊಂಡಿರಬಾರದು. 4) ಸೇವೆಯಲ್ಲಿದ್ದ ಅವಧಿಯಲ್ಲಿ ಯಾವುದೇ ಇಲಾಖಾ ವಿಚಾರಣೆಯಲ್ಲಿ ದಂಡನೆಯಾಗಿರಬಾರದು. 5) ನಿವೃತ್ತಿಯ ನಂತರ ಇಲಾಖಾ ವಿಚಾರಣೆ/ಕ್ರಿಮಿನಲ್ ಪ್ರಕರಣ ಬಾಕಿ ಇರಬಾರದು. 6) ಆರೋಗ್ಯ ಸ್ಥಿತಿ ಉತ್ತಮವಾಗಿರುವ ಬಗ್ಗೆ ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸಬೇಕು. 7) ಬೆಂಗಳೂರು ನಿವಾಸಿಗಳಿಗೆ ಆದ್ಯತೆ ನೀಡಲಾಗುವುದು.
ವಯೋಮಿತಿ	65 ವರ್ಷ ಮೀರಿರಬಾರದು.
ಗುತ್ತಿಗೆ ಸೇವಾ ಅವಧಿ	ನೇಮಕಗೊಂಡ ದಿನಾಂಕದಿಂದ 01 ವರ್ಷ. ಕಾರ್ಯವೈಖರಿ ಆಧರಿಸಿ ಸೇವಾವಧಿಯನ್ನು ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಲು ಪರಿಗಣಿಸಲಾಗುವುದು.
ವೇತನ	ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958 ರ ನಿಯಮ 313 (ಬಿ) ರನ್ವಯ ನಿಗದಿಪಡಿಸಲಾಗುವುದು.
ಇತರೆ ಸೌಲಭ್ಯಗಳು	ಕಛೇರಿ ಕೆಲಸಕ್ಕೆ ಸಹಾಯಕ ಸಿಬ್ಬಂದಿ ಹಾಗೂ ವಾಹನ ಮತ್ತು ಚಾಲಕರ ಸೇವೆಯನ್ನು ಒದಗಿಸಲಾಗುವುದು.

ಅರ್ಹ ನಿವೃತ್ತ ಅಧಿಕಾರಿಗಳನ್ನು ಆಯ್ಕೆ ಮಾಡುವಲ್ಲಿ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.

ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರಕ್ಕೆ ಕಾಯ್ದಿರಿಸಲಾಗಿದೆ. ಈ ಹಿಂದೆ ಹೊರಡಿಸಲಾಗಿದ್ದ ಪ್ರಕಟಣೆ ಸಂಖ್ಯೆ: ಬೆಂ.ಅ.ಪ್ರಾ/ಆ/ಉಕಾ–1/ಸಿವಿ/628/2023–24, ದಿನಾಂಕ: 30.10.2023ರ ಎದುರಾಗಿ ಅರ್ಜಿ ಸಲ್ಲಿಸಿರುವ ಹಾಗೂ ಪ್ರಸ್ತುತ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾನೂನು ಅಧಿಕಾರಿಗಳನ್ನು ಈ ಹುದ್ದೆಗಳಿಗೆ ಪರಿಗಣಿಸಲಾಗುವುದಿಲ್ಲ.

ಮೇಲೆ ತಿಳಿಸಿದ ಅರ್ಹತಾ ಷರತ್ತುಗಳನ್ನು ಪೂರೈಸುವ ನಿವೃತ್ತ ಅಧಿಕಾರಿಗಳು ಸ್ವವಿವರಗಳೊಂದಿಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ **15 ದಿನಗಳೊಳಗೆ** ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವುದು.

ಸಹಿ/– ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ರಾಮಯ್ಯ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಬುಧವಾರ ಆಯೋಜಿಸಿದ್ದ 16ನೇ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು

'ಪ್ರತಿಭೆಗೆ ತಕ್ಕಂತೆ ಯಶಸ್ಸು'

ಘಟಿಕೋತ್ಸವದಲ್ಲಿ ಪ್ರಾಧ್ಯಾಪಕ ವೈ.ನರಹರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಿಗೆ ಪ್ರತಿಭೆಯೇ ಶಕ್ತಿ. ಪ್ರತಿಭೆಗೆ ತಕ್ಕಂತಹ ವೃತ್ತಿ ಆಯ್ಕೆಮಾಡಿಕೊಂಡರೆ ಯಶಸ್ಸು ಖಚಿತ ಎಂದು ಐಐಎಸ್‌ಸಿ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕ ವೈ.ನರಹರಿ ಹೇಳಿದರು.

ರಾಮಯ್ಯ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಬುಧವಾರ ಆಯೋಜಿಸಿದ್ದ 16ನೇ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

ಪ್ರತಿಯೊಬ್ಬರಲ್ಲೂ ಸುಪ್ತ ಪ್ರತಿಭೆ ಇರುತ್ತದೆ. ಬದಲಾದ ಜಗತ್ತಿನಲ್ಲಿ ಸಾಕಷ್ಟು ಅವಕಾಶಗಳು ಸೃಷ್ಟಿಯಾಗಿವೆ. ಜಗತ್ತು ಅಂಗೈಯಲ್ಲಿದೆ. ಸುರಕ್ಷಿತ ವಲಯದ ಹುಡುಕಾಟ ನಡೆಸದೇ, ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಯಶಸ್ಸು ಕಾಣಬೇಕು ಎಂದರು. ಗೋಕುಲ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಆರ್. ಜಯರಾಂ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಉತ್ತಮ ಜ್ಞಾನವಂತರಾಗಿರಬೇಕು. ಅವಕಾಶಗಳನ್ನು ಬಳಕೆ ಮಾಡಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ಉತ್ತಮ ಸ್ಥಾನಗಳಿಸಿದ ನಂತರ ಸಮಾಜದ ಋಣ ತೀರಿಸಬೇಕು ಎಂದರು.

ಘಟಿಕೋತ್ಸವದಲ್ಲಿ ಬಿ.ಟೆಕ್, ಬಿ.ಆರ್ಕ್. ಎಂ.ಟೆಕ್, ಎಂ.ಆರ್ಕ್, ಎಂಬಿಎ, ಎಂಸಿಎ ಸೇರಿದಂತೆ 13 ವಿಭಾಗಗಳ 1,155 ಪದವಿಮತ್ತು 278 ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು. ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಎಂ.ಆರ್. ಸೀತಾರಾಂ, ಗೌರವ ಕಾರ್ಯದರ್ಶಿ ಎಂ.ಆರ್.ರಾಮಯ್ಯ, ಆರ್.ಐ.ಟಿ. ನಿರ್ದೇಶಕ ಬಿ.ಎಸ್. ರಾಮಪ್ರಸಾದ್, ಶೈಕ್ಷಣಿಕ ಸಲಹೆಗಾರ ಕರಸಿದ್ದಪ್ಪ, ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು ಅವರು ಉಪಸ್ಥಿತರಿದ್ದರು.

ಅಪಾರ್ಟ್‌ಮೆಂಟ್‌ನಲ್ಲಿ ಸಾವಯುವ ಸಂತೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಗ್ರಾಹಕರಿಗೆ ಕೈಗೆಟಕುವ ಬೆಲೆಯಲ್ಲಿ ಸಾವಯವ ಕೃಷಿ ಉತ್ಪನ್ನಗಳು ಸಿಗಬೇಕು. ಉತ್ಪಾದಕರು – ಗ್ರಾಹಕರ ನಡುವೆ ಸಂಪರ್ಕ ಕಲ್ಪಿಸಬೇಕೆಂಬ ಮಹತ್ವದ ಉದ್ದೇಶಗಳೊಂದಿಗೆ 'ಸಾವಯವ ಸಂತೆಯನ್ನು ಸ್ವದೇಶಿ ಜಾಗರಣ ಮಂಚ್ ಆಯೋಜಿಸುತ್ತಿದೆ' ಎಂದು ಶಾಸಕ ಎಸ್. ಮುನಿರಾಜು ಹೇಳಿದರು.

ಹೆಸರಘಟ್ಟ ಮುಖ್ಯ ರಸ್ತೆಯ ಸಿಲ್ವರ್ ಸ್ಪಿಂಗ್ ಫೀಲ್ಡ್ ಅಪಾರ್ಮೆಂಟ್‌ನಲ್ಲಿ ಸ್ವದೇಶಿ ಜಾಗರಣ ಮಂಚ್ ಅಯೋಜಿಸಿದ್ದ ಸಾವಯವ ಸಂತೆಯನ್ನು ಉದ್ಘಾಟಿಸಿ ಮಾತಾನಡಿದರು.

'ಮುಂದಿನ ದಿನಗಳಲ್ಲಿ ನಗರದ ಬೇರೆ ಬೇರೆ ಅಪಾರ್ಟ್‌ಮೆಂಟ್‌ಗಳ ಆವರಣದಲ್ಲೂ ಈ ಸಾವಯವ ಸಂತೆಯನ್ನು ಆಯೋಜಿಸಲು ಸ್ವದೇಶಿ ಜಾಗರಣ ಮಂಚ್ ಯೋಜನೆ ರೂಪಿಸಿದೆ. ಈ ಮೂಲಕ ಗ್ರಾಹಕರಿಗೆ ಮನೆ ಬಾಗಿಲಿಗೆ ಆರೋಗ್ಯಪೂರ್ಣ ಆಹಾರ ತಲುಪಿಸಲು ಅಗತ್ಯ ಸಿದ್ದತೆ ನಡೆಸಿದೆ' ಎಂದು ಹೇಳಿದರು.

'ಈ ಸಂತೆಯ ಪರಿಕಲ್ಪನೆಯಿಂದ ಬೆಳೆಗಾರರಿಗೂ ಉತ್ತಮ ಬೆಂಬಲ ಸಿಗುತ್ತದೆ. ಹಾಗೆಯೇ, ಸಾವಯವ ಉತ್ಪನ್ನಗಳ ಮಾರಾಟಕ್ಕೆ ಉತ್ತಮ ವೇದಿಕೆಯೂ ಸಿಕ್ಕಂತಾಗುತ್ತದೆ' ಎಂದರು.

ಬಿಜೆಪಿಯ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭರತ್ ಸೌಂದರ್ಯ ಮಾತಾನಾಡಿ, 'ಸಂತೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ಹಣ್ಣು, ತರಕಾರಿ, ಬೇಳೆ-ಕಾಳುಗಳನ್ನು ಇಟ್ಟಿದ್ದಾರೆ. ಜೊತೆಗೆ, ಗಾಣದ ಎಣ್ಣೆ, ಕರಕುಶಲ ವಸ್ತುಗಳು, ಕೈಮಗ್ಗದ ವಸ್ತ್ರಗಳು, ಸಾವಯವ ಪ್ರಸಾಧನ ಸಾಮಗ್ರಿಗಳು ಸೇರಿದಂತೆ ಪರಿಸರ ಸ್ನೇಹಿ ಉತ್ಪನ್ನಗಳೂ ಇವೆ' ಎಂದರು

ಕಾರ್ಯಕ್ರಮದಲ್ಲಿ ಸ್ವದೇಶಿ ಜಾಗರಣಾ ಮಂಚ್‌ನ ಗಂಗಾಧರ್, ಮಹಂತೇಶ್, ಸಂದೀಪ್, ಅಪಾರ್ಟಮೆಂಟ್ ನಿವಾಸಿಗಳು ಭಾಗವಹಿಸಿದ್ದರು.

ಹೆಸರಘಟ್ಟ ಮುಖ್ಯ ರಸ್ತೆಯ ಸಿಲ್ವರ್‌ಸ್ಪಿಂಗ್ ಫೀಲ್ಡ್ ಅಪಾರ್ಮೆಂಟ್‌ನಲ್ಲಿ ನಡೆದ ಸಾವಯವ ಸಂತೆಯನ್ನು ಶಾಸಕ ಎಸ್. ಮುನಿರಾಜು ಅವರು ತರಕಾರಿ ಖರೀದಿಸುವ ಮೂಲಕ ಉದ್ಘಾಟಿಸಿದರು

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560 099.
ಫೋನ್: 080–27835122, ಫ್ಯಾಕ್ಸ್: 080–27836569, www.anekal.tpa.gov.in, www.e-vinyasa.kar.nic.in

ಸಂ:ಆಯೋಪ್ರಾ/ಭೂ.ಬ/38/2024–25 ದಿನಾಂಕ: 09.10.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಮುನಿಯಲ್ಲಪ್ಪ, ಶ್ರೀ ಎಂ. ಶೇಷಪ್ಪ ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ:ಆದಿತ್ಯ ಹೋಮ್ಸ್ ಪರವಾಗಿ ಪಾಲುದಾರರಾದ ಶ್ರೀ ಕೆ. ಬಾಲಕೃಷ್ಣ ರೆಡ್ಡಿ ಬಿನ್ ಲೇ. ಬಾಲಿರೆಡ್ಡಿ ಮತ್ತು ಶ್ರೀ ಎಸ್. ಸಂವಿತ್ ಕೃಷ್ಣ ಬಿನ್ ಸುಬ್ಬರಾಯ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	8/1	1–00	ಕೃಷಿ	ವಸತಿ
2	M/s Paradise Homes ಪರವಾಗಿ ವ್ಯವಸ್ಥಾಪಕ ಪಾಲುದಾರರಾದ ಶ್ರೀ ಕೆ. ಬಾಲಕೃಷ್ಣ ರೆಡ್ಡಿ ಬಿನ್ ಲೇ. ಬಾಲಿರೆಡ್ಡಿ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	10/2	1–05	ಕೃಷಿ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಬಡವರ, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **ಕೃಷಿ ವಲಯದಿಂದ ವಸತಿ ವಲಯಕ್ಕೆ** ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ
ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.

ವಾಸಾಸಂಇ/ವಾಪ್ರ/ಜೆಎ/2453/2024–25

ಎಚ್‌ಎಎಲ್ ನೇಮಕಾತಿ ಪ್ರಕ್ರಿಯೆ ಪರಿಶೀಲನೆ

ಬೆಂಗಳೂರು: ಎಚ್‌ಎಎಲ್ (ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್) ಇತ್ತೀಚೆಗೆ ನಡೆಸಿದ ನೇಮಕಾತಿಯಲ್ಲಿ ಕನ್ನಡಿಗರನ್ನು ಕಡೆಗಣಿಸಿರುವುದು ಖಂಡನೀಯ. ಶೀಘ್ರದಲ್ಲೇ ಸಂಸ್ಥೆಗೆ ಭೇಟಿ ನೀಡಿ, ನೇಮಕಾತಿ ಪ್ರಕ್ರಿಯೆ ಕುರಿತು ಪರಿಶೀಲಿಸಲಾಗುವುದು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ಪ್ರತಿನಿಧಿಗಳಿಗೆ ಭರವಸೆ ನೀಡಿದೆ.

ಮಂಗಳವಾರ ಇಲ್ಲಿ ಸಂಘದ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, 'ಸಂಸ್ಥೆಯಲ್ಲಿ ಕನ್ನಡಿಗರ ಹಿತ ಕಾಯಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬದ್ಧವಾಗಿದೆ. ಸಂಸ್ಥೆಯಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡಲಾಗುತ್ತಿದೆ ಎಂದು ಲಿಖಿತವಾಗಿ ಪ್ರಾಧಿಕಾರಕ್ಕೆ ತಿಳಿಸಿದ್ದ ಎಚ್‌ಎಎಲ್ ಅಧಿಕಾರಿಗಳು, ಈಗ ಸಂಸ್ಥೆಯ ನೇಮಕಾತಿಯಲ್ಲಿ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ಕನ್ನಡಿಗರಿಗೆ ಉದ್ಯೋಗಾವಕಾಶವನ್ನು ನಿರಾಕರಿಸಿದ್ದಾರೆ. ಇದು ದಾರಿ ತಪ್ಪಿಸುವ ಪ್ರಯತ್ನವಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ನಿಶ್ಚಿತ ಅವಧಿಯ ಉದ್ಯೋಗಾಂಕ್ಷಿಗಳಿಗೆ ಎಚ್‌ಎಎಲ್ ನಡೆಸಿರುವ ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರ ನೀಡಿ, ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಕಡೆಗಣಿಸಿರುವುದು ಸರಿಯಲ್ಲ. ನೇಮಕಾತಿ ಪರೀಕ್ಷೆಯಲ್ಲಿ ಕೇವಲ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆ ಪತ್ರಿಕೆಗಳನ್ನು ನೀಡಬೇಕೆಂಬ ಹೊಸ ನಿಯಮವನ್ನು ರೂಪಿಸಲಾಗಿದೆಯೆ? ಸಂಸ್ಥೆಯ ನಡೆಯಿಂದ ಕನ್ನಡೇತರ ಅಭ್ಯರ್ಥಿಗಳು ಇಲ್ಲಿ ಉದ್ಯೋಗಕ್ಕೆ ಆಯ್ಕೆಯಾಗಿದ್ದಾರೆ. ಇದು ತ್ರಿಭಾಷಾ ಸೂತ್ರದ ಉಲ್ಲಂಘನೆಯಷ್ಟೇ ಅಲ್ಲದೆ, ಒಕ್ಕೂಟ ವ್ಯವಸ್ಥೆಗೆ ಕೇಂದ್ರ ಸರ್ಕಾರ ನೀಡಿರುವ ಅಗೌರವ' ಎಂದು ಹೇಳಿದರು.

ಸಭೆಯಲ್ಲಿ ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ಅಧ್ಯಕ್ಷ ಡಿ.ರಾಜೇಶ್, ಪ್ರಧಾನ ಕಾರ್ಯದರ್ಶಿ ದೇವರಾಜ್, ಸಂಘಟನಾ ಕಾರ್ಯದರ್ಶಿ ಜಯತೀರ್ಥ ಉಪಸ್ಥಿತರಿದ್ದರು.

ಪ್ರಜಾವಾಣಿ ನವವರ್ಣ

ಗುಲಾಬಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಗುರುವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541

ತಾಂತ್ರಿಕ ಶಿಕ್ಷಣ ಸಿಬ್ಬಂದಿ

APSA ತಂಡ

ಶಾಲಿನಿ ಚೇತನ್

ಅನುರಾಧ ಮತ್ತು ಗೆಳತಿಯರು

ಅರ್ನಾ

ದೀಪಾ & ಗೆಳತಿ

ದಿವ್ಯಾ & ಅನುಪಮಾ

ಜಯಂತಿ & ವಿಜಯ

ಬೆಸ್ಕಾಂ ಸಿಬ್ಬಂದಿ

ಶೀಲಾ & ಗೆಳತಿ

ಮಂಜುಳಾ ಮತ್ತು ಗೆಳತಿಯರು

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಹೆಗ್ಗನಹಳ್ಳಿ ಪಾಲಿಟೆಕ್ನಿಕ್

ಪವಿತ್ರಾ ಮತ್ತು ಗೆಳತಿಯರು

ಗೀತಾ ಮತ್ತು ಗೆಳತಿಯರು

ಕವಿತಾ ಮತ್ತು ದರ್ಶ್

ಮೈಕ್ರೋ ಲ್ಯಾಬ್ಸ್ ತಂಡ

ಜಯಲಕ್ಷ್ಮಿ ಮತ್ತು ಗೆಳತಿಯರು

ಮೈಸೂರು ಸೇಲ್ಸ್ ಇಂಟರ್ನ್ಯಾಷನಲ್ ಲಿಮಿಟೆಡ್

ಲಿಂಗಮ್ಮ ಮತ್ತು ಮಕ್ಕಳು

ನೃಪತುಂಗ ವಿಶ್ವವಿದ್ಯಾಲಯ


ಕವಿತಾ & ಗೆಳತಿಯರು

ಗವಿಸಿದ್ಧೇಶ್ವರ ಅರ್ಬನ್ ಬ್ಯಾಂಕ್

ಸಾವಿತ್ರಿ ಮತ್ತು ಗೆಳತಿಯರು

ಇಂದಿನ ಅಧಿದೇವತೆ
ಮಹಾಗೌರಿ

ಶ್ರೀ ಕೃಷ್ಣ ತುಪ್ಪ ಆನ್ಲೈನ್ ನಲ್ಲಿ ಕೊಳ್ಳಲು ಸ್ಕ್ಯಾನ್ ಮಾಡಿ

ಇಂದಿನ ಬಣ್ಣ - **ಗುಲಾಬಿ**

ಒಂದು ದೇಶ, ಒಂದು ಚುನಾವಣೆ; ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಆರೋಪ

‘ಮಾಜಿ ರಾಷ್ಟ್ರಪತಿಯಿಂದ ಸುಳ್ಳುಗಳ ವರದಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರವು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಬಳಸಿಕೊಂಡು ‘ಒಂದು ದೇಶ, ಒಂದು ಚುನಾವಣೆ’ಗೆ ಸಂಬಂಧಿಸಿದಂತೆ ಸುಳ್ಳು-ಸುಳ್ಳು ವರದಿಯನ್ನು ಸೃಷ್ಟಿಸಿಕೊಂಡಿದೆ’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌. ಎನ್‌. ನಾಗಮೋಹನದಾಸ್ ಆರೋಪಿಸಿದರು.

ದಲಿತ ಸಂಘರ್ಷ ಸಮಿತಿಯು ನಗರದಲ್ಲಿ ಬುಧವಾರ ಆಯೋಜಿಸಿದ್ದ, ‘ಒಂದು ದೇಶ-ಒಂದು ಚುನಾವಣೆ: ನಿರಂಕುಶ ಪ್ರಜಾಪ್ರಭುತ್ವದತ್ತ ಭಾರತ’ ವಿಚಾರ ಸಂಕಿರಣ ಮತ್ತು ಒಂದು ದಿನದ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಈಗಿನ ಚುನಾವಣಾ ವ್ಯವಸ್ಥೆಯಿಂದ ರಾಜ್ಯವೊಂದು ಪ್ರತಿ ವರ್ಷ ಸರಾಸರಿ 300 ದಿನ ವ್ಯಯ ಮಾಡಬೇಕಾಗುತ್ತದೆ ಎಂದು ವರದಿ ಹೇಳುತ್ತದೆ. ಇದು ಶುದ್ಧ ಸುಳ್ಳು. ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆಯೂ ವರದಿಯಲ್ಲಿ ಸುಳ್ಳು ಮಾಹಿತಿ ನೀಡಲಾಗಿದೆ’ ಎಂದರು.

ಸಭೆಯಲ್ಲಿ ಕೇಳಿದ್ದು..

- ಅಯೋಗಕ್ಕೆ ಒಂದೇ ಚುನಾವಣೆ ನಡೆಸುವ ಸಾಮರ್ಥ್ಯವಿಲ್ಲ
- ಚುನಾವಣಾ ವೆಚ್ಚ ಕುರಿತ ಮಾಹಿತಿ ಶುದ್ಧ ಸುಳ್ಳು
- ಸರ್ಕಾರ ತನಗೆ ಬೇಕಾದಂತೆ ವರದಿ ಸಿದ್ಧಪಡಿಸಿಕೊಂಡಿದೆ

‘ಮೀಸಲಾತಿ ಏರಿಕೆ ಸಂಬಂಧ ವರದಿ ನೀಡಲು ನನ್ನ ನೇತೃತ್ವದಲ್ಲಿ ಆಯೋಗ ರಚಿಸಿದ್ದಾಗ, ಗರಿಷ್ಠ ಮಿತಿಯ ಷರತ್ತನ್ನು ಹೇರಲಾಗಿತ್ತು. ಕೋವಿಂದ್ ಅವರಿಗೆ ಈ ಜವಾಬ್ದಾರಿ ನೀಡುವಾಗಲೂ, ಇಂಥದ್ದೇ ಷರತ್ತುಗಳನ್ನು ಹೇರಲಾಗಿತ್ತು. ಸರ್ಕಾರ ತನಗೆ ಹೇಗೆ ಬೇಕೋ ಹಾಗೆ ವರದಿ ಸಿದ್ಧಪಡಿಸಿಕೊಂಡಿತು’ ಎಂದರು.

‘ಜಮ್ಮು-ಕಾಶ್ಮೀರ, ಹರಿಯಾಣ ವಿಧಾನಸಭಾ ಚುನಾವಣೆಗಳ ಜತೆಯಲ್ಲೇ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯನ್ನೂ ನಡೆಸಲು ಚುನಾವಣಾ ಆಯೋಗಕ್ಕೆ ಅವಕಾಶವಿತ್ತು. ಆದರೆ ಆಯೋಗಕ್ಕೆ ಅಂತಹ ಸಾಮರ್ಥ್ಯವಿಲ್ಲ. ಅಸಮರ್ಥ ಆಯೋಗದಿಂದ ಒಂದು ದೇಶ, ಒಂದು ಚುನಾವಣೆ ನಡೆಸಲು ಸಾಧ್ಯವೇ’ ಎಂದು ಪ್ರಶ್ನಿಸಿದರು.

ನಿರ್ಣಯ ಅಂಗೀಕಾರ: ‘ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಅಧಿಕಾರಗಳನ್ನು ಕಸಿದುಕೊಂಡು ಒಂದೇ ಧರ್ಮ, ಸಂಸ್ಕೃತಿ, ಆರ್ಥಿಕತೆ, ಶಿಕ್ಷಣ ವ್ಯವಸ್ಥೆ, ಜಾರಿಗೆ ತರುವ ಉದ್ದೇಶದಿಂದ ಒಂದು ದೇಶ, ಒಂದು ಚುನಾವಣೆ ಜಾರಿಗೆ ತರಲಾಗುತ್ತಿದೆ. ನಂತರದಲ್ಲಿ ಎಲ್ಲ ರಾಜಕೀಯ ಪಕ್ಷಗಳನ್ನು ನಾಶ ಮಾಡಿ ಒಂದೇ ಪಕ್ಷ ಮತ್ತು ಒಬ್ಬನೇ ನಾಯಕನನ್ನು ಸೃಷ್ಟಿಸುವ ಹುನ್ನಾರವಿದು. ಇದನ್ನು ಖಂಡಿಸಬೇಕು’ ಎಂದು ಸಮಾವೇಶದಲ್ಲಿ ನಿರ್ಣಯ ಅಂಗೀಕರಿಸಲಾಯಿತು.

ವಿಚಾರ ಸಂಕಿರಣವನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನದಾಸ್ ಸಸಿಗೆ ನೀರೆರೆದು ಉದ್ಘಾಟಿಸಿದರು. ಸಮಿತಿಯ ಪದಾಧಿಕಾರಿಗಳಾದ ಗಂಗನಂಜಯ್ಯ (ಎಡದಿಂದ), ಎನ್‌.ಮುನಿಸ್ವಾಮಿ, ಲೇಖಕ ಇಂದೂಧರ ಹೊನ್ನಾಪುರ, ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ಅಂಕಣಕಾರ ಎ. ನಾರಾಯಣ, ಸಮಿತಿಯ ಎನ್‌.ವೆಂಕಟೇಶ್, ಮರಿಯಪ್ಪ ಹಳ್ಳಿ ಮತ್ತು ಪ್ರೊ.ಹುಲ್ಕೆರೆ ಮಹಾದೇವ ಇದ್ದರು —ಪ್ರಜಾವಾಣಿ ಚಿತ್ರ

ಸಂವಿಧಾನವನ್ನು ರದ್ದುಪಡಿಸಬೇಕು ಎಂಬ ಕೇಂದ್ರ ಸರ್ಕಾರದ ಹುನ್ನಾರದ ಭಾಗವಾಗಿಯೇ ‘ಒಂದು ದೇಶ, ಒಂದು ಚುನಾವಣೆ’ ಜಾರಿಗೆ ತರಲಾಗುತ್ತಿದೆ
ಎ.ನಾರಾಯಣ, ಅಂಕಣಕಾರ

ವರದಿ ಬಿಡುಗಡೆ ಮಾಡಿ ಡಿಜಿಟಲ್ ರೂಪದಲ್ಲಿ ಆಕ್ಷೇಪ ಸಲ್ಲಿಸಲು 15 ದಿನ ಕಾಲಾವಕಾಶ ನೀಡಲಾಗಿತ್ತು. ಆಕ್ಷೇಪ ಸಲ್ಲಿಸಲು ಅವಕಾಶವೇ ಇಲ್ಲವಾಯಿತು
ಗುರುಪ್ರಸಾದ್ ಕೆರಗೋಡು, ರಾಜ್ಯ ಸಂಚಾಲಕ, ದಲಿತ ಸಂಘರ್ಷ ಸಮಿತಿ

ಬಿಜೆಪಿ ಸರ್ಕಾರ ಒಪ್ಪಿಗೆ ನೀಡಿದ ಒಳಮೀಸಲಾತಿ ಜಾರಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಒಳ ಮೀಸಲಾತಿ ಪ್ರಮಾಣದ ಹಂಚಿಕೆ ಕುರಿತು ತೆಗೆದುಕೊಂಡ ನಿರ್ಣಯವನ್ನು ಜಾರಿಗೆ ತರುವಂತೆ ಒತ್ತಾಯಿಸಿ ರಾಜ್ಯ ವ್ಯಾಪಿ ಜನಾಂದೋಲನ ನಡೆಸಲು ಬಿಜೆಪಿ ತೀರ್ಮಾನಿಸಿದೆ.

ಬಿಜೆಪಿ ಕಚೇರಿಯಲ್ಲಿ ಮಂಗಳವಾರ ನಡೆದ ಪಕ್ಷದ ಪ್ರಮುಖ ನಾಯಕರ ಸಮಾಲೋಚನಾ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಬಿಜೆಪಿ ಸರ್ಕಾರದ ಸಚಿವ ಸಂಪುಟ ಸಭೆ ಒಳಮೀಸಲಾತಿ ಕುರಿತು ನ್ಯಾಯೋಚಿತ ತೀರ್ಮಾನ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಅದನ್ನು ಕಾಂಗ್ರೆಸ್ ಸರ್ಕಾರ ಜಾರಿ ಮಾಡಬೇಕು. ಅದಕ್ಕಾಗಿ ಮುಖ್ಯ-ಮಂತ್ರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ಒತ್ತಾಯಿಸಲು ತೀರ್ಮಾನಿಸಲಾಯಿತು.

‘ಅಲ್ಲದೇ, ರಾಜ್ಯದ ಜನರಿಗೆ ಸರಿಯಾದ ಮಾಹಿತಿಯನ್ನು ತಲುಪಿಸುವ ಕೆಲಸ ಮಾಡಬೇಕು. ನಮ್ಮ ಸರ್ಕಾರ ಇದ್ದಾಗ, ಜನರಿಗೆ ತಲುಪಿಸುವಲ್ಲಿ ವಿಫಲರಾಗಿದ್ದೆವು. ಅದರಿಂದ ಪಕ್ಷಕ್ಕೆ ವಿಧಾನಸಭಾ ಚುನಾವಣೆಯಲ್ಲೂ ಹಿನ್ನಡೆ ಆಗಿತ್ತು. ಆಗ ಕೆಲವು ಸ್ಥಾಪಿತ ಹಿತಾಸಕ್ತಿಗಳು ಅಪಪ್ರಚಾರ ನಡೆಸಿ ಜನರಲ್ಲಿ ಗೊಂದಲ ಮೂಡಿಸಿದರು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಭೆಯಲ್ಲಿ ಹೇಳಿದರು’ ಎಂದು ಮೂಲಗಳು ತಿಳಿಸಿವೆ.

ಜಾತಿ ಗಣತಿಗೆ ಕಾಂಗ್ರೆಸ್ ಶಾಸಕ ವಿರೋಧ

ತುಮಕೂರು: ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಗಣತಿ (ಜಾತಿ ಜನಗಣತಿ) ವರದಿಗೆ ಗುಬ್ಬಿ ಕಾಂಗ್ರೆಸ್ ಶಾಸಕ ಎಸ್‌.ಆರ್‌. ಶ್ರೀನಿವಾಸ್ ವಿರೋಧ ವ್ಯಕ್ತಪಡಿಸಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿಗಣತಿ ವರದಿಯನ್ನು ಒಪ್ಪಿಕೊಳ್ಳಬಾರದು ಎಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ಜಾತಿ ಜನಗಣತಿ ಸಮೀಕ್ಷೆ ವರದಿ ಕುರಿತು ಎಲ್ಲಾ ಶಾಸಕರ ಜತೆ ಚರ್ಚೆ ನಡೆಸಿದ ನಂತರ ಸಚಿವ ಸಂಪುಟದ ಮುಂದೆ ತರಬೇಕು. ಈ ವರದಿ ಮೇಲು ನೋಟಕ್ಕೆ ಅವೈಜ್ಞಾನಿಕವಾಗಿದೆ ಎಂಬ ಭಾವನೆ ಇದೆ’ ಎಂದು ಹೇಳಿದರು.

ಈ ಕುರಿತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ‘ಬೊಮ್ಮಾಯಿ ಸರ್ಕಾರ ಕೇಂದ್ರಕ್ಕೆ ಮಾಡಿದ ಶಿಫಾರಸ್ಸನ್ನು ರಾಜ್ಯ ಸರ್ಕಾರ ಯಥಾವತ್ತಾಗಿ ಜಾರಿಗೊಳಿಸಬೇಕು. ಸದ್ಯದಲ್ಲೇ ಬಿಜೆಪಿ ನಾಯಕರ ನಿಯೋಗ ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಜಾರಿಗಾಗಿ ಒತ್ತಾಯಿಸಲಿದ್ದೇವೆ’ ಎಂದು ಹೇಳಿದರು.

ಹಿಮಾಚಲಯ ಪ್ರದೇಶದ ತಾಂತ್ರಿಕ ಶಿಕ್ಷಣ ಸಚಿವ ರಾಜೇಶ್ ಧರಮಾನಿ ಬುಧವಾರ ಕರ್ನಾಟಕದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರನ್ನು ಭೇಟಿ ಮಾಡಿದರು

ಹಿಮಾಚಲಕ್ಕೆ ರಾಜ್ಯದ ತಂತ್ರಜ್ಞಾನ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ತಾಂತ್ರಿಕ ಶಿಕ್ಷಣ ವ್ಯವಸ್ಥೆ ಹಾಗೂ ಸಾಫ್ಟ್‌ವೇರ್ ವಲಯ ಅಂತರರಾಷ್ಟ್ರೀಯಮಟ್ಟ-ದಲ್ಲಿ ಖ್ಯಾತಿಗಳಿಸಿದೆ. ಹಿಮಾಚಲಯ ಪ್ರದೇಶಕ್ಕೂ ರಾಜ್ಯದ ತಂತ್ರಜ್ಞಾನದ ನೆರವಿನ ಅಗತ್ಯವಿದೆ ಎಂದು ಹಿಮಾಚಲ ಪ್ರದೇಶದ ತಾಂತ್ರಿಕ ಶಿಕ್ಷಣ ಸಚಿವ ರಾಜೇಶ್ ಧರಮಾನಿ ಹೇಳಿದರು.

ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನಲ್ಲಿ ಕರ್ನಾಟಕದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರ ಜತೆ ಚರ್ಚೆ ನಡೆಸಿದ ನಂತರ ಅವರು ಮಾತನಾಡಿದರು.

ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗೆ ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ ಕೈಗೊಂಡಿರುವ ಕ್ರಮಗಳು ಉತ್ತಮವಾಗಿವೆ. ಇಂತಹ ಪ್ರಯೋಗಗ-ಳನ್ನು ಹಿಮಾಚಲಪ್ರದೇಶದಲ್ಲೂ ಅಳಡಿಸಿ ಕೊಳ್ಳಲಾಗುವುದು. ಕರ್ನಾಟಕದ ನೆರವಿನೊಂದಿಗೆ ಅಲ್ಲಿನ ತಂತ್ರಜ್ಞಾನ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸ ಲಾಗುವುದು ಎಂದರು.

ಎಂ.ಸಿ.ಸುಧಾಕರ್ ಮಾತನಾಡಿ, ಹಿಮಾಚಲಪ್ರದೇಶದ ತಾಂತ್ರಿಕ ಶಿಕ್ಷಣ ಉನ್ನತೀಕರಣ ಹಾಗೂ ಅಭಿವೃದ್ಧಿಗೆ ರಾಜ್ಯ ಉನ್ನತ ಶಿಕ್ಷಣ ಇಲಾಖೆ ಸಂಪೂರ್ಣ ಸಹಕಾರ ನೀಡಲಿದೆ. ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗೆ ಇಲಾಖೆ ಮಾಡಿಕೊಂಡ ಒಪ್ಪಂದಗಳು, ತೆಗೆದುಕೊಂಡ ಕ್ರಮ, ಅನುಷ್ಠಾನಗೊಂಡ ಯೋಜನೆಗಳ ಸಂಪೂರ್ಣ ಮಾಹಿತಿ ಒದಗಿಸಲಾಗಿದೆ ಎಂದರು.

ಇಲಾಖೆ ಆಯುಕ್ತ ಜಿ. ಜಗದೀಶ್, ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕ ಎಚ್‌. ಪ್ರಸನ್ನ, ಉನ್ನತ ಶಿಕ್ಷಣ ಪರಿಷತ್ ಕಾರ್ಯನಿರ್ವಾಹಕ ನಿರ್ದೇಶಕ ಚಂದ್ರಶೇಖರ್ ಉಪಸ್ಥಿತರಿದ್ದರು.

ಶರಣಪ್ರಕಾಶ ಪಾಟೀಲ-ಧರ್ಮಾನಿ ಭೇಟಿ: ವಿಕಾಸಸೌಧದಲ್ಲಿ ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ ಅವರೊಂದಿಗೆ ಧರ್ಮಾನಿ ಸಮಾಲೋಚನೆ ನಡೆಸಿದರು.

ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ (ಕೆಎಸ್‌ಡಿಸಿ) ಅಧ್ಯಕ್ಷ ಕಾಂತಾನಾಯ್ಕ್, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್‌.ಇ. ಸುಧೀಂದ್ರ ಉಪಸ್ಥಿತರಿದ್ದರು.

ಮಹಿಳೆ ಬೆದರಿಸಿ ₹15 ಲಕ್ಷ ವಸೂಲಿ

ರಾಮನಗರ: ಸೈಬರ್ ಠಾಣೆ ಪೊಲೀಸರ ಸೋಗಿನಲ್ಲಿ ಮಹಿಳಾ ಉದ್ಯಮಿಗೆ ಕರೆ ಮಾಡಿದ್ದ ಆನ್‌ಲೈನ್ ವಂಚಕರು, ‘ನಿಮ್ಮ ಆಧಾರ್ ಕಾರ್ಡ್‌ನಿಂದ ದೇಶದ್ರೋಹ ಚಟುವಟಿಕೆ ನಡೆಯುತ್ತಿದೆ. ನಿಮ್ಮ ವಿರುದ್ಧ ಪ್ರಕರಣ ದಾಖಲಿಸುತ್ತೇವೆ’ ಎಂದು ಬೆದರಿಸಿ ₹15 ಲಕ್ಷ ವಸೂಲಿ ಮಾಡಿದ್ದಾರೆ. ಈ ಕುರಿತು ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ.

ವೈದ್ಯನಿಗೆ ₹1.69 ಲಕ್ಷ ವಂಚನೆ: ಟೆಲಿಗ್ರಾಮ್ ಖಾತೆಯಿಂದ ಆನ್‌ಲೈನ್ ವಂಚಕರು ಯುವತಿ ಹೆಸರಲ್ಲಿ ಕಳಿಸಿದ ಸಂದೇಶಕ್ಕೆ ಮರುಳಾದ ಚನ್ನಪಟ್ಟಣ ತಾಲ್ಲೂಕಿನ ಚಾಮುಂಡೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯರೊಬ್ಬರು ₹1.69 ಲಕ್ಷ ಹಣ ಕಳೆದುಕೊಂಡಿದ್ದಾರೆ. ರಾಮನಗರ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕದ ಪ್ರವಾಸೋದ್ಯಮ, ಐ.ಟಿ ಕ್ಷೇತ್ರದಲ್ಲಿ ಪರಸ್ಪರ ಸಹಕಾರ

ಬೆಂಗಳೂರಲ್ಲಿ ಮಾಲ್ದೀವ್ಸ್ ದೂತಾವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪ್ರವಾಸದಲ್ಲಿ-ರುವ ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ನೇತೃತ್ವದ ನಿಯೋಗ ಕರ್ನಾಟಕಕ್ಕೆ ಭೇಟಿ ನೀಡಿ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ವಿವಿಧ ವಿಷಯಗಳ ಕುರಿತು ಚರ್ಚಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯಪಾಲ ಗೆಹಲೋತ್ ಅವರು, ಮಾಲ್ದೀವ್ಸ್‌ನ ಅಡ್ಡುವಿನಲ್ಲಿ ಭಾರತೀಯ ದೂತಾವಾಸ ಮತ್ತು ಬೆಂಗಳೂರಿನಲ್ಲಿ ಮಾಲ್ದೀವ್ಸ್ ದೂತಾವಾಸ ತೆರೆಯುವ ಬಗ್ಗೆ ಚರ್ಚೆಗಳು ನಡೆದಿವೆ ಎಂದು ಹೇಳಿದರು.

‘ದೂತಾವಾಸ ಸ್ಥಾಪನೆ ವಿಚಾರ ಶೀಘ್ರದಲ್ಲೇ ಕಾರ್ಯರೂಪಕ್ಕೆ ಬರುತ್ತದೆ ಎಂಬ ವಿಶ್ವಾಸವಿದೆ. ಇದು ಭಾರತೀಯರಿಗೆ ಮಾಲ್ದೀವ್ಸ್‌ಗೆ ಭೇಟಿ ನೀಡಲು ಮತ್ತು ಹೆಚ್ಚಿನ ಪ್ರವಾಸಿಗರ-ನ್ನು ಆಕರ್ಷಿಸಲು ಸಹಾಯ ಆಗುತ್ತದೆ. ಬೆಂಗಳೂರು ಭಾರತದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕೇಂದ್ರವಾಗಿದೆ. ಮಾಲ್ದೀವ್ಸ್ ಜನರ ಪ್ರಗತಿಗೆ ಸಾಧ್ಯವಿರುವ ಎಲ್ಲ ನೆರವನ್ನೂ ನೀಡುತ್ತೇವೆ’ ಎಂದು ಅವರು ಹೇಳಿದರು.

ಮಾಲ್ದೀವ್ಸ್ ಅಧ್ಯಕ್ಷ ಮೊಹಮದ್ ಮುಯಿಜು ಅವರ ಜತೆ ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಮಾಲ್ದೀವ್ಸ್‌ನಲ್ಲಿ ಮಾಹಿತಿ ತಂತ್ರಜ್ಞಾನ (ಐ.ಟಿ) ಉದ್ಯಮದ ಬೆಳವಣಿಗೆಗೆ ಎಲ್ಲ ರೀತಿಯ ನೆರವು ನೀಡಲಾಗುವುದು. ಬೆಂಗಳೂರಿನ ಪ್ರಮುಖ ಐ.ಟಿ ಉದ್ಯಮಗಳೊಂದಿಗೆ ಸಹಭಾಗಿತ್ವ ಹೊಂದಲು ಆಸಕ್ತಿ ವ್ಯಕ್ತಪ-ಡಿಸಿರುವುದಾಗಿ ಗೊತ್ತಾಗಿದೆ ಎಂದರು.

‘ಕರ್ನಾಟಕವು ತನ್ನ ಪ್ರಕೃತಿಯ ವೈವಿಧ್ಯ, ಸಂಸ್ಕೃತಿ ಮತ್ತು ಶ್ರೀಮಂತ ಪರಂಪರೆಗೆ ಹೆಸರುವಾಸಿಯಾಗಿದೆ. ನಮ್ಮ ಕವಿ ಕುವೆಂಪು ಅವರು ಕರ್ನಾಟಕ ವನ್ನು ಸರ್ವಜನಾಂಗದ ಶಾಂತಿಯ ತೋಟ ಎಂದು ಕರೆದಿದ್ದಾರೆ. ಸುಮಾರು 300 ಕಿ.ಮೀ ಕಡಲ ತೀರದ ಹೊರತಾಗಿ ವಿಶ್ವದ ಎರಡನೇ ಅತಿದೊಡ್ಡ ಶೋಲಾ ಅರಣ್ಯವನ್ನು ಹೊಂದಿರುವ ರಾಜ್ಯ. ಹುಲಿ ಮತ್ತು ಪಕ್ಷಿಧಾಮಗಳನ್ನು ಹೊಂದಿದ್ದೇವೆ. ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿನಿಮಯ ಉತ್ತೇಜಿಸಲು ಮಾಲ್ದೀವ್ಸ್‌ನೊಂದಿಗೆ ಪಾಲುದಾರಿಕೆ ಹೊಂದಲು ಬಯಸಿದ್ದೇವೆ’ ಎಂದು ಹೇಳಿದರು.

ಮೊಹಮ್ಮದ್ ಮುಯಿಜು ಮಾತನಾಡಿ, ಭಾರತದಲ್ಲಿ ಬಹಳ ಹೆಸರು ಮಾಡಿರುವ ಕರ್ನಾಟಕ ರಾಜ್ಯಕ್ಕೆ ಅದರಲ್ಲೂ ಬೆಂಗಳೂರಿಗೆ ಭೇಟಿ ನೀಡಿರುವುದು ಬಹಳ ಸಂತಸವಾಗಿದೆ. ಮಾಲ್ದೀವ್ಸ್ ವಿದ್ಯಾರ್ಥಿಗಳು ಕರ್ನಾಟಕ ದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ಸಹಕಾರ ನೀಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಗಳಾದ ಸತ್ಯವತಿ.ಜಿ ಉಪಸ್ಥಿತರಿದ್ದರು. ಮುಯಿಜು ಅವರೊಂದಿಗೆ ಅಲ್ಲಿನ ವಾಣಿಜ್ಯೋದ್ಯಮಿಗಳೂ ಬಂದಿದ್ದರು.

ಜಾತಿ ಗಣತಿ ಜಾರಿ ಮಾಡದಿದ್ದರೆ ಪ್ರಣಾಳಿಕೆಗೆ ವಿರುದ್ಧ: ಹರಿಪ್ರಸಾದ್

ನವದೆಹಲಿ: ‘ಕರ್ನಾಟಕದಲ್ಲಿ ಜನಗಣತಿ ಅಥವಾ ಜಾತಿ ಗಣತಿ ವರದಿ ಜಾರಿ ಮಾಡುವುದಿಲ್ಲ ಎಂಬ ನಿಲುವು ತಾಳಿದರೆ ನಾವು ನಮ್ಮ ಪ್ರಣಾಳಿಕೆಗೆ ವಿರುದ್ಧವಾಗಿದ್ದೇವೆ ಎಂದರ್ಥ’ ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ರಾಜ್ಯದ ಜನಸಂಖ್ಯೆ ಆಧಾರಿತ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಅರಿಯಲು ಸಿದ್ದರಾಮಯ್ಯ ಸರ್ಕಾರ ಸಮೀಕ್ಷೆ ಮಾಡಿಸಿದೆ. ಇದು ಜಾತಿ ಸಮೀಕ್ಷೆ ಅಲ್ಲ. ಈ ವಿಷಯದ ಬಗ್ಗೆ ಕಾಂಗ್ರೆಸ್ ನಾಯಕರು ಮಾತನಾಡುವ ಮೊದಲು ನಮ್ಮ ಪ್ರಣಾಳಿಕೆಯನ್ನೊಮ್ಮೆ ನೋಡಬೇಕು. ನಾವು ಜನಗಣತಿ ಮಾಡುತ್ತೇವೆ ಎಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಇದಕ್ಕೆ ಯಾರಿಂದಲೂ ಆಕ್ಷೇಪಣೆ ಬೇಕಾಗಿಲ್ಲ’ ಎಂದರು.

‘ನಮ್ಮ ಸಚಿವ ಸಂಪುಟದಲ್ಲಿ ಪ್ರಭಾವಿ ಜಾತಿಯವರೇ ಹೆಚ್ಚಿನ ಸಂಖ್ಯೆ-ಯಲ್ಲಿದ್ದಾರೆ. 18ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಮಂಡನೆ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಆ ಬಳಿಕ ಈ ವಿಷಯದ ಬಗ್ಗೆ ಚರ್ಚೆ ಆಗಲಿ. ವರದಿಯನ್ನು ಓದುವ ಮೊದಲೇ ಅವೈಜ್ಞಾನಿಕ ಎಂದರೆ ಹೇಗೆ’ ಎಂದು ಅವರು ಪ್ರಶ್ನಿಸಿದರು.

‘ಇದು ಹಿಂದುಳಿದ ವರ್ಗಗಳಿಗೆ ಅವಕಾಶ ತಪ್ಪಿಸಲು ಸಿದ್ಧ ಮಾಡಿರುವ ಸ್ಲೋಗನ್. ಇದನ್ನು ನಾವು ಯಾರೂ ಒಪ್ಪುವುದಿಲ್ಲ. ಸಂವಿಧಾನದಲ್ಲಿ ಇರುವಂತೆ ಎಲ್ಲರಿಗೂ ಸಮಬಾಳು ಸಮಪಾಲು ಸಿಗಬೇಕು’ ಎಂದು ಅವರು ಹೇಳಿದರು. ‘ಮುಡಾ ಪ್ರಕರಣದಲ್ಲಿ ಲೋಕಾಯುಕ್ತದವರು ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣ ಎಲ್ಲಿಯೂ ಮುಚ್ಚಿ ಹೋಗಿಲ್ಲ. ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ಮಾಡಲಿ’ ಎಂದು ಅವರು ಮಾರ್ಮಿಕವಾಗಿ ಹೇಳಿದರು.

ಸಿಎಂ ಆಗಲು 135 ಶಾಸಕರು ಅರ್ಹರು: ‘ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ 135 ಶಾಸಕರು ಇದ್ದಾರೆ. ಅವರೆಲ್ಲ ಸಮಾನರು. ಎಲ್ಲ ಶಾಸಕರು ಮುಖ್ಯಮಂತ್ರಿಯಾಗಲು ಅರ್ಹರು’ ಎಂದು ಹರಿಪ್ರಸಾದ್ ಹೇಳಿದರು.

ಬೆಂಗಳೂರಿನ ವಿದ್ಯಾನಗರ ಡಿವೈಇಎಸ್ ಕ್ರೀಡಾ ವಸತಿ ಶಾಲಾ ಬಾಲಕಿಯರ ತಂಡವು ಧಾರವಾಡದಲ್ಲಿ ನಡೆದ ರಾಜ್ಯ ಮಟ್ಟದ ಅಂತರ ಪ್ರೌಢಶಾಲಾ (17 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿತು. (ನಿಂತವರು) ಎಡದಿಂದ: ಧನ್ಯಾ ಎಚ್‌.ಕೆ, ವೈಷ್ಣವಿ, ಇಶಿತಾ ಗೌಡ, ಕೋಚ್ ಸತ್ಯನಾರಾಯಣ, ಎಂ.ಆರ್‌. ಶೀತಲ್, ನಿರೀಕ್ಷಾ ಬಿ.ಸಿ, ಶ್ರೇಯಾ ಆರ್‌. ಗೌಡ (ಕುಳಿತವರು) ವರ್ಷಿಣಿ ಯು, ಚೈತ್ರಾ ರಾಮನಾಯಕ್, ವಿಭಾ ಎಸ್‌.ಎಂ, ಸಮೀಕ್ಷಾ ಎನ್‌. ಬಡಿಗೇರ್, ಶ್ರೇಯಾ ಮೈಲಾರಿ ಕರಾಡೆ, ಅರುಣಾ ಪಿ. ಮುದರ್ ಇದ್ದಾರೆ

ಗ್ರಾ.ಪಂ. ನೌಕರರ ಮುಷ್ಕರ: ಸಿಎಂ ಮಧ್ಯಪ್ರವೇಶಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿ ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಮುಂದಿಟ್ಟು ಮುಷ್ಕರ ನಡೆಸುತ್ತಿದ್ದು, ಮುಖ್ಯಮಂತ್ರಿ ಮಧ್ಯಪ್ರವೇಶ ಮಾಡಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.

ಗ್ರಾಮ ಪಂಚಾಯತ್‌ಗಳ 11 ವೃಂದಗಳ ನೌಕರರು ಜಿಲ್ಲಾ ಪಂಚಾಯಿತಿ ಕಚೇರಿ ಆವರಣದಲ್ಲಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ರಾಜ್ಯದಾದ್ಯಂತ ಗ್ರಾಮ ಪಂಚಾಯಿತಿ ಸೇವೆ ಸ್ಥಗಿತಗೊಂಡಿದೆ. ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಗಮನಿಸಿ ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕು ಎಂದು ಆಗ್ರಹಿಸಿದ್ದಾರೆ.

ಮೈಸೂರು ರೇಸ್

ಈಸ್‌ನಾಟ್ ಶೀ ಬ್ಯೂಟಿಫುಲ್ ಗೆಲ್ಲುವ ನಿರೀಕ್ಷೆ

ಮೈಸೂರು ದಸರಾ ಚಾಂಪಿಯನ್‌ಶಿಪ್ - 2024 ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈಸ್‌ನಾಟ್ ಶೀ ಬ್ಯೂಟಿಫುಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಐಸ್ ಆನ್ ಫೈರ್ 2, ದಿ ಯುನೈಟೆಡ್ 12, ಕಂಟ್ರೆಸ್ ಲೈಟ್ 5
2ನೇ ರೇಸ್: ಸಾರ್ಜೆಂಟ್ ರೆಕ್‌ಲೆಸ್ 2, ದಿ ಗೋಲ್ಡನ್ ಸನ್‌ರೈಸ್ 4, ಪರ್ಫೆಕ್ಟ್ ಹಾರ್ಟ್ 5
3ನೇ ರೇಸ್: ಹ್ಯಾಂಡ್ ಆಫ್ ಗಾಡ್ 3, ಶೆರೌಕ್ 8, ಅಶ್ವವೇಧ 5
4ನೇ ರೇಸ್: ಈಸ್‌ನಾಟ್ ಶೀ ಬ್ಯೂಟಿಫುಲ್ 2, ಆಲ್ಡ್‌ಗೇಟ್ 3, ಅಮ್ರೆಲಿ 7
5ನೇ ರೇಸ್: ಬ್ರೇವ್ ಟ್ರೂಪರ್ 8, ಸಿಲ್ವರ್ ಸ್ಪ್ರಿಂಗ್ 3, ಸಿಯೋಲ್ ಫಾರ್ ಬುಲ್ಲೆಟ್ 6
6ನೇ ರೇಸ್: ಎನ್‌.ಆರ್‌.ಐ ಟಚ್ 7, ಸ್ಪಿರಿಚ್ಯುಯಲ್ ಫೋರ್ಸ್ 8, ಹೇಸ್ಟಿಂಗ್ ಸನ್‌ರೈಸ್ 5

ಉತ್ತಮ ಬೆಟ್: ಎನ್‌.ಆರ್‌.ಟಚ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/19/2024–25 ದಿನಾಂಕ: 09–10–2024

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಮುಗಬಾಳ ಗ್ರಾಮ			
ಕ್ರ. ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
1	ಶ್ರೀ ಅಭಿಷೇಕ್ ಬಿನ್ ವೆಂಕಟೇಶ್ ಬಿ.	51/6 ರ ಪೈಕಿ	00–31

ಷರಾ:– ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಾಣಿಜ್ಯ / ಕೈಗಾರಿಕೆ ಬೆಳವಣಿಗೆಗಳು ಬಂದಿದ್ದು / ಬರುತ್ತಲಿದ್ದು, ಉದ್ದೇಶಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/2468/ಅಡ್ವಟೋರ್/2024–25

ಎಲ್‌ಪಿಜಿ ಘಟಕ ಸ್ಥಾಪನೆ: ನೋಟಿಸ್

ಬೆಂಗಳೂರು: ಕೊಡಗಿನ ಕುಶಾಲನಗರದ ವಸತಿ ಪ್ರದೇಶದಲ್ಲಿ ಆಟೊರಿಕ್ಷಾಗಳಿಗೆ ಎಲ್‌ಪಿಜಿ (ದ್ರವೀಕೃತ ಪೆಟ್ರೋಲಿಯಂ ಅನಿಲ) ಭರ್ತಿ ಮಾಡುವ ಘಟಕ ಸ್ಥಾಪನೆಯನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈಸಂಬಂಧಕುಶಾಲನಗರದಮುಳ್ಳುಸೋಗೆಯ ಯು.ಎಂ.ಲಕ್ಷ್ಮಣ್ ಸೇರಿದಂತೆ ಸ್ಥಳೀಯ ಐವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ರಜಾಕಾಲದ ಪೀಠದಲ್ಲಿದ್ದ ನ್ಯಾಯಮೂರ್ತಿ ಎಸ್‌.ಜಿ.ಪಂಡಿತ್ ಮತ್ತು ನ್ಯಾಯಮೂರ್ತಿ ಎಸ್‌.ರಾಚಯ್ಯ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎನ್‌.ಪಿ.ಅಮೃತೇಶ್, ‘ಮುಳ್ಳುಸೋಗೆ ವಸತಿ ಬಡಾವಣೆಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಎಲ್‌ಪಿಜಿ ವಿತರಣಾ ಘಟಕವನ್ನು ಆರಂಭಿಸಲಾ-ಗುತ್ತಿದೆ. ಈ ಜಾಗಕ್ಕೆ ಹೊಂದಿಕೊಂಡಂತೆ ಚರ್ಚ್ ಕೂಡಾ ಇದೆ. ಇದರಿಂದ ಸ್ಥಳೀಯ ನಿವಾಸಿಗಳಿಗೆ ಸಾಕಷ್ಟು ತೊಂದರೆ ಉಂಟಾಗಲಿದೆ. ಆದ್ದರಿಂದ, ಘಟಕ ಸ್ಥಾಪನೆಗೆ ನೀಡಿರುವ ನಿರಾಕ್ಷೇಪಣ ಪತ್ರ (ಎನ್‌ಒಸಿ) ಹಾಗೂ ಪರವಾನಗಿ ವಾಪಸು ಪಡೆದುಕೊಳ್ಳುವಂತೆ ಸಕ್ಷಮ ಪ್ರಾಧಿಕಾರಗಳಿಗೆ ನಿರ್ದೇಶಿಸಬೇಕು’ ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಕೇಂದ್ರ ಪೆಟ್ರೋಲಿಯಂ ಮತ್ತು ವಾಣಿಜ್ಯ ಸಚಿವಾಲಯ ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿತು. ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಲಾಗಿದೆ.

ಅನುಮೋದನೆ ನೀಡುವಂತೆ ವನ್ಯಜೀವಿ ಮಂಡಳಿಗೆ ರಾಜ್ಯ ಒತ್ತಡ

ಮಹದಾಯಿಗೆ ಗೋವಾ ತಗಾದೆ: ರಾಜ್ಯ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಕುಡಿಯುವ ನೀರಿನ ಯೋಜನೆಗೆ ಗೋವಾ ಸರ್ಕಾರ ಅನಗತ್ಯ ತಗಾದೆ ಎತ್ತುತ್ತಿದೆ ಎಂದು ಬಲವಾಗಿ ಆಕ್ಷೇಪ ವ್ಯಕ್ತಪಡಿಸಿರುವ ಕರ್ನಾಟಕ ಸರ್ಕಾರ, ‘ಈ ಯೋಜನೆಗೆ ನ್ಯಾಯಾಲಯ ತಡೆಯಾಜ್ಞೆ ನೀಡಿಲ್ಲ. ಕೇಂದ್ರ ಸರ್ಕಾರ ವಿಳಂಬ ಧೋರಣೆ ಅನುಸರಿಸದೆ ಯೋಜನೆಗೆ ಕೂಡಲೇ ಅನುಮೋದನೆ ನೀಡಬೇಕು’ ಎಂದು ಆಗ್ರಹಿಸಿದೆ.

ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ 80ನೇ ಸಭೆ ನವದೆಹ-ಲಿಯಲ್ಲಿ ಬುಧವಾರ ನಡೆಯಿತು. ಮಹದಾಯಿಯ ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಅನುಮೋದನೆ ನೀಡುವ ಪ್ರಸ್ತಾವನೆ ಕಾರ್ಯಸೂಚಿಯ ಪಟ್ಟಿಯಲ್ಲಿತ್ತು. ರಾಜ್ಯದ ವಾದವನ್ನು ಆಲಿಸಿದ ಸ್ಥಾಯಿ ಸಮಿತಿಯು, ‘ಇದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಸಲ್ಲಿಸಿ. ಸಮಿತಿಯು ಪರಿಶೀಲನೆ ನಡೆಸಿ ಶೀಘ್ರದಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದೆ’ ಎಂದು ಭರವಸೆ ನೀಡಿತು.

ಮುಖ್ಯಾಂಶಗಳು

- ಯೋಜನೆಗೆ ನ್ಯಾಯಾಲಯ ತಡೆಯಾಜ್ಞೆ ನೀಡಿಲ್ಲ
- ಉತ್ತರ ಕರ್ನಾಟಕಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆ
- ಕೇಂದ್ರ ಪ್ರಾಧಿಕಾರಗಳು ಸೂಕ್ತ ತೀರ್ಮಾನ ಕೈಗೊಳ್ಳಲಿ

ರಾಜ್ಯದ ಪರವಾಗಿ ಸಭೆಯಲ್ಲಿ ಪಾಲ್ಗೊಂಡ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್‌.ಮಂಜುನಾಥ ಪ್ರಸಾದ್ ಅವರು, ‘ಉತ್ತರ ಕರ್ನಾಟಕದ ಲಕ್ಷಾಂತರ ಜನರಿಗೆ ಕುಡಿಯುವ ನೀರು ಪೂರೈಸುವ ಯೋಜನೆ ಇದಾಗಿದೆ. ಯೋಜನೆಗೆ ಒಪ್ಪಿಗೆ ನೀಡಬಹುದು ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿ) ತಜ್ಞರ ತಂಡ ಶಿಫಾರಸು ಮಾಡಿ ಒಂಬತ್ತು ತಿಂಗಳುಗಳು ಕಳೆದಿವೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ವನ್ಯಜೀವಿ ಮಂಡಳಿಯು ಅನುಮೋದನೆ ನೀಡಬೇಕು’ ಎಂದು ಕೋರಿದರು.

‘ಯೋಜನಾ ಪ್ರದೇಶದ 10.68 ಹೆಕ್ಟೇರ್ ಪ್ರದೇಶವು ಹುಲಿ ಕಾರಿಡಾರ್ ವ್ಯಾಪ್ತಿಯಲ್ಲಿ ಬರುತ್ತಿರುವುದರಿಂದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮೋದನೆ ಪಡೆಯಬೇಕು ಎಂದು ಕೇಂದ್ರ ಅರಣ್ಯ ಸಚಿವಾಲಯ ತಿಳಿಸಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯವು ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿತ್ತು. ಅದರ ಬೆನ್ನಲ್ಲೇ, ಪ್ರಾಧಿಕಾರವು ತಜ್ಞರ ಸಮಿತಿ ರಚಿಸಿತ್ತು. ಸಮಿತಿಯು ಯೋಜನಾ ಸ್ಥಳಕ್ಕೆ ಭೇಟಿ ವರದಿ ಸಲ್ಲಿಸಿತ್ತು. ಆದರೆ, ಈ ವರದಿಯನ್ನು ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಪ್ರಾಧಿಕಾರ ಈವರೆಗೆ ನೀಡಿಲ್ಲ’ ಎಂದು ಗಮನ ಸೆಳೆದರು.

‘ಮಹದಾಯಿ ಜಲವಿವಾದಕ್ಕೆ ಸಂಬಂಧಿಸಿದಂತೆ ಮೂರು ರಾಜ್ಯಗಳಿಗೆ ಮಹದಾಯಿ ನ್ಯಾಯಮಂಡಳಿ 2018ರಲ್ಲೇ ನೀರು ಹಂಚಿಕೆ ಮಾಡಿದೆ. ಯೋಜನೆಯ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ ಒಪ್ಪಿಗೆ ನೀಡಬಹುದು ಎಂದು ಸುಪ್ರೀಂ ಕೋರ್ಟ್ 2020ರಲ್ಲಿ ತಿಳಿಸಿದೆ. ಡಿಪಿಆರ್‌ಗೆ ಜಲ ಆಯೋಗ 2022ರ ಡಿಸೆಂಬರ್‌ನಲ್ಲಿ ಒಪ್ಪಿಗೆ ಕೊಟ್ಟಿದೆ. ಆ ಬಳಿಕ, ಅರಣ್ಯ ಸಂರಕ್ಷಣಾ ಕಾಯ್ದೆಯ ಅಡಿಯಲ್ಲಿ ವನ್ಯಜೀವಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮೋದನೆ ನೀಡಲು ಯಾವುದೇ ಅಡ್ಡಿ ಇಲ್ಲ. ಹೀಗಾಗಿ, ಕೇಂದ್ರ ಪ್ರಾಧಿಕಾರಗಳು ಸೂಕ್ತ ತೀರ್ಮಾನ ಕೈಗೊಳ್ಳಬಹುದು’ ಎಂದು ಅವರು ಒತ್ತಿ ಹೇಳಿದರು.

ಯೋಜನೆ ಕಾಮಗಾರಿಗೆ ತಡೆ ಆದೇಶ ಹೊರಡಿಸಿದ್ದ ಗೋವಾ

‘ಈ ನಡುವೆ, ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಪ್ರಕಾರ, ಗೋವಾದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರು ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಷೋಕಾಸ್ ನೋಟಿಸ್ ನೀಡಿದ್ದರು. ಇದಕ್ಕೆ ವ್ಯವಸ್ಥಾಪಕ ನಿರ್ದೇಶಕರು ಉತ್ತರ ನೀಡಿದ್ದರು. ಗೋವಾ ಸರ್ಕಾರದ ಒಪ್ಪಿಗೆ ಇಲ್ಲದೆ ಕರ್ನಾಟಕ ಸರ್ಕಾರವು ಈ ಯೋಜನೆಯನ್ನು ಕೈಗೆತ್ತಿಕೊಳ್ಳಬಾರದು ಎಂದು ಅಲ್ಲಿನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಆದೇಶ ಹೊರಡಿಸಿದ್ದರು. ಈ ಆದೇಶ ಹೊರಡಿಸಲು ಗೋವಾ ಸರ್ಕಾರಕ್ಕೆ ಯಾವುದೇ ಅಧಿಕಾರ ಇಲ್ಲ. ಈ ಆದೇಶವನ್ನು ವಜಾ ಮಾಡಬೇಕು ಎಂದು ಒತ್ತಾಯಿಸಿ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಪ್ರಜಾವಾಣಿ

ನವವರ್ಣ

ಗುಲಾಬಿ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಗುರುವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541

ಶ್ರೀ ಯೋಗ ಕೇಂದ್ರ

ವಾಣಿಜ್ಯ ತೆರಿಗೆ ಇಲಾಖೆ

ವಿಜಯಶ್ರೀ ಮತ್ತು ಗೆಳತಿಯರು

ಬೆಂಗಳೂರು ತಾಂತ್ರಿಕ ವಿಶ್ವವಿದ್ಯಾಲಯದ ಸಿಬ್ಬಂದಿ

ಸುಪ್ರಿಯಾ ಮತ್ತು ತಂಡ

ವಿದ್ಯು ಮತ್ತು ಗೆಳತಿಯರು

ನೈಋತ್ಯ ರೈಲ್ವೆ ಸಿಬ್ಬಂದಿ

ಶಾರದಾ ಮತ್ತು ಗೆಳತಿಯರು

ವಾಣಿ ಮತ್ತು ಗೆಳತಿಯರು

ಸ್ನೇಹಾ ಜೂಡಿತ್

ಇಂಡೋನೇಶಿಯನ್ ಗರ್ಲ್ಸ್ ಕಾಲೇಜು ಸಿಬ್ಬಂದಿ

ನಿಸರ್ಗ ಭಜನ ಮಂಡಳಿ

ಸುಮಾ & ಹೇಮಾ ಸ್ನೇಹಿತರು

ದಿವ್ಯಶ್ರೀ

ಸುಲೋಚನಾ


ದಿಶಾ ಗೌಡ

ರಾಣಿ ಹ್ ಸ್

ಮೀನಾಕ್ಷಿ ಮತ್ತು ಗೆಳತಿ

ಕವಿತಾ

BGS ಸಂಸ್ಥೆಯ ಸಿಬ್ಬಂದಿ

ಮಮತಾ ಮತ್ತು ಕವಿತಾ

KRDCL ಸಿಬ್ಬಂದಿ

ರಾಮನಗರ ಜಿಲ್ಲಾ ಆಸ್ಪತ್ರೆ

ನಿಸರ್ಗ ಲೇಔಟ್ ಮಹಿಳಾ ಗುಂಪು

ಶ್ರೀವಾಣಿ ಮತ್ತು ಗೆಳತಿಯರು

ಪುಷ್ಪಲತಾ ಮತ್ತು ಗೆಳತಿಯರು

ಶಶಿಕಲಾ ಮತ್ತು ಗೌರಿ

ಗಾಯತ್ರಿ ಮತ್ತು ಗೆಳತಿಯರು

ನಳಿನಾ ಮತ್ತು ಗೆಳತಿಯರು

ಮಣಿ, ತಾತಗುಣಿ

ರಾಣಿ ಮತ್ತು ಭೂಮಿಕಾ

ವಾಸಂತಿ ಮತ್ತು ಗೆಳತಿಯರು

ಮೋಕ್ಷಿತಾ ಸಾಯಿ

ಅನ್ನಿ ಮತ್ತು ರಾಜಶ್ರೀ

ಗೌತಮಿ

ಅಪೊಲೊ ಪಬ್ಲಿಕ್ ಸ್ಕೂಲ್

ಜಯಲಕ್ಷ್ಮಿ

ಜ್ಞಾನಿಕಾ

ಶೇ 82ರಷ್ಟು ಗ್ರಾಮೀಣ ಯುವಜನರಿಂದ ಇಂಟರ್‌ನೆಟ್ ಬಳಕೆ

ನವದೆಹಲಿ (ಪಿಟಿಐ): ಗ್ರಾಮೀಣ ಪ್ರದೇಶದ 15ರಿಂದ 25 ವಯೋಮಾನದ ಶೇ82.1ರಷ್ಟು ಯುವಜನರು ಇಂಟರ್‌ನೆಟ್ ಸೇವೆ ಬಳಸುತ್ತಿದ್ದಾರೆ. ನಗರ ಪ್ರದೇಶದಲ್ಲಿ ಈ ವಯೋಮಾನದ ಬಳಕೆದಾರರ ಪ್ರಮಾಣ ಶೇ 91.8ರಷ್ಟಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಗ್ರಾಮೀಣ ಪ್ರದೇಶದಲ್ಲಿ 15ರಿಂದ 24 ವರ್ಷದೊಳಗಿನ ಶೇ 95.7ರಷ್ಟು ಯುವಜನರು ಮೊಬೈಲ್ ಫೋನ್ ಬಳಕೆ ಮಾಡುತ್ತಿದ್ದಾರೆ. ನಗರ ಪ್ರದೇಶದಲ್ಲಿ ಈ ವಯೋಮಾನದ ಶೇ 97ರಷ್ಟು ಮಂದಿ ಮೊಬೈಲ್ ಬಳಸುತ್ತಿದ್ದಾರೆ ಎಂದು ಬುಧವಾರ ಬಿಡುಗಡೆಯಾಗಿರುವ ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ವರದಿ ತಿಳಿಸಿದೆ.

2022ರ ಜುಲೈನಿಂದ 2023ರ ಜೂನ್‌ವರೆಗೆ ಈ ವಾರ್ಷಿಕ ಸಮೀಕ್ಷೆ ನಡೆಸಲಾಗಿದೆ. ಇದು 79ನೇ ರಾಷ್ಟ್ರೀಯ ಮಾದರಿ ಸಮೀಕ್ಷೆಯ ಭಾಗವಾಗಿದೆ.

ದೇಶದಲ್ಲಿ ದೂರವಾಣಿ/ಮೊಬೈಲ್ ಫೋನ್ ಹೊಂದಿರುವ ಕುಟುಂಬಗಳ ಸಂಖ್ಯೆ ಶೇ 95.1ರಷ್ಟಿದೆ. ಕಂಪ್ಯೂಟರ್ ಹೊಂದಿರುವ ಕುಟುಂಬಗಳ ಶೇ 9.9ರಷ್ಟಿದೆ ಎಂದು ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

28ನೇಯ ವರುಷದ ಪುಣ್ಯಸ್ಮರಣೆ

ಪೂಜ್ಯ ಶ್ರೀ. ಪಿ. ವೀರಪ್ಪನವರು
ಮಾಜಿ ಕಾರ್ಪೊರೇಟರ್, ಬೆಂಗಳೂರು
1920 - 1996
"ನಿಮ್ಮಲ್ಲಿತ್ತು ದಿವ್ಯ ಸಂಕಲ್ಪಶಕ್ತಿ ನೀವು ನಡೆದಿರಿ ಎಂದೂ ಸತ್ಯ ಪಥದಿ ನೀಡೆಮಗೆ ನಿಮ್ಮ ದಿವ್ಯಶಕ್ತಿ ಕ್ರಮಿಸಲು ಈ ಬಾಳಹಾದಿ"
ಪುಷ್ಪಾಂಜಲಿ ಅರ್ಪಿಸುವ
ದುಃಖತಪ್ತ: ಪತ್ನಿ ಶ್ರೀಮತಿ. ಪಿ. ವಿ. ಗಿರಿಜಾಂಬ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗು ಬಂಧುಗಳು

ಮೊದಲನೇ ವರ್ಷದ ಚಿರಸ್ಮರಣೆ

ಶ್ರೀ ಆರ್. ನರಸಿಂಹಮೂರ್ತಿ (ಪರಪ್ಪ)
ಸಂಸ್ಥಾಪಕರು : ದಿ ಚಿನ್ನ ಸಿಲ್ಕ್ಸ್ ಮತ್ತು ಎನ್.ಎಂ. ಆರ್. ಸಿಲ್ಕ್ಸ್, ಯುನಿಟಿ ಬಿಲ್ಡಿಂಗ್, ಜೆ.ಸಿ. ರಸ್ತೆ, ಬೆಂಗಳೂರು
"ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾದರೂ ನಿಮ್ಮ ಸವಿನೆನಪು ಸದಾ ಹಸಿರಾಗಿರುತ್ತದೆ, ನೀವು ತೋರಿದ ಬೆಳಕಿನಲ್ಲೆ ಮುನ್ನಡೆಯುತ್ತಿರುವ"
ಸದ ನಿಮ್ಮ ನೆನಪಿನಲ್ಲಿರುವ
ಶ್ರೀಮತಿ ಮತ್ತು ಶ್ರೀ ಎನ್. ಮೇಘರಾಜ್ ಕುಟುಂಬದವರು

18ನೇ ವರ್ಷದ ಪುಣ್ಯಸ್ಮರಣೆ

ಕೆ.ವಿ. ಪ್ರಕಾಶ್
ಮರಣ: 10–10–2006
ನಿಮ್ಮ ಸವಿನೆನಪು, ಆದರ್ಶಗಳು ಸದಾ ನಮಗೆ ಮಾರ್ಗದರ್ಶನ, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ಪತ್ನಿ–ಮಂಜುಳ
ಮಕ್ಕಳು–ಪವನ್ ಪಿ., ಬಾಲಾಜಿ ಪಿ.

LOOKING FOR JOB OPPORTUNITY
Refer Classifieds on Wednesday

21ನೇ ಸವಿನೆನಪು

ಶ್ರೀ ಎಂ.ಆರ್. ರಾಮಯ್ಯನವರು
(30.06.1937 - 10.10.2003)
ITI, Ex-KPCCI Secretary (Labour Cell)
"ಬದುಕಿನ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಿ, ನಮಗೂ ಸವಾಲುಗಳನ್ನು ನಿಭಾಯಿಸಲು ಮಾರ್ಗದರ್ಶನ ಮತ್ತು ಚೈತನ್ಯ ತುಂಬಿದ ನೀವು ನಮ್ಮ ಮನಗಳಲ್ಲಿ ನಿತ್ಯ ನೂತನ ನಿರಂತರ ಹಾಗೂ ಅಮರ"
ಶ್ರೀಮತಿ ವೈ. ಶಾಂತಮ್ಮನವರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು
ನಾಗರಭಾವಿ, ಬೆಂಗಳೂರು–72

ದುಷ್ಟ ಸಂಹಾರಕ್ಕೆ ಪ್ರಾರ್ಥಿಸುವ ದುರ್ಗಾಷ್ಟಮಿ

• ರಶ್ಮಿ ಎಸ್.

ಮಹಾ ನವರಾತ್ರಿಯ ದುರ್ಗಾಷ್ಟಮಿ - ಶಕ್ತಿ ಪೂಜೆಯನ್ನು ಕೈಗೊಳ್ಳುವ ಮಹತ್ವದ ದಿನವಾಗಿದೆ. ಇದೇ ದಿನ ದುರ್ಗೆಗೆ ದಶ ದೇವರು ತಮ್ಮ ಅಸ್ತ್ರಗಳನ್ನು ಮಹಿಷಾಸುರನ ಅಂತ್ಯಗಾಣಿಸಲು ನೀಡಿದರಂತೆ. ದುರ್ಗಾಷ್ಟಮಿಯ ದುರ್ಗೆಯ ಕೈಯಲ್ಲಿ ಈ ಎಲ್ಲ ಶಸ್ತ್ರಾಸ್ತ್ರಗಳನ್ನೂ ನೋಡಬಹುದಾಗಿದೆ.

ರಾಮಯಾಣದಲ್ಲಿ ಶ್ರೀ ರಾಮನು ಸೀತೆಯನ್ನು ಲಂಕೆಯಿಂದ ಕರೆತರುವಾಗ ದುರ್ಗೆಯನ್ನು ಆರಾಧಿಸಿದ ಎಂಬ ನಂಬಿಕೆ ಇದೆ. ಮಹಾಭಾರತದಲ್ಲಿ ನವರಾತ್ರಿ ಹಬ್ಬಕ್ಕೆ ಪಾಂಡವರ ಅಜ್ಞಾತವಾಸ ಮುಗಿಯುವ ಸಂದರ್ಭದೊಂದಿಗೆ ತಳಕು ಹಾಕಲಾಗಿದೆ.

ಕೃಷಿಗೆ ಬೇಕಿರುವ, ಕೊಡಲಿ, ಪಿಕಾಸಿ, ನೇಗಿಲು, ಮಚ್ಚು, ಕುಡ್ಲುಗಳನ್ನೂ, ಒನಕೆ, ರುಬ್ಬುವ ಕಲ್ಲು, ಒಳಕಲ್ಲುಗಳನ್ನೂ, ಭರ್ಜಿ, ಖಡ್ಗಗಳೊಂದಿಗೆ ನೂತನ ಶಸ್ತ್ರಗಳಾಗಿರುವ ಚಾಕು, ಬಾಕು, ಪೆನ್ನುಗಳನ್ನೂ ಪೂಜೆಗೆ ಇರಿಸಲಾಗುತ್ತದೆ.

ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದಲ್ಲಿ ಮೂರು ದಿನಗಳಿಗೆ ದೀಪ ಹಾಕುವ ಸಂಪ್ರದಾಯವಿದೆ. ದೊಡ್ಡದೊಂದು ಪಣತೆಯಲ್ಲಿ ಸಣ್ಣ ಹಗ್ಗದಷ್ಟು ಬತ್ತಿ ಹೊಸೆದು, ದೀಪ ಮುಡಿಸುತ್ತಾರೆ. ಅದು ವಿಜಯದಶಮಿಯ ನಂತರವೇ ಶಾಂತವಾಗಲು ಬಿಡುತ್ತಾರೆ. ಅಲ್ಲಿಯವರೆಗೂ ಎಣ್ಣೆ ಹುಯ್ಯುವ, ಬತ್ತಿ ತೀಡುವ ಕೆಲಸ ನಿರಂತರವಾಗಿರುತ್ತದೆ.

ದುರ್ಗಾಷ್ಟಮಿಯ ದಿನದಂದು, ಘಟ್ಟಸ್ಥಾಪನೆ ಮಾಡಿದವರು ಮನೆ ದೇವರ ಜಗುಲಿಯ ಮೇಲೆ ಬೆಳೆದ ಪೈರಿನ ಮೇಲೊಂದು ಚಟ್ಟ ಕಟ್ಟುತ್ತಾರೆ. ಅದಕ್ಕೆ ಕೋಡುಬಳೆ, ಚಕ್ಕುಲಿ, ಕರಚಿಕಾಯಿ ಮುಂತಾದ ತಿನಿಸುಗಳನ್ನು ದಾರದಿಂದ ಕಟ್ಟಿ ಇಳಿಬಿಡುತ್ತಾರೆ.

ದುಷ್ಟಸಂಹಾರಕ್ಕಾಗಿ ಅವತಾರವೆತ್ತಿದ ದುರ್ಗೆಯ ಆರಾಧನೆಯು ದುಷ್ಟ ಶಕ್ತಿಗಾಗಿ

ನಮ್ಮೊಳಗೆ ಮನೋಸ್ಥೈರ್ಯ ನೀಡುತ್ತದೆ. ದುಷ್ಟತನದ ಸಂಹಾರಕ್ಕಾಗಿಯೂ ನವರಾತ್ರಿಯಲ್ಲಿ ದೇವಿ ಆರಾಧನೆ ಸಂಕಲ್ಪ ಮಾಡಿಸುತ್ತದೆ.

ರೈತಾಪಿ ವರ್ಗದಲ್ಲಿ ಆಲಸ್ಯತನವನ್ನೇ ದುಷ್ಟಶಕ್ತಿ ಎಂದು ಹೇಳಲಾಗುತ್ತದೆ. ಆಲಸ್ಯತನವನ್ನು ಮೈಕೊಡವಿಕೊಂಡು ಮೈಮುರಿದು ದುಡಿಯಲು ಹಾರಿ, ಪಿಕಾಸಿ, ಕೊಡಲಿ, ಕುರಪಿ ಮುಂತಾದ ಕೃಷಿ ಉಪಕರಣಗಳನ್ನು ಆಯುಧ ಪೂಜೆಗೆ ಇಡಲಾಗುತ್ತದೆ.

ನವರಾತ್ರಿಯಲ್ಲಿ ಸಪ್ತಮಿಗೆ ಶಾರದೆಯನ್ನೂ, ಅಷ್ಟಮಿಗೆ ದುರ್ಗೆಯನ್ನೂ, ನವಮಿಗೆ ಗೌರಿಯನ್ನೂ ಪೂಜಿಸುವ ಸಂಪ್ರದಾಯವಿದೆ. ವಿದ್ಯೆ ವಿವೇಚನೆಯನ್ನು ಪಡೆದು, ದುಷ್ಟತನವನ್ನು ಸಂಹರಿಸಿ, ಮತ್ತೆ ಸೃಷ್ಟಿಸುವ, ಸೃಜಿಸುವ ಶಕ್ತಿ ಸಿಗಲಿ ಎಂದು ಗೌರಿಯನ್ನೂ ಪೂಜೆ ಮಾಡಲಾಗುತ್ತದೆ. ಈ ಮೂವರು ದೇವಿಯರ ಆರಾಧನೆಯಿಂದಲೇ ವಿಜಯದಶಮಿಯತ್ತ ಹಬ್ಬದ ನಡಿಗೆ ಸಾಗುತ್ತದೆ. ಹುಬ್ಬಳ್ಳಿಯ ದುರ್ಗಾದೇವಿ ಮತ್ತು ಅಂಬಾ ಭವಾನಿ ಗುಡಿಗಳಲ್ಲಿ ವಿಜಯದಶಮಿಯ ನಂತರ ಬರುವ ಮಂಗಳವಾರ ದೇವಿಗೆ ಅರಿಸಿನ ಬಳಿಯಲಾಗುತ್ತದೆ. ಮಹಿಷಾಸುರ ಮರ್ದನದ ಕಾಳಗದಲ್ಲಿ ದೇವಿಗೆ ಆಗಿರುವ ಗಾಯಗಳಿಗೆ ಅರಿಶಿಣ ಲೇಪಿಸುವ ಈ ಸಂಪ್ರದಾಯ ಇಲ್ಲಿಯ ಸಹಸ್ರಾರ್ಜುನ ಕ್ಷತ್ರಿಯರಲ್ಲಿ ಇದೆ.

ದುಷ್ಟರನ್ನು ಶಿಕ್ಷಿಸುವ ದುರ್ಗೆಯನ್ನು ಆರಾಧಿಸುವುದು, ಪೂಜಿಸುವುದಷ್ಟೇ ಅಲ್ಲ, ದುಷ್ಟತನವನ್ನು ಕೊನೆಗೊಳಿಸುವ ಸ್ಥೈರ್ಯ ಬೆಳೆಸಿಕೊಳ್ಳಲು ಈ ಹಬ್ಬವನ್ನು ಆಚರಿಸಲಾಗುತ್ತದೆ. ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಮುಖ್ಯವಾಗಿ ಪಶ್ಚಿಮಬಂಗಾಳದಲ್ಲಿಯೂ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ದುರ್ಗಾಷ್ಟಮಿಯಂದು ದುರ್ಗೆ ಪೂಜೆಯೊಂದಿಗೆ ವಿಶೇಷ ನೃತ್ಯವನ್ನು ಪ್ರಸ್ತುತ ಪಡಿಸಲಾಗುತ್ತದೆ. ಗುಜರಾತ್, ರಾಜಸ್ಥಾನಗಳಲ್ಲಿ ಗರಬಾ ನೃತ್ಯವನ್ನು ಪ್ರದರ್ಶಿಸಿ, ಜನನ ಮರಣಗಳ ಜೀವನಚಕ್ರದಲ್ಲಿ ಫಲವಂತಿಕೆಯನ್ನು ಪೂಜಿಸಲಾಗುತ್ತದೆ. ಆಸ್ಸಾಂನಲ್ಲಿಯೂ ದುಷ್ಟಸಂಹಾರ, ಶಿಷ್ಟರಕ್ಷಣೆ ಯ ದುರ್ಗಾದೇವಿಗೆ ವಿಶೇಷ ಪೂಜೆ ಸಲ್ಲುತ್ತದೆ. ದೇವಿ ಉಪಾಸನೆಯಲ್ಲಿ ತೊಡಗಿಸಿಕೊಂಡ ಭಕ್ತರಲ್ಲಿ ನವಶಕ್ತಿಯನ್ನು ನೀಡುವ ಈ ಹಬ್ಬ ಎಲ್ಲರಿಗೂ ಶುಭವನ್ನೇ ತರುತ್ತದೆ ಎಂಬ ನಂಬಿಕೆ ಇದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,013
ಇಂದಿನ ಅಂತ್ಯ	24,981
▼	31
ದಿನದ ಕನಿಷ್ಠ	24,947

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹204
ಆರ್‌ಎಸ್‌ಎಸ್-5	₹200
ಗುಡ್ ಲಾಟ್	₹193

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹208-500
ದ್ವಿತಳಿ (ಬಿ.ವಿ)	₹269-645

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14000-15000
ಹಿರಿಯೂರು	₹10280-10280
ಮಧುಗಿರಿ	₹10000-12000
ತಿಪಟೂರು	₹14500-16000
ತುರುವೇಕೆರೆ	₹15000-15500

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಹೊಸಚಾಲಿ	30299-34099	ಕೋಕ	19699-25989
ಕೋಕ	19000-28500	ಶಿವಮೊಗ್ಗ		ಕೆಂಪುಗೋಟು	19299-21899
ಹಳತು	40500-48000	ಬೆಟ್ಟೆ	36366-55419	ರಾಶಿ	40869-46319
ಕಾರ್ಕಳ		ಗೊರಬಲು	12009-32359	ತಟ್ಟಿಬೆಟ್ಟೆ	31000-39989
ಹೊಸತು	25000-31000	ಹೊಸತು	43669-47051	ಶಿರಸಿ	
ಹಳತು	30000-41000	ರಾಶಿ	32569-50509	ಬೆಟ್ಟೆ	30018-34199
ಕುಮಟ		ಸರಕು	51199-83500	ಬಿಳಿಗೋಟು	17669-29808
ಚಿಪ್ಪು	23019-26089	ಸಿದ್ದಾಪುರ		ಚಾಲಿ	32208-35298
ಕೋಕ	7089-22019	ಬಿಳಿಗೋಟು	23099-27899	ಕೆಂಪುಗೋಟು	17109-18786
ಫ್ಯಾಕ್ಟರಿ	3019-16429	ಚಾಲಿ	30600-33899	ರಾಶಿ	40699-42359
ಹಳೆಚಾಲಿ	36099-39199				

ದೇಶದ ಮೊದಲ ಸಿಎನ್‌ಜಿ ಬೈಕ್ ಬಿಡುಗಡೆ

ಚಂಡೀಗಢ (ಪಿಟಿಐ): ಬಜಾಜ್ ಆಟೊ ಕಂಪನಿಯು ದೇಶದ ಮೊದಲ ಸಿಎನ್‌ಜಿ ಫ್ರೀಡಂ 125 ಬೈಕ್ ಅನ್ನು ಬುಧವಾರ ಮಾರುಕಟ್ಟೆಗೆ ಪರಿಚಯಿಸಿದೆ.

ಬಿಡುಗಡೆಯ ದಿನವೇ 16 ಗ್ರಾಹಕರಿಗೆ ಬೈಕ್ ವಿತರಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಬೈಕ್‌ನಲ್ಲಿ ಸಿಎನ್‌ಜಿ ಮತ್ತು ಪೆಟ್ರೋಲ್ ಟ್ಯಾಂಕ್ ಎರಡೂ ಇರಲಿವೆ. ಪೆಟ್ರೋಲ್ ಬಳಸುವ ದ್ವಿಚಕ್ರ ವಾಹನಗಳಿಗೆ ಹೋಲಿಸಿದರೆ, ಸಿಎನ್‌ಜಿ ಬೈಕ್‌ನ ಬಳಕೆಯಿಂದ ಶೇ 50ರಷ್ಟು ಇಂಧನ ವೆಚ್ಚವನ್ನು ಕಡಿಮೆ ಮಾಡಬಹುದಾಗಿದೆ.

2 ಕೆ.ಜಿ ಸಿಎನ್‌ಜಿ ಇಂಧನದಲ್ಲಿ 200 ಕಿ.ಮೀ.ಗೂ ಹೆಚ್ಚು ದೂರ ಪ್ರಯಾಣಿಸಬಹುದಾಗಿದೆ ಎಂದು ತಿಳಿಸಿದೆ.

ಸಿಎನ್‌ಜಿ ಇಂಧನ ಖಾಲಿಯಾದರೆ ಇದರ ಜೊತೆಗಿರುವ 2 ಲೀಟರ್ ಪೆಟ್ರೋಲ್‌ನಿಂದ 130 ಕಿ.ಮೀ ದೂರ ಪ್ರಯಾಣಿಸ ಬಹುದಾಗಿದೆ ಎಂದು ಹೇಳಿದೆ.

ಬೈಕ್ ಅನಾವರಣಗೊಳಿಸಿದ ಚಂಡೀಗಢದ ಪರಿಸರ ಇಲಾಖೆಯ ನಿರ್ದೇಶಕ ಟಿ.ಸಿ. ನೌಟಿಯಾಲ್ ಮಾತನಾಡಿ, 'ಸಿಎನ್‌ಜಿ ಬೈಕ್ ಬಳಕೆಯಿಂದ ವಾಯುಮಾಲಿನ್ಯ ಪ್ರಮಾಣ ತಗ್ಗಲಿದೆ' ಎಂದು ಹೇಳಿದರು.

ಸತತ 10ನೇ ಬಾರಿಗೆ ಬಡ್ಡಿದರ ಯಥಾಸ್ಥಿತಿ: 'ತಟಸ್ಥ' ನೀತಿಗೆ ಎಂಪಿಸಿ ಒಪ್ಪಿಗೆ

ಡಿಸೆಂಬರ್‌ಗೆ ರೆಪೊ ದರ ಇಳಿಕೆ?

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಸತತ 10ನೇ ಬಾರಿಗೆ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

ಬುಧವಾರ ಮುಕ್ತಾಯಗೊಂಡ ಸಭೆಯಲ್ಲಿ ಆರು ಸದಸ್ಯರ ಪೈಕಿ ಐವರು ಸದಸ್ಯರು ಶೇ 6.5ರಲ್ಲಿಯೇ ರೆಪೊ ದರ ಉಳಿಸಿಕೊಳ್ಳಲು ಒಪ್ಪಿಗೆ ಸೂಚಿಸಿದ್ದಾರೆ. ಇದರಿಂದ ಗೃಹ, ವಾಹನ, ಕಾರ್ಪೊರೇಟ್ ಹಾಗೂ ಇತರೆ ಸಾಲಗಳ ಮೇಲಿನ ಬಡ್ಡಿದರ ಇಳಿಕೆಯಾಗಲಿದೆ ಎಂಬ ನಿರೀಕ್ಷೆಯಲ್ಲಿದ್ದ ಸಾಲಗಾರರಿಗೆ ಮತ್ತೆ ನಿರಾಸೆಯಾಗಿದೆ.

ಆರ್‌ಬಿಐ ಚಿಲ್ಲರೆ ಹಣದುಬ್ಬರವನ್ನು ನಿಯಂತ್ರಿಸುವ ಮೂಲಕ ದೇಶದ ಆರ್ಥಿಕತೆಯ ಸ್ಥಿರತೆಗೆ ಒತ್ತು ನೀಡುವ ನಿಲುವು ತಳೆದಿತ್ತು (ವಿತ್‌ಡ್ರಾವಲ್ ಆಫ್ ಅಕಾಮಡೇಷನ್). 2019ರ ಜೂನ್‌ನಿಂದಲೂ ಇದೇ ನೀತಿ ಪಾಲಿಸುತ್ತಿತ್ತು. ಸದ್ಯ ಸಮಿತಿಯ ಸದಸ್ಯರು ಸರ್ವಾನುಮತದಿಂದ 'ತಟಸ್ಥ' ನೀತಿಗೆ ಸಹಮತದ ಮುದ್ರೆ ಒತ್ತಿದ್ದಾರೆ. ಇದು ಬಡ್ಡಿದರ ಇಳಿಕೆಯ ಹಾದಿಯನ್ನು ಸುಗಮಗೊಳಿಸಿದೆ.

'ಹಾಗಾಗಿ, ಡಿಸೆಂಬರ್‌ನಲ್ಲಿ ನಡೆಯುವ ಎಂಪಿಸಿ ಸಭೆಯಲ್ಲಿ ರೆಪೊ ದರ ಪರಿಷ್ಕರಣೆ ಮಾಡುವ ಸಾಧ್ಯತೆ ಇದೆ' ಎಂದು ಹಣಕಾಸು ತಜ್ಞರು ಹೇಳಿದ್ದಾರೆ.

2023ರ ಫೆಬ್ರುವರಿಯಲ್ಲಿ ನಡೆದ ಸಭೆಯಲ್ಲಿ ರೆಪೊ ದರವನ್ನು ಶೇ 6.25ರಿಂದ ಶೇ 6.5ಕ್ಕೆ ಹೆಚ್ಚಿಸಲಾಗಿತ್ತು. ಇಲ್ಲಿಯವರೆಗೂ ಯಾವುದೇ ಬದಲಾವಣೆ ಮಾಡಿಲ್ಲ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಶೇ 0.50ರಷ್ಟು ಬಡ್ಡಿದರವನ್ನು ಕಡಿತಗೊಳಿಸಿದೆ.

ಆಹಾರ ಹಣದುಬ್ಬರ ಇಳಿಕೆ: 'ಸಭೆಯು ತನ್ನ ಆರ್ಥಿಕ ನೀತಿಯ ನಿಲುವಿನಲ್ಲಿ ಬದಲಾವಣೆ ಮಾಡಿದೆ. ಆದರೆ, ನಿಗದಿತ ಗುರಿಯೊಳಗೆ ಹಣದುಬ್ಬರ ನಿಯಂತ್ರಿಸುವತ್ತ ಗಮನ ಹರಿಸಲಿದೆ' ಎಂದು ಸಭೆಯ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದರು. 'ಮುಂಬರುವ ತಿಂಗಳುಗಳಲ್ಲಿ ಆಹಾರ ಪದಾರ್ಥಗಳ ಬೆಲೆ ಇಳಿಕೆಯಾಗುವ ನಿರೀಕ್ಷೆಯಿದೆ. ಸರಕು ಮತ್ತು ಸೇವೆಗಳ ವೆಚ್ಚದಲ್ಲಿನ ಬದಲಾವಣೆಯ ಸಂಕೇತವಾಗಿರುವ ಕೋರ್ ಹಣದುಬ್ಬರವೂ ಇಳಿಕೆಯಾಗಲಿದೆ' ಎಂದರು.

'ಆರ್‌ಬಿಐನ ಅತಿಹೆಚ್ಚು ಬಡ್ಡಿದರ ನೀತಿಯು ಆರ್ಥಿಕ ಬೆಳವಣಿಗೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಬೆಳವಣಿಗೆಗೆ ಅಡ್ಡಿಪಡಿಸಿರುವ ಯಾವುದೇ ಸಾಕ್ಷ್ಯಗಳಿಲ್ಲ. ಕಳೆದ 18 ತಿಂಗಳ ಅವಧಿಯಲ್ಲಿ ಆರ್ಥಿಕ ಚಟುವಟಿಕೆಗಳು ಸದೃಢಗೊಂಡಿವೆ' ಎಂದರು.

ಚಿಲ್ಲರೆ ಹಣದುಬ್ಬರ ಇಳಿಕೆಯ ಪಥದಲ್ಲಿದೆ. ಇದರಿಂದ ಸಭೆಯ ನಿಲುವು ಬದಲಾಗಿದೆ. ಆದರೆ, ಈಗಲೇ ರೆಪೊ ದರ ಇಳಿಕೆ ಬಗ್ಗೆ ಮಾತನಾಡಲು ಸಾಧ್ಯವಿಲ್ಲ

ಶಕ್ತಿಕಾಂತ ದಾಸ್, ಆರ್‌ಬಿಐ ಗವರ್ನರ್

'ಚಿಲ್ಲರೆ ಹಣದುಬ್ಬರಕ್ಕೆ ಕಡಿವಾಣ'

ಚಿಲ್ಲರೆ ಹಣದುಬ್ಬರದಲ್ಲೂ ಯಥಾಸ್ಥಿತಿ ಕಾಯ್ದುಕೊಂಡಿದ್ದು, 2024–25ನೇ ಆರ್ಥಿಕ ವರ್ಷದಲ್ಲಿ ಶೇ 4.5ರಷ್ಟು ದಾಖಲಾಗಲಿದೆ ಎಂದು ಹೇಳಿದೆ.

ಆರ್‌ಬಿಐ ಬೆಲೆಯ ಸ್ಥಿತಿಗತಿಯನ್ನು ಮೇಲ್ವಿಚಾರಣೆ ಮಾಡುತ್ತಿದೆ. 'ಹಣದುಬ್ಬರದ ಕುದುರೆ'ಯನ್ನು ಕಟ್ಟಿಹಾಕುವ ಅಗತ್ಯವಿದೆ ಎಂದು ಶಕ್ತಿಕಾಂತ ದಾಸ್ ಪ್ರತಿಪಾದಿಸಿದ್ದಾರೆ.

ನಿಗದಿತ ಮಿತಿಯೊಳಗೆ ವಾರ್ಷಿಕ ಹಣದುಬ್ಬರ ದರ ನಿಯಂತ್ರಿಸುವುದು ಆರ್‌ಬಿಐನ ಗುರಿಯಾಗಿದೆ. ಇದಕ್ಕೆ ಅನುಗುಣವಾಗಿ ವಿತ್ತೀಯ ನೀತಿಯನ್ನು ಸರಿಹೊಂದಿಸುತ್ತದೆ. 2016ರಿಂದಲೂ ಇದೇ ನೀತಿ ಅನುಸರಿಸಲಾಗುತ್ತಿದೆ. ಇದು 21ನೇ ಶತಮಾನದ ರಚನಾತ್ಮಕ ಸುಧಾರಣಾ ಕ್ರಮವಾಗಿದೆ ಎಂದು ಹೇಳಿದ್ದಾರೆ.

ಜಿಡಿಪಿ ಪರಿಷ್ಕರಣೆ ಇಲ್ಲ

ಹಣಕಾಸು ನೀತಿ ಸಮಿತಿ ಸಭೆಯು ಜಿಡಿಪಿ ಬೆಳವಣಿಗೆಯ ಮುನ್ನೋಟವನ್ನು ಪರಿಷ್ಕರಣೆ ಮಾಡಿಲ್ಲ. 2024–25ನೇ ಆರ್ಥಿಕ ವರ್ಷದಲ್ಲಿ ಶೇ 7.2ರಷ್ಟು ಪ್ರಗತಿ ಕಾಣಲಿದೆ ಎಂದು ಈ ಹಿಂದಿನ ಸಭೆಯಲ್ಲಿ ಅಂದಾಜಿಸಿತ್ತು. ಈ ಸಭೆಯಲ್ಲೂ ಯಥಾಸ್ಥಿತಿ ಕಾಯ್ದುಕೊಂಡಿದೆ.

ಜಿಡಿಪಿಯು ಮೊದಲ ತ್ರೈಮಾಸಿಕದಲ್ಲಿ 15 ತ್ರೈಮಾಸಿಕಗಳ ಕನಿಷ್ಠ ಮಟ್ಟವಾದ ಶೇ 6.7ರಷ್ಟು ದಾಖಲಾಗಿದೆ.

ಷೇರುಪೇಟೆ ಕುಸಿತ

ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಬೆನ್ನಲ್ಲೇ ಬುಧವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಕುಸಿತ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 167 ಅಂಶ ಇಳಿಕೆ ಕಂಡು 81,467 ಅಂಶಗಳಲ್ಲಿ ಸ್ಥಿರಗೊಂಡಿತು. ಆರಂಭಿಕ ವಹಿವಾಟಿನಲ್ಲಿ 684 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 31 ಅಂಶ ಇಳಿಕೆ ಕಂಡು, 24,981 ಅಂಶಗಳಲ್ಲಿ ಮುಕ್ತಾಯಗೊಂಡಿತು.

ಯುಪಿಐ ಲೈಟ್ ವ್ಯಾಲೆಟ್ ಮಿತಿ ಏರಿಕೆ

ತ್ವರಿತ ಪಾವತಿ ವ್ಯವಸ್ಥೆಗೆ ಉತ್ತೇಜನ ನೀಡಲು ಯುಪಿಐ ಲೈಟ್ ವ್ಯಾಲೆಟ್ ಮಿತಿಯನ್ನು ₹5 ಸಾವಿರಕ್ಕೆ ಮತ್ತು ಪ್ರತಿ ವಹಿವಾಟಿನ ಮಿತಿಯನ್ನು ₹1 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಈ ಮೊದಲು ಪ್ರತಿ ವಹಿವಾಟಿನ ಮಿತಿ ₹500 ಇತ್ತು. ಯುಪಿಐ ಲೈಟ್ ವ್ಯಾಲೆಟ್ ಮಿತಿಯನ್ನು ₹2 ಸಾವಿರಕ್ಕೆ ನಿಗದಿಪಡಿಸಲಾಗಿತ್ತು.

ಯುಪಿಐ123ಪೇ (ಫೀಚರ್ ಫೋನ್) ಸೇವೆಯಲ್ಲಿನ ಪ್ರತಿ ವರ್ಗಾವಣೆ ಮಿತಿಯನ್ನು ₹5 ಸಾವಿರದಿಂದ ₹10 ಸಾವಿರಕ್ಕೆ ಹೆಚ್ಚಿಸಲಾಗಿದೆ.

15ಕ್ಕೆ ಹುಂಡೈ ಐಪಿಒ ಆರಂಭ

ನವದೆಹಲಿ (ಪಿಟಿಐ): ದಕ್ಷಿಣ ಕೊರಿಯಾದ ವಾಹನ ತಯಾರಿಕಾ ಕಂಪನಿ ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್‌ನ (ಎಚ್‌ಎಂಐಎಲ್) ಆರಂಭಿಕ ಸಾರ್ವಜನಿಕ ಕೊಡುಗೆಯು (ಐಪಿಒ) ಅಕ್ಟೋಬರ್ 15ರಿಂದ ಶುರುವಾಗಲಿದೆ.

ಪ್ರತಿ ಷೇರಿನ ಬೆಲೆಯನ್ನು ₹1,865 ರಿಂದ ₹1,960ಕ್ಕೆ ನಿಗದಿಪಡಿಸಲಾಗಿದೆ. ಅಕ್ಟೋಬರ್ 15ರಂದು ಚಂದಾದಾರಿಕೆ ಆರಂಭವಾಗಲಿದ್ದು, 17ರಂದು ಮುಕ್ತಾಯಗೊಳ್ಳಲಿದೆ. ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್) 14ರಂದು ಬಿಡ್ ಸಲ್ಲಿಸಬಹುದಾಗಿದೆ ಎಂದು ಕಂಪನಿಯು ಬುಧವಾರ ತಿಳಿಸಿದೆ.

ಆಫರ್ ಫಾರ್ ಸೇಲ್ (ಒಎಫ್‌ಎಸ್) ಮೂಲಕ 14.21 ಕೋಟಿ ಈಕ್ವಿಟಿ ಷೇರು ಮಾರಾಟಕ್ಕೆ ಕಂಪನಿಯು ಮುಂದಾಗಿದೆ. ಆ ಮೂಲಕ ₹27,870 ಕೋಟಿ ಬಂಡವಾಳ ಸಂಗ್ರಹಕ್ಕೆ ನಿರ್ಧರಿಸಿದೆ.

ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಐಪಿಒ ಮೂಲಕ ₹21 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿತ್ತು. ಸದ್ಯ ಹುಂಡೈ ಕಂಪನಿಯು ಐಪಿಒ ಮೂಲಕ ಅತಿಹೆಚ್ಚು ಬಂಡವಾಳ ಸಂಗ್ರಹಿಸುತ್ತಿದೆ.

ಕೋವಿಡ್: ₹769 ಕೋಟಿ ಅಕ್ರಮ

ಒಂದನೇ ಪುಟದಿಂದ...

ನ್ಯಾ. ಡಿಕುನ್ಹಾ ಆಯೋಗವು 11 ಸಂಪುಟಗಳಲ್ಲಿ ಮಧ್ಯಂತರ ವರದಿಯನ್ನು ನೀಡಿದೆ. ಇನ್ನೂ ಬಿಬಿಎಂಪಿ ನಾಲ್ಕು ವಲಯಗಳ ಮತ್ತು ರಾಜ್ಯದ ಎಲ್ಲ 31 ಜಿಲ್ಲೆಗಳ ವರದಿ ಸಲ್ಲಿಸಬೇಕಿದೆ. ಈ ವರದಿಗೆ ಸಂಬಂಧಿಸಿದಂತೆ ಆಯೋಗವು ಇಲಾಖೆಗಳಿಂದ ಸುಮಾರು 55 ಸಾವಿರ ಕಡತಗಳನ್ನು ಪಡೆದು ಪರಿಶೀಲಿಸಿದೆ. ಆ ಕಡತಗಳನ್ನು ವಾಪಸ್ ಪಡೆದು ವರದಿಯಲ್ಲಿ ವಿವರಿಸಿದ ಲೋಪದೋಷಗಳಿಗೆ ಕಾರಣರಾದ ವಿವಿಧ ವೃಂದಗಳ ಅಧಿಕಾರಿ, ಸಿಬ್ಬಂದಿ ವಿರುದ್ಧ ದೋಷಾರೋಪಣೆ ಪಟ್ಟಿ ತಯಾರಿಸಬೇಕಿದೆ.

ಇಲಾಖೆಗಳ ಅಧಿಕಾರಿ, ನೌಕರರ ವಿರುದ್ಧ ಆರೋಪಗಳು ಇರುವುದರಿಂದ ತನಿಖೆಗೆ ಪ್ರತ್ಯೇಕ ಕೋಶ ರಚಿಸುವ ಅಗತ್ಯವಿದೆ ಎಂದು ಸಚಿವ ಸಂಪುಟಕ್ಕೆ ಆರೋಗ್ಯ ಇಲಾಖೆ ಮಂಡಿಸಿದ ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ ಎಂದೂ ಗೊತ್ತಾಗಿದೆ.

ಚಿನ್ನದ ದರ ₹600 ಬೆಳ್ಳಿ ₹2,800 ಇಳಿಕೆ

ನವದೆಹಲಿ (ಪಿಟಿಐ): ದೇಶೀಯ ಆಭರಣ ತಯಾರಕರು ಮತ್ತು ಗ್ರಾಹಕರಿಂದ ಬೇಡಿಕೆ ಕಡಿಮೆಯಾಗಿರುವುದರಿಂದ ಚಿನ್ನ ಮತ್ತು ಬೆಳ್ಳಿ ಧಾರಣೆಯು ಬುಧವಾರದ ವಹಿವಾಟಿನಲ್ಲಿ ಇಳಿಕೆಯಾಗಿದೆ.

ಇಲ್ಲಿನ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ದರವು ₹600 ಇಳಿಕೆಯಾಗಿ, ₹77,700ರಂತೆ ಮಾರಾಟವಾಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹2,800 ಕಡಿಮೆಯಾಗಿ ₹91,200ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರವು ₹79 ಸಾವಿರ ಮತ್ತು ಕೆ.ಜಿ ಬೆಳ್ಳಿ ದರವು ₹94,100 ಆಗಿದೆ.

ಕಾಶ್ಮೀರ: ಅಪಹರಣವಾಗಿದ್ದ ಯೋಧನ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯಲ್ಲಿ ಭಯೋತ್ಪಾದಕರಿಂದ ಅಪಹರಿಸಲ್ಪಟ್ಟಿದ್ದ ಯೋಧರೊಬ್ಬರ ಮೃತದೇಹ ಪತ್ತೆಯಾಗಿದೆ. ಮೃತದೇಹದ ಮೇಲೆ ಗುಂಡೇಟುಗಳಿಂದಾದ ಗಾಯದ ಗುರುತುಗಳಿವೆ. ಮತ್ತೊಬ್ಬ ಯೋಧ ಗಾಯಗೊಂಡಿದ್ದರೂ ಉಗ್ರರಿಂದ ತಪ್ಪಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ.

ಅಕ್ಟೋಬರ್ 8ರಂದು ಸೇನೆ ಹಾಗೂ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಜಂಟಿಯಾಗಿ ನಡೆಸಿದ ಉಗ್ರರ ವಿರುದ್ಧದ ಕಾರ್ಯಾಚರಣೆ ವೇಳೆ ಸೇನೆಯ 161ನೇ ಘಟಕದ ಇಬ್ಬರು ಸೈನಿಕರನ್ನು ಭಯೋತ್ಪಾದರು ಅಪಹರಿಸಿದ್ದರು. ಈ ಪೈಕಿ ಒಬ್ಬರು ತಪ್ಪಿಸಿಕೊಂಡಿದ್ದಾರೆ.

ಇನ್ನೊಬ್ಬ ಯೋಧ ಹಿಲಾಲ್ ಅಹ್ಮದ್ ಭಟ್ ಅವರ ಮೃತದೇಹ ಅನಂತ್‌ನಾಗ್‌ನ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಗಾಯಗೊಂಡ ಯೋಧನಿಗೆ ಅಗತ್ಯ ಚಿಕಿತ್ಸೆ ನೀಡಲಾಗಿದ್ದು, ಅವರ ಆರೋಗ್ಯ ಸ್ಥಿರವಾಗಿದೆ ಎಂದು ತಿಳಿಸಿವೆ.

ಹೊಸ ನಿಸಾನ್ ಮ್ಯಾಗ್ನೈಟ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಸಾನ್ ಮೋಟರ್ ಇಂಡಿಯಾ ಕಂಪನಿಯು, ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಹೊಸ ನಿಸಾನ್ ಮ್ಯಾಗ್ನೈಟ್ ಕಾರನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ವಾಹನದ ಎಕ್ಸ್ ಷೋ ರೂಂ ಬೆಲೆ ₹5.99 ಲಕ್ಷ ಆಗಿದ್ದು, 20ಕ್ಕೂ ಹೆಚ್ಚು ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಚೆನ್ನೈ ಘಟಕದಲ್ಲಿ ತಯಾರಿಸಲಾದ ಈ ವಾಹನವು ಈಗಾಗಲೇ ಮಾರುಕಟ್ಟೆಯಲ್ಲಿ ಗ್ರಾಹಕರ ಖರೀದಿಗೆ ಲಭ್ಯವಿದೆ. 65ಕ್ಕೂ ಹೆಚ್ಚು ದೇಶಗಳಿಗೆ ರಫ್ತು ಮಾಡಲಾಗುವುದು ಎಂದು ಕಂಪನಿ ತಿಳಿಸಿದೆ.

ರಿಮೋಟ್ ಎಂಜಿನ್ ಸ್ಟಾರ್ಟ್, ನಿಸಾನ್ ಅರೌಂಡ್ ವ್ಯೂ ಮಾನಿಟರ್, ಆಂಡ್ರಾಯ್ಡ್ ಆಟೊ ಮತ್ತು ಆ್ಯಪಲ್ ಕಾರ್‌ಪ್ಲೇಯೊಂದಿಗೆ ಟಚ್‌ಸ್ಕ್ರೀನ್ ಇನ್ಫೋಟೈನ್‌ಮೆಂಟ್ ಸಿಸ್ಟಂ ಇತ್ಯಾದಿ ತಾಂತ್ರಿಕ ವೈಶಿಷ್ಟ್ಯಗಳನ್ನು ಒಳಗೊಂಡಿದೆ.

ಆರು ಏರ್‌ಬ್ಯಾಗ್‌ಗಳು, ಎಲೆಕ್ಟ್ರಾನಿಕ್ ಸ್ಟೆಬಿಲಿಟಿ ಕಂಟ್ರೋಲ್, ಟ್ರಾಕ್ಷನ್ ಕಂಟ್ರೋಲ್ ಸಿಸ್ಟಂ, ಹೈಡ್ರಾಲಿಕ್ ಬ್ರೇಕ್ ಅಸಿಸ್ಟ್ ಸೇರಿದಂತೆ 40ಕ್ಕೂ ಹೆಚ್ಚು ಪ್ರಮಾಣಿತ ಸುರಕ್ಷತಾ ವೈಶಿಷ್ಟ್ಯ ಹೊಂದಿದೆ.

6 ಮೊನೊಟೋನ್ ಮತ್ತು 5 ಡ್ಯುಯಲ್-ಟೋನ್ ಸೇರಿ 11 ಬಣ್ಣಗಳಲ್ಲಿ ಲಭ್ಯವಿದೆ. ಪ್ರೀಮಿಯಂ ಮತ್ತು ಐಷಾರಾಮಿ ಇಂಟೀರಿಯರ್‌ಗಳನ್ನು ಒಳಗೊಂಡಿದೆ. ಪ್ರತಿ ಲೀಟರ್ ಪೆಟ್ರೋಲ್‌ಗೆ 20 ಕಿ.ಮೀ ಮೈಲೇಜ್ ನೀಡಲಿದೆ ಎಂದು ತಿಳಿಸಿದೆ.

ನಿಸಾನ್ ಮೋಟರ್ ಇಂಡಿಯಾ ಕಂಪನಿಯು ನವದೆಹಲಿಯಲ್ಲಿ ನಿಸಾನ್ ಮ್ಯಾಗ್ನೈಟ್ ಕಾರನ್ನು ಬಿಡುಗಡೆ ಮಾಡಿತು. ಈ ವೇಳೆ ಕಂಪನಿಯ ಅಧಿಕಾರಿಗಳು ಇದ್ದರು

ರಸಾಯನ ವಿಜ್ಞಾನದಲ್ಲಿ ಮೂವರಿಗೆ ನೊಬೆಲ್

ಸ್ಟಾಕ್‌ಹೋಮ್ (ಎಎಫ್‌ಪಿ): ಅಮೆರಿಕದ ಡೇವಿಡ್ ಬೇಕರ್ ಮತ್ತು ಜಾನ್ ಜಂಪರ್ ಹಾಗೂ ಬ್ರಿಟನ್ನಿನ ಡೆಮಿಸ್ ಹಸ್ಸಾಬಿಸ್ ಅವರಿಗೆ ರಸಾಯನ ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿಯನ್ನು ಬುಧವಾರ ಘೋಷಿಸಲಾಗಿದೆ.

ಕಂಪ್ಯೂಟಿಂಗ್ ಹಾಗೂ ಕೃತಕ ಬುದ್ಧಿಮತ್ತೆಯ (ಎ.ಐ) ನೆರವಿನಿಂದ ಪ್ರೊಟೀನ್‌ಗಳ ರಹಸ್ಯವನ್ನು ತಿಳಿಸಿದ ಕಾರಣಕ್ಕೆ ಅವರನ್ನು ಈ ಅತ್ಯುನ್ನತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಜೀವದ ಮೂಲ ಘಟಕಗಳಂತೆ ಇರುವ ಪ್ರೊಟೀನ್‌ಗಳ ಸ್ವರೂಪವನ್ನು ಕಂಡುಹಿಡಿದಿದ್ದಕ್ಕಾಗಿ ಅವರನ್ನು ನೊಬೆಲ್ ಗೌರವಕ್ಕೆ ಆಯ್ಕೆ ಮಾಡಲಾಗಿದೆ. ಅವರು ಮಾಡಿರುವ ಕೆಲಸಗಳು ಹಲವು ಕ್ಷೇತ್ರಗಳಲ್ಲಿ ನೆರವಿಗೆ ಬರುವ ಸಾಮರ್ಥ್ಯ ಹೊಂದಿವೆ ಎಂದು ತೀರ್ಪುಗಾರರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ರಸಾಯನ ವಿಜ್ಞಾನದ ನೊಬೆಲ್ ಪ್ರಶಸ್ತಿಯನ್ನು ಬೇಕರ್, ಹಸ್ಸಾಬಿಸ್ ಮತ್ತು ಜಂಪರ್ ನಡುವೆ ಹಂಚಲಾಗಿದೆ ಎಂದು ನೊಬೆಲ್ ಸಮಿತಿಯು ತಿಳಿಸಿದೆ. 'ಅಸಾಧ್ಯ ಎನ್ನಬಹುದಾದ, ಹೊಸ ಬಗೆಯ ಪ್ರೊಟೀನ್‌ಗಳನ್ನು ರೂಪಿಸುವ ಕೆಲಸದಲ್ಲಿ ಡೇವಿಡ್ ಬೇಕರ್ ಅವರು ಯಶಸ್ಸು ಕಂಡಿದ್ದಾರೆ' ಎಂದು ಸಮಿತಿಯು ಹೇಳಿದೆ.

ಬೇಕರ್ ಅವರ ಕೆಲಸಗಳು ಔಷಧ, ಲಸಿಕೆ, ನ್ಯಾನೊವಸ್ತು ಮತ್ತು ಅತಿಸಣ್ಣ ಸಂವೇದಕವಾಗಿ ಬಳಸಬಹುದಾದ ಪ್ರೊಟೀನ್‌ಗಳ ಸೃಷ್ಟಿಗೆ ದಾರಿ ಮಾಡಿಕೊಟ್ಟಿವೆ ಎಂದು ಕೂಡ ಸಮಿತಿಯು ಹೇಳಿದೆ.

ಪ್ರೊಟೀನುಗಳ ಸಂಕೀರ್ಣ ಸ್ವರೂಪವನ್ನು ಅಂದಾಜಿಸುವಲ್ಲಿ 50 ವರ್ಷಗಳಿಂದ ಇದ್ದ ಸಮಸ್ಯೆಯನ್ನು ಪರಿಹರಿಸಲು ಹಸ್ಸಾಬಿಸ್ ಮತ್ತು ಜಂಪರ್ ಅವರು ಎ.ಐ. ಮಾದರಿಯನ್ನು ಅಭಿವೃದ್ಧಿಪಡಿಸಿದ್ದಾರೆ ಎಂದು ಅದು ತಿಳಿಸಿದೆ.

ಡೇವಿಡ್ ಬೇಕರ್

ಡೆಮಿಸ್ ಹಸ್ಸಾಬಿಸ್

ಸಾರವರ್ಧಿತ ಅಕ್ಕಿ: 2028ರ ವರೆಗೆ ವಿತರಣೆಗೆ ಕೇಂದ್ರ ಸಂಪುಟ ಅಸ್ತು

ಒಂದನೇ ಪುಟದಿಂದ...

ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕೇಂದ್ರ ವಾರ್ತಾ ಹಾಗೂ ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, 'ರಕ್ತಹೀನತೆ ಹಾಗೂ ಸೂಕ್ಷ್ಮ ಪೋಷಕಾಂಶಗಳ ಕೊರತೆ ನೀಗಿಸುವ ಉದ್ದೇಶದಿಂದ ಈ ಯೋಜನೆ ಮುಂದುವರಿಸಲು ನಿರ್ಧರಿಸಲಾಗಿದೆ. ಇದಕ್ಕೆ ₹17,082 ಕೋಟಿ ವೆಚ್ಚವಾಗಲಿದೆ. ಸಂಪೂರ್ಣ ಮೊತ್ತವನ್ನು ಕೇಂದ್ರ ಸರ್ಕಾರವೇ ಭರಿಸಲಿದೆ' ಎಂದರು.

'2019 ಮತ್ತು 2021ರ ನಡುವೆ ನಡೆದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ, ದೇಶದಲ್ಲಿ ರಕ್ತಹೀನತೆಯು ಪ್ರಮುಖ ಸಮಸ್ಯೆಯಾಗಿದೆ. ದೇಶದಲ್ಲಿ ಶೇ 65ರಷ್ಟು ಜನರು ಅಕ್ಕಿಯನ್ನು ಪ್ರಧಾನ ಆಹಾರವಾಗಿ ಸೇವಿಸುತ್ತಿದ್ದಾರೆ' ಎಂದು ಹೇಳಿದರು.

ಭಾರತದ ಆಹಾರ ಸುರಕ್ಷತೆ ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ಮಾನದಂಡದ ಅನ್ವಯ ಅಕ್ಕಿ ಹಿಟ್ಟಿಗೆ ಕಬ್ಬಿಣಾಂಶ, ಫೋಲಿಕ್ ಆಮ್ಲ, ವಿಟಮಿನ್ ಬಿ-12 ಅಂಶ ಸೇರಿಸಿ ಸಾರವರ್ಧಿತ ಅಕ್ಕಿ ತಯಾರಿಸಲಾಗುತ್ತದೆ.

75ನೇ ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದಲ್ಲಿ ಪೌಷ್ಟಿಕಾಂಶದ ಭದ್ರತೆಯ ಅಗತ್ಯತೆ ಬಗ್ಗೆ ಒತ್ತಿ ಹೇಳಿದ್ದರು. ಸಾರ್ವಜನಿಕ ವಿತರಣಾ ವ್ಯವಸ್ಥೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಪಿಎಂ ಪೋಷಣ್ ಅಭಿಯಾನ ಸೇರಿ ಇತರೆ ಕಲ್ಯಾಣ ಯೋಜನೆಗಳಡಿ ಸಾರವರ್ಧಿತ ಅಕ್ಕಿ ವಿತರಣೆಗೆ ಸರ್ಕಾರ ಕ್ರಮಕೈಗೊಳ್ಳುವುದಾಗಿ ಪ್ರಕಟಿಸಿತ್ತು.

2022ರ ಏಪ್ರಿಲ್‌ನಲ್ಲಿ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು ಹಂತ ಹಂತವಾಗಿ ಸಾರವರ್ಧಿತ ಅಕ್ಕಿ ವಿತರಣೆಗೆ ನಿರ್ಧರಿಸಿತ್ತು. ಪ್ರಸಕ್ತ ವರ್ಷದ ಮಾರ್ಚ್ ಅಂತ್ಯದವರೆಗೆ ಮೂರು ಹಂತದಲ್ಲಿ ಈ ಅಕ್ಕಿ ವಿತರಣೆಯ ನಿಗದಿತ ಗುರಿಯನ್ನು ಯಶಸ್ವಿಯಾಗಿ ಪೂರೈಸಲಾಗಿದೆ.

ಎನ್‌ಎಂಎಚ್‌ಸಿ ಅಭಿವೃದ್ಧಿ: ಗುಜರಾತ್‌ನ ಲೋಥಾಲ್‌ನಲ್ಲಿರುವ 'ರಾಷ್ಟ್ರೀಯ ಸಾಗರ ಪರಂಪರೆಯ ಸಂಕೀರ್ಣ'ದ (ಎನ್‌ಎಂಎಚ್‌ಸಿ) ಅಭಿವೃದ್ಧಿಗೆ ಸಂಪುಟ ಒಪ್ಪಿಗೆ ನೀಡಿದೆ.

ಈ ಯೋಜನೆಯು ಎರಡು ಹಂತಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಸಚಿವರು ತಿಳಿಸಿದರು.

ರಾಜಸ್ಥಾನ ಹಾಗೂ ಪಂಜಾಬ್‌ನ ಗಡಿ ಪ್ರದೇಶಗಳಲ್ಲಿ ₹4,406 ಕೋಟಿ ವೆಚ್ಚದಲ್ಲಿ 2,280 ಕಿ.ಮೀ ರಸ್ತೆ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ
Astrology

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ
Travel

ಪ್ರವಾಸ 10/11/2024 ತಮಿಳುನಾಡು, ಕೇರಳ 30/11/2024 ಜಾರ್ಖಂಡ್ ವೈದ್ಯನಾಥ ಕಾಶಿ ಅಯೋಧ್ಯೆ 16/12/24 ಅಖಂಡ ಗುಜರಾತ್ ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು: 8496044942

★ಶ್ರೇಯಸ್ ಟೂರ್ಸ್★ 20.11.2024 12/15/21ದಿನಗಳು ಈಶಾನ್ಯ ಭಾರತ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್ ಮಣಿಪುರ,ತ್ರಿಪುರ,ಮಿಜೋರಾಂ 08.11.2024 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಚಲಿಂಗ್. 01.12.2024 13ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಮಯ್ಯಾರ್ ಸಹಿತ). 20.12.2024 9ದಿನಗಳು ವಿಜಯವಾಡ,ಮಂಗಳಗಿರಿ ಪಂಚರಾಮ,ಪೀಠಾಪುರಂ ಅನ್ನಾವರಂ,ವಿಶಾಖಪಟ್ಟಣ ಅರಕು,ಶ್ರೀಕೂರ್ಮಂ 20.10.2024,21.11.2024, 20.12.2024 7ದಿನಗಳು ಕಾಶಿ ನೈಮಿಷ್ಯಾರಣ್ಯ,ಪ್ರಯಾಗ್ ಗಯಾ,ದೇವ್‌ಘರ್,ನಳಂದ 01.12.2024 10ದಿನಗಳು ಅಖಂಡ ರಾಜಸ್ಥಾನ ಪ್ರವಾಸ. 21.11.2024,20.12.2024 12ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ (ಬುಜ್‌ಕಚ್ ಸಹಿತ)(ಉಜ್ಜೈನಿ ಓಂಕಾರ್ ಸಹಿತ).9743351212/ 9206979202

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್: ಸತತ ಮೂರನೇ ಬಾರಿ ಪದಕ ಗೆಲುವಿನತ್ತ ಪುರುಷರ ತಂಡ

ಭಾರತದ ಮಹಿಳೆಯರಿಗೆ ಐತಿಹಾಸಿಕ ಕಂಚು

ಅಸ್ತಾನಾ (ಪಿಟಿಐ): ಭಾರತದ ಮಹಿಳೆಯರ ಟೇಬಲ್ ಟೆನಿಸ್ ತಂಡವು ಬುಧವಾರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಐತಿಹಾಸಿಕ ಕಂಚಿನ ಸಾಧನೆ ಮಾಡಿದೆ. ಪುರುಷರ ತಂಡವು ಸೆಮಿಫೈನಲ್ ಪ್ರವೇಶಿಸುವ ಮೂಲಕ ಸತತ ಮೂರನೇ ಬಾರಿ ಕನಿಷ್ಠ ಕಂಚಿನ ಪದಕವನ್ನು ಖಚಿತಪಡಿಸಿಕೊಂಡಿದೆ.

ಭಾರತದ ವನಿತೆಯರು ಸೆಮಿಫೈನಲ್ ಹಣಾಹಣಿಯಲ್ಲಿ 1–3ರಿಂದ ಜಪಾನ್ ವಿರುದ್ಧ ಸೋತು ಕಂಚಿನ ಪದಕ ಪಡೆದರು. ಏಷ್ಯನ್ ಚಾಂಪಿಯನ್‌ಷಿಪ್‌ನ ಮಹಿಳಾ ವಿಭಾಗದಲ್ಲಿ ಭಾರತಕ್ಕೆ ದಕ್ಕಿದ ಚೊಚ್ಚಲ ಪದಕ ಇದಾಗಿದೆ.

ಮಂಗಳವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಮಹಿಳೆಯರು 3–2ರಿಂದ ಪ್ಯಾರಿಸ್ ಒಲಿಂಪಿಕ್ಸ್ ಕಂಚು ವಿಜೇತ ದಕ್ಷಿಣ ಕೊರಿಯಾ ತಂಡವನ್ನು ಮಣಿಸುವ ಮೂಲಕ ಪದಕ ಖಚಿತ ಪಡಿಸಿಕೊಂಡಿದ್ದರು.

ಭಾರತದ ಮಣಿಕಾ ಬಾತ್ರಾ

ಎರಡನೇ ಶ್ರೇಯಾಂಕದ ಕೊರಿಯಾ ವಿರುದ್ಧ ಪ್ರಬಲ ಪ್ರದರ್ಶನ ತೋರಿದ್ದ ಭಾರತ, ನಾಲ್ಕನೇ ಶ್ರೇಯಾಂಕದ ಜಪಾನ್ ವಿರುದ್ಧ ಮುಗ್ಗರಿಸಿತು. ಅಚ್ಚರಿಯೆಂದರೆ ಭಾರತದ ಅಗ್ರಮಾನ್ಯ ಆಟಗಾರ್ತಿ ಶ್ರೀಜಾ ಅಕುಲಾ ಬೆಂಚ್‌ನಲ್ಲಿ ಉಳಿದಿದ್ದರು.

ಹಿಂದಿನ ಸುತ್ತಿನಲ್ಲಿ ಮಿಂಚಿದ್ದ ಐಹಿಕಾ ಮುಖರ್ಜಿ, ವಿಶ್ವದ ಏಳನೇ ಕ್ರಮಾಂಕದ ಮಿವಾ ಹರಿಮೊಟೊ ಅವರಿಗೆ ಪ್ರಬಲ ಪೈಪೋಟಿ ನೀಡಿ 8-11, 11-9, 8-11, 13-11, 7-4ರಿಂದ ಮಣಿದರು.

ಎರಡನೇ ಪಂದ್ಯದಲ್ಲಿ ಮಣಿಕಾ ಬಾತ್ರಾ 11-6, 11-5, 11-8ರಿಂದ ವಿಶ್ವದ 17ನೇ ರ‍್ಯಾಂಕ್‌ನ ಸತ್ಸುಕಿ ಓಡೋ ವಿರುದ್ಧ ಜಯ ಸಾಧಿಸುವುದರೊಂದಿಗೆ ತಂಡದ ಸ್ಕೋರನ್ನು 1-1 ಸಮಬಲಗೊಳಿಸಿದರು. ಆದರೆ, ಮೂರನೇ ಪಂದ್ಯದಲ್ಲಿ ಸುತೀರ್ಥ ಮುಖರ್ಜಿ 9–11, 4–11, 13–15 ರಿಂದ ಮಿಮಾ ಇಟೊ ಅವರಿಗೆ ಶರಣಾದರು.

ನಿರ್ಣಾಯಕ ನಾಲ್ಕನೇ ಪಂದ್ಯದಲ್ಲಿ ಮಣಿಕಾ ಅವರಿಗೆ ಹಿಂದಿನ ಫಾರ್ಮ್ ಅನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮಿವಾ ವಿರುದ್ಧ 11-6, 6-11, 11-2, 11-3ರಿಂದ ಮಣಿಕಾ ಸೋಲುವುದರಿಂದ ಭಾರತದ ಅಭಿಯಾನ ಕಂಚಿನೊಂದಿಗೆ ಮುಗಿಯಿತು.

ಸೆಮಿಗೆ ಪುರುಷರ ತಂಡ: ಭಾರತದ ಪುರುಷರ ತಂಡವು ಕ್ವಾರ್ಟರ್ ಫೈನಲ್‌ನಲ್ಲಿ 3–1ರಿಂದ ಕಜಕಸ್ತಾನವನ್ನು ಸೋಲಿಸಿ, ಸೆಮಿಫೈನಲ್‌ಗೆ ಲಗ್ಗೆ ಹಾಕಿತು.

ಮೊದಲ ಪಂದ್ಯದಲ್ಲಿ ವಿಶ್ವದ 60ನೇ ಕ್ರಮಾಂಕದ ಮಾನವ್ ಟಕ್ಕರ್ 11-9, 11-7, 11–6ರಿಂದ ಕಜಕಸ್ತಾನದ ಅಗ್ರಮಾನ್ಯ ಆಟಗಾರ ಕಿರಿಲ್ ಗೆರಾಸಿಮೆಂಕೊ ವಿರುದ್ಧ ಗೆಲುವು ಸಾಧಿಸಿ ಭಾರತಕ್ಕೆ ಮುನ್ನಡೆ ಒದಗಿಸಿದರು. ಆದರೆ, ಹರ್ಮೀತ್ ದೇಸಾಯಿ 6–11, 5–11, 8–11ರಿಂದ ಅಲನ್ ಕುರ್ಮಂಗಲಿಯೆವ್ ವಿರುದ್ಧ ಸೋಲುವ ಮೂಲಕ ಸ್ಕೋರ್ 1–1 ಸಮಬಲಗೊಂಡಿತು.

ಮೂರನೇ ಪಂದ್ಯದಲ್ಲಿ ಅನುಭವಿ ಶರತ್ ಕಮಲ್ 11-4, 11-7, 12-10ರಿಂದ ಐಡೋಸ್ ಕೆಂಜಿಗುಲೋವ್ ವಿರುದ್ಧ ಗೆದ್ದು ಭಾರತದ ಮುನ್ನಡೆಯನ್ನು 2–1ಕ್ಕೆ ಹೆಚ್ಚಿಸಿದರು. ನಾಲ್ಕನೇ ಪಂದ್ಯದಲ್ಲಿ ಹರ್ಮೀತ್ ಬಿರುಸಿನ ಬ್ಯಾಕ್‌ಹ್ಯಾಂಡ್‌ಗಳು ಮತ್ತು ಫೋರ್‌ಹ್ಯಾಂಡ್ ಹೊಡೆತದೊಂದಿಗೆ ಗೆರಾಸಿಮೆಂಕೊ ವಿರುದ್ಧ ಗೆಲುವು ಸಾಧಿಸುವುದರೊಂದಿಗೆ ತಂಡವು ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು.

ಭಾರತದ ಶರತ್ ಕಮಲ್ –ಪಿಟಿಐ ಚಿತ್ರ

2023 ಮತ್ತು 2021ರ ಆವೃತ್ತಿಯಲ್ಲಿ ಕಂಚು ಗೆದ್ದಿರುವ ಭಾರತ ತಂಡವು, ಈ ಬಾರಿಯೂ ಕನಿಷ್ಠ ಕಂಚಿನ ಪದಕವನ್ನು ಖಚಿತಪಡಿಸಿಕೊಂಡಿದೆ. ಚೀನಾ ತೈಪೆ ಮತ್ತು ಜಪಾನ್ ನಡುವಿನ ಪಂದ್ಯದ ವಿಜೇತ ತಂಡವನ್ನು ಭಾರತ ಗುರುವಾರ ಸೆಮಿಫೈನಲ್‌ನಲ್ಲಿ ಎದುರಿಸಲಿದೆ.

ಮಹಿಳಾ ವಿಶ್ವಕಪ್: ಸ್ಕಾಟ್ಲೆಂಡ್ ಮೇಲೆ ದಕ್ಷಿಣ ಆಫ್ರಿಕಾ ಸವಾರಿ

ದುಬೈ (ಪಿಟಿಐ): ಎಲ್ಲ ವಿಭಾಗಗಳಲ್ಲಿ ಪ್ರಾಬಲ್ಯ ಸಾದಿಸಿದ ದಕ್ಷಿಣ ಆಫ್ರಿಕಾ ತಂಡ ಮಹಿಳೆಯರ ಟಿ20 ವಿಶ್ವಕಪ್ ಪಂದ್ಯದಲ್ಲಿ ಬುಧವಾರ ಸ್ಕಾಟ್ಲೆಂಡ್ ತಂಡದ ಮೇಲೆ 80 ರನ್‌ಗಳ ಅಧಿಕಾರಯುತ ಜಯ ಪಡೆಯಿತು.

ಮೊದಲು ಆಡಿದ ದಕ್ಷಿಣ ಆಫ್ರಿಕಾ 20 ಓವರುಗಳಲ್ಲಿ 5 ವಿಕೆಟ್‌ಗೆ 166 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಉತ್ತರವಾಗಿ ಸ್ಕಾಟ್ ವನಿತೆಯರು 17.5 ಓವರುಗಳಲ್ಲಿ 86 ರನ್‌ಗಳಿಗೆ ಪತನಗೊಂಡರು. ಇಬ್ಬರಿಗಷ್ಟೇ ಎರಡಂಕಿ ಮೊತ್ತ ಗಳಿಸಲು ಸಾಧ್ಯವಾಯಿತು.

ಎಡಗೈ ಸ್ಪಿನ್ನರ್ ನೊನ್‌ಕುಲುಲೆಕೊ ಮ್ಲಾಬಾ (12ಕ್ಕೆ3) ದಕ್ಷಿಣ ಆಫ್ರಿಕಾ ಕಡೆ ಯಶಸ್ವಿ ಬೌಲರ್ ಎನಿಸಿದರೆ, ಕ್ಲೋಯೆ ಟ್ರಯಾನ್ ಮತ್ತು ನಾಡಿನ್ ಡಿ ಕ್ಲಾರ್ಕ್ ತಲಾ ಎರಡು ವಿಕೆಟ್ ಪಡೆದು ಎದುರಾಳಿಗಳ ಸದ್ದಡಗಿಸಿದರು.

ಮೂರು ಪಂದ್ಯಗಳಲ್ಲಿ ಎರಡನೇ ಗೆಲುವಿನೊಡನೆ ದಕ್ಷಿಣ ಆಫ್ರಿಕಾ ‘ಬಿ’ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ಸ್ಕಾಟ್ಲೆಂಡ್ ಕೊನೆಯ ಸ್ಥಾನದಲ್ಲಿ ನೆಲೆಸಿದೆ.

ಲೋರಾ ವೊಲ್ವಾರ್ಟ್ (40, 27ಎ) ಮತ್ತು ತಾಜ್ಮಿನ್ ಬ್ರಿಟ್ಸ್ (43, 35ಎ) ಅವರು ದಕ್ಷಿಣ ಆಫ್ರಿಕಕ್ಕೆ 7.3 ಓವರುಗಳಲ್ಲಿ 64 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ನಂತರ ಮರಿಝಾನ್ ಕ್ಯಾಪ್ 24 ಎಸೆತಗಳಲ್ಲಿ 43 ರನ್ ಸೇರಿಸಿ ರನ್ ವೇಗ ಏರಿಸಿದರು.


ಮರಿಝಾನ್ ಕ್ಯಾಪ್ ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರುಗಳಲ್ಲಿ 5 ವಿಕೆಟ್‌ಗೆ 166 (ಲೋರಾ ವೊಲ್ವಾರ್ಟ್ 40, ತಾಜ್ಮಿನ್ ಬ್ರಿಟ್ಸ್ 43, ಮರಿಝಾನ್ ಕ್ಯಾಪ್ 43); ಸ್ಕಾಟ್ಲೆಂಡ್: 17.5 ಓವರುಗಳಲ್ಲಿ 86 (ನೊನ್‌ಕುಲುಲೆಕೊ ಮ್ಲಾಬಾ 12ಕ್ಕೆ3, ಕ್ಲೋಯೆ ಟ್ರಯಾನ್ 22ಕ್ಕೆ2, ನಾಡಿನ್ ಡಿ ಕ್ಲಾರ್ಕ್ 15ಕ್ಕೆ2). ಪಂದ್ಯದ ಆಟಗಾರ್ತಿ: ಮರಿಝಾನ್ ಕ್ಯಾಪ್

ಟಿ20 ಕ್ರಿಕೆಟ್: ಹಾರ್ದಿಕ್, ರಿಂಕು ಬ್ಯಾಟಿಂಗ್ ಅಬ್ಬರ • ಬಾಂಗ್ಲಾದೇಶ ತತ್ತರ

ನಿತೀಶ್ ಮಿಂಚು: ಭಾರತಕ್ಕೆ ಸರಣಿ ಕೈವಶ

ನವದೆಹಲಿ (ಪಿಟಿಐ): ಭರವಸೆಯ ಆಟಗಾರ ನಿತೀಶ್ ಕುಮಾರ್ ರೆಡ್ಡಿ ಮತ್ತು ರಿಂಕು ಸಿಂಗ್ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಬಾಂಗ್ಲಾದೇಶ ಎದುರಿನ ಎರಡನೇ ಟಿ20 ಪಂದ್ಯವನ್ನು 86 ರನ್‌ಗಳಿಂದ ಜಯಿಸಿತು. ಇದರೊಂದಿಗೆ 2–0ಯಿಂದ ಸರಣಿಯನ್ನು ತನ್ನದಾಗಿಸಿಕೊಂಡಿತು.

ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ನಿತೀಶ್ ರೆಡ್ಡಿ (74; 34ಎಸೆತ) ಅತ್ಯಂತ ಆಕರ್ಷಕ ಬ್ಯಾಟಿಂಗ್ ಮಾಡಿದರು. 7 ಸಿಕ್ಸರ್ ಮತ್ತು 4 ಬೌಂಡರಿಗಳನ್ನು ಸಿಡಿಸಿದ ಅವರು ಪ್ರೇಕ್ಷಕರಿಗೆ ರಸದೌತಣ ನೀಡಿದರು. ಇನ್ನೊಂದೆಡೆ ರಿಂಕು (53; 29ಎ) ಅವರೂ ತಮ್ಮ ಎಂದಿನ ಬೀಸಾಟದಿಂದ ಗಮನ ಸೆಳೆದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ ಸೇರಿಸಿದ 108 ರನ್‌ಗಳಿಂದಾಗಿ ಭಾರತ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 221 ರನ್ ಗಳಿಸಿತು.

ಕಠಿಣ ಗುರಿಯನ್ನು ಬೆನ್ನಟ್ಟಿದ ಪ್ರವಾಸಿ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 135 ರನ್ ಗಳಿಸಿತು. ತಂಡದ ಮೆಹಮುದುಲ್ಲಾ (41; 39ಎ) ಒಬ್ಬರೇ ಒಂದಿಷ್ಟು ಹೋರಾಟ ಮಾಡಿದರು. ಅವರು 3 ಸಿಕ್ಸರ್ ಕೂಡ ಹೊಡೆದರು. ಆದರೆ ಉಳಿದ ಬ್ಯಾಟರ್‌ಗಳು ಭಾರತದ ಬೌಲರ್‌ಗಳ ಮುಂದೆ ಮಂಡಿಯೂರಿದರು. ಬ್ಯಾಟಿಂಗ್ ಜೊತೆಗೆ ಬೌಲಿಂಗ್‌ನಲ್ಲಿಯೂ ಮಿಂಚಿದ ನಿತೀಶ್ 2 ವಿಕೆಟ್ ಗಳಿಸಿದರು. ವರುಣ್ ಚಕ್ರವರ್ತಿ ಕೂಡ 2 ವಿಕೆಟ್ ಪಡೆದರು.

ನಿತೀಶ್–ರಿಂಕು ಜೊತೆಯಾಟ: ಬಾಂಗ್ಲಾ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಗ್ರ ಮೂವರು ಬ್ಯಾಟರ್‌ಗಳು ಪವರ್‌ಪ್ಲೇ ಮುಗಿಯುವ ಮುನ್ನವೇ ನಿರ್ಗಮಿಸಿದರು. ಉತ್ತಮ ಆರಂಭ ನೀಡಿದ ಸಂಜು ಸ್ಯಾಮ್ಸನ್ (10 ರನ್), ಅಭಿಷೇಕ್ ಶರ್ಮಾ (15 ರನ್) ಅವರು ದೀರ್ಘ ಇನಿಂಗ್ಸ್ ಆಡಲಿಲ್ಲ. ಅವರಿಬ್ಬರು ಮತ್ತು ನಾಯಕ ಸೂರ್ಯಕುಮಾರ್ ಯಾದವ್ (8 ರನ್) ಅವರು ಪೆವಿಲಿಯನ್ ಸೇರಿದಾಗ ತಂಡದ ಮೊತ್ತ 41 ರನ್‌ಗಳಾಗಿದ್ದವು. ಈ ಹಂತದಲ್ಲಿ ಜೊತೆಗೂಡಿದ ಯುವ ಆಟಗಾರ ನಿತೀಶ್ ಮತ್ತು ರಿಂಕು ಇನಿಂಗ್ಸ್ ದಿಕ್ಕನ್ನೇ ಬದಲಿಸಿಬಿಟ್ಟರು. ಬೌಲರ್‌ಗಳು ಬಸವಳಿದರು.

ತಮ್ಮ ವೃತ್ತಿಜೀವನದ ಎರಡನೇ ಅಂತರರಾಷ್ಟ್ರೀಯ ಟಿ20 ಪಂದ್ಯವಾಡಿದ ನಿತೀಶ್ 27 ಎಸೆತಗಳಲ್ಲಿ ಚೊಚ್ಚಲ ಅರ್ಧಶತಕ ಗಳಿಸಿದರು. ಇನ್ನೊಂದು ಬದಿಯಲ್ಲಿದ್ದ ರಿಂಕು ಐದು ಬೌಂಡರಿ ಮತ್ತು 3 ಸಿಕ್ಸರ್ ಸಿಡಿಸಿದರು. 14ನೇ ಓವರ್‌ನಲ್ಲಿ ರೆಡ್ಡಿ ವಿಕೆಟ್ ಗಳಿಸಿದ ಮುಸ್ತಫಿಜುರ್ ಈ ಜೊತೆಯಾಟವನ್ನು ಮುರಿದರು. 17ನೇ ಓವರ್‌ನಲ್ಲಿ ರಿಂಕುಸಿಂಗ್ ಅವರಿಗೆ ತಸ್ಕಿನ್ ಅಹಮದ್ ಡಗ್‌ಔಟ್ ದಾರಿ ತೋರಿಸಿದರು.

ಸರಣಿಯ ಮೊದಲ ಪಂದ್ಯದಲ್ಲಿ ಮಿಂಚಿದ್ದ ಹಾರ್ದಿಕ್ ಇಲ್ಲಿ ಮತ್ತೆ ಅಬ್ಬರಿಸಿದರು. 19 ಎಸೆತಗಳಲ್ಲಿ 32 ರನ್ ಸೂರೆ ಮಾಡಿದರು. 2 ಬೌಂಡರಿ, 2 ಸಿಕ್ಸರ್ ಹೊಡೆದರು. ಅವರಿಗೆ ರಿಯಾನ್ (15; 6ಎಸೆತ) ಕೂಡ ಉತ್ತಮ ಜೊತೆ ನೀಡಿದರು. ಎರಡು ಭರ್ಜರಿ ಸಿಕ್ಸರ್ ಕೂಡ ಎತ್ತಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 221 (ನಿತೀಶ್ ರೆಡ್ಡಿ 74, ರಿಂಕು ಸಿಂಗ್ 53, ಹಾರ್ದಿಕ್ ಪಾಂಡ್ಯ 32, ರಿಯಾನ್ ಪರಾಗ್ 15, ಅಭಿಷೇಕ್ ಶರ್ಮಾ 15, ತಸ್ಕಿನ್ ಅಹಮದ್ 16ಕ್ಕೆ2, ತಂಜಿಮ್ ಹಸನ್ ಸಕೀಬ್ 50ಕ್ಕೆ2, ಮುಸ್ತಫಿಜುರ್ 36ಕ್ಕೆ2, ರಿಷಾದ್ ಹುಸೇನ್ 55ಕ್ಕೆ3) ಬಾಂಗ್ಲಾದೇಶ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 135 (ಮಹಮುದುಲ್ಲಾ 41, ಪರ್ವೇಜ್ ಹುಸೇನ್ ಇಮಾನ್ 16, ಮೆಹದಿ ಹಸನ್ ಮಿರಜ್ 16, ನಿತೀಶ್ ರೆಡ್ಡಿ 23ಕ್ಕೆ2, ವರುಣ್ ಚಕ್ರವರ್ತಿ 19ಕ್ಕೆ2). ಫಲಿತಾಂಶ: ಭಾರತಕ್ಕೆ 86 ರನ್‌ಗಳ ಜಯ. ಪಂದ್ಯದ ಆಟಗಾರ: ನಿತೀಶ್ ಕುಮಾರ್ ರೆಡ್ಡಿ

ನಿತೀಶ್ ಕುಮಾರ್ ರೆಡ್ಡಿ ಮತ್ತು ರಿಂಕು ಸಿಂಗ್ –ಎಎಫ್‌ಪಿ ಚಿತ್ರ

ಭಾರತ ವಿರುದ್ಧ ಟೆಸ್ಟ್: ಮೊದಲ ಪಂದ್ಯಕ್ಕೆ ವಿಲಿಯಮ್ಸನ್ ಅಲಭ್ಯ?

ಆಕ್ಲೆಂಡ್ (ಪಿಟಿಐ): ಭಾರತ ವಿರುದ್ಧ ಇದೇ 16ರಿಂದ ಆರಂಭವಾಗುವ ಟೆಸ್ಟ್ ಕ್ರಿಕೆಟ್ ಸರಣಿಗೆ ನ್ಯೂಜಿಲೆಂಡ್ ತಂಡವನ್ನು ಬುಧವಾರ ಪ್ರಕಟಿಸಲಾಗಿದೆ. ಗಾಯದ ಸಮಸ್ಯೆಯಿಂದ ಬಳಲುತ್ತಿರುವ ಕಿವೀಸ್‌ನ ಅಗ್ರ ಕ್ರಮಾಂಕದ ಬ್ಯಾಟರ್ ಕೇನ್ ವಿಲಿಯಮ್ಸನ್ ತಂಡವನ್ನು ತಡವಾಗಿ ಸೇರಿಕೊಳ್ಳಲಿದ್ದಾರೆ ಎಂದು ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ ತಿಳಿಸಿದೆ.

ಮೂರು ಪಂದ್ಯಗಳ ಟೆಸ್ಟ್ ಸರಣಿಗೆ 17 ಆಟಗಾರರ ತಂಡವನ್ನು ಪ್ರಕಟಿಸಲಾಗಿದೆ. ಟಾಮ್ ಲೇಥಮ್ ತಂಡವನ್ನು ಮುನ್ನಡೆಸಲಿದ್ದಾರೆ. ಸರಣಿಯ ಮೊದಲ ಪಂದ್ಯ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಅನುಭವಿ ಆಲ್‌ರೌಂಡರ್ ಮೈಕೆಲ್ ಬ್ರೇಸ್‌ವೆಲ್ ಮೊದಲ ಟೆಸ್ಟ್‌ಗೆ ಮಾತ್ರ ಲಭ್ಯವಿದ್ದಾರೆ. ಸ್ಪಿನ್ನರ್ ಇಶ್ ಸೋಧಿ ಎರಡು ಮತ್ತು ಮೂರನೇ ಟೆಸ್ಟ್‌ಗಳಿಗೆ ಮಾತ್ರ ಲಭ್ಯವಿರುತ್ತಾರೆ.

ತಂಡ ಹೀಗಿದೆ: ಟಾಮ್ ಲೇಥಮ್ (ನಾಯಕ), ಟಾಮ್ ಬ್ಲಂಡೆಲ್ (ವಿಕೆಟ್ ಕೀಪರ್), ಮೈಕಲ್ ಬ್ರೇಸ್‌ವೆಲ್, ಮಾರ್ಕ್ ಚಾಪ್‌ಮನ್, ಡೆವೊನ್ ಕಾನ್ವೆ, ಮ್ಯಾಟ್ ಹೆನ್ರಿ, ಡೇರಿಲ್ ಮಿಚೆಲ್, ವಿಲ್ ಒ ರೂರ್ಕ್, ಅಜಾಜ್ ಪಟೇಲ್, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ, ಮಿಚೆಲ್ ಸ್ಯಾಂಟ್ನರ್, ಬೆನ್ ಸಿಯರ್ಸ್, ಇಶ್ ಸೋಧಿ, ಟಿಮ್ ಸೌಥಿ, ಕೇನ್ ವಿಲಿಯಮ್ಸನ್, ವಿಲ್ ಯಂಗ್.

ಮಂದಾನ, ಹರ್ಮನ್‌ಪ್ರೀತ್ ಅರ್ಧಶತಕ

ಭಾರತಕ್ಕೆ ಸತತ ಎರಡನೇ ಜಯ

ದುಬೈ (ಪಿಟಿಐ): ಸ್ಮೃತಿ ಮಂದಾನ (50;38ಎ) ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ (ಔಟಾಗದೇ 52;27ಎ) ಅವರ ಅರ್ಧಶತಕ ಹಾಗೂ ಬೌಲರ್‌ಗಳ ಪರಿಣಾಮಕಾರಿ ದಾಳಿಯ ನೆರವಿನಿಂದ ಭಾರತ ತಂಡ ಭಾರತ ತಂಡ, ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ‘ಎ’ ಗುಂಪಿನ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಬುಧವಾರ 82 ರನ್‌ಗಳ ಸುಲಭ ಜಯ ಸಾಧಿಸಿತು.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಆಡಲು ನಿರ್ಧರಿಸಿದ ಭಾರತ ತಂಡಕ್ಕೆ ಶಫಾಲಿ ವರ್ಮಾ (43, 40 ಎಸೆತ) ಮತ್ತು ಮಂದಾನ 12.4 ಓವರುಗಳಲ್ಲಿ 98 ರನ್ ಜೊತೆಯಾಟವಾಡಿ ಭದ್ರ ಬುನಾದಿ ಹಾಕಿಕೊಟ್ಟರು.

ಹರ್ಮನ್‌ಪ್ರೀತ್ ಕೂಡ ರಟ್ಟೆಯರಳಿಸಿ ಆಡಿದ್ದರಿಂದ ಭಾರತ 3 ವಿಕೆಟ್‌ಗೆ 172 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಇದು ಹಾಲಿ ಟೂರ್ನಿಯಲ್ಲಿ ಭಾರತದ ಅತ್ಯಧಿಕ ಮೊತ್ತ ಎನಿಸಿತು.

ಸವಾಲಿನ ಗುರಿಯನ್ನು ಬೆನ್ನತ್ತಿದ ಲಂಕಾ ತಂಡಕ್ಕೆ ರೇಣುಕಾ ಸಿಂಗ್ (16ಕ್ಕೆ 2) ಮತ್ತು ಶ್ರೇಯಾಂಕಾ ಪಾಟೀಲ (15ಕ್ಕೆ 1) ಆರಂಭದಲ್ಲೇ ಪೆಟ್ಟು ನೀಡಿದರು. ತಂಡವು 6 ರನ್ ಗಳಿಸುವಷ್ಟರಲ್ಲಿ ಮೂರು ವಿಕೆಟ್ ಕಳೆದು ಕೊಂಡಿತು. ನಂತರ ಬಂದ ಕವಿಶಾ ದಿಲ್ಹಾರಿ (21) ಮತ್ತು ಅನುಷ್ಕಾ ಸಂಜೀವನಿ (20) ಕೊಂಚ ಪ್ರತಿರೋಧ ತೋರಿದರೆ, ಉಳಿದವರು ನಿರಾಸೆ ಮೂಡಿಸಿದರು. ಅರುಂಧತಿ ರೆಡ್ಡಿ ಮತ್ತು ಆಶಾ ಸೋಭಾನ ತಲಾ ಮೂರು ವಿಕೆಟ್ ಪಡೆದು ಮಿಂಚಿದರು.

ಮೂರು ಪಂದ್ಯಗಳ ಪೈಕಿ ಸತತ ಎರಡರಲ್ಲಿ ಗೆದ್ದು ನಾಲ್ಕು ಅಂಕ ಗಳಿಸಿರುವ ಭಾರತ, ‘ಎ’ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ. ಆಡಿರುವ ಎರಡೂ ಪಂದ್ಯ ಗೆದ್ದಿರುವ ಆಸ್ಟ್ರೇಲಿಯಾ ಅಗ್ರಸ್ಥಾನದಲ್ಲಿದೆ. ಲಂಕಾ ತಂಡ ಮೂರೂ ಪಂದ್ಯಗಳಲ್ಲಿ ಸೋತು ಕೊನೆಯ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರುಗಳಲ್ಲಿ 3 ವಿಕೆಟ್‌ಗೆ 172 (ಶಫಾಲಿ ವರ್ಮಾ 43, ಸ್ಮೃತಿ ಮಂದಾನ 50, ಹರ್ಮನ್‌ಪ್ರೀತ್ ಕೌರ್ ಔಟಾಗದೇ 52; ಚಮಾರಿ ಆಟಪಟ್ಟು 34ಕ್ಕೆ1, ಅಮಾ ಕಾಂಚನ 29ಕ್ಕೆ1). ಶ್ರೀಲಂಕಾ: 19.5 ಓವರ್‌ಗಳಲ್ಲಿ 90 (ಕವಿಶಾ ದಿಲ್ಹಾರಿ 21, ಅನುಷ್ಕಾ ಸಂಜೀವನಿ 20; ರೇಣುಕಾ ಸಿಂಗ್ 16ಕ್ಕೆ 2, ಅರುಂಧತಿ ರೆಡ್ಡಿ 19ಕ್ಕೆ 3, ಆಶಾ ಶೋಭಾನ 19ಕ್ಕೆ 3). ಫಲಿತಾಂಶ: ಭಾರತಕ್ಕೆ 82 ರನ್‌ಗಳ ಜಯ. ಪಂದ್ಯದ ಆಟಗಾರ್ತಿ: ಹರ್ಮನ್‌ಪ್ರೀತ್ ಕೌರ್.

ಸ್ಮೃತಿ ಮಂದಾನ ಬ್ಯಾಟಿಂಗ್ –ಎಕ್ಸ್ ಚಿತ್ರ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

‘ದಸರಾ ಕಂಠೀರವ’ ಪ್ರಶಸ್ತಿ ಪಡೆದ ಶಿವಯ್ಯ ಪೂಜಾರಿ, ‘ದಸರಾ ಕೇಸರಿ’ ಪ್ರಶಸ್ತಿ ಪಡೆದ ಸದಾಶಿವ ನಲವಡೆ, ‘ದಸರಾ ಕುಮಾರ್’ ಪ್ರಶಸ್ತಿ ಪಡೆದ ಗಿರೀಶ್, ‘ದಸರಾ ಕಿಶೋರ’ ಪ್ರಶಸ್ತಿ ಪಡೆದ ಕೊರವರ ಸಂಜೀವ, ‘ದಸರಾ ಕಿಶೋರಿ’ ಶಾಲಿನಿ ಸಿದ್ಧಿ ಗೆಲುವಿನ ನಗೆ ಬೀರಿದರು –ಪ್ರಜಾವಾಣಿ ಚಿತ್ರ: ಹಂಪ ನಾಗರಾಜ

ಕುಸ್ತಿ: ಮುಧೋಳದ ಸದಾಶಿವ ನಲವಡೆ ‘ದಸರಾ ಕೇಸರಿ’

ಶಿವಯ್ಯ ಪೂಜಾರಿ ‘ದಸರಾ ಕಂಠೀರವ’

ಪ್ರಜಾವಾಣಿ ವಾರ್ತೆ

ಮೈಸೂರು: ಅಖಾಡದಲ್ಲಿ ಆಕ್ರಮಣಕಾರಿ ಪಟ್ಟುಗಳಿಂದ ಪ್ರಾಬಲ್ಯ ಮೆರೆದ ಬಾಗಲಕೋಟೆ ಪೈಲ್ವಾನ್ ಶಿವಯ್ಯ ಪೂಜಾರಿ ಹಾಗೂ ಮುಧೋಳದ ಸದಾಶಿವ ನಲವಡೆ ಕ್ರಮವಾಗಿ ದಸರಾ ಕಂಠೀರವ ಹಾಗೂ ದಸರಾ ಕೇಸರಿ ಪ್ರಶಸ್ತಿ ಗೆದ್ದರು.

ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದ ಅಖಾಡದಲ್ಲಿ ಬುಧವಾರ ನಡೆದ ದಸರಾ ಕುಸ್ತಿ ಸ್ಪರ್ಧೆಯ 86 ಕೆ.ಜಿ ವಿಭಾಗದ ಹಣಾಹಣಿಯಲ್ಲಿ ಶಿವಯ್ಯ ಅವರು ಮುಧೋಳದ ಪೈಲ್ವಾನ್ ಬಾಪೂ ಸಾಹೇಬ ಶಿಂಧೆ ಅವರನ್ನು ಮಣಿಸಿದರು.

20 ನಿಮಿಷಗಳ ಹೋರಾಟದಲ್ಲಿ ಮದಗಜಗಳಂತೆ ಸೆಣಸಾಟ ನಡೆಸಿದ ಇಬ್ಬರೂ ಕುಸ್ತಿಪ್ರಿಯರ ಶಿಳ್ಳೆ ಚಪ್ಪಾಳೆ ಗಿಟ್ಟಿಸಿದರು. ಕಡೇ ಕ್ಷಣದಲ್ಲಿ ಪಾರಮ್ಯ ಮೆರೆದ ಶಿವಯ್ಯ, ಬಾಪೂ ಅವರನ್ನು 6–5 ಪಾಯಿಂಟ್‌ಗಳಿಂದ ರೋಚಕ ಜಯ ಸಾಧಿಸಿದರು.

ದಸರಾ ಕೇಸರಿ: 74–86 ಕೆ.ಜಿ ವಿಭಾಗದಲ್ಲಿ ಮುಧೋಳದ ಸದಾಶಿವ ನಲವಡೆ ಗೆದ್ದರು. ದಾವಣಗೆರೆ ಜಿಲ್ಲೆಯ ಪೈಲ್ವಾನ ಬಸವರಾಜ ಪಾಟೀಲ ಅವರನ್ನು 15–7 ಅಂಕಗಳ ಅಂತರದಲ್ಲಿ ಸೋಲಿಸಿದರು.

‘ದಸರಾ ಕುಮಾರ’ ಪ್ರಶಸ್ತಿಗೆ (74 ಕೆ.ಜಿ) ನಡೆದ 20 ನಿಮಿಷಗಳ ಹೋರಾಟದಲ್ಲಿ ಮಂಡ್ಯದ ಗಿರೀಶ್ ಅವರು ಮೈಸೂರಿನ ಆರ್.ನಿತಿನ್ ಅವರನ್ನು 25–13ರಿಂದ ಮಣಿಸಿದರು.

‘ದಸರಾ ಕಿಶೋರ’ ಪ್ರಶಸ್ತಿಯ 57–62 ಕೆ.ಜಿ ವಿಭಾಗದಲ್ಲಿ ದಾವಣಗೆರೆಯ ಕೊರವರ ಸಂಜೀವ ಅವರು ತಮ್ಮದೇ ಊರಿನ ಮಹೇಶ್ ಪಿ.ಗೌಡ ವಿರುದ್ಧ 6–1 ಪಾಯಿಂಟ್‌ಗಳಿಂದ ಗೆದ್ದರು.

ಮಹಿಳೆಯರಿಗೆ 2018ರಿಂದ ಆಯೋಜಿಸುತ್ತಿರುವ 57– 62 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ದಾವಣಗೆರೆ ಕ್ರೀಡಾ ಶಾಲೆಯ ಎಸ್.ಶಾಲಿನಿ ಸಿದ್ಧಿ ಅವರು 10–2 ಪಾಯಿಂಟ್‌ಗಳಿಂದ ಗಾಯತ್ರಿ ಅವರನ್ನು ಸೋಲಿಸಿ ‘ದಸರಾ ಕಿಶೋರಿ’ ಆದರು.

ಪಾಕ್ ವಿರುದ್ಧ ಮೊದಲ ಟೆಸ್ಟ್: ರೂಟ್, ಬ್ರೂಕ್ ಅಜೇಯ ಶತಕ

ಮುಲ್ತಾನ್ (ರಾಯಿಟರ್ಸ್): ಜೋ ರೂಟ್ ಆಕರ್ಷಕ ಅಜೇಯ ಶತಕ ಬಾರಿಸಿದರು. ಆ ಹಾದಿಯಲ್ಲಿ ಇಂಗ್ಲೆಂಡ್ ಪರ ಟೆಸ್ಟ್‌ಗಳಲ್ಲಿ ಅತ್ಯಧಿಕ ರನ್ ಗಳಿಸಿದ ಗೌರವಕ್ಕೂ ಪಾತ್ರರಾದರು. ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಪಾಕಿಸ್ತಾನ ತಂಡದ 556 ರನ್‌ಗಳ ದೊಡ್ಡ ಮೊತ್ತಕ್ಕೆ ತಕ್ಕ ಉತ್ತರ ನೀಡಿರುವ ಇಂಗ್ಲೆಂಡ್ 3 ವಿಕೆಟ್‌ಗೆ 492 ರನ್ ಗಳಿಸಿದೆ.

ಅಜೇಯ 32 ರನ್‌ಗಳೊಡನೆ ಮೂರನೇ ದಿನದಾಟ (ಇಂಗ್ಲೆಂಡ್: 96ಕ್ಕೆ1) ಮುಂದುವರಿಸಿದ ರೂಟ್ 176 ರನ್ (277ಎಸೆತ, 4X12) ಗಳಿಸಿ ಆಟ ಕಾದಿರಿಸಿದ್ದಾರೆ. ಆಟ ಆರಂಭವಾದಾಗ ಅವರು ಇಂಗ್ಲೆಂಡ್‌ನ ಆಲಿಸ್ಟರ್ ಕುಕ್ (161 ಟೆಸ್ಟ್‌ಗಳಲ್ಲಿ 12,472) ಅವರಿಗಿಂತ 39 ರನ್ ಹಿಂದೆಯಿದ್ದರು. ಆಮೆರ್ ಜಮಾಲ್ ಬೌಲಿಂಗ್‌ನಲ್ಲಿ ಆನ್‌ಡ್ರೈವ್ ಬೌಂಡರಿ ಮೂಲಕ ಅವರು ಮೈಲಿಗಲ್ಲು ದಾಟಿದರು. ಇದು ರೂಟ್‌ಗೆ 147ನೇ ಟೆಸ್ಟ್ ಪಂದ್ಯ.

ಯಾರ್ಕ್‌ಶೈರ್‌ನ 33 ವರ್ಷ ವಯಸ್ಸಿನ ಆಟಗಾರನಿಗೆ ಇದು ಟೆಸ್ಟ್‌ಗಳಲ್ಲಿ 35ನೇ ಶತಕ. ಇದೇ ಕೌಂಟಿ ತಂಡಕ್ಕೆ ಆಡುವ ಹ್ಯಾರಿ ಬ್ರೂಕ್ 141 ರನ್ (173ಎ, 4X12, 6X1) ಗಳಿಸಿ ಅಜೇಯರಾಗುಳಿದಿದ್ದಾರೆ. ರೂಟ್– ಬ್ರೂಕ್ ಮುರಿಯದ ನಾಲ್ಕನೇ ವಿಕೆಟ್‌ಗೆ 243 ರನ್ ಸೇರಿಸಿ, ನಿರ್ಜೀವ ಪಿಚ್‌ನಲ್ಲಿ ಪಾಕ್ ಬೌಲರ್‌ಗಳ ಬೆವರಿಳಿಸಿದರು. ಬ್ರೂಕ್ ಅವರಿಗೆ ಇದು ಟೆಸ್ಟ್‌ಗಳಲ್ಲಿ ಆರನೇ ಶತಕ.

ಇದಕ್ಕೆ ಮೊದಲು ಬೆನ್ ಡಕೆಟ್ ಮಿಂಚಿನ ಆಟವಾಡಿ 84 ರನ್ (75 ಎಸೆತ, 4X11) ರನ್ ಗಳಿಸಿದರು.

ಜೋ ರೂಟ್ ಎಎಫ್‌ಪಿ ಚಿತ್ರ

ರನ್ ಗಳಿಕೆ: 5ನೇ ಸ್ಥಾನಕ್ಕೆ ರೂಟ್

ರೂಟ್ ಈಗ ಟೆಸ್ಟ್ ಕ್ರಿಕೆಟ್‌ನ ಸರ್ವಾಧಿಕ ರನ್ ಗಳಿಕೆದಾರರಲ್ಲಿ ಐದನೇ ಸ್ಥಾನಕ್ಕೇರಿದ್ದಾರೆ. ಸಚಿನ್ ತೆಂಡೂಲ್ಕರ್ (15,921) , ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್ (13,378) , ದಕ್ಷಿಣ ಆಫ್ರಿಕಾದ ಜಾಕ್ ಕಾಲಿಸ್ (13,289) ಮತ್ತು ರಾಹುಲ್ ದ್ರಾವಿಡ್ (13,288) ಕ್ರಮವಾಗಿ ಮೊದಲ ನಾಲ್ಕು ಸ್ಥಾನದಲ್ಲಿದ್ದಾರೆ.

ಇಂಗ್ಲೆಂಡ್ ತಂಡ, ಪಾಕ್ ಮೊದಲ ಇನಿಂಗ್ಸ್ ಮೊತ್ತ ದಾಟಲು 64 ರನ್ ಮಾತ್ರ ಗಳಿಸಬೇಕಾಗಿದೆ.

ಸ್ಕೋರುಗಳು: ಮೊದಲ ಇನಿಂಗ್ಸ್: ಪಾಕಿಸ್ತಾನ: 556; ಇಂಗ್ಲೆಂಡ್: 101 ಓವರುಗಳಲ್ಲಿ 3 ವಿಕೆಟ್‌ಗೆ 492 (ಜಾಕ್ ಕ್ರಾಲಿ 78, ಜೋ ರೂಟ್ ಔಟಾಗದೇ 176, ಬೆನ್ ಡಕೆಟ್ 84, ಹ್ಯಾರಿ ಬ್ರೂಕ್ ಔಟಾಗದೇ 141).

‘ಟೆಸ್ಟ್’: ಭಾರತಕ್ಕೆ ಜಯ

ಚೆನ್ನೈ (ಪಿಟಿಐ): ಆಫ್ ಸ್ಪಿನ್ನರ್ ಅನ್ಮೋಲ್‌ಜೀತ್ ಸಿಂಗ್ ಮತ್ತು ಲೆಗ್ ಸ್ಪಿನ್ನರ್ ಮೊಹಮದ್ ಇನಾನ್ ಅವರು 19 ವರ್ಷದೊಳಗಿನವರ ಕ್ರಿಕೆಟ್ ‘ಟೆಸ್ಟ್’ ಸರಣಿಯ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾದ 20 ವಿಕೆಟ್‌ಗಳಲ್ಲಿ 16 ವಿಕೆಟ್‌ಗಳನ್ನು ತಮ್ಮೊಳಗೆ ಹಂಚಿಕೊಂಡರು. ಇವರಿಬ್ಬರ ಅಮೋಘ ಬೌಲಿಂಗ್‌ನಿಂದಾಗಿ ಭಾರತ ಯುವ ತಂಡ ಇನಿಂಗ್ಸ್ ಮತ್ತು 120 ರನ್‌ಗಳಿಂದ ಸುಲಭವಾಗಿ ಜಯಗಳಿಸಿ ಸರಣಿಯನ್ನು 2–0 ಯಿಂದ ಕ್ಲೀನ್‌ಸ್ವೀಪ್ ಮಾಡಿಕೊಂಡಿತು.

ಭಾರತದ 492 ರನ್‌ಗಳ ಮೊದಲ ಇನಿಂಗ್ಸ್‌ಗೆ ಉತ್ತರವಾಗಿ 3 ವಿಕೆಟ್‌ಗೆ 142 ರನ್‌ಗಳೊಡನೆ ಮೂರನೇ ದಿನ ದಾಟ ಮುಂದುವರಿಸಿದ ಆಸ್ಟ್ರೇಲಿಯಾ ಒಂದೇ ದಿನ 17 ವಿಕೆಟ್‌ಗಳನ್ನು ಕಳೆದುಕೊಂಡಿತು.

ಪ್ರವಾಸಿ ತಂಡ ಮೊದಲ ಸರದಿಯಲ್ಲಿ 277 ರನ್‌ಗಳಿಗೆ ಆಟ ಮುಗಿಸಿತು. ನಾಯಕ ಒಲಿವರ್ ಪೀಕೆ (117, 143 ಎಸೆತ) ಶತಕ ಬಾರಿಸಿದರು. 215 ರನ್ ಮುನ್ನಡೆ ಪಡೆದ ಭಾರತ ಫಾಲೊಆನ್ ಹೇರಿತು.

ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್‌ನಲ್ಲಿ 31.3 ಓವರುಗಳಲ್ಲಿ 95 ರನ್‌ಗಳಿಗೆ ಕುಸಿಯಿತು. ಎಂಟು ಮಂದಿ ಬ್ಯಾಟರ್‌ಗಳು ಎರಡಂಕಿ ಮೊತ್ತ ತಲುಪಲೂ ವಿಫಲರಾದರು.

ಅನ್ಮೋಲ್‌ಜೀತ್ ಎರಡನೇ ಇನಿಂಗ್ಸ್‌ನಲ್ಲಿ 32 ರನ್‌ಗಳಿಗೆ 5 ವಿಕೆಟ್ ಮತ್ತು ಒಟ್ಟಾರೆ 104 ರನ್‌ಗಳಿಗೆ 9 ವಿಕೆಟ್ ಕಬಳಿಸಿ ಪಂದ್ಯದ ಆಟಗಾರ್ತಿ ಗೌರವಕ್ಕೆ ಪಾತ್ರವಾದರು. ಇನಾನ್ ಒಟ್ಟು 97 ರನ್‌ಗಳಿಗೆ 7 ವಿಕೆಟ್ ಗಳಿಸಿ ತಮ್ಮ ಅಸ್ತಿತ್ವವನ್ನೂ ತೋರಿದರು.

ಸಂಕ್ಷಿಪ್ತ ಸುದ್ದಿ

ಲೈನ್ ಅಂಪೈರ್ ಸ್ಥಾನಕ್ಕೆ ಕೃತಕ ಬುದ್ಧಿಮತ್ತೆ

ಲಂಡನ್ (ಎಪಿ): ವಿಂಬಲ್ಡನ್ ಟೆನಿಸ್ ಅಂಗಳದಲ್ಲಿ ಸೊಗಸಾದ ಸಮವಸ್ತ್ರ ಧರಿಸಿ ಕಾರ್ಯನಿರ್ವಹಿಸುತ್ತಿದ್ದ ಲೈನ್ ಅಂಪೈರ್‌ಗಳು ಮುಂಬರುವ ಟೂರ್ನಿ ಗಳಲ್ಲಿ ಕಾಣಸಿಗುವುದಿಲ್ಲ. ಅತ್ಯಂತ ಹಳೆಯದಾದ ಈ ಪರಂಪರೆಯು ಮುಂದಿನ ವರ್ಷದ ಟೂರ್ನಿಯಿಂದ ಇರುವುದಿಲ್ಲ. ಅವರ ಸ್ಥಾನವನ್ನು ಕೃತಕ ಬುದ್ಧಿಮತ್ತೆ ತುಂಬಲಿದೆ.

2025ರ ವಿಂಬಲ್ಡನ್ ಟೂರ್ನಿಯಲ್ಲಿ ಯಾಂತ್ರಿಕ ಬುದ್ಧಿಮತ್ತೆಯ ಮೂಲಕ ‘ಔಟ್ ಮತ್ತು ಫಾಲ್ಟ್’ ತೀರ್ಮಾನಗಳು ಹೊರಹೊಮ್ಮಲಿವೆ.

‘2024ರ ಟೂರ್ನಿಯಲ್ಲಿ ಎಲೆ ಕ್ಟ್ರಾನಿಕ್ ಲೈನ್ ಕಾಲಿಂಗ್ ವ್ಯವಸ್ಥೆಯ ಸಮಗ್ರವಾದ ಪರೀಕ್ಷೆ ನಡೆಸಲಾಗಿತ್ತು. ಬಾಲ್ ಟ್ರ್ಯಾಕಿಂಗ್ ಮತ್ತು ಲೈನ್ ಕಾಲಿಂಗ್ ತಂತ್ರಜ್ಞಾನ ಕೆಲವು ವರ್ಷಗಳಿಂದ ಇದೆ. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲು ಇದು ಸಕಾಲ. ಇದರಿಂದಾಗಿ ಅಂಪೈರಿಂಗ್‌ನಲ್ಲಿ ಗರಿಷ್ಠಮಟ್ಟದ ನಿಖರತೆಯನ್ನು ಸಾಧಿಸಲು ಸಾಧ್ಯವಾಗಲಿದೆ’ ಎಂದು ಆಲ್ ಇಂಗ್ಲೆಂಡ್ ಕ್ಲಬ್ ಮುಖ್ಯಸ್ಥ ಸ್ಯಾಲಿ ಬೋಲ್ಟನ್ ತಿಳಿಸಿದ್ದಾರೆ.

ಟೆನಿಸ್: ರಿಯಾಗೆ ಗೆಲುವು

ಮೈಸೂರು: ಭಾರತದ ರಿಯಾ ಭಾಟಿಯಾ ಇಲ್ಲಿ ನಡೆಯುತ್ತಿರುವ ಐಟಿಎಫ್ ಮಹಿಳೆಯರ ವಿಶ್ವ ಟೆನಿಸ್ ಟೂರ್ ಟೂರ್ನಿಯ ಸಿಂಗಲ್ಸ್‌ನ ಮೊದಲ ಸುತ್ತಿನ ಪಂದ್ಯದಲ್ಲಿ ಸೊಗಸಾದ ಆಟವಾಡಿದರು.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ) ನಲ್ಲಿ ಬುಧವಾರ, ಮಂಡ್ಯದ ಕಶ್ವಿ ಸುನಿಲ್ ಅವರನ್ನು 6–3, 7–5ರಿಂದ ಮಣಿಸಿದರು. ಮೊದಲ ಸೆಟ್ ಅನ್ನು ಸುಲಭವಾಗಿ ವಶಕ್ಕೆ ಪಡೆದ ಟೂರ್ನಿಯ 4ನೇ ಶ್ರೇಯಾಂಕಿತೆ ರಿಯಾ ಅವರನ್ನು ಎರಡನೇ ಸೆಟ್‌ನಲ್ಲಿ 15 ವರ್ಷದ ಕಶ್ವಿ ಕಾಡಿದರು. ಅಂತಿಮವಾಗಿ 7–5ರಿಂದ ಗೆದ್ದರು.

ತಮಿಳುನಾಡಿನ ಲಕ್ಷ್ಮಿಪ್ರಭಾ ಅರುಣ್‌ಕುಮಾರ್ 6–2, 6–2ರಿಂದ 6ನೇ ಶ್ರೇಯಾಂಕದ ಆಟಗಾರ್ತಿ ಕರ್ನಾಟಕದ ಸೋಹಾ ಸಾದಿಕ್ ಅವರನ್ನು ಮಣಿಸಿದರು.

ಅರ್ಷದೀಪ್‌ಗೆ ಬಡ್ತಿ

ದುಬೈ (ಪಿಟಿಐ): ಭಾರತದ ವೇಗಿ ಅರ್ಷದೀಪ್ ಸಿಂಗ್ ಅವರು ಐಸಿಸಿ ಟಿ20 ರ‍್ಯಾಂಕಿಂಗ್‌ನ ಬೌಲರ್‌ಗಳ ಪಟ್ಟಿ ಯಲ್ಲಿ ಅಗ್ರ 10ರಲ್ಲಿ ಸ್ಥಾನ ಪಡೆದಿದ್ದಾರೆ. ಬುಧವಾರ ಪ್ರಕಟವಾದ ಪಟ್ಟಿಯಲ್ಲಿ ಅವರು ಎಂಟನೇ ಸ್ಥಾನಕ್ಕೇರಿದ್ದಾರೆ.

ಬಾಂಗ್ಲಾದೇಶ ವಿರುದ್ಧ ನಡೆದ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಅವರು 14 ರನ್‌ಗೆ 3 ವಿಕೆಟ್ ಪಡೆದಿದ್ದರು. 642 ಪಾಯಿಂಟ್ಸ್ ಪಡೆದಿ ರುವ ಅರ್ಷದೀಪ್, ಅಗ್ರ 10ರಲ್ಲಿ ಸ್ಥಾನ ಪಡೆದಿರುವ ಭಾರತದ ಏಕಮಾತ್ರ ಬೌಲರ್.

ಸೇನ್, ಜಾರ್ಜ್ ಮುನ್ನಡೆ

ವಾಂತಾ, ಫಿನ್ಲೆಂಡ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಮತ್ತು ಕಿರಣ್ ಜಾರ್ಜ್ ಅವರು ಇಲ್ಲಿ ನಡೆಯುತ್ತಿರುವ ಆರ್ಕಟಿಕ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ತಲುಪಿದರು.

ಸೇನ್ ಆರಂಭಿಕ ಸುತ್ತಿನಲ್ಲಿ ರಾಸ್ಮಸ್ ಗೆಮ್ಕೆ ಅವರನ್ನು ಎದುರಿಸಬೇಕಿತ್ತು. ಆದರೆ, ಡೆನ್ಮಾರ್ಕ್‌ನ ಆಟಗಾರ ಸ್ಪರ್ಧೆಯಿಂದ ಹಿಂದೆ ಸರಿದಿದ್ದರಿಂದ ಸೇನ್ ಎರಡನೇ ಸುತ್ತಿಗೆ ಮುನ್ನಡೆದರು.

ಕಿರಣ್ 23-21, 21-18ರಿಂದ ವಿಶ್ವದ 25ನೇ ಕ್ರಮಾಂಕದ ವಾಂಗ್ ತ್ಸು (ಚೀನಾ ತೈಪೆ) ಅವರಿಗೆ ಆಘಾತ ನೀಡಿದರು.

ಡ್ರಾ ಪಂದ್ಯದಲ್ಲಿ ರೆಬೆಲ್ಸ್

ಬೆಂಗಳೂರು: ರೆಬೆಲ್ಸ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 2–2ರಿಂದ ಸೌತ್ ಯುನೈಟೆಡ್ ಎಫ್‌ಸಿ ಜೊತೆ ಡ್ರಾ ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ಬುಧವಾರ ನಡೆದ ಮತ್ತೊಂದು ಪಂದ್ಯದಲ್ಲಿ ಪರಿಕ್ರಮ ಎಫ್‌ಸಿ ತಂಡವು 1–1 ಗೋಲುಗಳಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡದೊಂದಿಗೆ ಡ್ರಾ ಮಾಡಿಕೊಂಡಿತು.

HONDA

ನವರಾತ್ರಿ ಹಾಗೂ ದಸರಾ
ಹಬ್ಬದ ಶುಭಾಶಯಗಳು

Shine 100

ಡೌನ್‌ಪೇಮೆಂಟ್ ₹ 1100*

ಕ್ಯಾಶ್‌ಬ್ಯಾಕ್ ₹ 5000#

₹ 66600
ಎಕ್ಸ್-ಶೋರೂಂ ಬೆಲೆ
(ಕರ್ನಾಟಕ)

ವೀಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.

ಹೆಚ್ಚಿನ ಮಾಹಿತಿಗಾಗಿ 7230032200 ಮಿಸ್ ಕಾಲ್ ನೀಡಿ

IDFC FIRST Bank Bank*/Credit Card# | HDFC BANK Credit Card# | TATA CAPITAL Two Wheeler Loans* | L&T Finance*

ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

BOOK ONLINE NOW! www.honda2wheelersindia.com

CLICK BOOK RELAX

#Cashback Offer available on all Honda two-wheeler models for EMI transactions made using HDFC Bank credit cards & IDFC FIRST Bank credit cards through Pine Labs machines only. #Customers can avail 5% Instant cashback, up to a maximum of Rs. 5000. #Valid on one transaction per card/order during the offer period. #Cashback offer valid until 30th November 2024. #The scheme is available in select outlets only. *Approval of the loan is at the sole discretion of the financiers, and additional documentation may be required. *The interest rates, down payment, and tenure options are based on the financier's assessment of the applicant's credit profile. *The offers/features may be modified or withdrawn at any time without prior intimation. *Offer valid until 30th November 2024. Product shown in the picture may vary from actual product available in the market. Accessories shown in the picture are not part of standard equipment. CBR [Click, Book, Relax] facility available at selected dealerships only.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: **Ananda Honda** - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda** - **ANEKAL:** 080-27830234, 9880417779; **City Honda** - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda** - **DOMLUR:** 49656565, 9342432156; **INDIRANAGAR:** 9342432157; **Dhruvdesh Honda** - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; **Planet Honda** - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda** - **KORAMANGALA:** 08067329000,9035310055; **Prime Honda** - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda** - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda** - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda** - **KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda** - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda** - **DODDABALLAPURA:** 7022620885; **NELAMANAGALA:** 080-27722333, 7022008894; **Wings Honda** - **HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda** - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda** - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda** - **GOWRIBIDANUR:** 9900007422/33; **SIDLAGHATTA:** 9611596113; **Century Honda** - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda** - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda** - **PAVAGADA:** 9535941215; **Annapoorna Honda** - **MADHUGIRI:** 9886627429; **Vignesh Honda** - **TIPTUR:** 9886711161; **TURUVEKERE:** 9448214014; **Sri Srinivasa Honda** - **CHIKKANAYAKANAHALLI:** 8722522221; **Prestige Honda** - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda** - **BIDADI:** 9945966771, 9164871007; **Springs Honda** - **KENGERI:** 9513771114; **Nideesh Honda** - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

TATA MOTORS
Connecting Aspirations

TATA

TATA MOTORS FESTIVAL OF CARS

ಹೆಚ್ಚು ಬೆಲೆ ಕುಸಿತ, ಹೆಚ್ಚು ಆಚರಣೆಗಳು

31ನೇ ಅಕ್ಟೋಬರ್ 2024 ರವರೆಗೆ ನಂಬಲಾಗದ ಬೆಲೆಯಲ್ಲಿ ಶಕ್ತಿಯುತ, ಸುರಕ್ಷಿತ ಮತ್ತು ವೈಶಿಷ್ಟ್ಯ ಲೋಡೆಡ್ ಕಾರು

HARRIER
Festive Price Reduced up to ₹1 60 000*
NOW price Starts at ₹14.99 Lakh^^

★★★★★ BY BHARAT NCAP
★★★★★ BY GLOBAL NCAP

SAFARI
Festive Price Reduced up to ₹1 80 000*
NOW price Starts at ₹15.49 Lakh^^

2.0 L KRYOTEC Diesel Engine | ADAS with Adaptive Cruise Control# | 7 Airbags | 31.24 cm HARMAN™ Touchscreen Infotainment System
Voice Assisted Panoramic Sunroof with Mood Lighting | R19 Alloy Wheels with Aero Inserts | 10 Speaker JBL™ Music System
Powered Tailgate with Gesture Control | Ventilated 2nd# Row Seats with Comfort Headrests

Additional Benefits up to ₹25 000*

tata harrier | India's Safest SUVs* | Up to 100% on-road financing* | tata safari

Terms and Conditions apply. Benefits up to differs from model to model and is inclusive of consumer offers, exchange bonus and maximum corporate offers. **As per safety rating received on certain models. #Advanced Driver Assistance System applicable in selected models only. All offers are valid for limited period or till stocks last. ^Warranty cover for 3 years/ 1 Lakh km, whichever ends earlier. Images and Illustrations are indicative and for information purposes only. All features/specifications are not available in all variants and may vary for different variants. Specifications/features are subject to change without prior information. Colours may vary due to printing limitations. Local taxes and octroi extra. India's safest as per 5 Star GNCAP 2023. 5 Star BNCAP. #Available in Safari only. ^^ Price mentioned is Harrier and Safari Smart MT, ex-showroom Delhi Local taxes extra. Offer valid till 31st Oct 2024 only. ADAS with Adaptive Cruise Control in AT only. Price reduction varies from variant to variant and is included in the new ex-showroom prices. Festive Price reduced upto, ₹160000 for Harrier Pure + S AT & ₹180000 for Safari.

KROPEX AUTO	PRERANA MOTORS	ADISHAKTI CARS	BELLAD ENTERPRISES PVT LTD	CAUVERY MOTORS:	KEY MOTORS	KHT MOTORS	SREE AUTO
Hosur Road: 7506024016, **Koramangala:** 9167395364, **Sarjapur road:** 8291202713, **Mahadevapura:** 8291052641	**Lalbagh Road:** 7506024020; **BTM Layout:** 7506024118; **Rajajinagar:** 7506024039; **Yelahanka:** 9619489334	**Hebbal:** 7506023837; **Dasarahalli:** 9167982568; **Kalyana Nagar:** 9167163087	**Bommsandra** 8238883535, 9035354160; **Sarajpura:** 8879932503	**Avalahalli:** 8879156068; **Mekhri Circle:** 8422849049; **Devanahalli:** 8879078454	**JP Nagar Kanakapura Road:** 7506023980, **Mysore Road:** 9167395034, **Kanakapura City:** 8879145649, **BG Road:** 9167395164, **Nelamangala:** 9167881890, **Sunkadakatte Magadi Road:** 9167882027	**Whitefield:** 7506023988; **Domlur:** 7506024006, **Kolar:** 9731149668	**Tumkur:** 7506024318,**Tiptur:** 9619050469, **Chitradurga:** 9619033465, **Kunigal:** 8879046819, **Chikkaballapur:** 9167082428, **Chintamani:** 8291927028